
ಗಂಡು-ಹೆಣ್ಣು ಮತ್ತು ಪ್ರೀತಿ



• ಗೌರೀಶ ಕಾಯ್ಕಿಣಿ

ಗಂಡು–ಹೆಣ್ಣು
ಮತ್ತು
ಪ್ರೀತಿ

ಗೌರೀಶ ಕಾಯ್ಕಿಣಿ

ಸಂಪಾದಕ :
ವಿಷ್ಣು ನಾಯ್ಕ

ಶ್ರೀ ರಾಘವೇಂದ್ರ ಪ್ರಕಾಶನ
ಅಂಕೋಲಾ ಉ.ಕ.

೨೦೧೧

'GANDU-HENNU MATTU PREETI' - A collection of Critical Essays by Dr. Gourish Kaikini. Edited and Published by Vishnu Naik for Shri Raghavendra Prakashana, Ambarkodla, Ankola - 581 314 (Karnataka State).

First impression	: 2011	Copies :	750
Paper used	: N.S. Maplitho 80 GSM	Price :	180=00
Pages	: 188+4	ಬೆಲೆ :	೧೮೦=೦೦

© ಶ್ರೀಮತಿ ಶಾಂತಾ ಕಾಯ್ಕಿಣಿ

ಮುಖಪುಟ ವಿನ್ಯಾಸ : ಗುರು ಆರ್ಟ್ಸ್, ರವಿನಗರ, ಹುಬ್ಬಳ್ಳಿ – ೫೮೦ ೦೩೦.

ಡಿ.ಟಿ.ಪಿ : ಸಂದೀಪ ಕ್ರಿಯೇಷನ್ಸ್, ಗಣೇಶ ನಗರ, ಹಳೇ ಹುಬ್ಬಳ್ಳಿ, ಹುಬ್ಬಳ್ಳಿ – ೫೮೦ ೦೨೪.
ಮುದ್ರಣ : ಮೆಟಲ್–ಓ–ಪ್ರಿಂಟ್ಸ್, ಡಿ–೫೦೨, ಕೈಗಾರಿಕಾ ಪ್ರದೇಶ, ಗೋಕುಲ ರಸ್ತೆ, ಹುಬ್ಬಳ್ಳಿ–೫೮೦ ೦೩೦.

ಸಂಪಾದಕರ ನುಡಿ

ವಿಶ್ವದ ಉಗಮವಾಗಿ ಎಷ್ಟು ಸಾವಿರ ವರ್ಷಗಳಾದವೋ! ಊಹಿಸುವುದೇ ಕಷ್ಟ. ಅಲ್ಲಿ ಜೀವ ಜಂತುವಿನ ಉಗಮ ಎಂದಾಯಿತೆಂಬುದೂ ಕೂಡಾ ಅಷ್ಟೇ ಊಹಿಸಲಸಾಧ್ಯವಾದ ವಿಚಾರ. ಎಂದೋ ಒಮ್ಮೆ ಕಾಣಿಸಿಕೊಂಡ ನೀರು, ಹಸಿರು, ಜೀವಜಂತು, ಪ್ರಾಣಿಜಾತಿ, ಆದಿಮಾನವ, ಮಾನವ – ಹೀಗೆ ಎಲ್ಲವೂ ಅಂದಾಜಿನಲ್ಲಿ ಕಟ್ಟಿಕೊಂಡ ಕಲ್ಪನೆಯಕಾಲಕ್ಕೆ ಸೇರಿದವುಗಳೇ. ಯಾರು, ಯಾವಾಗ, ಎಲ್ಲಿ ಕಾಣಿಸಿಕೊಂಡರು ಎಂಬುದೆಲ್ಲವೂ ವಿಶ್ವರಹಸ್ಯದ ಭಾಗಗಳೇ.

ಮುಂದೆ, ನಾವು ಇಂದು ಕಾಣುವ ಮನುಷ್ಯಜಾತಿಯ ದರಬಾರು! 'ದರಬಾರು' ಎಂಬ ಪದವನ್ನು ಏಕೆ ಬಳಸಿದೆನೆಂದರೆ, ತಾನೂ ಒಂದು ಪ್ರಾಣಿಜಗತ್ತಿನ ಭಾಗ ಎಂಬುದನ್ನು ಮರೆತೇಬಿಟ್ಟಂತಿರುವ ಮನುಷ್ಯನೆಂಬ ಪ್ರಾಣಿ, ಪ್ರತಿಯೊಂದೂ ತನ್ನಿಂದಲೇ ಮೊದಲಾಯಿತು ಎಂಬ 'ಅಹಂ'ನಲ್ಲಿ ಬೀಗುತ್ತಿರುವುದನ್ನು ಕಾಣುತ್ತಾ ಬಂದಿದ್ದೇವೆ.

ಈ ಗ್ರಂಥದ ಶೀರ್ಷಿಕೆಗೂ ಸಂಪಾದಕೀಯದ ಈ ಉಪೋದ್ಘಾತಕ್ಕೂ ಏನು ಸಂಬಂಧ ಎಂಬ ಪ್ರಶ್ನೆ ನಮ್ಮ ಓದುಗ ಬಂಧುಗಳಿಗೆ ಕಾಡತೊಡಗಿದರೆ ಅಚ್ಚರಿ ಇಲ್ಲ. 'ಪ್ರೀತಿ' ಎಂಬ ಮಹಾಸಂಪತ್ತು ಮನುಷ್ಯ ಜಾತಿಗೆ, ಗಂಡು–ಹೆಣ್ಣಿಗೆ ಮಾತ್ರ ಮೀಸಲಿಟ್ಟುದು ಎಂಬ ಭ್ರಮೆ ಅನೇಕರಿಗಿದೆ. ಗಂಡು–ಹೆಣ್ಣು (ಗಂಡ–ಹೆಂಡತಿ) ವಿಚಾರವಾಗಿಯೂ ಆತ ಈ ಕ್ಷೇತ್ರ ತಮ್ಮದೇ ಎಂಬ ಭ್ರಮೆಯಲ್ಲಿರುವಂತೆ ಕಾಣುತ್ತದೆ. ಸೂಕ್ಷ್ಮಾತಿಸೂಕ್ಷ್ಮ ದೃಷ್ಟಿಗಳಿಗೆ ಜೀವಕೋಟಿಗಳಲ್ಲೆಲ್ಲ ಈ ಪ್ರೀತಿ, ಬಂಧುತ್ವ, ಗಂಡು–ಹೆಣ್ಣಿನ ಸಂಬಂಧಗಳು ಮನುಷ್ಯನಷ್ಟೇ, – ಒಮ್ಮೊಮ್ಮೆ ಅದಕ್ಕೂ ಮಿಗಿಲಾಗಿ ಇರುವುದನ್ನು ಕಾಣಬಹುದಾಗಿದೆ. ಬೌದ್ಧಿಕ ಸಾಮರ್ಥ್ಯದಲ್ಲಿ ಕೂಡ ವಿಶ್ವದ ಯಾವುದೋ ಒಂದು ಕಡೆ ಅಥವಾ ಹಲವು ಕಡೆ ಮನುಷ್ಯನಿಗಿಂತ ಹಲವು ಪಟ್ಟು ಮುಂದಿರುವ ಜೀವಗಳು ಇದ್ದಿರಬೇಕು ಎಂಬ ಬಗ್ಗೆ ಈಗಾಗಲೇ ಊಹೆ ಗಟ್ಟಿಗೊಂಡು ಹುಡುಕಾಟ ಆರಂಭವಾಗಿದೆ.

ಸದ್ಯಕ್ಕೆ ಮನುಷ್ಯ ಇತರ ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿವಂತ ಎಂಬುದನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ. ಈ ಬುದ್ಧಿವಂತರ ಬದುಕಿನಲ್ಲಿ ಗಂಡು–ಹೆಣ್ಣುಗಳೆಂಬ

ಎರಡು ಮುಖ್ಯ ಜೈವಿಕ ಪ್ರಭೇದಗಳಿರುವುದು ಮತ್ತು ಆ ಎರಡೂ ವರ್ಗಗಳು **ಪ್ರೀತಿ** ಎಂಬ ಅದ್ಭುತ ಶಕ್ತಿಯಿಂದ ಬಂಧಿಯಾಗಿರುವುದು ಯಾವ ಕಾಲದಲ್ಲೂ ಅಧ್ಯಯನ ಯೋಗ್ಯವೇ ಆಗಿದೆ. ಈ **ಪ್ರೀತಿ** ಜಗತ್ತಿನ ಸಾಹಿತ್ಯಕ್ಕೆ ಪ್ರೇರಣೆಯನ್ನು ಕಟ್ಟಿಕೊಟ್ಟಷ್ಟು ಪ್ರಮಾಣದಲ್ಲಿ ಬೇರೆ ಯಾವ ಸಂಗತಿಗಳೂ ಹಿಡಿದು ಕೊಟ್ಟಿಲ್ಲ. ಭಾರತೀಯ ಸಾಹಿತ್ಯದಲ್ಲೂ ಕೂಡಾ ರಾಮಾಯಣ–ಮಹಾಭಾರತಾದಿಗಳಿಂದ ಇಂದಿನವರೆಗೆ ಎಲ್ಲ ಪುರಾಣಗಳಿಗೂ, ಇತಿಹಾಸಗಳಿಗೂ ಮತ್ತು ವರ್ತಮಾನದ ಸಂಗತಿಗಳಿಗೂ ಗಂಡು–ಹೆಣ್ಣಿನ ಮಧ್ಯದ ಪ್ರೀತಿ, ದ್ವೇಷ, ಅಸೂಯೆ, ಆತಂಕ, ಆಡಂಬರ, ಆಢ್ಯತೆ – ಹೀಗೆ ಯಾವಯಾವುದೋ ಕಾರಣಗಳೇ ಪ್ರೇರಣೆ.

ಈ ಹಿನ್ನಲೆಯಲ್ಲಿ ಗಂಡಿನ ಕುರಿತು ಹೆಣ್ಣು, ಹೆಣ್ಣಿನ ಕುರಿತು ಗಂಡು ಹೇಗೆ ಯೋಚಿಸುತ್ತವೆ? ಈ ಮಧ್ಯೆ ಪ್ರೀತಿಯ ಪಾತ್ರ ಎಂಥದು – ಎಂಬ ಬಗ್ಗೆ ಹೆಚ್ಚಿನ ಕುತೂಹಲ ಉಳ್ಳವರಿಗೆ, ಅಧ್ಯಯನಕ್ಕೆ ಎಳೆಸುವವರಿಗೆ ಡಾ. ಗೌರೀಶ ಕಾಯ್ಕಿಣಿಯವರು ಸುಮಾರು ಅರವತ್ತು ವರ್ಷಗಳಷ್ಟು ಹಿಂದೆ ಬರೆದ 'ಗಂಡು–ಹೆಣ್ಣು' (೧೯೪೪) ಮತ್ತು 'ಪ್ರೀತಿ' (೧೯೫೦) ಎಂಬ ಹೊತ್ತಿಗೆಗಳು ಅನೇಕ ವಿಚಾರಗಳನ್ನು ತೆರೆದಿಡುತ್ತವೆ. ಈ ಎರಡು ಕೃತಿಗಳ ಒಳಪ್ರವೇಶಕ್ಕೆ ಓದುಗರಿಗೆ ಏಕಕಾಲದಲ್ಲಿ ಒಂದು ಅವಕಾಶ ಒದಗಿಬರಲಿ ಎಂಬ ಕಾರಣಕ್ಕಾಗಿ ಈ ಪ್ರಕಟಣೆಯ ಕೆಲಸಕ್ಕೆ ಮುಂದಾದುದಾಗಿದೆ.

'ಗಂಡು–ಹೆಣ್ಣು', 'ಪ್ರೀತಿ' – ಇವು ಪ್ರತ್ಯೇಕ ಪ್ರತ್ಯೇಕವಾಗಿ ಪ್ರಕಟವಾದ ಹೊತ್ತಿಗೆಗಳು. ಗೋಕರ್ಣ ಮತ್ತು ಧಾರವಾಡದ 'ಪರ್ಣಕುಟಿ ಪ್ರಕಾಶನ'ದ ಮೂಲಕ ಹೊರಬಂದ ಕೃತಿಗಳು. ಮುಂದೆ ೧೯೯೪ರಲ್ಲಿ ರಾಘವೇಂದ್ರ ಪ್ರಕಾಶನವು ಪ್ರಕಟಿಸಿದ ಸಮಗ್ರ ಸಂಪುಟ–೨ರಲ್ಲಿ ಇವೆರಡೂ ಸೇರ್ಪಡೆಯಾದವು. ಈಗ ಆ ಸಂಪುಟ ಓದಿಗೆ ಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ಓದುಗರ ಬೇಡಿಕೆಯನ್ನು ಗಮನಿಸಿ ಎರಡನ್ನೂ ಒತ್ತಟ್ಟಿಗೆ ಸೇರಿಸಿ ಪ್ರಕಟಿಸಲಾಗಿದೆ.

ಈ ಪ್ರಕ್ರಿಯೆಯಲ್ಲಿ ನನಗೆ ನೆರವಾದ ಕಾಯ್ಕಿಣಿಯವರ ಕುಟುಂಬ ಮತ್ತು ನನ್ನ ಕುಟುಂಬದ ಎಲ್ಲ ಸದಸ್ಯರನ್ನು ಸ್ಮರಿಸುತ್ತೇನೆ. ಡಿ.ಟಿ.ಪಿ., ಹೊದಿಕೆಪುಟ ವಿನ್ಯಾಸ ಮತ್ತು ಮುದ್ರಣಕಾರ್ಯದಲ್ಲಿ ನೆರವಾದ ಎಲ್ಲ ಗೆಳೆಯರಿಗೆ ಧನ್ಯವಾದಗಳು.

– ವಿಷ್ಣು ನಾಯ್ಕ

ಪರಿವಿಡಿ

ಗಂಡು–ಹೆಣ್ಣು

ಗಂಡು – ಹೆಣ್ಣು

ಗಾರ್ಕಿ, ಚೆಕಾವ್ಹ್, ಟಾಲ್‌ಸ್ಟಾಯಿ – ಈ ಮೂರು ಹೆಸರುಗಳನ್ನು ಅರಿಯದವರಾರು? ಮೂವರೂ ಪ್ರಪಂಚದಲ್ಲೇ ಹೆಸರಾದ ರಶಿಯಾದ ಹಿರಿಯ ಕತೆಗಾರರು. ಟಾಲಸ್ಟಾಯಿಯಂತೂ ಕತೆಗಾರರಿಗೂ ಹಿರಿಯ ಜ್ಞಾನವೃದ್ಧ ತಪೋವೃದ್ಧ ಮತ್ತು ವಯೋವೃದ್ಧ. ಈ ಮೂವರ ಕುರಿತು ಒಂದು ಕತೆಯಿದೆ: ಒಮ್ಮೆ ಕ್ರಿಮಿಯಾದ ಬೇಲೆಯಲ್ಲಿ ಗಾರ್ಕಿ ಚೆಕಾವ್ಹರು ಅಡ್ಡಾಡುತ್ತಿದ್ದರಂತೆ. ಆಗ ಅಲ್ಲೇ ಬಿಳಿಮರಳಲ್ಲಿ ತನ್ನ ಬಿಳೀಗಡ್ಡವನ್ನು ತೂರಾಡಲು ಬಿಟ್ಟು ಟಾಲ್‌ಸ್ಟಾಯಿಯು ಒಳ್ಳೇ ವಿಚಾರಮಗ್ನನಾಗಿ ಕುಳಿತಿದ್ದನಂತೆ. ಮೂವರೂ ಕೂಡಿ ಕೂತುಕೊಂಡು ಮಾತುಕತೆಗೆ ಮೊದಲು ಮಾಡಿದರು. ಮಿಕ್ಕವರಂತೆ, ಅವರ ಮಾತುಕತೆಯೂ ಹೆಣ್ಣಿನ ಕುರಿತು ಸಾಗಿತು. ಗಾರ್ಕಿ ಚೆಕಾವ್ ಒಳ್ಳೇ ಹುರುಪಿನಿಂದ ಹರೆಯ ಹುಮ್ಮಸದಲ್ಲಿ ಮಾತನಾಡುತ್ತಿದ್ದರು. ನುರಿತ ನರೆತ ಟಾಲ್‌ಸ್ಟಾಯಿ ಸದ್ದಿಲ್ಲದೆ ಕಿವಿಗೊಟ್ಟು ಕೇಳುತ್ತಿದ್ದ. ಹೀಗೆಯೇ ಕೆಲಕಾಲ ಉರುಳಿತು. ಆಗ ಟಾಲ್‌ಸ್ಟಾಯಿ ಒಮ್ಮೆಲೇ ಅಂದನಂತೆ : ನನ್ನ ಒಂದು ಹೆಜ್ಜೆ ಗೋರಿಯಲ್ಲಿರಬೇಕು. ನನ್ನ ಶವಪೆಟ್ಟಿಗೆಯ ಮುಚ್ಚಳ ತೆಗೆದಿರಬೇಕು. ಆಗ ಹೇಳುವದನ್ನೆಲ್ಲ ಹೇಳಿ ಪೆಟ್ಟಿಗೆಯೊಳಗೆ ಹಾರಿ ಮುಚ್ಚಳ ಇಕ್ಕಿಕೊಳ್ಳುವೆನು. ಆತನಕ ನನ್ನೊಡನೆ ನೀವು ಬೇಕಷ್ಟು ಅಂದುಕೊಳ್ಳಿ.'

ಜ್ಞಾನಿಯಾದ ಟಾಲ್‌ಸ್ಟಾಯಿಯ ಇಂಗಿತ ತಿಳಿಯತೇ? ಹೆಣ್ಣಿನ ಕುರಿತು ಮಾತನಾಡಲು ಅವನಿಗೆ ಅಷ್ಟು ಬಿಗಿ, ಅಷ್ಟು ದಿಗಿಲು! 'ಯಾವ ಗಂಡನೂ ತನ್ನ ಹೆಂಡತಿಯ ಜೀವಮಾನದಲ್ಲಿ ಮದುವೆಯ ಕುರಿತು ಸತ್ಯವನ್ನು ಬರೆಯಲು

ಧೈರ್ಯಪಡನು!' ಇದು ಯಾರ ಮಾತು ಗೊತ್ತೇ? ಪ್ರತಿವಾದಿ ಭಯಂಕರನೂ ಪ್ರಥಿತ ಯಶಪ್ರತಿಭಾವಂತನೂ ಆದ ಜಾರ್ಜ ಬರ್ನಾರ್ಡಶಾನ ಉದ್ಗಾರವಿದು! ಅಂದಲ್ಲಿ ಮಿಕ್ಕವರ ಪಾಡೇನು? ಆದಾಗ್ಯೂ ಹೆಣ್ಣಿನ ಮಾತೇ ಹಾಗೆ. ಹೆಣ್ಣಿನೊಂದಿಗೆಯೂ ಗಂಡಸು ನೆಮ್ಮದಿಯಾಗಿ ಬದುಕಲಾರ! ಹೆಣ್ಣಿನ ಹೊರತಾಗಿಯೂ ಬದುಕಲಾರ! ಆದ್ದರಿಂದ ಹೆಣ್ಣಿನ ವಿಚಾರವಾಗಿ ತುಸು ಚರ್ಚೆ ನಡೆಸದ ಜನವಿಲ್ಲ; ದಿನವಿಲ್ಲ. ಅಂತೆಯೇ ನಾವೂ ಈ ಸಾಹಸಕ್ಕೆ ಲೆಕ್ಕಣಿ ಮಸೆದಿದ್ದೇವೆ. ಆದರೆ ಒಂದು ಮಾತು. ನಾವು ಇಲ್ಲಿ ನಿರೂಪಿಸುವ ವಿಷಯವೂ, ನಿರ್ವಹಿಸುವ ವಿವೇಚನೆಯೂ, ಹೆಣ್ಣಿನ ವಾಡಿಕೆಯ ಸರ್ವಸಾಧಾರಣ ಮಾದರಿಗಳ ಮಟ್ಟಿಗೇ ಮರ್ಯಾದಿತವಾಗಿದೆ. ಮರ್ಯಾದೆ ಎಲ್ಲಿಯೂ ಉಚಿತ. ಹೆಣ್ಣಿನ ವಿಷಯದಲ್ಲಂತೂ ಅದು ಅನಿವಾರ್ಯ ತಾನೇ!

ಸ್ತ್ರೀವಾಙ್ಮಯದಲ್ಲಿ ರುಚಿ ಏಕೆ?

ಹೆಣ್ಣಿನ ಕುರಿತು ವಾಙ್ಮಯ ಅಷ್ಟಿಷ್ಟಲ್ಲ. ಅದರಷ್ಟು ಆಕರ್ಷಕ ವಾಙ್ಮಯ ಬೇರೊಂದಿಲ್ಲ. ಅದರಷ್ಟು ಅವಿಶ್ವಸನೀಯವೂ ಇನ್ನಾವದಿಲ್ಲ. ಹೆಣ್ಣನ್ನು ನಚ್ಚುವಷ್ಟು ಜನ ನಂಬುವವರಿಲ್ಲ! ಹೆಣ್ಣಿನ ಕುರಿತು ಸಾಹಿತ್ಯದ ವಿಷಯವೂ ಹಾಗೆಯೇ. ಸ್ತ್ರೀವಿಷಯಕ ಸಾಹಿತ್ಯವು ಆಕರ್ಷಕವೂ ಮನೋವೇಧಕವೂ ಇರುವದೆಂಬಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಆ ಸಾಹಿತ್ಯದ ವಿಷಯ ನಮ್ಮದೇ ಜೀವನದ ಜೀವಾಳದ್ದು. ನಮ್ಮದೇ ಬಾಳಿಗೆ ಆಳವಾಗಿ ಹೊಂದಿಕೊಂಡದ್ದು. ಮಾನವನ ದೋಷ–ದುಷ್ಟತನಗಳ ವಿಷಯವನ್ನು ಅಳವಡಿಸಿಕೊಂಡೇ ಬರೆದ ಹೆಣ್ಣಿನ ವಿಕಾರಗೆಟ್ಟ ಚರಿತ್ರೆಯ ಮಾತು ಬೇರೆ. ಆರೋಗ್ಯವಂತ ಆತ್ಮಕ್ಕೆ ಅಂಥ ವಿಕೃತ ಸ್ತ್ರೀವಾಙ್ಮಯ ಎಂದಿಗೂ ಅರೋಚಕವೇ. ಆದರೆ ಮಿಕ್ಕ ಸ್ತ್ರೀವಾಙ್ಮಯವೆಲ್ಲ ನಮ್ಮ ಆಸಕ್ತಿಯ ಕೇಂದ್ರವೆಂಬುದಕ್ಕೆ ಸಂಶಯವಿಲ್ಲ. ಆದರೆ ಅಂಥ ವಾಙ್ಮಯ ಅವಿಶ್ವಸನೀಯ ನಂಬಿಗೆಗೆ ನೆಲೆಯಿಲ್ಲದ್ದು ಎಂಬ ಮಾತು ಅಷ್ಟೇ ಸತ್ಯ. ಅದು ಅವಿಶ್ವಸನೀಯವೇಕೆಂದರೆ ಅಂಥ ವಾಙ್ಮಯ ಆತ್ಮವೃತ್ತಪರವಿರುತ್ತದೆ. ಓದಲು ವಿಪರೀತವೆನಿಸಿದರೂ ಒಂದು ಮಾತು ನಿಜವಿದೆ: ಎಲ್ಲ ಆತ್ಮವೃತ್ತವೂ ಕಟ್ಟುಕತೆಯೇ ಸರಿ! ಹಲವು ಸಲ ಆತ್ಮವೃತ್ತದ ದನಿಯು ಸೇಡಿನ ದನಿಯಿರುತ್ತದೆ. ಗೆದ್ದ ಕಲಿಗಳು ಬಾಳನ್ನು ಆಳಿ ಇತಿಹಾಸಕ್ಕೆ ವಸ್ತುವಾಗುತ್ತಾರೆ. ಸೋತ ವೀರರು ತಮ್ಮ ಬಾಳಿನ ಇತಿಹಾಸ ತಾವೇ ಬರೆಯುತ್ತಾರೆ. ಆತ್ಮನಿವೇದನೆಯ ಪ್ರಾಮಾಣಿಕತೆಯ ಅಡಿಗೆ ಆತ್ಮಸಮರ್ಥನೆಯ ಸೂಕ್ಷ್ಮ ಪ್ರತಾರಣೆಯೂ ಅಡಕವಾಗಿರುತ್ತದೆ. ಆದ್ದರಿಂದ

ಗಂಡಸು ಹೆಣ್ಣಿನ ಕುರಿತು ಬರೆಯುವಾಗ ಅಂಥ ಹೊತ್ತಿಗೆಯಲ್ಲಿ ಆತನು ಆಕೆಯಿಂದ ಪಟ್ಟ ಗಾಯಗಳ ನೋವು ಕಾವುಗಳೇ ಮಾತನಾಡುತ್ತದೆ. 'ಧಿಕ್ ತಾಂಚತಂಚ, ಮದಮಂಚ ಇಮಾಂಚ, ಮಾಚ!' ಎಂದು ತಪಿಸಿಕೊಳ್ಳುವ, ಶಪಿಸಿಕೊಳ್ಳುವ ಮಟ್ಟಿಗೂ ಪ್ರತಿಯೊಬ್ಬ 'ಭರ್ತೃ'ವೂ 'ಹರಿ'ಯೂ ಭರ್ತೃಹರಿಯೇ ಆಗುತ್ತಾನೆ.

ಹೆಣ್ಣಿನೊಡನೆ ಗಂಡು ಗೆಲುವು ಸೋಲಿಗೂ ಕಡೆಯಾದ ಮದುವೆಯಾಗುತ್ತದೆ. ಸೋಲಿಗೂ ಕಡೆಯೆಂಬುದೇಕಂದರೆ, ಮಿಕ್ಕ ಸೋಲುಗಳಲ್ಲಿ ಸೋತವರು ಮತ್ತೆ ಹೊಂಚುಸಾಧಿಸಿ ಗೆಲ್ಲುವ ಆಸೆಗಾದರೂ ಎಡೆಯಿದೆ. ಆದರೆ ಮದುವೆಯೆಂಬ ಗೆಲುವಿನ ಸೋಲಲ್ಲಿ ಕೊನೆಯ ತನಕವೂ ಗಂಡು ಮೌನದ ಜಾಣ್ಮೆಯನ್ನು ಸಾಧಿಸುತ್ತಾನೆ. 'ಮೌನದಲ್ಲೂ ಕೂಡ ಮಾತಿನ ದನಿಯುಂಟು' ಎಂದು ಕವಿ ಅಂದ ಮಾತು ಒಂದು ರೀತಿ ನಿಜವಾಗುತ್ತದೆ. ಗಂಡಿನ ಮೌನದಲ್ಲಿ ಹೆಣ್ಣಿನ ಮಾತಿನ ದನಿಯೇ ಗುಡುಗಿ ಮೊಳಗುತ್ತದೆ. ಇದಾಯಿತು ಗೆಲುವಿನ ರೀತಿ. ಇನ್ನು ಗಂಡು ಸೋತರೆ–ನಿಜವಾಗಿಯೂ ಸೋತರೆ – ಅವನು ಅವಳ ಕುರಿತು ಹೊತ್ತಿಗೆಗಳನ್ನು ಬರೆಯುತ್ತಾನೆ.–ಬರೆಯುತ್ತ ಬಂದಿದ್ದಾನೆ. ಇದರ ಬದಲು ಹೆಣ್ಣೇ ಗಂಡಿನ ಚರಿತ್ರ ಚಿತ್ರವನ್ನು ಮನೋಧರ್ಮದ ವಿವರಣ ವಿಕಲನಗಳನ್ನು ಮನವಾರೆ ಮನಬಿಚ್ಚಿ ಮಾಡಿಕೊಡಲು ಹೊರಟಿದ್ದರೆ ಅಂಥ ಪುಸ್ತಕಗಳು ಎಷ್ಟೋ ವೇಧಕವಾಗುತ್ತಿದ್ದವು; ಬೋಧಕವಾಗುತ್ತಿದ್ದವು. ಏಕೆಂದರೆ, ಅಂಜುವ ಹಿಂಜರಿಯುವ ತಿಳುವಳಿಕೆಯ ಹೊಯ್ದಾಟದ ಗಂಡಸಿಗಿಂತಲೂ, ಸಂಶಯಾತ್ಮಕ ಪುರುಷ ಬುದ್ಧಿಗಿಂತಲೂ ಹೆಣ್ಣಿನ ಮನಸ್ಸು ಮನುಷ್ಯ ಸ್ವಭಾವದ ವ್ಯಾಪಾರಗಳನ್ನೆಲ್ಲ ಹೆಚ್ಚು ಆಳವಾಗಿ ಅರಿತು ಹೆಚ್ಚು ಅಂದವಾಗಿ ಚಾಲನಗೊಳಿಸಿ 'ಅಶಿಕ್ಷಿತ ಪಟುತ್ವ'ದ ಎಷ್ಟೋ ಮಿಗಿಲಾದ ತಿಳುವಳಿಕೆಯ ತಿಳಲನ್ನು ತೋರುತ್ತದೆ. ಆದ್ದರಿಂದ ಗಂಡು ಹೆಣ್ಣಿನ ಕುರಿತು ಮಾಡುವ ಅರ್ಧ–ಸತ್ಯ, ಅಸತ್ಯಗಳ ಸ್ಥೂಲ ಪ್ರದರ್ಶನಕ್ಕಿಂತ ಹೆಣ್ಣು ಗಂಡಿನ ವಿಷಯ ಮಾಡುವ ಸತ್ಯತಥ್ಯಗಳ ಸೂಕ್ಷ್ಮನಿದರ್ಶನವು ಮನಸ್ತತ್ವದ ಹಾಗೂ ಮನುಷ್ಯತ್ವದ ವ್ಯಾಪಾಕ ದರ್ಶನಕ್ಕೆ ಹೆಚ್ಚಿನ ಪೂರ್ಣತೆಯನ್ನು ತಂದುಕೊಡಬಹುದು. ವಿದ್ಯಾವಂತ ಗಂಡಿನ ಜ್ಞಾನಕ್ಕಿಂತ ಬುದ್ಧಿಬಂತ ಹೆಣ್ಣಿನ ಚಾತುರ್ಯಕ್ಕೆ ಬಾಳಿನ ಸೆಲೆ(?) ತಪ್ಪದೇ ಎಟುಕುವದು.

ಗಂಡು–ಹೆಣ್ಣಿಗೆ, ಹೆಣ್ಣು ಕೊನೆಯ ಒಗಟು

ಆದರೆ ಈ ಬುದ್ಧಿವಂತಿಕೆಯೇ ಹೆಣ್ಣನ್ನು ಮೂಕಳನ್ನಾಗಿ ಮಾಡಿದೆ. ಯಾವ ಹೆಣ್ಣೂ ಕಥೆ, ಕಾವ್ಯ, ಚರಿತ್ರೆಗಳಲ್ಲಿ ತನ್ನನ್ನು ಸಂಪೂರ್ಣವಾಗಿ ಗಂಡಿನಷ್ಟು ಪೂರ್ತಿಯಾಗಿ ತೋರಿಸಿಕೊಳ್ಳುವದಿಲ್ಲ. ಹೆಣ್ಣು ಬರೆದ ವಾಙ್ಮಯದಲ್ಲಿ ಆಕೆಯ ವ್ಯಕ್ತಿತ್ವವು ಪೂರ್ಣ ವ್ಯಕ್ತಿತ್ವವಾಗದಿರುವಷ್ಟು ಸಂಯಮದ ಚಾತುರ್ಯವೆ ಹೆಚ್ಚು ವ್ಯಕ್ತವಾಗುತ್ತದೆ. ತನ್ನ ಜಾತಿವೈರಿಯೇ–ಹುಟ್ಟುಹಗೆಯಾದ ಗಂಡೇ ತನ್ನ ಕುರಿತು ಸಾಹಿತ್ಯವನ್ನು ನಿರ್ಮಿಸುವದು ಅವಳಿಗೆ ಸಂತೋಷ. ನಮ್ಮ ಶತ್ರು ನಮ್ಮ ಕುರಿತು ಬರೆದ ಗ್ರಂಥದಿಂದ ನಮ್ಮ ದೋಷಗಳೊಂದಿಗೆ ಅವನ ರೋಷಕ್ಕೆ ಕಾರಣವಾದ ನಮ್ಮ ಗುಣಾಂಶಗಳೂ ಪ್ರಕಟವಾಗುತ್ತವಲ್ಲವೇ? ಗಂಡಿನ ಗೊತ್ತು ಗುರಿಗಳನ್ನು ತಿಳಿಯುವ ಹೆಣ್ಣಿನ ಗತ್ತುಗಾರಿಕೆಗೆ ಇದಕ್ಕೂ ಹೆಚ್ಚೇನು ಬೇಕು? ಅಂತೆಯೇ ಹೆಣ್ಣು ಗಂಡಿನ ಕಾವ್ಯಕ್ಕೆ ಸ್ಫೂರ್ತಿ. ಕಥೆಗೆ ನಾಯಿಕೆ, ಇಲ್ಲವೇ ಅರ್ಪಣ ಪತ್ರಿಕೆಗೆ ಅಧಿಕಾರಿಯಾಗುವದರಲ್ಲಿಯೇ ಸಮಾಧಾನ ಪಡುತ್ತಾಳೆ. ಸ್ತ್ರೀಯ ಚಾರಿತ್ರ್ಯವನ್ನು ಬರೆಯುವದು ಪುರುಷನ ಭಾಗ್ಯವಾಗುತ್ತದೆ!

ಸಾಮಾನ್ಯವಾಗಿಯೂ ಪ್ರತಿಯೊಂದು ಜನ ಗಂಡಿರಲಿ, ಹೆಣ್ಣಿರಲಿ, ಪಕ್ಷಪಾತಿಯಾಗಿರುವದೇ ಸಹಜ. ವ್ಯಕ್ತಿತ್ವದ ಮನುಷ್ಯತ್ವದ ಒಂದು ಮೈ, ಒಂದು ಮಗ್ಗಲು, ಒಂದೇ ಮಾರ್ಗ, ಒಂದೇ ಮಟ್ಟವನ್ನೇ ಒಂದು ವ್ಯಕ್ತಿಯು ಅನುಸರಿಸುವದು ವಾಡಿಕೆ. ಈ ವಿಷಯದ ಅರ್ಧವನ್ನಷ್ಟೇ ವ್ಯಕ್ತಿಯು ತಿಳಿಯಬಲ್ಲನು. ಆ ಅರ್ಧದಲ್ಲೂ ಒಂದು ಅಂಶವನ್ನಷ್ಟೇ ಹತ್ತಿರದಿಂದ ಹೊಂದಿಕೆಯಿಂದ ತಿಳಿಯಬಲ್ಲನು. ಆದರೂ ಆ ಅಂಶವನ್ನು ಕೂಡ ಪ್ರಾಮಾಣಿಕವಾಗಿಯಾಗಲೀ ಪೂರ್ಣವಾಗಲೀ ತಿಳಿಯಲೊಲ್ಲನು! ಅಂಥಲ್ಲಿ ಗಂಡು ಹೆಣ್ಣು ಒಬ್ಬರನೊಬ್ಬರು ಚೆನ್ನಾಗಿ ತಿಳಿಯುವದುಂಟೇ? ಪಕ್ಷಪಾತವೇ ವ್ಯಕ್ತಿಯ ಸಾಮಾನ್ಯ ಧರ್ಮವಾದಾಗ ಯುದ್ಧ ಸಮಯದಲ್ಲಿ ತಾಟಸ್ಥ್ಯವೂ ನಿಷ್ಪಕ್ಷಚಿತ್ತಸ್ವಾಸ್ಥ್ಯವೂ ಸಾಧ್ಯವೇ? ಗಂಡು ಹೆಣ್ಣು ಸಂಬಂಧವೂ ಎಂದಿಗೂ ಒಂದು ಯುದ್ಧ ಪ್ರಸಂಗವೇ ಸರಿ; ಕೆಲವೊಮ್ಮೆ ಪ್ರಕಟ ಯುದ್ಧ ಹಲವೊಮ್ಮೆ ಕೂಟಯುದ್ಧ ಯಾವಾಗಲೂ ಸಾರಿ ಸಾಗುವ ಕಾದಾಟಕ್ಕಿಂತ ಸಾರದೇ ನಡೆಯುವ ಹೋರಾಟವೇ ಹೆಚ್ಚು. ಅಂಥಲ್ಲಿ ಮನದ ಸಮತೂಕ ಉಳಿಯಬಹುದೇ? ಆದ್ದರಿಂದ ಗಂಡು–ಹೆಣ್ಣಿನ ವಿಷಯ ಬರೆಯುವಾಗ ಯಾವನಾದರೂ ಅವಿವೇಕ ಅತಿರೇಕವನ್ನು ಸಾಧಿಸುತ್ತಾನೆ. ಗಂಡಿಗೆ ಹೆಣ್ಣು ಒಮ್ಮೆ ದಾಸಿ; ಒಮ್ಮೆ ದೇವಿ; ಒಮ್ಮೆ ನರಕದ ಹೆದ್ದಾರಿ;

ಒಮ್ಮೆ ಸ್ವರ್ಗದ ಸುಂದರಿ; ಒಮ್ಮೆ ಬರೇ ಭೋಗ ವ್ಯಕ್ತಿ; ಒಮ್ಮೆ ಕೇವಲ ತ್ಯಾಗಮೂರ್ತಿ,- ಹೀಗೆಲ್ಲ ತಿಳುವಳಿಕೆಯ ತೂಗಾಟದಲ್ಲಿ ಸಿಲುಕಿ ಗಂಡಿನ ಕಣ್ಣಿಗೆ ಹೆಣ್ಣು ಒಂದು ಒಗಟಾಗಿದ್ದಾಳೆ. ಮಾನವ ಜನಾಂಗದ ಕೊನೆಯ ಜಿಜ್ಞಾಸೆ ಮಾನವನ ಕುರಿತೇ ಆಗಿದೆ; ಅದರ ಕೊನೆಯ ಶಾಸ್ತ್ರ ಮನೋವಿಜ್ಞಾನವಾಗಿದೆ; ಮತ್ತು ಈ ಶಾಸ್ತ್ರಜಿಜ್ಞಾಸೆಗಳ ಕೊನೆಯ ವಿಷಯ ಹೆಣ್ಣಾಗಿದೆ!

೨

ಈ ಹೆಣ್ಣಿನ ವಿಷಯವನ್ನು ತಿಳಿಕೊಳ್ಳುವ ರೀತಿ ಯಾವದು? ಮೊದಲು ಮಾನವ ಪ್ರಕೃತಿಯ(ಸ್ವಭಾವವ)ನ್ನು ಅದರ ಮೂಲದ ಪ್ರವೃತ್ತಿಗಳಲ್ಲಿ ವಿಂಗಡಿಸೋಣ : ಬುನಾದಿಯ ಕೆಲವು ನಡತೆಯ ಒಲವುಗಳಲ್ಲಿ, ಅನಿಸಿಕೆ ಮತ್ತು ಬಗೆಗಳ ಒತ್ತಾಯಗಳಲ್ಲಿ ಗುಂಪುಗೂಡಿಸೋಣ. ಇದು ಬರೇ ಅನುಕೂಲತೆಗಾಗಿ, ಕೃತ್ರಿಮವಾಗಿಯೇ ಸರಿ. ಆದರೂ ಈ ಗುಂಪುಗೂಡಿಸುವ ವಿಂಗಡಿಕೆಯು ಅವಶ್ಯ. ವ್ಯಕ್ತಿ ಸಮಾಜ ಮತ್ತು ವಂಶ ಈ ಮೂರು ಸಂಸ್ಥೆಗಳಿಗೆ ಸಹಾಯಕವೂ ಪ್ರಯೋಜಕವೂ ಆಗುವ ಸ್ವರೂಪದಿಂದ ಮೂಲ ಪ್ರವೃತ್ತಿಗಳನ್ನೂ ಹುಟ್ಟುಗುಣಗಳನ್ನೂ ವರ್ಗೀಕರಿಸೋಣ. ಆಹಾರ, ಹೋರಾಟ, ಪಲಾಯನ ಮತ್ತು ಆಟಪಾಟ- ಇವು ವ್ಯಕ್ತಿಯನ್ನು ಬದುಕಿಸುವ ಹುಟ್ಟು ಪ್ರವೃತ್ತಿಗಳು. ಹಿಂಡುಗೂಡುವಿಕೆ (ಸಹವಾಸ ಪ್ರಿಯತೆ), ಹೊಗಳಿಕೆ ತೆಗಳಿಕೆಯ ಪರಿವೆ (ಪ್ರಶಂಸಾ ಪ್ರಿಯತೆ) ಇವು ಸಮಾಜವನ್ನು ಬದುಕಿಸುವ ಪ್ರವೃತ್ತಿಗಳು. ಮೈಥುನ, ವಾತ್ಸಲ್ಯ (ಸಂತತಿ ಸಂಗೋಪನ) ಇವು ವಂಶವನ್ನು ಮುಂದುವರಿಸುವ ಪ್ರವೃತ್ತಿಗಳು. ಈ ಪ್ರವೃತ್ತಿಗಳ ಕುರಿತು ಸೂಕ್ಷ್ಮವಾದ ಪರಿಭಾಷೆಯ ವಾದ ಪ್ರತಿಪಾದಗಳಲ್ಲಿ ನಾವು ಇಲ್ಲಿ ಸೇರಬೇಕಿಲ್ಲ, ನಾವು ವಿಮರ್ಶಿಸಬೇಕಾದ ಪ್ರಶ್ನೆ ಇಷ್ಟೇ. ಮೇಲೆ ಹೇಳಿದ ಈ ಮೂಲ ಪ್ರವೃತ್ತಿಗಳು ಗಂಡು-ಹೆಣ್ಣುಗಳಲ್ಲಿ ಹೆಚ್ಚು ಕಡಿಮೆಯಾಗಿ ಬೇರೆ ಬೇರೆಯಾಗಿ ಬೆಳೆದಿವೆಯೋ ಹೇಗೆ?

ನಮ್ಮ ಚರ್ಚೆ ವಂಶವಿಧಾಯಕ-ಪ್ರವೃತ್ತಿಗಳ ವಿಚಾರದಿಂದಲೇ ಆರಂಭವಾಗಲಿ. ಆ ಪ್ರವೃತ್ತಿಗಳು ಎಲ್ಲಕ್ಕೂ ಮಹತ್ವದವು. ಏಕೆಂದರೆ ಅವುಗಳ ಭಿನ್ನ ಭಿನ್ನ ವ್ಯಾಪಾರಗಳಿಂದಲೆ ಸ್ತ್ರೀ-ಪುರುಷರ ಎಲ್ಲ ಬಗೆಯ ಶಾರೀರಿಕ ಮಾನಸಿಕ, ಹಾಗೂ ಚಾರಿತ್ರಿಕ-ಭೇದಭಾವಗಳ ವಿವಿಧತೆಯು ಹಬ್ಬಿ ಬೆಳೆದಿದೆ.

ಪ್ರಾಣಿಪ್ರಪಂಚದಲ್ಲಿ ಹೆಣ್ಣಿನ ಸ್ಥಾನ

ಮನುಷ್ಯನನ್ನು ಉಳಿದು ಮಿಕ್ಕ ಪ್ರಾಣಿ–ಪ್ರಪಂಚದಲ್ಲಿ ಗಂಡಿಗಿಂತಲೂ ಹೆಣ್ಣಿಗೆ ಪ್ರಾಧಾನ್ಯ. ಬರೇ ಆಕಾರದಲ್ಲಿ ಮಾತ್ರವಲ್ಲ; ವಂಶವನ್ನು ಮುಂದುವರಿಸುವ ನೇರವಾದ ವಾಹನ ಹೆಣ್ಣು ಆದ್ದರಿಂದ ಅದಕ್ಕೆ ಪ್ರಾಣಿಜೀವನದಲ್ಲಿ ಅಷ್ಟು ಪ್ರಾಧಾನ್ಯ. ಮನುಷ್ಯಪ್ರಾಣಿಯ ವಂಶದಲ್ಲಿ ಸಂತತಿ ನಿರ್ಮಿತಿಯ ಕಾರ್ಯವು ಹೆಣ್ಣಿನಲ್ಲೇ ಜರುಗುತ್ತದೆ. ತನ್ನ ಒಂದಂಶವನ್ನೇ ಬೇರ್ಪಡಿಸಿ, ಮಾರ್ಪಡಿಸಿ ಹೆಣ್ಣು ಸಂತತಿಯನ್ನುಂಟು ಮಾಡುತ್ತಾಳೆ. ಗಂಡಿನ ಕಾರ್ಯ 'ನಿಮಿತ್ತ ಮಾತ್ರ'. ಆಗಂತುಕ; ಬಹಿರಂಗದ್ದು. ಅದೂ ಅಪರಿಹಾರ್ಯ; ಅವಶ್ಯಕತೆಯದಲ್ಲ. ನಿಸರ್ಗವೂ ವಿಜ್ಞಾನಿಗಳ ಪ್ರಯೋಗಸಾಲೆಯೂ ಈ ವಿಧಾನವನ್ನು ಸಮರ್ಥಿಸಲಿಕ್ಕೆ ಅನ್ಯೋನ್ಯ ಸಹಕಾರ ನೀಡಿವೆ. ಪ್ರಜೋತ್ಪಾದನೆಯ ವ್ಯಾಪಾರದಲ್ಲಿ, ಗಂಡು ಕೊನೆಗೂ ಎಷ್ಟು ಅನವಶ್ಯಕವೆಂಬುದನ್ನು ಅವೆರಡೂ, ಉದಾಹರಣೆಗಳಿಂದ ಸಿದ್ಧ ಮಾಡಿದ್ದಾವೆ. ಗಂಡು, ಸಮಾಜದಲ್ಲಿ ಸರ್ವಾಧಿಕಾರಿಯಾದರೂ, ನಿಸರ್ಗದಲ್ಲಿ ಅವನ ಸ್ಥಾನ ಗೌಣ. ಪ್ರಜೋತ್ಪಾದನೆಯ ಇತಿಹಾಸದಲ್ಲಿ ಗಂಡಿನ ಕಾರ್ಯ ಪ್ರತ್ಯೇಕವಾಗಿ ನಿಶ್ಚಿತವಾದದ್ದು, ತರುವಾಯದ ತಿದ್ದು ಪಡಿ, ಸೃಷ್ಟಿಯ ನಾಟಕಕ್ಕೆ ಹೆಣ್ಣಿನದೇ ನಾಯಕ–ಪ್ರಾತ; ಗಂಡು ನಿರ್ವಹಿಸುವ ಭೂಮಿಕೆ. ಆನುಷಂಗಿಕ ಮತ್ತು ಪ್ರಾಸಂಗಿಕ, ಗಂಡನ್ನೂ ಹೆಣ್ಣೇ ಹೊತ್ತು ಹೆತ್ತು ಬದುಕಿನ ಹಾದಿ ಹಿಡಿಸುತ್ತಾಳೆ. ಹೊಸ ಹುಟ್ಟಿನ ದುರಂತ ಕ್ಷಣದಲ್ಲಿ ಗಂಡು ಕಂಗೆಟ್ಟು ಕಳವಳಗೊಂಡು ಅಸಹಾಯವಾಗಿ ಬದಿಗೆ ಕೈ–ಕಟ್ಟಿ ನಿಲ್ಲುತ್ತದೆ. ವಂಶವನ್ನು ವಿಸ್ತರಿಸುವ ಗಂಭೀರ ಕಾರ್ಯದಲ್ಲಿ ಬರೇ ಉಪಕರಣವಾಗಿದ್ದು ಸಲಕರಣೆಗಳನ್ನು ಒದಗಿಸುವ ತನ್ನ ಕೆಲಸ ಎಷ್ಟು ಅಮುಖ್ಯವೆಂಬುದನ್ನು ಆ ಕ್ಷಣಕ್ಕೆ ಆತನು ಮನಗಾಣುತ್ತಾನೆ; ವಂಶದ ಜೀವಸೆಲೆಗೆ ತನಗಿಂತಲೂ ಹೆಣ್ಣು ಎಷ್ಟು ಹತ್ತಿರ. ಎಷ್ಟು ಹೊಂದಿಕೆಯವಳೆಂಬದನ್ನು ಗಂಡು ತಿಳಿದುಕೊಳ್ಳುತ್ತದೆ; ಜೀವನದ ಮಹಾಪ್ರವಾಹವು ಹೆಣ್ಣಿನಲ್ಲಿಯೇ ಪ್ರಕ್ಕುಬ್ಧವಾಗಿ ಹರಿಯುತ್ತದೆ. ಆಕೆಯ ರಕ್ತ–ಮಾಂಸದಿಂದಲೇ ಹೊಸ ಸೃಷ್ಟಿ ಹುಟ್ಟಿ ಬರುತ್ತದೆ. ಆದ್ದರಿಂದಲೇ ಜಗತ್ತಿನ ಆದಿ ಜನಾಂಗಗಳೂ ಪ್ರಾಚೀನ ಧರ್ಮಗಳೂ ತಾಯ್ತನವನ್ನು ಅಷ್ಟೊಂದು ಭಯ ಭಕ್ತಿಯಿಂದ ಪೂಜಿಸಿದವು ಎಂಬ ಮಾತು ಗಂಡಿಗೆ ಮನವರಿಕೆಯಾಗುತ್ತದೆ.

ಹೆಣ್ಣಿನ ಈ ಭೂಮಿಕೆಗೆ ತಕ್ಕುದಾಗಿ ಆಕೆಯ ಗುಣದೋಷಗಳು ಬೆಳೆದು ಬಂದಿದೆ. ಹೆಣ್ಣಿನ ಲಜ್ಜೆ ಹಿರಿದು. ಈ ಲಜ್ಜಾಭಾವವು ಆಕೆಯ ಸಂತತಿ ನಿರ್ಮಾಣದ

ಉದ್ದೇಶಕ್ಕೇ ಅಂಕಿತವಾಗಿದೆ. ಲಜ್ಜೆಯಿಲ್ಲವಾಗಿದ್ದರೆ ಹೆಣ್ಣು ಯಾವ ಗಂಡಿಗೂ ಒಮ್ಮೆಲೇ ಈಲಾಗುತ್ತಿದ್ದಳು; ಸೋಲುತ್ತಿದ್ದಳು. ಲಜ್ಜೆಯು ಒಂದು ಹಿತವಾದ ಸಹಜ ಸಂಯಮ. ಅದರ ಪ್ರಯೋಜನವೆಂದರೆ, ಕಾಮಕ್ಕೆ ಕಡಿವಾಣ. ಲೈಂಗಿಕ ಆಯ್ಕೆಗೆ ಅದು ಸಹಾಯ. ತನ್ನ ಮಕ್ಕಳ ತಂದೆಯಾಗಲು ತಕ್ಕವನಾದ ಇನಿಯನನ್ನು ಹೆಚ್ಚಿನ ವಿವೇಕದಿಂದ ಆಯ್ದುಕೊಳ್ಳಲು ಲಜ್ಜೆಯು ಹೆಣ್ಣಿಗೆ ಒಂದು ಆಯುಧ. ಆದುದರಿಂದಲೇ ಲಜ್ಜೆಯು ವಧುಗಳಲ್ಲಿಯೂ, ಉಪವರ ಕನ್ನಿಕೆಯರಲ್ಲಿಯೂ ನವಯುವತಿಯರಲ್ಲಿಯೂ ವಿಶೇಷ ನೋಡಿ. ಹೆಣ್ಣಿನ ಉದ್ದೇಶ ಕೈಗೂಡಿದ ಮೇಲೆ, ವಧೂವರರ ಕೈಗೆಕೈಗೂಡಿ ಮುಂದೆ ತಾಯ್ತನದಲ್ಲಿ ಆಕೆಯ ಬಾಳು ಸಫಲವಾದೊಡನೆ, ಹೆಣ್ಣಿನ ಲಜ್ಜೆ- ನಾಚಿಕೆ- ಕಡಿಮೆಯಾಗುವದು.

ಹೆಣ್ಣಿಗೆ ಪ್ರಣಯ ಬೇಕೆ?

ಹಾಗೆಯೇ, ಪ್ರಣಯ ವ್ಯವಹಾರದಲ್ಲಿ, ಹೆಣ್ಣೇ ಗಂಡಿಗಿಂತ ಚತುರಳು, ಕುಶಲಳು, ಚಾತುರ್ಯಕ್ಕೆ ಸಾವಧಾನತೆ ಅವಶ್ಯ. ಸಾವಧಾನ ಸಂಯಮದಿಂದ ಶಕ್ಯ. ಸಂಯಮ ವಿವೇಕದಿಂದಲೇ ಸಾಧ್ಯ. ವಿವೇಕಕ್ಕೆ ವಿಕಾರವಶತೆ ವೈರಿ. ಸಾಮಾನ್ಯವಾಗಿ ಗಂಡಿಗಿಂತಲೂ ಹೆಣ್ಣು ಮಂದಕಾಮಿ. ಆದ್ದರಿಂದ 'ಇಂದ್ರಿಯ ಗ್ರಾಮದ' ಬಲಕ್ಕೆ 'ಪಂಡಿತ'ನೂ ಸೆಳೆದೊಯ್ಯಲ್ಪಡುವಾಗ ಆತನ ಹೆಣ್ಣು ಅಷ್ಟೊಂದು ದುಡುಕುವದಿಲ್ಲ. ಹೆಣ್ಣಿನ ವಿಕಾರವಶತೆಯು ವಿವೇಕವನ್ನೇ ಮಂಕುಗೊಳಿಸುವಷ್ಟು ತೀವ್ರವಾಗಿ ಬೆಳೆಯುವದಿಲ್ಲ, ಹೆಣ್ಣಿನ ಅನಾದಿಯ ಜಾಣತನದ ಮರ್ಮವಿದು. ಆಕೆ ಸಂಯೋಗದಲ್ಲಿ ತಾಳಬಲ್ಲಳು. ಈ ನಿಯಮಕ್ಕೆ ಅಪವಾದವಿಲ್ಲದೇ ಇಲ್ಲ. ಸಾಮಾನ್ಯವಾಗಿ ಲೆಕ್ಕ ಹಾಕಿದರೆ, ನೂರಕ್ಕೆ ನಾಲ್ವತ್ತರಷ್ಟು ಹೆಣ್ಣುಗಳು ಒಂದು ಬಗೆಯ ಬಧಿರವೃತ್ತಿಯನ್ನು, ಕಾಮಕ್ಕೆ ಕೆರಳದ ಕರಗದ ಮಂದತ್ವವನ್ನು, ನೆಮ್ಮದಿಯಾಗಿ ಬೆಳೆಸಿಕೊಂಡದ್ದು ಕಂಡುಬರುತ್ತದೆ.

ಪ್ರಾಣಿಸೃಷ್ಟಿಯಲ್ಲಿಯೂ ಹಾಗೆಯೇ. ಎಷ್ಟೋ ಜಾತಿಗಳಲ್ಲಿ ಹೆಣ್ಣು ಪ್ರಣಯಕ್ಕೆ ಪರಾಙ್ಮುಖವಾಗಿರುತ್ತದೆ. ಕಾಮದ ಉದ್ರೇಕಕ್ಕೆ ಉದಾಸೀನ ವಾಗಿರುತ್ತದೆ. ಹಾಗಿದ್ದರೆ ಹೆಣ್ಣಿಗೆ ದೇಹದ ಸುಖಬೇಡವೇ? ಬೇಕು. ಲೈಂಗಿಕ ಭೋಗವನ್ನು ಹೆಣ್ಣು ಬೇಡುವಳು; ಬಯಸುವಳು. ಪಡೆದು ಹಿಗ್ಗುವಳು ಆದರೆ ಅದಕ್ಕೂ ಮಿಗಿಲಾಗಿ ಹೆಣ್ಣು ಬಯಸುವದು - ಭೋಗಿಸುವದು, ವಿಪರೀತ ಅಪರಿಮಿತ ಪ್ರಶಂಸೆಯನ್ನು; ತನ್ನ ಬಯಕೆ ಬೇಡಿಕೆಗಳ ಕುರಿತು ಗಂಡು ಪೂರೈಸುವ

ಯಥೇಷ್ಟವಾದ ಗಮನವನ್ನು. ಆಕೆ ಕಾಮುಕಳಲ್ಲ; ಕಾಮಿನಿ, ರಮಣಿ. ಕಾಮಿಸಲ್ಪಡುವವರಲ್ಲಿ ರಮಿಸಿಕೊಳ್ಳುವದರಲ್ಲಿ ಆಕೆಗೆ ಕೊನೆಯಿಲ್ಲದ ಮೆಚ್ಚುಗೆ! ಗಂಡಿನಿಂದ ಅನುದಿನದ ಆರೈಕೆ, ಅನವರತದ ಓಲೈಕೆ, ಅನುನಯ ಮತ್ತು ಅನುಯಾಯಿತನ ಇದೇ ಹೆಣ್ಣಿಗೆ ಹಿರಿಯ ಹಿಗ್ಗಿನ ಕಾರಣಗಳು. ಹಲವು ಸಮಯ, ಒಬ್ಬನಿಂದ ಬಯಸಲ್ಪಡುವೆನೆಂಬ, ಕಾಮಿಸಲ್ಪಡುವೆನೆಂಬ ಭಾವನೆಯಲ್ಲಿಯೇ ಹೆಣ್ಣು ನಿತಾಂತ ಸುಖವನ್ನೂ ಸಮಾಧಾನವನ್ನೂ ಪಡೆಯುವಳು. ಪ್ರತ್ಯಕ್ಷ ಸಹವಾಸ ಸಮಾಗಮಗಳೂ ಆಕೆಗೆ ಅಷ್ಟು ಬೇಕೆನಿಸುವದಿಲ್ಲ!

ಹೀಗೆ ಪ್ರೀತಿಗಿಂತಲೂ ಪ್ರೀತಿಸಲ್ಪಡುವದೇ ಹೆಣ್ಣಿಗೆ ಹೆಚ್ಚು ಪ್ರಿಯ. ಇದರ ಮೋಹವು ಕೆಲವೊಮ್ಮೆ ಆಕೆಯ ಸಹಜ ವಿವೇಕವನ್ನೂ ಮೀರಿ ಮೇರೆವರಿದದ್ದುಂಟು. ಗಂಡನ್ನು ಬರಿದೆ ಕೆರಳಿಸಿ, ಆತುರನಾಗಿ ಕಾತರನಾಗಿ ಮಾಡಿ, ಕೊನೆಗೆ ಅಂಜಿ ಹಿಂಜರಿದು ದುರಂತಕ್ಕೆ ಗುರಿಯಾದ ಹೆಣ್ಣಿನ ಕತೆಗಳು ಬೇಕಷ್ಟಿವೆ. ಒಂದೆಡೆಗೆ ವಿಕಾರದ ಮಂದತೆ ಇನ್ನೊಂದೆಡೆಗೆ ಆರಾಧನಾ ಪ್ರಿಯತೆಯ ತೀವ್ರತೆ–ಇವೆರಡರಿಂದ ಇನ್ನೂ ಒಂದು ವಿಶೇಷ ಪರಿಣಾಮವಾಗುವದುಂಟು. ಅದಕ್ಕೆ ಪ್ರೇಮದ ಆಧ್ಯಾತ್ಮಿಕತೆಯೆನ್ನಬಹುದು. ಪ್ರೇಮದ ಆಧ್ಯಾತ್ಮಿಕ ಅಂಶವು ಗಂಡಿಗಿಂತ ಹೆಣ್ಣಿನಲ್ಲಿಯೇ ಹೆಚ್ಚು ಸ್ವಾಗತವನ್ನು ಪಡೆಯುತ್ತದೆ. ಗಂಡು ಆಧ್ಯಾತ್ಮಿಕ ಪ್ರೇಮದ ಮಾತನಾಡುವಾಗ ಹಲವೊಮ್ಮೆ ಹೆಣ್ಣನ್ನಾಗಲೀ ತನ್ನನ್ನೇ ಆಗಲೀ, ವಂಚಿಸುತ್ತಿರುತ್ತಾನೆ. ಆರಂಭಕ್ಕೆ ಅದು ಅನುಕೂಲವೆನಿಸಿದರೂ, ಪ್ರೇಮದಲ್ಲಿಯ ಈ ಆಧ್ಯಾತ್ಮದ ಅಥವಾ ಕಾವ್ಯದ ಅಂಶದಿಂದಲೇ ಗಂಡಿಗೆ ತೃಪ್ತಿಯಾಗದು. ಆತನ ಪ್ರೇಮದಲ್ಲಿ ಆಧ್ಯಾತ್ಮಿಕತೆಗಿಂತ ಶಾರೀರಕತೆಯೇ ಹೆಚ್ಚು. ಕ್ರಮೇಣ (ಇಲ್ಲವೇ ಕೆಲವೊಮ್ಮೆ ಅಕಸ್ಮಾತ್!) ಗಂಡು ಕಾವ್ಯದಿಂದ ಕಾಮಕ್ಕೇ ಇಳಿಯುತ್ತಾನೆ. ಪ್ರತ್ಯಕ್ಷ ಪ್ರಣಯ ವ್ಯವಹಾರದ ಮಾತೆತ್ತಿ ಹೆಣ್ಣನ್ನು ದಿಗಿಲುಗೊಳಿಸುತ್ತಾನೆ! ಮುಗಿಲಿನಿಂದ ನೆಲಕ್ಕೆ ಇಳಿಸುತ್ತಾನೆ! ಆದರೆ ಹೆಣ್ಣಿನ ರೀತಿ ಬೇರೆ. ಆಕೆ ಅಂತರವನ್ನಿಟ್ಟುಕೊಂಡು, ಅಂತರಂಗವನ್ನು ಬಚ್ಚಿಟ್ಟುಕೊಂಡು, ಕೊನೆತನಕ ಗಂಡಿನೊಡನೆ ಮಾನಸಿಕ ಪ್ರೇಮವನ್ನು ಮನವಾರೆಯೂ ಮಾಡಬಲ್ಲಳು. ಇಷ್ಟೇ ಅಲ್ಲ, ಗಂಡಿನ ಮೈಸಲಿಗೆಗೆ ಕನಿಕರದಿಂದಾಗಲೀ, ಕೆಲವೊಂದು ಕಾರಣದಿಂದಾಗಲೀ ಒಪ್ಪಿಯೂ ಅಂತರಂಗದಿಂದಲೂ ನಿರ್ಲಿಪ್ತಳಾಗಿ ಬಾಳಬಹುದು! ಕಾಡುಕಾಮವನ್ನು ಗಂಡು ಪರಿಷ್ಕೃತ ಪ್ರೇಮವಾಗಿ ಮಾಡಬಲ್ಲ. ಆದರೆ ಪ್ರೇಮವನ್ನು ಅನಿರ್ವಚನೀಯ ಭಕ್ತಿಯಾಗಿ ಮಾರ್ಪಡಿಸುವ ಮಾಟ ಹೆಣ್ಣಿಗೇ ಶಕ್ಯ!

೩

ಇದರ ರಹಸ್ಯವೇನು? ಶರೀರ ಸುಖದ ಒತ್ತಾಯ ಹೆಣ್ಣಿಗೆ ಅಷ್ಟೊಂದು ಇರಬಾರದೇಕೆ? ಹೆಣ್ಣಿಗೆ ತಾಯ್ತನವೇ ಜೀವದ ಜೀವಾಳ. ವಾತ್ಸಲ್ಯವೇ ಜೀವನದ ಸ್ಥಾಯಿಭಾವ. ಇನಿಯತನವೂ ಮೈಥುನವೂ ಆನುಷಂಗಿಕ ಗುಣಗಳು; ಸಂಚಾರೀ ಭಾವಗಳು. ಹೆಣ್ಣಿನ ಬಾಳಿನಲ್ಲಿ ರತಿಯು ವಾತ್ಸಲ್ಯಕ್ಕೆ ಪೋಷಕ. ಪ್ರಣಯವು ಮಾತೃತ್ವ ಸಾಧನ. ಹೆಣ್ಣು ಪ್ರಕೃತಿಯಿಂದಲೂ ತಾಯಿ. ಗಂಡು ಪರಿಸ್ಥಿತಿಯಿಂದ ತಂದೆ. ಗಂಡಿನ ಕುರಿತು ಹೆಣ್ಣಿನ ಪ್ರೇಮ ಆಕೆಯ ವಾತ್ಸಲ್ಯದ್ದೇ ಒಂದು ಅಂಗ; ಒಂದು ಪಾಂಗು. ಆರಂಭದಲ್ಲಿ ಅದು ತಾಯ್ತನಕ್ಕೆ ಸಾಧನವಾಗುತ್ತದೆ. ಆಮೇಲೆ ಅದು ತಾಯ್ತನದ ಒಂದು ಪರಿಯೇ ಆಗುತ್ತದೆ. ಹೆಣ್ಣನ್ನು ಗಂಡಿನೊಡನೆ ಕೂಡಿಸುವ ಎಲ್ಲ ಮೃದುಭಾವನೆಗಳ ಹಾಗೂ ಸ್ನೇಹ ತಂತುಗಳ ಉಗಮವು ಆಕೆಯ ಕಾಮುಕತೆಯಲ್ಲಿ ಇರುವದಿಲ್ಲ; ಲೈಂಗಿಕತೆಯಿಂದ ಬರುವದಿಲ್ಲ; ಪಾತಿವ್ರತ್ಯ, ಪತಿ ಪ್ರೇಮಗಳ ಉಗಮ ಹೆಣ್ಣಿನ ವಿಧೇಯತನದ ಆತ್ಮಸಮರ್ಪಣದ ಮೂಲ ಪ್ರವೃತ್ತಿಗಳಲ್ಲಿದೆ. ಆಳಾಗಬೇಕು– ಆಳಲ್ಪಡಬೇಕು–ಮುಂದೆ ಆಳಾಗಿಯೂ ಆಳ ಬೇಕು ಎಂಬ ಈ ಅಧಿಕಾರ ಪ್ರವೃತ್ತಿಯ ವ್ಯಸ್ತ ಸ್ವರೂಪವೂ, ತೀವ್ರ ಪ್ರಶಂಸಾಪ್ರಿಯತೆಯ ಸಮಸ್ತ ಒತ್ತಾಯವೂ ಹೆಣ್ಣು ಗಂಡನ್ನು ಅಂಟಿ ಉಳಿಯುವಂತೆ ಮಾಡುತ್ತದೆ. ಇದಲ್ಲದೆ ಪ್ರತಿಯೋರ್ವ ಪತಿಯೂ ಪ್ರಿಯನೂ ಅವನ ಹೆಣ್ಣಿಗೆ ಒಂದು ಬೆಳೆದ ಶಿಶುವಂತೆಯೇ ತನ್ನ ಇನ್ನೊಂದು ಕೂಸಾಗಿಯೇ ತೋರುತ್ತಾನೆ! ಅವನ ಆಹಾರ, ಆರೈಕೆ, ಸಂಗೋಪನೆ, ಸಂಸಾರಗಳ ಪರಿವೆ ಆಕೆಗೆ ತನ್ನ ತಾಯ್ತನದ ಇನ್ನೊಂದು ಹೊಣೆಯಾಗಿಯೇ ಕಾಣುತ್ತದೆ. ಹೀಗೆ ಅಭಾವಿತವಾಗಿ, ಹೆಣ್ಣು ತನ್ನ ಗಂಡಿನಲ್ಲಿ ಮಗುವಿನ ಒಂದಂಶವನ್ನೂ, ಗಂಡು ತನ್ನ ಹೆಣ್ಣಿನಲ್ಲಿ ತಾಯಿಯ ಕೆಲವಂಶವನ್ನೂ ಕಂಡುದರಿಂದಲೇ ದಾಂಪತ್ಯವು ದೃಢವಾಗುತ್ತದೆ. ಆದರೆ ಆ ವಿಚಾರ ಇಲ್ಲಿ ಬೇಡ. ಹೆಣ್ಣಿನ ಹೃದಯದ ಒಂದು ಪರಿಯನ್ನು ಮಾತ್ರ ನಾವಿಲ್ಲಿ ಪರೀಕ್ಷಿಸಿದ್ದಾಯಿತು.

ಗಂಡು ಹೆಣ್ಣಿನ ಪ್ರೀತಿಯ ರೀತಿ

ಹೆಣ್ಣಿನ ಕಾಮ (ಮತ್ತೂ ಅದರಿಂದ ರೂಪಗೊಂಡ ಪ್ರೇಮ) ಕಡಿಮೆ ತೀವ್ರ ಹೆಚ್ಚು–ಮಂದ–ವೆಂದು ಮೇಲೆ ಹೇಳಲಾಯಿತು. ಆದರೆ ಇದು ಸತ್ಯದ ಅರೆಪಾಲು. ಗಂಡಿನ ಪ್ರೀತಿಗೆ ರಭಸ ಹೆಚ್ಚು. ಆದರೆ ವ್ಯಾಪ್ತಿಯೂ ಅಷ್ಟೇ ಕಡಿಮೆ. ಪ್ರೀತಿ ಅವನ ಜೀವನದ ಒಂದು ಭಾಗವನ್ನು ಮಾತ್ರ ಆಳುವುದು. ಆದರೆ ಹೆಣ್ಣಿನ

ರೀತಿ ಬೇರೆ. ಹೆಣ್ಣಿನ ಬಾಳಿನಲ್ಲಿ ಪ್ರೀತಿಯ ವ್ಯಾಪ್ತಿ ವಿಶಾಲವಾದದ್ದು. ಅವಳ ಬಾಳಿನ ಸಂದು ಮೂಲೆಗಳನ್ನು ತುಂಬಿ ತುಳುಕಿ ಆಕೆಯ ಪ್ರೀತಿ ಹರಿಯುವುದು. ಗಂಡು ಪ್ರೀತಿ (ಹೆಣ್ಣಿನ ಪ್ರೀತಿ) ಇಲ್ಲದೇ ಬಾಳಬಲ್ಲ. ಆದರೆ ಹೆಣ್ಣು ಹಾಗಲ್ಲ. ಹೆಣ್ಣಿನ ಬಾಳು–ನಿಜವಾದ ಬಾಳು–ಪ್ರೀತಿಯಿಂದಲೇ ಗಂಡಿನ ಪ್ರೀತಿ ಪಡೆದಾಗಲೇ ಬೆಳೆಯುತ್ತದೆ; ಬೆಳಗುತ್ತದೆ. ಪ್ರಿಯನ ಒಡನಾಟ, ಪ್ರಿಯನ ಕುರಿತು ಮಾತುಕತೆ ಇವು ನಡೆಯುವಾಗಲೇ ಹೆಣ್ಣು ನಿಜವಾಗಿ ಜೀವಂತಳು. ಗಂಡಿನ ಆಕರ್ಷಣ, ಆಸಕ್ತಿ ಕಣ್ಮನಗಳನ್ನು ಸೆಳೆಯುವ ಚಟುವಟಿಕೆಯೇ ಹೆಣ್ಣುನಡತೆಯ ನೆಯ್ಗೆ. ಆದರೆ ಇಲ್ಲಿಯೂ ಒಂದು ಸೂಕ್ಷ್ಮವಿದೆ. ಬಳ್ಳಿಯು ಮರವನ್ನು ಸುತ್ತಿ ಮುತ್ತಿ ಬಾಳುತ್ತಿದ್ದರೂ, ಬಳ್ಳಿಯ ಬದುಕು ಮರದಿಂದ ಬೇರೆ. ಅದರ ಜೀವರಸ ಮರದ ಬೇರಿಂದ ಪುಟಿಯುವದಿಲ್ಲ. ಹೆಣ್ಣಿನ ರೀತಿಯೂ ಹಾಗೆಯೇ. ಗಂಡಿನ ಆಸಕ್ತಿ ಅಭಿಪ್ರಾಯಗಳು ಹೆಣ್ಣಿಗೆ ಅವಶ್ಯ, ನಿಜ. ಆದರೆ ಗಂಡಿನ ಹೃದಯವೇ ಹೆಣ್ಣುಬಾಳಿನ ಮಧ್ಯಬಿಂದುವಲ್ಲ. ಗಂಡನ್ನು ಹೆಜ್ಜೆ ಹೆಜ್ಜೆಗೂ ಅವಲಂಬಿಸಿ ಹೆಣ್ಣು ಬದುಕುವದು ಕಂಡಬಂದರೂ. ಹೆಣ್ಣು ಗಂಡಿಗೆ ಎಂದೂ ಪ್ರತಿಬಿಂಬವಾಗುವದಿಲ್ಲ. ಗಂಡಿನ ಆಧಾರಕ್ಕಾಗಿ, ಆರಾಧನೆಪಡಕೊಳ್ಳಲಿಕ್ಕಾಗಿ, ಮಣಿದು ಅಧಿಕಾರ ನಡೆಸುವದಕ್ಕಾಗಿ, ಹೆಣ್ಣು ಗಂಡಿನ ಮತಕ್ಕೆ ಅನುಯಾಯಿ ಆಗಬಹುದು; ಮಾತಿಗೆ ಅನುಮತಿ ಈಯಬಹುದು. ಗಂಡಿನ ಪ್ರಸನ್ನತೆಯಿಂದ ಮನವಾರೆ ಧನ್ಯಳಾಗಬಹುದು. ಜೀವಮಾನವೆಲ್ಲ ಗಂಡಿನ ಎರಕದಲ್ಲಿ ತನ್ನ ಬಾಳನ್ನು ಹೊಯ್ಯಲು ಹೆಣಗುತ್ತಿರಬಹುದು. ಆದಾಗ್ಯೂ ತನ್ನ ಅಂತರಂಗದಲ್ಲಿ ಹೆಣ್ಣು ಕೇವಲ ಆತ್ಮನಿಷ್ಠ; ತನ್ನನ್ನು ಮರೆಯದ ತನ್ನತನವನ್ನು ತೋರೆಯುವ ನಿಷ್ಠುರ ವ್ಯಕ್ತಿತ್ವವು ಹೆಣ್ಣಿನದು. ಹೆರ ಬದುಕಿನ ವ್ಯವಹಾರಿಕ ಪ್ರಪಂಚದಲ್ಲಿ ಆಕೆಯು ಗಂಡಿಗೆ ಅನುಗಾಮಿಯಾಗಿ ವರ್ತಿಸುವಳು. 'ಧರ್ಮೇ ಚ ಅರ್ಥೇಚ ಕಾಮೇ ಚ ನ ಅತಿಚರಾಮಿ' ಎಂದು ಅಗ್ನಿಸಾಕ್ಷಿಯಾಗಿ ಆಣೆ ಹೊತ್ತು ನಡೆಯುವಳು, ಏಕೆಂದರೆ ಗಂಡಿನ ಅಹಂಕಾರಕ್ಕೆ ಮಿತಿಯಿಲ್ಲವೆಂಬುದು ಆಕೆಗೆ ಗೊತ್ತು, ತನ್ನ ವ್ಯಕ್ತಿತ್ವವನ್ನು ಪೂರ್ತಿಯಾಗಿ ಪ್ರತಿಪಾದಿಸಿ ಗಂಡಿನ ತಿರಸ್ಕಾರಕ್ಕೆ ಪಾತ್ರಳಾಗಬಾರದೆಂದೂ ಆಕೆಗೆ ಗೊತ್ತು.

ಗೆಳೆತನ ಪ್ರೀತಿಯ ಗುಣ

ಪ್ರೀತಿಯ ಕಲೆಯಲ್ಲಿ ಹೆಣ್ಣು ಗಂಡಿಗೂ ಮೀರಿದ ನಿಪುಣೆ. ಆದರೆ ಮೈತ್ರಿಯಲ್ಲಿ ಗಂಡೇ ಹೆಣ್ಣನ್ನು ಹಿಂದೆ ಹಾಕುತ್ತಾನೆ. ಗೆಳೆತನವು ಮುಖ್ಯವಾಗಿ ಗಂಡಿನ ಕಲೆ. (ಸಂಸ್ಕೃತದಲ್ಲಿ ಗೆಳೆಯನೆಂಬ ಅರ್ಥದ ಮುಖ್ಯ ಎರಡು ಶಬ್ದಗಳಲ್ಲಿ ಒಂದು

ನಪುಂಸಕ. ಒಂದು ಸ್ತ್ರೀಲಿಂಗ! ಇದರ ಗೂಢವೇನೋ!) ಗಂಡಸರು ಪ್ರಿಯ ಮಿತ್ರರಾಗಬಹುದು. ಹೆಂಗಸರು ಬರೇ ಪರಿಚಿತರೇ ಆಗಿ ಉಳಿಯುವರು. ಕರ್ಣ–ಕೌರವ, ಕೃಷ್ಣಾರ್ಜುನ ದಾಮೇನ–ವೇಪೀಥಿಯಸ್– ಇಂಥ ಜೀವದ ಗೆಳೆಯರ ಜತೆಗಳು ಹೆಂಗಸರಲ್ಲಿ ಸಿಗಬಲ್ಲವೇ? ಯಾವ ಹೆಣ್ಣೊ ಇನ್ನೋರ್ವ ಹೆಣ್ಣಿನ ಕುರಿತು ಮನವಾರೆ ಒಳ್ಳೇ ಮಾತನಾಡಿದ್ದು ನಿಮಗೆ ನೆನಪಿದೆಯೇ? ಜೀವದ ಗೆಳೆಯರಿಗಿಂತ ಜೀವದ ಗೆಳತಿಯರೆನಿಸಿಕೊಂಡ ಎರಡು ಹೆಣ್ಣುಗಳ ಜತೆಯನ್ನು ಕೆಡಿಸುವದು ತೀರ ಸಲಿಸ. ಅದೇಕೆ ಹಾಗೆ? ಒಂದು ಹೆಣ್ಣು ಮಿಕ್ಕ ಹೆಣ್ಣುಗಳ ಕುರಿತು–ಪ್ರಾಯ, ಪ್ರೌಢಿಮೆ, ಪ್ರತಿಷ್ಠೆಯಲ್ಲಿ ತನ್ನ ಸರಿಸಮಾನರಾದ ಹೆಣ್ಣುಗಳ ಕುರಿತು–ಸದಭಿಪ್ರಾಯವನ್ನು ಆಡಿ ತೋರಿಸಿದರೆ ಅಂದಿಗೆ ಆಕಾಶದ ಗ್ರಹಗಳ ಗತಿಯೇ ಕೆಟ್ಟವೆನ್ನಬಹುದು!

ಆದ್ದರಿಂದ ಹೆಂಗಸರು ಕೂಡಿ ಕಲೆತಾಗ ಪರಸ್ಪರರನ್ನು ಬಹಳ ಹೊತ್ತು ಆರಾಧಿಸಲಾರರು, ಎಲ್ಲರೂ ಕೂಡಿ ಬೇರೊಂದು ವಿಷಯವನ್ನೆತ್ತಿ ಬೇರೊಂದು ಆಸಕ್ತಿಯನ್ನು ಉಂಟುಮಾಡಿಕೊಳ್ಳಬಹುದು. ಉಪಚಾರದ ಹರಟೆಗಳು ತೀರಿದವೆಂದರೆ, ಕೈ–ಬಾಯಿಗಳಿಗೆ ಬೇರೆ ಉಸಾಬರಿ ಉಳಿಯದಿದ್ದರೆ, ಹೆಣ್ಣಿಗೆ ಇನ್ನೊಬ್ಬ ಹೆಣ್ಣಿನ ಸಹವಾಸ ಬೇಸರವೆನಿಸದೇ ಇರದು. ಈ ಬೇಸರದಿಂದ ಪಾರಾಗಲು ಅವರಿಗೆ ಒಂದೇ ದಾರಿ. ಅದೆಂದರೆ, ಗಂಡಿನ ಕುರಿತು ಅವರವರ ಗಂಡಂದಿರ ಕುರಿತು, ಮಾತು ಬೆಳಿಸುವದು. ಇದು ಸೋಜಿಗವೇನೂ ಅಲ್ಲ; ತೀರ ಸಹಜವು. ಏಕೆಂದರೆ ಹಾಲುಂಡ ಬಾಯಿ ಹರಿದ ನೀರಿಗೆ ಹಂಬಲಿಸುವದೇ? ಪ್ರೇಮ ಪ್ರಣಯದ ಭಾವದಿಂದ ಉದ್ದೀಪಿತಳಾದ ಹೆಣ್ಣಿಗೆ ಗೆಳೆತನವು ಅದರ ಬದಲು ಅಥವಾ ಅದರ ಇದಿರು ತೀರ ಸಪ್ಪಗೆ ಅನಿಸುವದು. ಅಂತೆಯೇ ಹೆಣ್ಣು ಆಳವಾದ–ಎಂದೂ ಅಗಲದ–ಗೆಳೆತನದ ಉದಾಹರಣೆಯಾಗಿರುವದು ಬಹಳವಾಗಿ ವಿರಳವೇ. ಗಂಡಿನ ಪ್ರೀತಿ ಆತನ ಬಾಳಿನ ಒಂದು ಅಂಶ–ಬಾಳಿನಿಂದಲೂ ಬೇರೆಯಾದ ಒಂದು ಅಂಶ. ಆದರೆ ಹೆಣ್ಣಿನ ಪ್ರೀತಿ ಆಕೆಯ ಬಾಳಿನ ಸಮಗ್ರ ವಿಶ್ವ. ನಮ್ಮ ಭವಿತವ್ಯವೇ ನಾವಾಗಿದ್ದೇವೆ. ಅಂದ ಮೇಲೆ ಮೈತ್ರಿ ಗಂಡಿನ ಗುಣ; ಪ್ರೀತಿ ಹೆಣ್ಣಿನ ಗುರಿ ಆಗುವದೇ ದಿಟ.

೪

ಮಮತೆ ಪ್ರೀತಿಯ ಒಂದು ಮೈ. ಈರ್ಷೆ–ಅಸೂಯೆ ಇನ್ನೊಂದು ಮೈ. ಪ್ರೀತಿಯಂತೆ ಈರ್ಷೆಯಲ್ಲಿಯೂ ಅಸೂಯೆಯಲ್ಲಿಯೂ ಗಂಡಿನ ಬಗೆ ಹೆಣ್ಣಿನಿಂದ ಬೇರೆ. ಗಂಡು ಪ್ರೀತಿಯಂತೆ ಗಂಡು–ಈರ್ಷೆಯೂ ಹೆಚ್ಚು ರೊಚ್ಚು ರಭಸವುಳ್ಳದ್ದು; ಅದರ ಆವೇಗ ಆವೇಷ ಹೆಚ್ಚು ತೀವ್ರ. ಆದರೆ ಅದರ ಆಯುಷ್ಯವೂ–ಅವಧಿಯೂ ಅಷ್ಟೇ ಕಡಿಮೆ. ಈರ್ಷೆಯನ್ನು ದೀರ್ಘಕಾಲ ಬೆಳೆಸಿಕೊಂಡು ಬರುವ ಗಂಡು ಒಬ್ಬಿಬ್ಬರೇ. ಗಂಡಿನ ಪ್ರೀತಿಯಲ್ಲಿ ಅರ್ಧಪಾಲು ಮಮತ್ವದ್ದು–ತನ್ನದೆಂಬ ಒಡೆತನದ ಎಚ್ಚರದ ಭಾವನೆಯದು. ಪ್ರೀತಿ ಇಲ್ಲಿ ಬರೇ ಆತ್ಮಸಮರ್ಪಣ, ಮಾತ್ರವಲ್ಲ. ಅದು ಜತೆಗೆ ಆತ್ಮಾಭಿಮಾನದ ವಿಜಯವೂ ವಿಸ್ತಾರವೂ ಅಹುದು. ಆತ್ಮದ ಅಕ್ರಮಣವೂ ಅಲ್ಲಿದೆ; ಬೇರೊಂದು ಜೀವ ತನ್ನವಾಗಿ ಮಾಡಿಕೊಂಡು ಎರಡೂ ತಾನೇ ತಾನಾಗಿ ಆಳುವ ವೃತ್ತಿಯೂ ಅಲ್ಲಿದೆ. 'ಆತ್ಮನಸ್ತು ಕಾಮಾಯ ಏವ' ಭಾರ್ಯೆ ಪ್ರಿಯಳಾಗುತ್ತಾಳೆ. ಬರಿ ಭಾರ್ಯೆಯ ಕಾಮನೆಯಿಂದ ಮಾತ್ರವಲ್ಲವೆಂಬ ಸತ್ಯವನ್ನು ಉಪನಿಷತ್ತು ಎಂದೋ ಸಾರಿದೆ. ಈ ಆತ್ಮಕಾಮನೆಯು ಪರರ ಆಕ್ರಮಣವನ್ನು ಸಹಿಸಲಾರದು. ತನ್ನ ಗಳಿಕೆ–ತನ್ನ ಗೆಲುವು–ಇನ್ನೊಬ್ಬನ ಮೇಲಾಟದ ಪೆಟ್ಟಿಗೆ ತುತ್ತಾದೀತೆಂಬ ಗಾಬರಿಯೇ ಈರ್ಷೆ–ಅಸೂಯೆಯ ಹಿಂದಿನ ಪ್ರವೃತ್ತಿ. ಗಂಡಿನ ಒಡೆತನದ ಭಾವನೆಯು ಪ್ರತಿಸ್ಪರ್ಧಿಯನ್ನು ಎಂದಿಗೂ ಸಹಿಸದು. ಗಂಡಿನ ಅಹಂಕಾರ ಅತಿರೇಕದ್ದೂ ಆಕ್ರಮಣಕವೂ ಇದ್ದುದರಿಂದ, ಅವನು ಹಲವು ಸಲ, ಹೆಣ್ಣಿನ ಮೇಲಿನ ಒಲವೆಲ್ಲ ಬತ್ತಿ ಹೋದರೂ ತನ್ನ ಒಡೆತನವನ್ನು ಬಿಟ್ಟು ಕೊಡಲು ಒಪ್ಪುವುದಿಲ್ಲ. ಅಂತೆಯೇ ಗಂಡು 'ಅನಾಘ್ರಾತ ಕುಸುಮ'ವನ್ನೇ ಬಯಸುತ್ತಾನೆ. ಹೆಣ್ಣಿಗೆ ಪ್ರಥಮ ಪ್ರಿಯತಮನಾಗಲು ಅಪೇಕ್ಷಿಸುತ್ತಾನೆ.

ಹೆಣ್ಣು 'ಅನಸೂಯೆ' ಯೇ?

ಆದರೆ ಹೆಣ್ಣಿಗೆ ಅಂಥ ಹಟವಿಲ್ಲ. ಮೊದಲು ಬೇರೆ ಹೆಣ್ಣಿಗೆ ಮನಸೋಲದ ಗಂಡೇ ತನ್ನವನಾಗಬೇಕೆಂಬ ಹೆಣ್ಣು ತಳಮಳಿಸುವದಿಲ್ಲ. ತನ್ನ ಹಿಂದೆ ಇನ್ನಾವಳನ್ನೂ ಆತ ಮೆಚ್ಚಬಾರದೆಂದೇ ಆಕೆಯ ಹಂಬಲ. ತಾನೇ ತನ್ನವನ ಕೊನೆಯ ಪ್ರಿಯತಮೆ ಆಗುವದೇ ಆಕೆಗೆ ಗರ್ವದ ಹಾಗೂ ಗೌರವದ ಸಂಗತಿ ಎನಿಸುವದು. ಹೀಗೆ ಹೆಣ್ಣಿನ ಈರ್ಷೆಗೆ ಒಂದು ಬದಿಗೆ ಕಟ್ಟಿದೆ. ತನ್ನ ನಂತರ ಇಲ್ಲವೇ ತನ್ನೊಡನೆಯೇ ಪತಿಯಾಗಲಿ ಪ್ರಿಯತಮನಾಗಲಿ ಇನ್ನಾವಳನ್ನೂ ಪ್ರೀತಿಸಲಾಗದೆಂದು ಮಾತ್ರ

ಆಕೆಯು ದಕ್ಷತೆ ವಹಿಸುತ್ತಾಳೆ. ಇಲ್ಲೂ ಆಕೆಯ ಈರ್ಷೆ ಆಕೆಯ ಪ್ರೀತಿಯಂತೆಯೇ ವ್ಯಾಪ್ತಿಯಲ್ಲಿ ವಿಶಾಲವಾಗಿರುತ್ತದೆ. ಅಂದರೆ, ಗಂಡಿನ ಈರ್ಷೆಯಷ್ಟು ಹೆಣ್ಣಿನ ಈರ್ಷೆ ಪ್ರಬಲವೂ, ಪ್ರಖರವೂ ಇರುವದಿಲ್ಲವಾದರೂ, ಅದು ಹೆಚ್ಚು ಗಂಭೀರವೂ. ದೂರಗಾಮಿಯೂ, ಚಿರಕಾಲ ತಾಳುವಂತಹದೂ ಇರುತ್ತದೆ. ಗಂಡು ಈರ್ಷೆ ಶೀಘ್ರ ಪರಿಣಾಮಿ. ಹೆಣ್ಣು–ಈರ್ಷೆ ದೀರ್ಘ ಪರಿಣಾಮಿ. ತಾನೋರ್ವಳೇ ತನ್ನ ಗಂಡಿನ ಆಸಕ್ತಿ–ಆಕರ್ಷಣೆಗಳ ಕೇಂದ್ರವಾಗಿರಬೇಕೆಂಬ ಭರದಲ್ಲಿ ಹೆಣ್ಣು ತನ್ನ ವಲ್ಲಭನ ಇತರ ಪತ್ನಿ ಪ್ರಿಯತಮೆಯರನ್ನು ಮಾತ್ರವಲ್ಲ, ಆತನ ಗೆಳೆಯರನ್ನೂ ಚುಟ್ಟ, ಬಡಿಗೆ, ಪುಸ್ತಕ, ಪತ್ರಿಕೆ–ಮುಂತಾದ ಆತನ ಮನಸೆಳೆಯುವ ಎಲ್ಲ ನಿರೂಪದ್ರವಿ ವಸ್ತುಗಳನ್ನೂ ಕೂಡ ಸತತವಾಗಿ ದ್ವೇಷಿಸುವದುಂಟು. ಈ ದ್ವೇಷ ಅಸೂಯೆಯ ಭರದಲ್ಲಿ ಆಕೆಯು ತನ್ನ ವಲ್ಲಭನನ್ನು ಆತನ ಗೆಳೆಯರಿಂದ ಬಿಡಿಸಿಕೊಳ್ಳಲು ಹೆಣಗುವಳು. ಇದಕ್ಕಾಗಿ ಅವರಲ್ಲಿ ಜಗಳ ಹುಟ್ಟಿಸುವಳು. ಗೆಳೆಯರ ಕುರಿತು ತನ್ನ ಗಂಡು ಕೆರಳಬೇಕೆಂತಲೇ ಕೆಲವು ಸ್ವೈರವೃತ್ತಿಯ ಹೆಣ್ಣುಗಳು ಆ ಬಡ ಗೆಳೆಯರೊಡನೆ ಸಲಿಗೆಯ ಚಿನ್ನಾಟ ಹೂಡಲೂ ಕಡಿಮೆ ಮಾಡುವದಿಲ್ಲ! ಇನ್ನೂ ಇಂಥ ಉದಾಹರಣೆಗಳು ಭಾರತೀಯ ಸಮಾಜದಲ್ಲಿ ತೀರ ಕಡಿಮೆ ನಿಜ. ಆದರೆ ನಾವು ಭಾವಿಸುವಷ್ಟು ಕಡಿಮೆಯೂ ಅಲ್ಲವೆಂಬುದು ಅಷ್ಟೇ ನಿಜ!

ದಿನನಿತ್ಯದ–ಅತಿಪರಿಚಯದ ವಾಡಿಕೆಯಿಂದ ಗಂಡು ತನ್ನ ಹೆಣ್ಣಿನ ಕುರಿತು ಉದಾಸೀನನಾಗುವದುಂಟು. ಆಗ ಹೆಣ್ಣು ಆತನಲ್ಲಿ ಮಿತವಾಗಿ ಈರ್ಷೆಯನ್ನು ಹೊತ್ತಿಸಿ, ಅವನ ಆರಿದ ಪ್ರೀತಿಗೆ ಹೊಸ ಕುದಿ, ಹೊಸ ಕಾವು ತಂದುಕೊಳ್ಳುವಳು. ತನ್ನ ಒಡೆತನಕ್ಕೆ ಭಂಗಬರುವ ಭಯವಿದ್ದರೇ ಗಂಡಿಗೆ ಹೆಣ್ಣಿನಲ್ಲಿಯ ಆಸಕ್ತಿ ಹೆಚ್ಚುವದು. ಸಿದ್ಧಿಗಿಂತಲೂ ಸಾಧನೆಯು ಗಂಡಿಗೆ ಹೆಚ್ಚು ಪ್ರಿಯವಾಗಿದ್ದರಿಂದ ತನ್ನ ಹೆಣ್ಣನ್ನು ಮತ್ತೆ ಮತ್ತೆ ಗೆಲ್ಲುವ ಸಂದರ್ಭವಿರುವ ತನಕವೇ ಗಂಡಿಗೆ ಆ ಹೆಣ್ಣು ಅಪೇಕ್ಷಣೀಯಳೂ ಪ್ರೇಕ್ಷಣೀಯಳೂ ಆಗುವಳು. ಅವಳ ಪ್ರೀತಿಗೆ ಸುರಕ್ಷಿತ ಪ್ರಾಪ್ತಿಯ ರೂಪ ಬಂದೊಡನೆ, ಅವಳು ಕ್ರಮೇಣ ಉಪೇಕ್ಷಣೀಯಳಾಗುವಳು. ಇದೆಲ್ಲ ರಹಸ್ಯ ಹೆಣ್ಣಿಗೆ ಕಲಿಯದೇ ಗೊತ್ತು, ಆದ್ದರಿಂದಲೇ ಆಕೆ ತನ್ನ ವಿಷಯ ಈರ್ಷೆಗೆ ಎಡೆ ಉಂಟುಮಾಡಿಯಾದರೂ ತನ್ನ ಗಂಡನ್ನು ತನಗಾಗಿ ಉಳಿಸಿಕೊಳ್ಳುವಳು. ಜವ್ವನದ ಜಡ್ಡಿಗೆ ಮದುವೆ ಮದ್ದಾದರೆ, ಮದುವೆಯ ಜಾಡ್ಯಕ್ಕೆ ಮತ್ಸರವೂ ಮದ್ದಾಗುವದು. ಈರ್ಷೆಯ ಈ ಮರ್ಮವನ್ನು ಅರಿತ ಹೆಣ್ಣು ತನ್ನ ವಲ್ಲಭನ ಸಾಯಲು ಬಿದ್ದ ಪ್ರೀತಿಯನ್ನು ಜೀವಿತಗೊಳಿಸಲು ಕೆಲವು ಮಟ್ಟಿಗೆ ಆತನ

ಈರ್ಷೆ ಕೆರಳಿಸುವ ಚುಚ್ಚುಮದ್ದನ್ನು ಪ್ರಯೋಗಿಸುವಳು. ಹೆಣ್ಣಿನ ಈ ಮನೋಧರ್ಮವನ್ನು ಅರಿತ ಜಾಣ ಗಂಡು ಆಕೆಯ ಪ್ರಶಂಸಕರೊಡನೆ, ಆಕೆಯೊಡನೆ ಸಾತ್ವಿಕ ಸಲಿಗೆಯಿಂದ ನಡೆಯುವ ತನ್ನ ಮಿತ್ರರೊಡನೆ, ಅಲ್ಲದ ರಾದ್ಧಾಂತ ಬೆಳಿಸಿ ತನ್ನನ್ನೂ ಆಕೆಯನ್ನೂ ಅನ್ಯಾಯ ದುರಂತಕ್ಕೆ ಈಡು ಮಾಡುವದಿಲ್ಲ; ಮಾಡಬಾರದು.

ಗಂಡು-ಕಣ್ಣು ಕಂಡ ಹೆಣ್ಣು-ಬೆಲೆ

ಜೀವನಕಲಹದಲ್ಲಿ ನಿಸರ್ಗದಿದುರು ಹೆಣ್ಣಿಗೆ ಪ್ರತಿಕೂಲ ಹೆಚ್ಚು. ಶಕ್ತಿಯ ಕೊರತೆಯನ್ನು ಆಕೆ ಯುಕ್ತಿಯಿಂದ-ಯುಕ್ತಾಯುಕ್ತ ಎಲ್ಲ ಉಪಾಯಗಳಿಂದ ಪೂರೈಸಿಕೊಳ್ಳಲು ಯತ್ನಿಸುವದು ಸಹಜ. ಗಂಡಿನ ಶಾರೀರಿಕ ಶ್ರೇಷ್ಠತೆಯ ಹಾಗೂ ಬಲಿಷ್ಠತೆಯ ಇದಿರು ಹೆಣ್ಣು ಆತ್ಮರಕ್ಷಣೆಗಾಗಿ ತನ್ನ ಚಾತುರ್ಯಗಳನ್ನು ಪ್ರಯೋಗಿಸಬೇಕಾಗುತ್ತದೆ. ಹೆಣ್ಣಿಗೆ ತನ್ನ ರಕ್ಷಣೆ ಅವಶ್ಯ; ನಿಯಮಕ್ಕಾಗಿ ಅತ್ಯವಶ್ಯ. ವಂಶವೇ ಆಕೆಯ ಜೀವನವನ್ನು ಹೊಂದಿಕೊಂಡಿದೆ. ಪ್ರೀತಿಯ ಅಲ್ಪ ಸುಖಕ್ಕಾಗಿ ಆಕೆಯು ಮಾಡುವ ತ್ಯಾಗವೆಷ್ಟು? ಗಂಡಿನ ಪ್ರಣಯಭೋಗದ ಒಂದು ಅಂಶಕ್ಕಾಗಿ ಹೆಣ್ಣು ತನ್ನ ಕಣ್ಣೀರು, ನೆತ್ತರ ಮತ್ತು ಕರುಳಿನ ಬೆಲೆಯನ್ನು ತೆರುವಳು. ಆಕೆಯ ಬಲಿದಾನವನ್ನು ನೆನೆದುಕೊಂಡರೆ ಹೆಣ್ಣು ಕುಟಿಲಳೆಂದು ಹೀಯಾಳಿಸುವದೂ, ಹೆಣ್ಣಿನ ಯುಕ್ತಿವಂತಿಕೆಯನ್ನು ದೂರಿಕೊಳ್ಳುವದು, ಮಾಟಗಾರ್ತಿ- ತಪ್ಪುಗಾರ್ತಿ ಯೆಂದು ಹಳಿಯುವದೂ ನಮಗೆ ಸ್ವಲ್ಪವೂ ಒಪ್ಪುವದಿಲ್ಲ. ಅಬಲೆಯಾದ ಅವಳಲ್ಲಿಯೇ ನಿಸರ್ಗವು ಇಟ್ಟ ಪ್ರಚಂಡವಾದ ಕಾರ್ಯಭಾರವನ್ನು ನೆನೆದರೆ, ಹೆಣ್ಣಿನೊಡನೆ ಸಹನೆ ತೋರಿಸಿದಷ್ಟೂ ಕಡಿಮೆಯೇ. ಎಷ್ಟು ಸೌಮ್ಯವಾಗಿ ನಡೆದರೂ ಸಾಲದು. ಈ ದೃಷ್ಟಿಯಿಂದ ಪ್ರಾಚೀನ ಪರಂಪರೆಯಲ್ಲಿ ಹೆಣ್ಣಿನ ಕುರಿತು ಕಂಡುಬರುವ ದಾಕ್ಷಿಣ್ಯಭಾವನೆಯಲ್ಲಿ ತುಂಬ ಅರ್ಥವಿದೆಯೆಂದೇ ಸ್ಪಷ್ಟವಾಗುತ್ತದೆ. ನಾರಿಪೂಜೆಯಾಗುವಲ್ಲಿ ದೇವತೆಗಳು ರಮಿಸುವದೆಂದು ಮನುಸ್ಮೃತಿ ಕೊಂಡಾಡುತ್ತದೆ. ಹೆಣ್ಣಿನ ಅಳಲಿನಿಂದ ವಂಶದ ಬಾಳ್ವೆ ಸುಡುವದೆಂದು ಲಕ್ಷ್ಮೀಶನು ಎಚ್ಚರಿಸುತ್ತಾನೆ. ಸಂಸ್ಕೃತಭಾಷೆಯಲ್ಲಿ ಹೆಣ್ಣೆಂಬ ಅರ್ಥದ ಹೆಸರುಗಳೆಲ್ಲ ಒಂದೆಡೆಗೆ ಗಂಡಿನ ಭೋಗವೃತ್ತಿಯನ್ನು ಸೂಚಿಸುತ್ತಿದ್ದರೆ ಇನ್ನೊಂದೆಡೆಗೆ ಗಂಡಿಗೆ ಹೆಣ್ಣಿನ ವಿಷಯ ಆಳದಲ್ಲಿರುವ ಆದರವನ್ನು ಮೂಡಿಸುತ್ತದೆ.

ಹೆಣ್ಣು ತನ್ನೊಡನೆ ಬಾಳಿ ಬೆಳೆದರೂ ತನ್ನಿಂದ ತೀರ ಬೇರೆಯೆಂದು ಗಂಡು ಅರಿತು ಬೆರಗಾಗುತ್ತಾನೆ. ಹೆಣ್ಣಿನ ಹೃದಯದ ನೆಲೆಯು ನಿಲುಕುವುದಿಲ್ಲವೆಂದೂ ಗಾಬರಿಯಾಗುತ್ತಾನೆ. ಇದಕ್ಕೆ ಕಾರಣ ಹೆಣ್ಣಿನ ಚಾತುರ್ಯ. ಗಂಡಿನ ಒಲವನ್ನು ಅರಿತು ಅವನ ವೃತ್ತಿಗೆ ಸರಿಯಾಗಿ, ವರ್ತನಕ್ಕೆ ಸರಿಯಾಗಿ ತನ್ನ ಧೋರಣವನ್ನು ಪಲ್ಲಟಿಸುವ ಹದ ಹೆಣ್ಣು ಲೀಲೆಯಿಂದ ಕಾಣಿಸುತ್ತಾಳೆ. ಎಷ್ಟೇ ಸರಳ ಹೆಣ್ಣು ಕೂಡ ಈ ವ್ಯವಹಾರದಲ್ಲಿ ಗಂಡಿಗೂ ಅಗಮ್ಯವಾಗಿ ನಡೆಯುವಳು. ಗಂಡಿನ ಮೇಲಿನ ತನ್ನ ಹಿಡಿತವನ್ನು ಗಟ್ಟಿಯಾಗಿ ಇಟ್ಟುಕೊಳ್ಳಲು ಹೆಣ್ಣು ಒಮ್ಮೆ ನಗು. ಒಮ್ಮೆ ಕಣ್ಣೀರು, ಒಮ್ಮೆ ಮುನಿಸು, ಒಮ್ಮೆ ಮೌನ, ಒಮ್ಮೆ ಬಿಂಕ, ಒಮ್ಮೆ ಸಲಿಗೆ–ಹೀಗೆ ಹಲವು ಹದಗಳಲ್ಲಿ ಗಂಡು ಹೃದಯದ ತಂತಿಗಳನ್ನು ಮೀಟಿ ಬಾಳಿನ ರಾಗ ಕೀಸರಗುಡದಂತೆ ನೋಡಿಕೊಳ್ಳುತ್ತಾಳೆ. ಇಂಥ ಪ್ರಸಂಗದಲ್ಲಿ ಸಾಕ್ರೆಟೀಸನ ಸಮಸ್ತ ತತ್ವಪಾಂಡಿತ್ಯವೂ ಝೂಂತೀಪಿಯ ಮುಂದೆ ಮುಕ್ಕಾಗುವದು.

ಆದರೂ ಇದೆಲ್ಲ ವಿಲಾಸ–ವಿಭ್ರಮ–ಮೋಹ–ಮೋಸಗಳ ಚಾತುರ್ಯ ಹೆಣ್ಣಿಗೆ ಅಗತ್ಯ. ಅವಳು ವಹಿಸುವ ಬಾಳಿನ ಹೊಣೆಯ ಹೊರೆಯೆದುರು ಇದೆಲ್ಲ ಕ್ಷಮ್ಯ. ಹೂವಿನ ಜೇನೆಲ್ಲ ತುಂಬಿಗೂ ಪರಿಮಳವೆಲ್ಲ ರಸಿಕರಿಗೂ ಎಂದಿಗೂ ಸಿಗುವಂತಿದೆ. ಆದರೆ ಹೂವಿನ ಬಾಳು ಕಾಯಿಗಾಗಿ–ಹಣ್ಣಿಗಾಗಿ. ಆ ಕೆಲಸಕ್ಕೆ ಅದು ತನ್ನನ್ನು ಕೊಂದುಕೊಳ್ಳುತ್ತದೆ. ಬಾಳಿನ ಬಳ್ಳಿಗೂ ಹೆಣ್ಣೊಂದು ಹೂವು. ಹೂವಿನ ಮುದ್ದು ಮಾಟದೊಡನೆಯೇ ಅದರ ಮುಳ್ಳುಗೊನೆಗಳನ್ನೂ ಮುಟ್ಟಿದರೆ ಮುರಿಯುವ, ಮೂಸಿದರೆ ಮಾಸುವ ಅದರ ದರ್ಬಲತೆಯನ್ನೂ ನಾವು ಒಪ್ಪಿಕೊಳ್ಳಲೇಬೇಕು. ಆದ್ದರಿಂದ ಹೆಣ್ಣಿನ ಚಂಚಲತೆ, ಚಪಲತೆ, ತೋರಿಕೆಯ ವಂಚನೆ–ಇವೆಲ್ಲವುಗಳನ್ನೂ ಗಂಡು ಸಹಿಸಬೇಕು; ಕ್ಷಮಿಸಬೇಕು.

ಕಳೆದ ಪ್ರಕರಣಗಳಲ್ಲಿ ನಾವು ವಿಮರ್ಶಿಸಿದ್ದೇನು? ವಂಶವಿಧಾಯಕ ಪ್ರವೃತ್ತಿಗಳ ದೃಷ್ಟಿಯಿಂದ ಹೆಣ್ಣು–ಗಂಡುಗಳಲ್ಲಿ ಕಂಡುಬರುವ ಪ್ರಕೃತಿ ಭೇದಗಳು, ಲಜ್ಜೆ ಚಾತುರ್ಯ, ಪ್ರೀತಿಯ ಕಲೆ, ಮೈತ್ರಿ, ಈರ್ಷೆ ಮತ್ತು ವ್ಯಕ್ತಿತ್ವ ಇವನ್ನೇ ಸಾಮಾನ್ಯವಾಗಿ ನಾವು ಚರ್ಚಿಸಿದೆವು. ಇನ್ನು ವ್ಯಕ್ತಿಗೆ ಸಂಬಂಧಪಟ್ಟ ಪ್ರವೃತ್ತಿಗಳ ದೃಷ್ಟಿಯಿಂದ ಕಂಡುಬರುವ ಭೇದಲಕ್ಷಣಗಳನ್ನೂ ಸ್ವಭಾವವಿಶೇಷಗಳನ್ನೂ ಅರಿತುಕೊಳ್ಳೋಣ.

ಗಂಡು ಹೆಣ್ಣಿಗಾಗಿ; ಹೆಣ್ಣು ಕೂಸಿಗಾಗಿ

ಜೀವನದಲ್ಲಿ ಹೆಣ್ಣಿನ ಕಾರ್ಯವೇನು? ವಂಸವನ್ನು ಕಾಪಾಡಿಕೊಂಡು ಹೋಗುವದು ಗಂಡಿನ ಕರ್ತವ್ಯವೇನು? ಹೆಣ್ಣನ್ನೂ ಆಕೆಯಲ್ಲಿ ಮುಂದರಿಯುವ ವಂಶವನ್ನೂ ಕಾಪಾಡಿಕೊಂಡು ಹೋಗುವದು. ಅಂದರೆ ಪ್ರಕೃತಿಯ ನಿಯಮದಂತೆ ಗಂಡು ಹೆಣ್ಣಿನ ಸೇವೆಗೆ, ಹೆಣ್ಣು ವಂಶದ ಸಂತತಿಯ ಸೇವೆಗೆ ಹೂಡಲ್ಪಟ್ಟವರು. ಈ ಸೇವೆಗೂ ಮಿಕ್ಕಿದ ಹಲವು ಕಾರ್ಯಗಳು ಹೆಣ್ಣಿಗೂ, ಗಂಡಿಗೂ ಇದ್ದೇ ಇವೆ. ಆದರೆ ಅವೆಲ್ಲ ಈ ನಿಯತಿಗೆ ವಿಧೇಯವಾಗಿ, ವಿರೋಧವಿಲ್ಲದೇ ನಡೆಯತಕ್ಕವು. ಗಂಡು ಹೆಣ್ಣಿಗಾಗಿಯೂ ಹೆಣ್ಣು ಕೂಸಿಗಾಗಿಯೂ ಬಾಳಲು ಪ್ರೇರಿಸುವ ಪ್ರವೃತ್ತಿಗಳ ವ್ಯಾಪಾರದಲ್ಲಿಯೇ ಹೆಣ್ಣಿನ ಮತ್ತು ಗಂಡಿನ ಆಳವಾದ ಸುಖವಿದೆ. ಈ ಪ್ರವೃತ್ತಿಗಳ ವ್ಯಾಪಾರವು ಬುದ್ಧಿಪೂರ್ವಕ ನಡೆಯುವದಿಲ್ಲ. ಅಸ್ಪಷ್ಟವಾಗಿ ಅರ್ಧಮರ್ಧ ಅರಿವಿನಲ್ಲಿ–ನಮ್ಮ ಉಸಿರಾಟದಂತೆಯೇ– ಈ ಮೂಲ ಪ್ರವೃತ್ತಿಗಳು ನಮ್ಮಿಂದ ಚಟುವಟಿಕೆಗಳನ್ನು ಜರುಗಿಸುವವು; ಮತ್ತು ಈ ಪ್ರವೃತ್ತಿಗಳ ಉದ್ದೇಶ ಪೂರ್ತಿಯಲ್ಲಿಯೇ ನಮ್ಮ ಬಾಳಿನ ಸ್ವಾಭಾವಿಕ ಸಾರ್ಥಕತೆಯೂ, ಸುಖವೂ ನೆಲೆಸಿರುವದು.

ಇದರ ಪರಿಣಾಮವಾಗಿ ಗಂಡಿನ ಗುಣಕರ್ಮಗಳು ಗೊತ್ತುಪಟ್ಟಿವೆ. ಗಂಡಿನ ಸ್ವಾಭಾವಿಕ ಉದ್ಯೋಗಗಳೆಲ್ಲ ಸಂರಕ್ಷಣೆ, ಸಂಪಾದನೆ ಮತ್ತು ಸಾಹಸದ ಸಾಧನೆಗೇ ಸಂಬಂಧಪಟ್ಟವು. ಗಂಡಿಗೆ ಮುಖ್ಯವಾಗಿ–ಹೊಟ್ಟೆ ಬಟ್ಟೆಯ ಚಿಂತೆ. ಅವನು ಬಾಳಿನ ಆಹಾರಮಂತ್ರಿಯು. ಅನ್ನದೇವನ ಉಪಾಸಕನು. ಇನ್ನು ಪ್ರತಿಯೊಂದು ಕಡೆಯಲ್ಲಿಯೂ ಗಂಡು ಅನ್ನಕ್ಕಾಗಿ ನೇರವಾಗಿ ಹೆಣಗುವದು ಕಂಡುಬರುವದಿಲ್ಲ ನಿಜ. ಆದರೆ ಎಲ್ಲ ಕಡೆಯಲ್ಲಿಯೂ ಅವನು ಅನ್ನ ಒದಗಿಸಬಹುದಾದ ಕೆಲಸಗಳಲ್ಲಿಯೇ ತೊಡಗಿದ್ದು ಕಂಡುಬರುತ್ತದೆ. ಅನ್ನದ ಬದಲು ಇತರ ವಸ್ತುಗಳಿಗಾಗಿಯೂ ಅವನು ದುಡಿಯುವದು ಏಕೆಂದರೆ, ಆ ವಸ್ತುಗಳು ಧನವನ್ನು ಸಂಪಾದಿಸುತ್ತವೆ. ಮತ್ತು ಇಂದಿನ ಪ್ರಪಂಚದಲ್ಲಿ ಧನವೇ ಅನ್ನದ ಬದಲು ಮೂಲವಾಗಿದೆ. ಪ್ರಾಚೀನ ಕಾಲದಲ್ಲಿ ಧರ್ಮವು ಅನ್ನದ ಮೂಲವಾಗಿತ್ತು, ಆಗ ಗಂಡನು ಧರ್ಮದ ವೃತ್ತಿಗಳನ್ನು ಕೈಗೊಳ್ಳುತ್ತಿದ್ದನು.

'ಮೃಚ್ಛಕಟಿಕ' ನಾಟಕದಲ್ಲಿ ಮೈತ್ರೇಯನು ತನ್ನ ವಿನೋದಬುದ್ಧಿಯ ಮರ್ಮವನ್ನು ಚಾರುದತ್ತನಿಗೆ ಹೇಳುತ್ತಾನೆ. 'ಎರಡು ಸಂಗತಿಗಳು ನನ್ನನ್ನು

ನಗಿಸುತ್ತವೆ. ಗಂಡಿನ ಹಾಡುಗಾರಿಕೆ, ಹೆಣ್ಣಿನ ಸಂಸ್ಕೃತ ವಿದ್ಯಾಭ್ಯಾಸ!' ಇದರ ಮರ್ಮವೇನು? ಭಾಷೆಯ ಅಭ್ಯಾಸ ಗಂಡಿಗೇ ಮೀಸಲು. ಭಾಷೆ ವ್ಯವಹಾರಕ್ಕಾಗಿ–ಉದ್ಯೋಗದ ಸಾಧನ. ಹಾಡು ವಿಲಾಸಕ್ಕಾಗಿ – ಬರೇ ರಂಜನೆಯ ರೀತಿ. ಅದು ಹೆಣ್ಣಿನ ಪ್ರಪಂಚ ಎಂಬುದೇ ಮೈತ್ರೇಯನ ಮಾತಿನ ಇಂಗಿತ. ತಾತ್ಪರ್ಯವೇನಂದರೆ, ಗಂಡಿನ ಉದ್ಯೋಗವೆಲ್ಲ ಆಹಾರ ದೊರಕಿಸುವ ಗುರಿಯನ್ನಿಟ್ಟುಕೊಂಡವು. ಇಷ್ಟೇ ಅಲ್ಲ, ಗಂಡು ಸ್ವತಃ 'ಅನ್ನಗತಪ್ರಾಣನು'. ಅಂದರೆ, ಗಂಡಿಗೆ ಅನ್ನವೆಂದರೆ ಮನವಾರೆ ಮೆಚ್ಚಿಗೆ. ಗಂಡು ಹಸಿವೆ ತಾಳಲಾರ. ಅನ್ನದಿದುರು ಹೆಣ್ಣನ್ನೂ ಮರೆಯಬಲ್ಲ, ರಸಪೋಷಕ ಸಾಹಿತ್ಯದಲ್ಲಿ ಅವನಿಗೆ ನವರಸಕ್ಕಿಂತ ಷಡ್ರಸಗಳೇ ಹೆಚ್ಚು ಪ್ರಿಯ. ತಿಂಡಿ–ತಿನಿಸುಗಳ ಮೋಹದಿಂದ ಗಂಡನ್ನು ವಶಪಡಿಸಿಕೊಳ್ಳಲು ಬರುತ್ತದೆ. ಗಂಡಿಗಿರುವಷ್ಟು ಅನ್ನದ ಮೋಹ ಹೆಣ್ಣಿಗಿರುವದಿಲ್ಲ. ಆಕೆಗೆ ಉಣ್ಣುವದಕ್ಕಿಂತ ಅಡಿಗೆ–ಬಡಿಸುವದರಲ್ಲಿ ಹೆಚ್ಚು ಆನಂದ. ಕ್ರೈಸ್ತ ಪುರಾಣದಂತೆ ಮಾನವನ ಪತನವೆಂದಾಯಿತು ಗೊತ್ತೇ? ದೇವರು ಕಟ್ಟುಪಡಿಸಿದ್ದ ಸೇಬಿನಹಣ್ಣನ್ನು ಕಡಿದು ಈವ್ಹಳು ಆದಮನಿಗೆ ಮೊದಲು ತಿನ್ನಲು ಕೊಟ್ಟಳು. ಅಂದಿನಿಂದ ಗಂಡಿನ ಹೊಟ್ಟೆಬಾಕತನವೇ ಆತನ ನಾಶಕ್ಕೆ ಮುಳುವಾಗಿದೆ. ಹೆಣ್ಣು ಅಂದಿನಿಂದಲೂ ಗಂಡಿನ ಹೊಟ್ಟೆಯನ್ನೇ ಹಿಡಿತದಲ್ಲಿಟ್ಟುಕೊಂಡು ಆತನ ಪಚನ ಶಕ್ತಿಯನ್ನೂ ನೀತಿಯನ್ನೂ ಒಟ್ಟಾಗಿಯೇ ಕೆಡಿಸುತ್ತ ಬಂದಿದ್ದಾಳೆ. ಸಾವಿರಾರು ಗಂಡಂದಿರು, ಒಳ್ಳೇ ಅಡಿಗೆ ಮಾಡುವ ಒಂದೇ ಸದ್ಗುಣಕ್ಕಾಗಿ ತಮ್ಮ ಹೆಂಡಂದಿರಿಗೆ ಮಾರಿ ಹೋಗಿರುತ್ತಾರೆ. ಅವರ ಹೆಣ್ಣಿನ ಆದರ್ಶವೂ ಅಡಿಗೆಯ ಆದರ್ಶವೂ ಹೆಚ್ಚು ಕಡಿಮೆ ಒಂದೇ.

ನಾರಿ ಮುನಿದರೆ ಮಾರಿಯೇ?

ಅನ್ನಕ್ಕಾಗಿ ಹೊರಬಿದ್ದು ಹುಡುಕಾಡುವ ಗಂಡು ಹೋರಾಡಬೇಕಾಗುತ್ತದೆ. ಸಂಪಾದನೆಯು ಸಾಹಸದ ಸಾಧನೆಯಾಗುತ್ತದೆ. ಹೀಗೆ ಗಂಡು ಎಂದಿನಿಂದಲೂ ಹೋರಾಟದ ಹೋರಿ. ಹೆಣ್ಣು ಹಾಗಲ್ಲ. ಹೆಣ್ಣಿಗೆ ಸ್ವಾಭಾವಿಕವಾಗಿಯೂ ಆಶ್ರಯ ಬೇಕು, ಹೋರಾಟವಲ್ಲ. ಆದರೆ ಹೆಣ್ಣು ಹೋರಾಡುವದಿಲ್ಲವೆಂದಲ್ಲ. ತನಗಾಗಿ ಹೋರಾಡುವದಿಲ್ಲ. ಪ್ರತ್ಯಕ್ಷ ಹೋರಾಟಕ್ಕೆ ನಿಲ್ಲಬೇಕಾದರೆ ಅದು ಆಕೆಯ ಮಕ್ಕಳ ಬಗ್ಗೆ. ಹೆಣ್ಣಿನಲ್ಲಿ ಕ್ರೂರತೆಯು ಹುದುಗಿದ್ದರೆ ಅದು ಹೀಗೆ ವಂಶರಕ್ಷಣೆಯ ಆಯಕಟ್ಟಿನಲ್ಲಿ ಪ್ರಕಟವಾಗುತ್ತದೆ; ಪ್ರಯೋಜಕವಾಗುತ್ತದೆ. ಆದರೆ ಸಾಮಾನ್ಯವಾಗಿ ಪ್ರತ್ಯಕ್ಷವಾಗಿ ಹೆಣ್ಣು ಹೆಚ್ಚಾಗಿ ಹಿಂಸೆಯ ಬಲವನ್ನು ಕಾಣಿಸುವದಿಲ್ಲ.

ಹತ್ಯೆ-ಹಿಂಸೆಗಳಿಗೆ ಎಡೆಗೊಟ್ಟ ಹೆಣ್ಣುಗಳ ಅಪರಾಧಗಳೆಲ್ಲ ಅವರ ದೇಹದ ಅಥವಾ ಮನಸ್ಸಿನ ಸ್ವಾಸ್ಥ್ಯ ಕೆಟ್ಟಾಗಲೇ ಹೆಚ್ಚಾಗಿ ಜರುಗಿದ್ದು ಕಂಡುಬರುತ್ತದೆ. ಹೆಣ್ಣು ಹಿಂಸೆಗೆ ಪ್ರೇರಣೆಯಾಗಬಹುದು. ಹೆಣ್ಣಿಗಾಗಿ ಕೊಲೆಸುಲಿಗೆ, ಕೊಳ್ಳೆ, ಕಾಳಗಗಳು ನಡೆಯಬಹುದು. ಸೀತೆಗಾಗಿ ಲಂಕೆ ಸುಟ್ಟಿತು. ದ್ರೌಪದಿಗಾಗಿ ಮಹಾಭಾರತದ ಯುದ್ಧವಾಯಿತು. ಮದನಿಕೆಗಾಗಿ ಶರ್ವಿಲಕನು ತುಡುಗು ಮಾಡಿದನು. ಹಿಡಂಬೆಗಾಗಿ ಭೀಮನು ಎಷ್ಟೋ ಕೊಲೆ ಮಾಡಿದನೋ! ಹೆಲನ್ನಳಿಗಾಗಿ ಟ್ರೊಯದ ನಾಶವಾಯಿತು. ಎಲ್ಲ ಕಾಲ ಎಲ್ಲ ದೇಶಗಳಲ್ಲಿಯ ಹೆಣ್ಣು ಹಲವು ಪಾತಕಗಳಿಗೂ ಘಾತಕಗಳಿಗೂ ಸ್ಫೂರ್ತಿಯಾಗಿದ್ದಾಳೆ. ಇವೆಲ್ಲ ನಿಜ. ಆದರೂ ಹೆಣ್ಣು ತಾನಾಗಿ ತನ್ನ ಕೈಯಿಂದ ಹಿಂಸೆ-ಹತ್ಯೆಗಳನ್ನು ಎಸಗಿದ್ದು ಅಷ್ಟೊಂದು ಕಂಡುಬರುವದಿಲ್ಲ. ಗಂಡಿನಿಂದ ಮಾಡಿಸಿದ್ದುಂಟು, ಗಂಡು ತಾನಾಗಿ ಹೆಣ್ಣಿಗಾಗಿ ಮಾಡಿದ್ದುಂಟು. ಆದರೆ ಹೆಣ್ಣೇ ಹಿಂಸೆ ಮಾಡಿದ ಉದಾಹರಣೆಗಳು ಅಷ್ಟು ವಿಪುಲವಿಲ್ಲ. ಅನಾದಿಕಾಲದಿಂದಲೂ ಹೋರಾಡಿ ಬಂದ ಗಂಡೇ ಸಹಜವಾಗಿ ಹಿಂಸೆಮಾಡುತ್ತಾನೆ.

ಹಾಗೆಯೇ ಹೆಣ್ಣು ಗಂಡಿಗಿಂತ ಹೆಚ್ಚು ಸಹನಶೀಲಳು. ಗಂಡಿಗೆ ಸಾಹಸ ಹೆಚ್ಚು; ಸಹನೆ ಕಡಿಮೆ. ಹೆಣ್ಣಿಗೆ ಸಹನೆ ಹೆಚ್ಚು. ಬದುಕಿನ ಬಿಕ್ಕಟ್ಟುಗಳಲ್ಲಿ ಸೋಲು-ಗೆಲುವುಗಳ ನಿಕರ ಪ್ರಸಂಗಗಳಲ್ಲಿ ಗಂಡು ಅಸಾಮಾನ್ಯ ಧೈರ್ಯವನ್ನೂ ಸಾಹಸವನ್ನೂ ಕಾಣಿಸುವನು. ನೋವು ಸಾವುಗಳನ್ನು ಎದುರಿಸುವನು. ಆದರೆ ಸತತವಾದ ಸಹನೆ ಗಂಡಿಗೆ ಅಶಕ್ಯ. ದಿನನಿತ್ಯದ ಕಷ್ಟ-ನಷ್ಟಗಳನ್ನು ತಾಳಿ ದೇಹವನ್ನೂ ಮನಸ್ಸನ್ನೂ ಸವೆಸುವದು-ಅದೂ ಶಾಂತಚಿತ್ತದಿಂದ ಸವೆಸುವದು ಗಂಡಿಗೆ ಎಂದೂ ಶಕ್ಯವಿಲ್ಲ. ಸಂಸಾರದ ಚಿಕ್ಕಪುಟ್ಟ ಜೀವಕೊರೆಯುವ ಅಡಚಣೆಗಳನ್ನು ಹೆಣ್ಣು ಸುಮ್ಮನೆ ಇದಿರಿಸುತ್ತಾಳೆ. ಕಾಯಿಲೆಗಳನ್ನು ಸದ್ದಿಲ್ಲದೇ ಮೈಯುಂಡುಕೊಳ್ಳುತ್ತಾಳೆ. ಆಕೆಯ ಈ ಕಷ್ಟಸಹನೆಯ ಚಟವನ್ನು ನೋಡಿದರೆ ಇಂಥ ಮೂಕ ಯಾತನೆಗಳಲ್ಲಿಯೇ ಹೆಣ್ಣು ಒಂದು ಗುಪ್ತ ಸುಖವನ್ನು ಪಡೆಯುವಳೋ, ಅನಿಸುವದು! ಗಂಡಿಗೆ ಇದು ಶಕ್ಯವಿಲ್ಲ, ಜಾತಿಯಿಂದಲೇ ಆತನು ಜಂಗಮನು. ಹೊಟ್ಟೆಯ ಹೊರೆಗಾಗಿ ಅಲೆದಾಡುವಂಥನು. ಒಂದೆಡೆಯಲ್ಲಿ ಕಟ್ಟಿ ಕೂಡ್ರುವದಾಗಲೀ, ಬಿದ್ದಿರುವದಾಗಲೀ, ಆತನಿಂದ ಆಗದು. ನೆಲೆಯೂರಿದ ಬಾಳಿನ ವಾಡಿಕೆ ಇಲ್ಲದ್ದರಿಂದ ಗಂಡು ಬೇನೆಬಿದ್ದಾಗ ಬಹಳೇ ಅಸ್ವಸ್ಥನಾಗುವನು. ತನ್ನ ನೋವು-ನರಳಿಕೆಗಳನ್ನು ಜಗತ್ತಿಗೇ ಸಾರುವನು.

ಆದರೆ ಹೆಣ್ಣಿನಲ್ಲಿ ಇನ್ನೊಂದು ವಿಶೇಷ. ತಾನು ಹೋರಾಡದಿದ್ದರೂ, ಹೋರಾಡುವ ಗಂಡಿನ ವಿಷಯ ಆಕೆಗೆ ಅಚ್ಚುಮೆಚ್ಚು. ಪ್ರೇಮವು ಬಲದ ಪಾಲಲ್ಲ; ಆದರೂ ಹೆಣ್ಣು ಬಲದ ವಶಳು. 'ಗುಣಗಳೇ ಅನುರಾಗದ ಕಾರಣ. ಅಲ್ಲದೇ (ಮತ್ತೆ) ಬಲತ್ಕಾರವಲ್ಲ' ಎಂದು ವಸಂತಸೇನೆ ಶಕಾರನನ್ನು ಪ್ರತಿಭಟಿಸಿ ಆಡುತ್ತಾಳೆ. ಆದರೆ ಅನುರಾಗಕ್ಕೆ ಕಾರಣವಾದ ಈ ಗುಣಗಳಲ್ಲಿ ಬಲಾತ್ಕಾರ ಮಾಡಬಲ್ಲ ಸಾಮರ್ಥ್ಯವು ಒಂದು ಅವಶ್ಯ ಅಂಶ. ಹೆಣ್ಣಿಗೆ ಸೌಂದರ್ಯವೇ ಸಾಮರ್ಥ್ಯ-ಗಂಡಿನ ದೃಷ್ಟಿಯಿಂದ. ತದ್ವಿರುದ್ಧ ಹೆಣ್ಣಿನ ಕಣ್ಣಿಗೆ-ಗಂಡಿಗೆ ಸಾಮರ್ಥ್ಯವೇ ಸೌಂದರ್ಯ. ಅದು ಗಂಡುಗಾಡಿ. ಅಂದರೆ ಪ್ರತಿಯೋರ್ವ ಕಾಡು ಕಿಡಿಗೇಡಿಗೂ ಹೆಣ್ಣು ಒಲಿಯುತ್ತಾಳೆಂದಲ್ಲ. ಬೆನ್ನಿಗೆ ಎಲುವಿಲ್ಲದ ನುಣ್ಣನ್ನ ಮಣ್ಣಿನ ಗೊಂಬೆಯಂಥ ಗಂಡಿಗೆ ಹೆಣ್ಣು ಒಲಿಯಲಾರಳು. ತನ್ನೊಂದಿಗೆ ಹೋರಾಡುವ ಗಂಡು ಹೆಣ್ಣಿಗೆ ಗಂಡಾಂತರವೆನಿಸುವನು; ಆದರೂ ತನಗೋಸ್ಕರ ಹೋರಾಡುವ ಗಂಡು ಆಕೆಗೆ ಎಂದಿಗೂ ಪ್ರಿಯನು. ಸಮರ್ಥನೂ ಅಧಿಕಾರ ನಡಿಸಬಲ್ಲವನೂ ಧೀರನೂ ಆದ ಗಂಡೇ ಹೆಣ್ಣಿಗೆ ಸೇರುವನು. ಇದಕ್ಕೆ ಕಾರಣ ಹೆಣ್ಣಿನ ದುರ್ಬಲತೆಯಿರಬಹುದು. ತನ್ನಲ್ಲಿ ಇರದ ಗುಣಕ್ಕಾಗಿ ಜನ ಎಂದಿಗೂ ಹಾತೊರೆಯುವದು ಸಹಜ. ಅಥವಾ ಹೆಣ್ಣಿನಲ್ಲಿ ಹಿಂದೆ ಹೇಳಿದಂತೆ ಒಂದು ವಿಚಿತ್ರ ಪೀಡಾಭೋಗಿಯಾದ ಮನೋಭಾವವಿರಲೂ ಸಾಕು. ಆದರಿಂದಲೇ ಶಕ್ತಿ-ಸಾಮರ್ಥ್ಯಗಳ ದರ್ಶನದಿಂದ ಹೆಣ್ಣು ಪುಲಕಿತಳಾಗುವಳು. ತಾನೇ ಅಂಥ ಶಕ್ತಿ ಪ್ರದರ್ಶನಕ್ಕೆ ಬಲಿಯಾಗದಿದ್ದರೂ ಹೆಣ್ಣು ಅದರಿಂದ ಹಿಗ್ಗುವದೂ ಉಂಟು.

ತಾನು ಗಂಡಿನಂತೆ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯತಕ್ಕದ್ದೆಂಬ ಭಾವ ಇತ್ತೀಚೆಗೆ ಹೆಣ್ಣಿನಲ್ಲಿ ಬೆಳೆದು ಬಂದಿದೆ. ಗಂಡಿನ ದಾಸ್ಯಕ್ಕೆ ಶತಮಾನಗಳಿಂದಲೂ ಸೋತು-ಬೇಸತ್ತ ಜೀವದ ಪ್ರತಿಭಟನೆಯು ಹೆಣ್ಣಿಗೆ ತಾನೂ ಹಣದ ಹವ್ಯಾಸಕ್ಕೆ ಬೀಳಬೇಕೆಂದು ಒತ್ತಾಯಪಡಿಸಿತು. ಆದರೆ ಗಂಡಿನ ಶೌರ್ಯ-ವೀರ್ಯಗಳಿಗೂ ಅಧಿಕಾರ-ಸಾಮರ್ಥ್ಯಕ್ಕೂ ಮೆಚ್ಚಿ ನಲಿಯುವ ಹೆಣ್ಣಿನ ಅತಿ ಪುರಾತನ ವೃತ್ತಿಯು ಇನ್ನೂ ಅಳಿದಿಲ್ಲ-ಅಳಿಯುವಂತೆಯೂ ತೋರುವದಿಲ್ಲ. ಹಣಗಳಿಸಿ ಗಂಡಿಗೂ ಗಂಡಾಗಿ ಬಾಳುವ ಸುಶಿಕ್ಷಿತ ಸುಸಂಸ್ಕೃತ ಆಧುನಿಕ ನಾಗರಿಕ ಹೆಣ್ಣು ಕೂಡ ಗಂಡಿನ ಪ್ರಭಾವಿಯಾದ ವ್ಯಕ್ತಿತ್ವಕ್ಕೆ ತಪ್ಪದೇ ಈಲಾಗುವದೂ, ಪೌರುಷದ ದಾಸ್ಯಕ್ಕೆ ಈಡಾಗುವದೂ ಕಂಡುಬರುತ್ತದೆ. ಇದರ ಅರ್ಥ ಹೆಣ್ಣು ಕಲಿತು ಗಳಿಸಿ ಸ್ವಾತಂತ್ರ್ಯ ಪಡೆಯಬಾರದೆಂಬುದು ಅಲ್ಲವೇ ಅಲ್ಲ. ಆತ್ಮವಿಶ್ವಾಸಕ್ಕೆ ಸಂಧಿಯ

ಸಮಾನತೆ, ಕೌಟುಂಬಿಕ ಸಾಮಾಜಿಕ ಸ್ಥಾನಮಾನಗಳಲ್ಲಿ ಗಂಡಿನೊಡನೆ ಸರಿಸಾಟಿತನ ಹೆಣ್ಣಿಗೆ ಸಲ್ಲಲೇ ಬೇಕು. ಆದರೆ ಆಮೇಲೂ ಹೆಣ್ಣು ಸಮರ್ಥ ಹಾಗೂ ಅಧಿಕಾರ ಯುಕ್ತ ಗಂಡಿಗೆ ಒಲಿಯುವಳೆಂಬದಕ್ಕೂ ಸಂದೇಹವಿಲ್ಲ. ಕಲಿತು ಬುದ್ಧಿ ಬಲಿತ ಹೆಣ್ಣು ಧೀರನೆಂಬ ಮಾತ್ರಕ್ಕೆ ಮೂರ್ಖನನ್ನು ಮದುವೆಯಾದದ್ದು ಉಂಟು. ತನ್ನನ್ನು ಆಳಬಲ್ಲ–ಅನ್ಯಾಯದಿಂದಲ್ಲ–ಗಂಡಿಗೆ ಹೆಣ್ಣು ಆನಂದದಿಂದ ವಶಳಾಗುವಳು.

ಹೊಸ ಕಾಲದ ಹೆಣ್ಣನ್ನು ಗಂಡು ಆಳಲಾರನೇಕೆ?

ಇಂದಿನ ಪ್ರಪಂಚದಲ್ಲಿ ಗಂಡಿಗೆ ಹೀಗೆ ವಶವರ್ತಿಯಾಗಿ ಆಳಿಕೊಂಡು ಬಾಳಿಕೊಂಡು ಪಡೆಯುವ ಹೆಣ್ಣು ಬಹಳ ತೋರಿಬರುವದಿಲ್ಲ. ಹಿಂದಿನಿಗಿಂತ ಇಂದು ಹೆಣ್ಣು ಕಡಿಮೆ ವಿಧೇಯತೆಯನ್ನು ಕಾಣಿಸುವಳು. ಇದೆಲ್ಲ ನಿಜ. ಇದಕ್ಕೆ ಅಷ್ಟೇ ನಿಜವಾದ ಕಾರಣ ಒಂದಿದೆ. ಅದೇನೆಂದರೆ, ಗಂಡೂ ಹಿಂದಿನಂತೆ ಇಂದು ಇಲ್ಲ. ಸೀತೆಯ ಆದರ್ಶವನ್ನು ಹೆಂಡತಿಯಲ್ಲಿ ಅಪೇಕ್ಷಿಸುವ ಗಂಡನಾಗುವ ಜಾಣನು ತಾನು ರಾಮನ ಆದರ್ಶಕೆ ಹೆಣಗಿದ್ದು ಕಾಣಿಸುವದಿಲ್ಲ. ಎದೆಯ ಕೆಚ್ಚು, ವ್ಯಕ್ತಿತ್ವದ ಬಲ ಗಂಡಿನಲ್ಲಿ ಸಾಮಾನ್ಯವಾಗಿ ಕಡಿಮೆ ಆಗಿದೆ!

ಹೀಗೆ ಗಂಡಿನ ಎದೆಯ ಕೆಚ್ಚು ಕುಗ್ಗಲಿಕ್ಕೂ ವ್ಯಕ್ತಿತ್ವದ ಅಚ್ಚು ಸಡಿಲಿಸಲಿಕ್ಕೂ ಕಾರಣವೇನು? ಇಂದಿನ ಗಂಡಿಗೆ ಅಂಥ ಮನೋದೌರ್ಬಲ್ಯವೇಕೆ? ಇದು ಗಂಡಿನ ವ್ಯಕ್ತಿಗತ ದೋಷವಲ್ಲ. ಇಂದಿನ ನಾಗರಿಕತೆಯೇ ಅಂತಹದಾಗಿದೆ. ಪುರಾತನ ಕಾಲದ ಜೀವನ ವಿಶೇಷವಾಗಿ ಕೃಷಿಯದಾಗಿತ್ತು; ಶಾರೀರಿಕ ಶ್ರಮದ್ದಾಗಿತ್ತು; ಜನಸಾಮಾನ್ಯರಿಗೆ ಮಿದುಳು–ಬುದ್ಧಿಗಿಂತ ಮೈಕೈಗಳ ಬಲದ ಕೆಲಸವೇ ವಿಶೇಷ ಬೀಳುತ್ತಿತ್ತು. ಇದರಿಂದ ಪ್ರತಿವ್ಯಕ್ತಿಗೂ ಒಂದು ಬೆಲೆಯಿತ್ತು. ಅವನ ಬಲಕ್ಕೆ ತಕ್ಕ ಸಾಹಸಕ್ಕೆ–ಅವಕಾಶವಿತ್ತು. ಹಳ್ಳಿ, ಕುಟುಂಬ, ಕೈಗಾರಿಕೆ ಮುಂತಾದ ಬದುಕಿನ ಕೇಂದ್ರಗಳಲ್ಲಿ ಎಲ್ಲ ವ್ಯಕ್ತಿತ್ವಕ್ಕೆ ಪ್ರಭಾವವಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಲ್ಲ. ಇಂದಿನದು ಉದ್ದಿಮೆಗಾರಿಕೆಯ ಯುಗ; ಉದ್ಯೋಗ ಪ್ರಧಾನವಾದ ಜೀವನ. ಧನದ ಉತ್ಪಾದನೆ ಒಬ್ಬನ ಶ್ರಮವಲ್ಲ. ಸಾಮುದಾಯಿಕ ದುಡಿತದಿಂದ ಸಮಾಜದ ಸಕಲಸೌಕರ್ಯಗಳೂ ಒದಗುವವು. ಈ ದುಡಿತದಲ್ಲಿಯೂ ವ್ಯಕ್ತಿಯ ಸತ್ವಕ್ಕಿಂತ ಯಂತ್ರದ ಶಕ್ತಿಗೇ ಹೆಚ್ಚು ಮಹತ್ವ. ಪ್ರಚಂಡ ಯಾಂತ್ರಿಕ ವ್ಯವಸ್ಥೆಯಲ್ಲಿ ವ್ಯಕ್ತಿಯೂ ಒಂದು ಕೀಲ. ಒಂದು ಅವಯವ.

ಇದರ ಪರಿಣಾಮವಾಗಿ, ಒಂದೇ ಬಗೆಯ ಕೆಲಸವನ್ನು ಒಂದೇ ಎಡೆಯಲ್ಲಿ ಒಂದೇ ಸಮನೆ ಮಾಡುವ ಬೇಸರದ ವಾಡಿಕೆಯ ಗಾಣಕ್ಕೆ ಗಂಡಿನ ಬದುಕು ಹೂಡಿದೆ. ಕಚೇರಿಯ ಕಾರಕೂನ, ಸಾಲೆಯ ಮೇಷ್ಟ್ರ, ಎಂಜಿನ್ ಡ್ರಾಯಿವ್ಹರ್, ಗಿರಣಿಯ ನೇಕಾರ, ಕಾರಖಾನೆಯ ಕೆಲಸಗಾರ, ಬ್ಯಾಂಕಿನ ಬಂಡುವಾಳಗಾರ (ದಲ್ಲಾಳಿ)–ಎಲ್ಲರೂ ಮಾಡಿದ್ದನ್ನೇ ಮಾಡುತ್ತ ಮಾಡಿವಂತೆಯೇ ಮಾಡುತ್ತ ಮಡಿಯುವನಕವೂ ಮಾಡುತ್ತ, ಮಾಡಲಾಗದೆಯೂ ಮಾಡುತ್ತ ನುಗ್ಗಾಗಿ ಕುಗ್ಗಿ ಹೋಗುತ್ತಾರೆ. ಇನ್ನೂ ಒಂದು ತೊಡಕಿದೆ–ಇಂದಿನ ಈ ಯಾಂತ್ರಿಕ ಪಡಿಯಚ್ಚಿನ ಬದುಕಿನಲ್ಲಿ ಮಿಕ್ಕ ಅವಯವಗಳಿಗಿಂತ ಮಿದುಳಿಗೇ ವಿಶೇಷ ಪರಿಶ್ರಮ. ಕೃತ್ರಿಮವಾದ ಬೌದ್ಧಿಕ ಕೆಲಸದ ಒತ್ತಾಯದ ಒತ್ತಡದ ಮೂಲಕ ಮಂದಿಯ ಇಚ್ಛಾಶಕ್ತಿಯೂ, ಮಜ್ಜಾಸಂಸ್ಥೆಯೂ ಮುಕ್ಕಾಗಿ ಹೋಗುತ್ತದೆ. ಇಂದಿನ ಗಂಡಿನ ಮಾನಸಿಕ ಶಿಥಿಲತೆಗೂ ಬಧಿರತೆಗೂ ಈ ಔದ್ಯೋಗಿಕ ಯುಗದ ಯಾಂತ್ರಿಕ ಮತ್ತು ಕೃತ್ರಿಮ ಜೀವನವೇ ಕಾರಣ. ಇದರಿಂದ ಗಂಡಿನ ಆತ್ಮವಿಶ್ವಾಸ ನಷ್ಟವಾಗುತ್ತದೆ. ಸಂಘದ ಶಕ್ತಿಯು ಎಷ್ಟು ಹೆಚ್ಚೋ ಅದರ ಸದಸ್ಯರ ಸತ್ವ ಅಷ್ಟು ಕಡಿಮೆ, ಸಾಮೂಹಿಕ ಶ್ರಮದ ಸವಕಳಿಗೆ ತುತ್ತಾಗಿ ಸಾಮಾಜಿಕ ಕರ್ತವ್ಯಗಳ ಸರಪಳಿಯಲ್ಲಿ ಸುತ್ತಾಡುವ ಗಂಡು ನಿಸ್ತೇಜನಾಗದೇ ಮತ್ತೇನು?

ಇನ್ನು ಈ ಆಧುನಿಕ ಯಾಂತ್ರಿಕ ಸಂಸ್ಕೃತಿಯ ಘಾತಚಕ್ರದಲ್ಲಿ ಗಂಡೊಂದೇ ಸಿಲುಕಿದೆಯೇ? ಹೆಣ್ಣಿನ ಬಾಳಿನಲ್ಲಿಯೂ ಇದರಿಂದ ಕ್ರಾಂತಿಯಾಗಿಲ್ಲವೇ? ಎಂದು ನೀವು ಕೇಳಬಹುದು. ಆದರೆ ಒಟ್ಟಾರೆ ನೋಡಿದರೆ ಹೆಣ್ಣಿಗಿಂತ ಗಂಡೇ ಈ ವಿಷಮಪರಿವರ್ತನೆಯನ್ನು ಹೆಚ್ಚು ಹೊಂದಿದ್ದು ಸ್ಪಷ್ಟವಾಗುತ್ತದೆ. ಸ್ವಲ್ಪ ಆಳವಾಗಿ ನೋಡಿದರೂ ಏಕೆಂಬುದು ಹೊಳೆಯದಿರದು. ಎಂದಿನಿಂದಲೂ ಒಳಿತಿಗಿರಲಿ, ಕೆಡುಗಿರಲಿ, ಸಮಾಜವು ಪುರುಷ ಪ್ರಧಾನವೇ ಆಗಿದೆ. ಧರ್ಮ, ರಾಜಕಾರಣ, ದುಡ್ಡು–ದುಡಿಮೆ, ಯುದ್ಧ–ಯೋಜನೆ, ಶಿಕ್ಷಣ–ರಕ್ಷಣೆ ಈ ಜನಸಮುದಾಯದ ದೊಡ್ಡ ಕೆಲಸಗಳೆಲ್ಲ ಎಂದಿನಿಂದಲೂ ಗಂಡಿನ ಹಿಡಿತದಲ್ಲಿ–ನಿರ್ವಹಣೆಯಲ್ಲಿ ಸಾಗಿ ಬಂದಿದೆ. ಹೆಣ್ಣಿನ ಮನೆ, ಮಕ್ಕಳು, ಕೌಟುಂಬಿಕ ಕಾರ್ಯಕ್ಷೇತ್ರವಿಷ್ಟೇ ಎಂದಿನಿಂದಲೂ ನಡೆದು ಬಂದಿದೆ. ಆದ್ದರಿಂದ ಹೊರಗಿನ ಬಾಳಿನಲ್ಲಿ ನಾಗರಿಕತೆ–ಆಧುನಿಕತೆಗಳ ಮೂಲಕ ಒದಗಿಬಂದ ಪ್ರಚಂಡ ಬದಲಾವಣೆಗಳ ಸುಳಿಯಲ್ಲಿ ಗಂಡಿನಂತೆ ಹೆಣ್ಣು ಸಿಲುಕಲಿಲ್ಲ. ಅನಾದಿಯಿಂದಲೂ ಬುನಾದಿಯಿಂದಲೂ ಹೆಣ್ಣಿನ ವ್ಯವಸಾಯ ಹೆಚ್ಚು ಕಡಿಮೆ ಒಂದೇ ತೆರನಾಗಿದೆ.

ಹೆಣ್ಣಿನ ಅನಾದಿಯ ದಾಸ್ಯ

ಆದ್ದರಿಂದ ಜೀವನದ ಕುರಿತು, ಜಗತ್ತಿನ ಕುರಿತು ಇಲ್ಲವೇ ಪ್ರಕೃತಿಯ ಕುರಿತು ಹೆಣ್ಣಿನ ವೃತ್ತಿ–ಪ್ರವೃತ್ತಿಗಳು, ಬಯಕೆ–ಬೇಡಿಕೆಗಳು ಅದೇ ಪರಿಯಾಗಿಯೇ ಸಾಮಾನ್ಯವಾಗಿ ಉಳಿದವು. ಇದರಿಂದ ಇನ್ನೊಂದು ವಿಚಿತ್ರ ಕಂಡುಬರುತ್ತದೆ. ಇತ್ತೀಚೆಯ ಜಾಗೃತಿಯಲ್ಲಿ ಸಮತೆ–ಸ್ವಾತಂತ್ರ್ಯದ ಬಗ್ಗೆ; ಬಂಡುಹೂಡಿದ ಸುಶಿಕ್ಷಿತ ಹೆಣ್ಣು ಒಂದೆಡೆಗೆ ಗೆಲುವು ಪಡೆದಾಗಲೇ ಇನ್ನೊಂದೆಡೆಗೆ ಸೋಲು ಪಟ್ಟಿದ್ದೂ ತೋರುತ್ತದೆ. ಸಮಾಜದಲ್ಲಿ ಎಲ್ಲೆಡೆಯಲ್ಲಿಯೂ ಗಂಡಿನ ಮೇಲುಗೈ ಇರುವನಕವೂ ಹೆಣ್ಣಿಗೆ ಗಂಡಿನ ಅಧೀನತೆ ತಪ್ಪದೆಂಬ ಮಾತು ಮನದಟ್ಟಾಗುತ್ತದೆ. ಮನೆಯಲ್ಲಿ ತಂದೆಯಂದಿಗೋ, ಗಂಡನೊಂದಿಗೋ, ಸಮಾನ ಹಕ್ಕುಗಳಿಗೆಂದು ಬಂಡು ಹೂಡಿ ಆರ್ಥಿಕ ಗಳಿಕೆಯ ದಾರಿಹಿಡಿದ ಹೊಸಕಾಲದ ಹೆಣ್ಣು, ಸಮಾಜದಲ್ಲಿ ತನ್ನ ವರಿಷ್ಠ ಅಧಿಕಾರಿಯಾದ ಗಂಡಿನ ಒಲವಿಗಾಗಿ ಹಾತೊರೆಯುವದೂ ಹೆಣಗುವದೂ ಕಂಡುಬರುತ್ತದೆ. ಅಧ್ಯಾಪಿಕೆಯೂ ಇನಸ್ಪೆಕ್ಟರರ, ಪರಿಚಾರಿಕೆಯೂ ಡಾಕ್ಟರ – ಸರ್ಜನ್ನರ, ಕಾರ್ಯದರ್ಶಿನಿಯು ಒಡೆಯನ, ಟಂಕಲೇಖಿಕೆಯು ಮ್ಯಾನೇಜರನ, ನಟಿಯೂ ಕಂಪನಿಯೊಡೆಯನ ಪ್ರಸನ್ನತೆಗಾಗಿ ಮನವಾರೆ ಯತ್ನಿಸುವದು ಕಂಡುಬರುತ್ತದೆ. ಹೀಗೆ ಮನೆಯ ಒಳಗಿನ ದಾಸ್ಯದ ಬದಲು ಹೊರಗಿನ ದಾಸ್ಯವೇ ಹೊಸ ವಿಚಾರದ ಹೆಣ್ಣಿಗೆ ಸ್ವಾತಂತ್ರ್ಯವಾಗಿ ಕಾಣುತ್ತದೆ.

ಈ ವಿವೇಚನೆಯ ಅರ್ಥವಿಷ್ಟೇ–ಹೆಣ್ಣಿನಲ್ಲಿ ಪುರಾತನ ಕಾಲದಿಂದಲೂ, ಪ್ರಕೃತಿಯ ಕಟ್ಟಳೆಯಿಂದಲೂ ಅಧಿಕಾರಿಶಾಲಿಯಾದ–ಸಾಮರ್ಥ್ಯಶಾಲಿಯಾದ ಗಂಡಿಗೇ ಮೆಚ್ಚುವ ಇಲ್ಲದೇ ಮನವಾರೆ ವಶವಾಗುವ ಪ್ರವೃತ್ತಿ ಬೆಳೆದಿದ್ದು ಅದು ಪೂರ್ಣ ಇಲ್ಲವಾಗಲು ಇನ್ನೂ ಸಾವಿರಾರು ವರ್ಷಗಳ ನಾಗರಿಕತೆ ಬೇಕು. ಹೆಣ್ಣಿನ ದೇಹದ ಸ್ವಾಭಾವಿಕ ಅಬಲತೆಯೂ, ದೇಹಧರ್ಮದಂತೆ ಋತುವಿನಲ್ಲಿಯೂ, ಗರ್ಭಭಾರ ಪ್ರಸೂತಿ ಕಾಲದಲ್ಲಿಯೂ ಉಂಟಾಗುವ ಅಸಹಾಯಕತೆಯೂ ಹೆಣ್ಣಿಗೆ ಗಂಡಿನ ಸಾಮರ್ಥ್ಯವನ್ನೇ ಆಶ್ರಯಿಸುವಂತೆ ಮಾಡಿವೆ. ಪ್ರಕೃತಿಯ ಈ ಒತ್ತಾಯವೇ ಆಕೆಯ ಮೂಲ ಪ್ರವೃತ್ತಿಯಾಗಿದೆ.

ಅಂತೆಯೇ ಹೆಣ್ಣು ಒಂದೆಡೆಗೆ ತನ್ನ ಹತ್ತಿರದ ತಂದೆ, ಗಂಡ, ಬಂಧುವೇ ಮುಂತಾದ ಸಂಬಂಧವಿದ್ದ ಗಂಡಿನ ವ್ಯಕ್ತಿತ್ವವನ್ನು ನಿಸ್ಸತ್ವವಾಗಿ, ನಿಸ್ತೇಜವಾಗಿ, ಕಂಡರೂ, ಇನ್ನೊಂದೆಡೆಗೆ ತನ್ನ ಉದ್ಯೋಗದಲ್ಲಿಯೇ–ಕಚೇರಿ ಕಾರಖಾನೆಯಲ್ಲಿಯೇ

-ತನ್ನನ್ನು ಆಳಬಲ್ಲ ಪ್ರಭಾವುಳ್ಳ ವ್ಯಕ್ತಿತ್ವದ ಗಂಡನ್ನು ಕಂಡುಕೊಳ್ಳುವಳು. ಅಂಥವನ ಪ್ರೇಮವಿಲ್ಲದಿದ್ದರೂ, ವಿಧೇಯತನವನ್ನು ವಿನಯದಿಂದ ಒಪ್ಪಿಕೊಳ್ಳುವಳು. ಅಂಥ ಅಂಕೆ ಆಳಿಕೆಯಿಂದ ಸುಖಿಯೂ ಆಗುವಳು.

ಇದೇ ಮೇರೆಗೆ ಆಧುನಿಕ ಹೆಣ್ಣು ಒಂದು ಸಂಮಿಶ್ರ ಮನೋವೃತ್ತಿಯವಳಾಗಿ ಬೆಳೆದದ್ದು ತೋರುತ್ತದೆ. ಆಕೆಗೆ ಸ್ವಾತಂತ್ರ್ಯದ ಸಮಾನಾಧಿಕಾರವೂ ಬೇಕು; ಪಾರತಂತ್ರ್ಯದ ಸ್ವತಂತ್ರಾಧಿಕಾರವೂ ಬೇಕು. ಸುಲಿಗೆಯ ನಿರ್ದಾಕ್ಷಿಣ್ಯದ ಹಕ್ಕೂ ಬೇಕು. ಸಲಿಗೆಯ ಸ್ತ್ರೀ-ದಾಕ್ಷಿಣ್ಯದ ಸುಖವೂ ಬೇಕು. ಗಂಡು ಮಾಡುತ್ತ ಬಂದ ಎಲ್ಲ ಉದ್ಯೋಗ-ವ್ಯವಸಾಯ ಕ್ಷೇತ್ರಗಳಲ್ಲಿ ಆಕೆಗೂ ಸ್ಥಳಬೇಕು. ಸಮಾನಾಧಿಕಾರದೊಂದಿಗೆ ಸಮಾನ ದೃಷ್ಟಿಯಿಂದ ಗಂಡು ಹೆಣ್ಣನ್ನು ನಡಿಸಿಕೊಂಡರೆ ಆಕೆಗೆ ವಿನಯ ಭಂಗವೆನಿಸುತ್ತದೆ. ಮಾನಹಾನಿಯಾಗುತ್ತದೆ. ಒಂದೇ ಚಾಕರಿಯಲ್ಲಿ ಹೆಣ್ಣು-ಗಂಡು ಕೂಡಿಯೇ ದುಡಿಯುತ್ತಿದ್ದಾಗ್ಯೂ, ಹೆಣ್ಣು ಗಂಡಿನಿಂದ ಮಿಗಿಲಾದ ದಾಕ್ಷಿಣ್ಯವನ್ನು ಅನುನಯ, ವಿನಯಗಳನ್ನು-ಅಪೇಕ್ಷಿಸುತ್ತಾಳೆ! ಇಬ್ಬರೂ ಒಂದೇ ಕಚೇರಿಗೆ ಬರು ಹೋಗುವವರಾದರೂ ಹೆಣ್ಣಿಗಾಗಿ ಗಂಡು ಬಸ್ಸಿನಲ್ಲಿ ಸ್ಥಳ ಬಿಟ್ಟುಕೊಡಬೇಕು. ಬಾಗಿಲು ತೆರೆದುಕೊಡಬೇಕು. ಆಗೀಗ ಚಹಾ ಚಾಕಲೇಟು ಕೊಂಡು ಕೊಡಬೇಕು. ಹೀಗೆಲ್ಲ ಹೆಣ್ಣಿನ ಬಯಕೆಗಳಿರುತ್ತವೆ. ಇದೆಲ್ಲ ಸ್ತ್ರೀದಾಕ್ಷಿಣ್ಯದ ಸದರಿನಲ್ಲಿ ಬರುತ್ತವೆ. ಗಂಡಿಗೂ ಇವೆಲ್ಲ ಲಾಂಗೂಲಚಾಲನೆಯಿಂದ ಸುಖವೆನಿಸುತ್ತದೆ. ಆಮಾತು ಬೇರೆ. ಇಲ್ಲಿ ವಿಷಯವೆತ್ತಿದ್ದು ದೋಷ ಕಾಣಿಸಲು ಅಲ್ಲ. ಪುರಾತನ ಪ್ರವೃತ್ತಿ ಮತ್ತು ಆಧುನಿಕ ಜಾಗೃತಿ, ಔದ್ಯೋಗಿಕ ಪ್ರಗತಿ ಇವುಗಳ ನಡುವೆ ಸಿಕ್ಕಿ ಹೆಣ್ಣಿನ ಪ್ರಕೃತಿ ಹೇಗೆ ಮೂರಾಬಟ್ಟೆಯಾಗಿ ನಿಂತಿದೆ ಎಂಬುದೇ ಇಲ್ಲಿ ಮುಖ್ಯ.

ಪಾತಿವ್ರತ್ಯದ ಬೆಲೆ

ಆದರೆ ಇಲ್ಲಿಯೂ ಇನ್ನೊಂದು ಸೂಕ್ಷ್ಮ ಸಂಗತಿಯನ್ನು ನಾವು ಗಮನಿಸಬೇಕು. ಹೊಸಬಗೆಯ ಗಂಡಿನ ಹಂಗು ಹಳೇತರದ ದಾಸ್ಯದಂತಿಲ್ಲ. ಪುರಾತನ ಪರಂಪರೆಯಂತೆ ಗಂಡಿಗೆ ಹೆಣ್ಣು ಪೂರ್ಣ ದಾಸಿಯಂತಿದ್ದಳು. ಹಾಗೆ ಆಕೆ ನಡಿಸಲ್ಪಡದಿದ್ದರೆ ಅದು ಗಂಡಿನ ಔದಾರ್ಯದ ಇಲ್ಲವೇ ಆರ್ಯವೃತ್ತಿಯ ಲಕ್ಷಣವೆನಿಸುತ್ತಿತ್ತು. ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದಿದ್ದರಿಂದ ತನ್ನ ಉಪಜೀವಿಕೆಯ ಒತ್ತಾಯಕ್ಕಾಗಿಯೇ ಸಾಮಾನ್ಯವಾಗಿ ಗಂಡಿನ ವಶವರ್ತಿ

ಯಾಗಬೇಕಿತ್ತು. ಪಾತಿವ್ರತ್ಯದ ಮುಕ್ಕಾಲುಪಾಲು ಈ ಆರ್ಥಿಕ ಅಸಹಾಯತೆ, ಗಂಡಿನ ಹಿಡಿತದಲ್ಲಿನ ಸಮಾಜದ ನಿಂದೆಯ ಭಯ ಇವುಗಳಿಂದ ಕೂಡಿದ್ದು ಮಿಕ್ಕಭಾಗವು ಮಾತ್ರ ಗಂಡು ಹೆಣ್ಣಿನ ಗುಣಾಕರ್ಷಣದ ಅಂಶವಾಗಿತ್ತು.

ಆದರೆ ಹೊಸಜೀವನದಲ್ಲಿ ಹಾಗೆ ಇರುವ ಸಂಭವ ಕಡಿಮೆ. ಗಂಡಿನ ಬಲಾತ್ಕಾರದ ಹಾಗೂ ಅತ್ಯಾಚಾರದ ಭೀತಿ ಇದ್ದರೂ, ಒಟ್ಟಾರೆ ಹೆಣ್ಣಿಗೆ ಹೊಟ್ಟೆಯಪಾಡಿಗಾಗಿ, ಗಂಡನ್ನು ಆಶ್ರಯಿಸಬೇಕೆಂಬ ಒತ್ತಾಯ ಉಳಿದಿಲ್ಲ. ಇಂದು ಗಂಡು ಹೆಣ್ಣು ಬೇರೆ ಬೇರೆ ಕಡೆಗೆ ದುಡಿದೂ ಒಂದೆಡೆಗೆ ಮನೆಮಾಡಿಕೊಂಡು ಸುಖದಿಂದ ಬಾಳುವದನ್ನು ನಾವು ನೋಡುತ್ತೇವೆ. ಇಂಥ ಕುಟುಂಬದಲ್ಲಿ ಅವರನ್ನು ಜತೆಗೂಡಿಸುವ ಮತ್ತು ಜೋಡಿಸುವ ಪಾಶ ಶಾರೀರಿಕ ಮತ್ತು ಮಾನಸಿಕ ಗುಣಗಳದೇ ಇರುತ್ತದೆ. ಹೆಚ್ಚೆಂದರೆ ಸಂಸ್ಕೃತಿ ಶಿಕ್ಷಣಗಳಿಂದ ಫಲಿತವಾದ ಸಂಯಮವೂ ಇರುತ್ತದೆ. ಸಾಮಾಜಿಕ ಇಲ್ಲವೇ ಆರ್ಥಿಕ ವೈಷಮ್ಯದ ಭೀತಿ ಇರುವದಿಲ್ಲ. ಹೀಗೆ ಹೊಸ ಜೀವನದಲ್ಲಿ ಕಂಡುಬರುವ ಗಂಡು ಹೆಣ್ಣಿನ ಸಂಬಂಧದಲ್ಲಿ ಹೆಣ್ಣು ಗಂಡನ್ನು ಅವಲಂಬಿಸಿ ಇರುವದು ತೋರಿಬಂದರೂ ಅದರಲ್ಲಿ ಒಂದು ಗೌರವ ಇರುತ್ತದೆ. ತಾನಾಗಿ ಕಟ್ಟಿಕೊಂಡ ಬಂಧನವದು, ಬಿಡುಗಡೆಯ ದಾರಿ ತೆರೆದಿದ್ದರೂ ಇಟ್ಟುಕೊಂಡ ಬಂಧನವು. ಇಂಥ ಪರವಶತೆಯಲ್ಲಿ ವಿವಶತೆಯ ಅವಶ್ಯಕತೆ ತೋರುವದಿಲ್ಲ.

ಅಂದಮೇಲೆ ಹೊಸ ಸ್ವಾತಂತ್ರ್ಯವಾಗಲೀ, ಆಧುನಿಕ ನಾಗರಿಕತೆಯ ಜಾಗೃತಿಯಿಂದ ತಲೆದೋರಿದ ಆರ್ಥಿಕ ಸಮಾನತೆಯ ಆಂದೋಲನವಾಗಲೀ ಹೆಣ್ಣಿನ ಸ್ವಾಭಾವಿಕ ಪುರುಷಾವಲಂಬಿತನಕ್ಕೆ ಯಾವ ತಡೆ – ತೊಡಕನ್ನೂ ಉಂಟುಮಾಡಿಲ್ಲ. ಇಷ್ಟೇ ಅಲ್ಲ, ಇಂದಿನ ಅನಿರ್ಬಂಧ – ಸ್ವಚ್ಛಂದ – ಸಂಬಂಧದಲ್ಲಿಯೇ ಹೆಣ್ಣಿನ ಈ ಸಹಜ ಸಿದ್ಧವಾದ ಪೌರುಷೋಪಾಸನೆಯು ಹೆಚ್ಚು ಸ್ಪಷ್ಟವಾಗಿಯೂ ವಿಕಾಸಗೊಳ್ಳುವಂತಿದೆ. ಯಾವ ಆರ್ಥಿಕ ಧಾರ್ಮಿಕ ಇಲ್ಲವೇ ಲೌಕಿಕ–ಪಾರಲೌಕಿಕ–ವಿಧಿ–ನಿಷೇಧಗಳ ಒತ್ತಾಯವಿಲ್ಲದೇ ಹೆಣ್ಣು ಗಂಡಿನ ಹೃದಯದ ಮತ್ತು ಪ್ರಣಯದ ಆಗ್ರಹಕ್ಕೆ ತಾನಾಗಿ ತನ್ನಾರೆ ವಶಪರ್ತಿಯಾಗಿ ಬಾಳುವಂತಿದೆ!

ಈ ಹಿಂದೆ ನಮ್ಮ ವಿಷಯದ ಎಳೆಯು ತುಸು ದೂರ ಹರಿದು ಹೋಯಿತು. ಆಧುನಿಕ ಜೀವನದ ಕೃತ್ರಿಮವಾದ ಆವರಣದ ಪರಿಣಾಮಗಳು

ಗಂಡು-ಹೆಣ್ಣಿನ ಅನ್ಯೋನ್ಯ ಸಂಬಂಧಗಳಲ್ಲಿ ಎಂಥ ವ್ಯತ್ಯಾಸ-ವಿಪರ್ಯಾಸಗಳನ್ನು ತಂದಿವೆ ಎಂಬುದನ್ನೇ ಉದ್ದವಾಗಿ ಬಣ್ಣಿಸಲು ತೊಡಗಿದಂತಾಯಿತು. ತಾತ್ಪರ್ಯವೇನಂದರೆ, ಇಂದಿನ ಬದುಕು ನೇರವಾಗಿಲ್ಲ. ಎಂದಿನಿಂದಲೂ ಹೆಚ್ಚಾಗಿ ಗಂಡು ಎಡೆಬಿಡದೆ, ಎಲ್ಲಿಯೂ ಸಡಿಲು ಬಿಡದೆ ಬುದ್ಧಿಯ ಕೆಲಸಕ್ಕೇ ತನ್ನನ್ನು ಹೂಡಿಕೊಳ್ಳಬೇಕಾಗುತ್ತದೆ. ಒಂದೆಡೆಗೆ ಉದ್ಯೋಗ-ವ್ಯವಸಾಯಗಳ ಯಾಂತ್ರಿಕ ಪದ್ಧತಿ, ಇನ್ನೊಂದೆಡೆಗೆ ಈ ಒತ್ತಾಯದ ಬೌದ್ಧಿಕ ಜೀವನದ ಕೃತ್ರಿಮ ಚಟ- ಇವೆರಡರ ನಡುವೆ ಗಂಡಿನ ನರಗಳೆಲ್ಲ ಹುರಿಗುಂದಿ ಹೋಗುತ್ತವೆ; ಮಿದುಳು ಮಂಕಾಗುತ್ತದೆ; ಅಂದರೆ ಪೌರುಷದ ಕೆಚ್ಚು ಕುಗ್ಗುತ್ತದೆ; ಆತ್ಮಾಭಿಮಾನ ತಗ್ಗುತ್ತದೆ. ಬೆನ್ನು ಬಗ್ಗುತ್ತದೆ. ಈ ಹೊಸ ಬಾಳು ಗಂಡನ್ನು ಚಾಕರಿಯಾಳಿನ ಚಟುವಟಿಕೆಗೆ ಹೂಡಿ, ಒಂದು ಸೂಕ್ಷ್ಮವಾದ ಮಾನಸಿಕ ದಾಸ್ಯದ ಚಟವನ್ನು ಮೈಯುಣ್ಣಿಸಿ ಬಿಟ್ಟಿದೆ.

ಇದರಿಂದ ಗಂಡಿನ ಹುಟ್ಟುಗುಣವಾಗಿರಬೇಕಾದ ಎದೆಗಾರಿಕೆಯು ಮಸಣಿಸಿ ಹೋಗಿದೆ. ಪೌರುಷ-ಪುರುಷಾರ್ಥಕ್ಕೆ ಬೇಕಾದ ಧೈರ್ಯ ಸವೆದು ಹೋಗಿದೆ. ಸಂಕಲ್ಪಶಕ್ತಿಯೂ ಇಚ್ಛಾಶಕ್ತಿಯೂ ಸಡಿಲಾಗಿಬಿಟ್ಟಿದೆ. ಇಂಥ ದೆಸೆಯಲ್ಲಿ ಆತನು ಸ್ವಾಭಾವಿಕವಾಗಿಯೂ ಬಲೋಪಾಸಕಳಾದ ಹೆಣ್ಣನ್ನು ಆಳುದೆಂತು? ಜನ ಸಂದಣಿಯೊಳಗಿಂದ ಮುನ್ನುಗ್ಗಲು, ಸಿನೇಮಾ ಮಂದಿರದಲ್ಲಿ ತಿಕೇಟುಕೊಳ್ಳಲು. ಬಸ್ಸು-ರೇಲುಗಳಲ್ಲಿ ತನ್ನ ಕುಟುಂಬಕ್ಕಾಗಿ ಸ್ಥಳ ಮಾಡಿಕೊಳ್ಳಲು-ಅಷ್ಟೇ ಏಕೆ, ಮನೆಗಾಗಿ ಪೇಟೆಯಿಂದ ತ್ವರೆಯಲ್ಲಿ ಜೀನಸುಗಳನ್ನು ತರಲು, ಗಂಡು ಹೆಣ್ಣಿನ ಎದುರು ಹತವೀರ್ಯವಾಗಿ ಕಾಣಿಸಿಕೊಳ್ಳುತ್ತಾನೆ. ಇಂಥ ಹಲವು ಆಯಕಟ್ಟಿನ ಪ್ರಸಂಗಗಳಲ್ಲಿ ತನ್ನ ಗಂಡನ ಅಚ್ಚುಕೆಚ್ಚನ್ನು ಒರೆಗೆ ಹಚ್ಚಿ, ಹೆಣ್ಣು ಒಳ ಒಳಗೇ ಆತನ ಬೆಲೆಕಟ್ಟಿ, ತಲೆತಗ್ಗಿಸಿ ಸುಮ್ಮನಿರುತ್ತಾಳೆ! ಅಂದರೆ ಇವೆಲ್ಲ ಮಾತು ಸುರಕ್ಷಿತವೂ ಸುಸಂಸ್ಕೃತವೂ ಎನಿಸಿಕೊಂಡ ಗಂಡುವರ್ಗದ ಕುರಿತೆಂಬುದು ಮರೆಯಕೂಡದು. ಇಂಥ ದೈನ್ಯ-ಶ್ರಮಜೀವಿ ಗಂಡು ಕಾಣಿಸುವದಿಲ್ಲ ಇರಲಿ.

ಹೆಣ್ಣು ಹೋರಾಡುವದಿಲ್ಲವೆ?

ಇಂದಿನ ಅವಸ್ಥೆ ಹೇಗೂ ಇರಲಿ. ಸಹಜ ಸ್ವಭಾವದಲ್ಲಿ ಗಂಡು ಹೋರಾಟದ ಹುದ್ದರಿಯೆಂಬುದನ್ನು ಹಿಂದೆಯೇ ಹೇಳಿದೆ. ಹಾಗಿದ್ದರೆ ಹೆಣ್ಣು ಹೋರಾಡುವದಿಲ್ಲವೇ ? ಹೆಣ್ಣಿಗೆ ಗೆಲುವೆಂಬುದು ಗೊತ್ತಿಲ್ಲವೆ? ಒಲಿದು ಸೋಲುವದೇ ಆಕೆಯ ಭಾಗ್ಯವೇ?

ಅಲ್ಲ! ಹೆಣ್ಣು ಗೆಲ್ಲುವಳು. ಹೆಣ್ಣಿನ ಗೆಲುವು ಬಹಳೇ ಭದ್ರವಾಗಿ ತಾಳುವದು. ಆದರೆ ಹೆಣ್ಣು ಗೆಲ್ಲುವದು ಪ್ರತ್ಯಕ್ಷ ಹೋರಾಟದಿಂದಲ್ಲ. ಹೆಣ್ಣಿನಲ್ಲಿ ಹೀಗೆ ಇದಿರು ಹೋರಾಟಕ್ಕೆ ಬೇಕಾಗುವ–ನುಗ್ಗಿ ನಡೆಯುವ ಸಾಹಸವಿಲ್ಲ. ಪರಾಕ್ರಮದ ಧೈರ್ಯ ಹೆಣ್ಣಿನ ಗುಣವಲ್ಲ. ಅವಳ ಗೆಲುವು ಎಡೆಬಿಡದ ಜಿಗುಟುತನದ ಫಲ; ಸತತ ಪರಿಶ್ರಮದ ಹಾಗೂ ಮತ್ತೆ ಮತ್ತೆ ಎತ್ತಿ ಒತ್ತಿ ತೋರಿಸುವ ಛಲದ ಫಲ. ಗಂಡಿನ ಹೋರಾಟ ಹೆಚ್ಚು ಪ್ರಖರ; ಅಷ್ಟೇ ಪ್ರಕಟ. ಆದರೆ ಅದು ಅಷ್ಟೇ ದೀರ್ಘಕಾಲ ನಡೆಯುವಂತಹದಲ್ಲ. ಗಂಡಿನದು ಮಿಂಚಿನ ದಾಳಿ. ಹೆಣ್ಣಿಗಿರುವ ಹವ್ಯಾಸ ಗಂಡಿಗೆ ಇರುವದು ಕಡಿಮೆ. ಇದರಿಂದ ಗಂಡು ಕೂಡಲೇ ಒಡಂಬಡಿಕೆಗಾಗಿ ಸಿದ್ಧನಾಗಲೂ ಒಪ್ಪುವನು. ಎಷ್ಟು ಕಟ್ಟುನಿಟ್ಟಾಗಿ, ನಿಷ್ಠುರವಾಗಿ ಹೋರಾಡುವನೋ–ಸೆಣಸಾಡುವನೋ–ಅಷ್ಟೇ ಒಪ್ಪಂದ ಮಾಡಿಕೊಳ್ಳಲು ಅಣಿಯಾಗುವನು. 'ಸಾಮಾನ್ಯ ಲಗು ಒಪ್ಪಂದ'ಕ್ಕಾಗಿ ತನ್ನ ಕೆಲವು ಹಟವನ್ನೂ ಹಕ್ಕುಗಳನ್ನೂ ಬಿಟ್ಟುಕೊಡಲೂ ಗಂಡು ಒಪ್ಪಬಹುದು. ಪಾಂಡವರು ಸಂಧಾನಕ್ಕೆ ಸಿದ್ಧಾರದಷ್ಟು ದ್ರೌಪದಿಯು ಸಿದ್ಧಳಾಗಲಿಲ್ಲವೆಂಬುದನ್ನು ಮರೆಯಬಾರದು.

ಅವನ ಈ ಜಗಳ–ಒಡಂಬಡಿಕೆಗಳ ತವಕ ಹೆಣ್ಣಿನೊಡನೆ ಕಂಡು ಬರುವದು ಸಿಟ್ಟಿನ ಭರದಲ್ಲಿ. ತನ್ನ ಗಂಡು–ಗಂಡುಸುತನದ ಹುಂಬಬಿಂಕದಲ್ಲಿ ಹೆಣ್ಣಿನೊಡನೆ ಸೆಣಸಾಡಿ, ಆಕೆಯನ್ನು ಗಂಡು ಚೆನ್ನಾಗಿ ಥಳಿಸಲೂ ಹಿಂದೆ ಮುಂದೆ ನೋಡುವದಿಲ್ಲ. ಆದರೆ ಕೊನೆಗೆ ಒಪ್ಪಂದದ ಬಿಳೀಬಾವುಟ ಹಾರಿಸಲೂ ಗಂಡು ಸ್ವಲ್ಪವೂ ನಾಚುವದಿಲ್ಲ! ಅವನ ಕೋಪದ ಆಟೋಪ ಬಿರುಗಾಳಿಯಂತೆ ಬೀಸಿ, ಗುಡುಗಿ, ಮಿಂಚಿ ಮಾಯವಾಗುವದೆನ್ನಬಹುದು.

ಆದರೆ ಹೆಣ್ಣು ಹಾಗಲ್ಲ. ಜಾಹಿರಾತಿನಂತೆ–ಎಡಬಿಡದ ಹಟದಿಂದಲೇ ಮತ್ತೆ ಮತ್ತೆ ಅಡಿ ಗೆಲ್ಲುವ ತಂತ್ರ ಆಕೆಯದು. ಹಲವುಸಲ ಒಂದೇ ಸಂಗತಿಯನ್ನು ಸಾಕಷ್ಟು ಒತ್ತಿ ಹೇಳಿದರೆ, ಗೋಡೆಯ ಹಾಳೆ, ವರ್ತಮಾನ ಪತ್ರ, ಸಿನೇಮಾ ತೆರೆ ಇವೆ ಮುಂತಾದ ಹಲವು ಕಣ್ಣುಗಳನ್ನು ಹಲವು ಸಲ ಸೆಳಕೊಳ್ಳುವ ಸ್ಥಳಗಳನ್ನು ಆಕ್ರಮಿಸಿ, ಅದೇ ಸಂಗತಿಯನ್ನು ಮತ್ತೆ ಮತ್ತೆ ಸಾರಿದರೆ ಕೊನೆಗೂ ಜನ ಅದನ್ನು ನಂಬುವರು; ಕೊಳ್ಳುವರು; ಕೈಗೊಳ್ಳುವರು. ಇದೇ ಜಾಹಿರಾತಿನ ತಂತ್ರ. ಈ ತಂತ್ರ ಹೆಣ್ಣಿಗೆ ಗೆಲುವಿನ ಮೂಲಮಂತ್ರ. ನೀರು ಎಷ್ಟು ಮಿದು! ಆದರೆ ಎಡಬಿಡದೇ

ಹರಿದು ಅದು ಬಂಡೆಯನ್ನು ಕೊರೆದು ಬಯಲನ್ನು ಬರಿದಾಗಿ ಮಾಡುವದಿಲ್ಲವೆ? ನೀರೆಯೂ ನೀರಿನಂತಯೇ. ತನ್ನ ಮಾತನ್ನೂ, ಮಾಟವನ್ನೂ, ಮನೋಗತವನ್ನೂ ಮತ್ತೆ ಮತ್ತೆ ಗಂಡನಿದಿರು ಅನುವು ದೊರತಾಗೆಲ್ಲ ಕಿರುದನಿಯಲ್ಲಿಯೋ, ಅಳುದನಿಯಲ್ಲಿಯೋ, ನಗೆಮೊಗದಿಂದಲೋ, ಹೊಗೆಮೊರೆಯಿಂದಲೋ ಆಡಿ ಆಡಿ, ಕೊನೆಗೂ ಗಂಡನನ್ನು ಅದಕ್ಕೆ ಒಪ್ಪಿಸಿಕೊಳ್ಳುವ ಹದ ಹೆಣ್ಣಿಗೇ ಸಾಧಿಸಿದ್ದು.

ಹೆಣ್ಣಿನ ಹಟ ಗಂಡಿನ ಗಂಡಾಂತರ

ದೊಡ್ಡ ಪೆಟ್ಟನ್ನು ಒಮ್ಮೆಲೇ ಸಹಿಸಬಲ್ಲ ಗಂಡು ಪುಟ್ಟ ನೋವನ್ನು ಅನುದಿನವೂ ತಾಳಲಾರ. ಹಾಗೆಯೇ ಆಕಸ್ಮಿಕ ಕ್ಷೋಭವನ್ನು ಎದೆಗಾರಿಕೆಯಿಂದ ಇದಿರಿಸುವ ಗಂಡನು ಹೆಂಡತಿಯ ದಿನನಿತ್ಯದ ಕರಕರೆಯನ್ನೂ, ಕೊರಗಿನ ಕೆರಳಿಕೆಯನ್ನೂ ಸಹಿಸಲಾರ. ಇದು ಹೆಣ್ಣಿಗೂ ಗೊತ್ತು. ಆದ್ದರಿಂದಲೇ ಆಕೆ ತನ್ನ ಹಟದ ಒಂದು ಬಲವಾದ ಪೆಟ್ಟನ್ನು ಕೊಡುವದಕ್ಕಿಂತ ಚಿಕ್ಕ ಒತ್ತಾಯವನ್ನೇ ಎಡಬಿಡದೇ ನಡೆಯಿಸುವ ಉಪಾಯ ಕಂಡು ಕೊಂಡಿದ್ದಾಳೆ. ಇದು ಆಕೆಯ ದೇಹದ ಅಬಲತೆಯದೇ ಒಂದು ಪರಿಪಾಕ. ನೇರವಾಗಿ ಆಕೆ ಹೋರಾಡಲಾರಳು. ಹೊಡೆತ ಕೊಡಲಾರಳು. ಈ ಗುಣ ಬರೇ ಹೆಣ್ಣಿಗೇ ಮೀಸಲಿಲ್ಲ. ಅದು ದುರ್ಬಲತೆಯ ಪರಿಣಾಮವಾದ್ದರಿಂದ, ಎಲ್ಲ ದುರ್ಬಲ ಪ್ರಾಣಿವಂಶಗಳಲ್ಲಿಯೂ, ಜನಾಂಗ-ಜಾತಿಗಳಲ್ಲಿಯೂ, ವ್ಯಕ್ತಿಗಳಲ್ಲಿಯೂ, ಹೊರಗೆ ಹೆರವರೊಂದಿಗೆ-ಗಂಡುಗಳೊಂದಿಗೆ ಹೋರಾಟದ ಸೂಕ್ಷ್ಮತಂತ್ರವಾಗಿಯೂ ಪ್ರಕಟವಾಗುತ್ತದೆ. ಈ ಸೂಕ್ಷ್ಮತನ ನಡೆನುಡಿಯಲ್ಲಿ ವ್ಯಂಗ್ಯವಾಗಿಯೂ, ವಕ್ರವಾಗಿಯೂ ಹಲವೊಮ್ಮೆ ಜೀವನವನ್ನೇ ಸವೆಯಿಸುವ ಅಡೆತಡೆಯಾಗಿಯೂ ರೂಪುಗೊಳ್ಳುತ್ತದೆ.

ಪ್ರತೀಕಾರ ಗಂಡಿನ-ಪ್ರಬಲರ-ದಾರಿ. ನಿಃಶಸ್ತ್ರ ಪ್ರತಿಕಾರ, ಸವಿನಯ ನಿರ್ಬಂಧ ಭಂಗ, ಇದು ನಿರ್ಬಲರ - ಹೆಣ್ಣಿನದಾರಿ. ಅಸಹಕಾರ ಅಸಹಾಯರ ಶೂರತನ. ಗಂಡನ ವಿರುದ್ಧ ಹೆಣ್ಣು ಪ್ರಯೋಗಿಸುವ ಸುಕುಮಾರ ಶಸ್ತ್ರವದು. ಇದು ಪ್ರತೀಕಾರದಷ್ಟೇ-ಅದಕ್ಕೂ ಹೆಚ್ಚು-ಪ್ರಖರ ಮತ್ತು ಪರಿಣಾಮಕರ. ಪ್ರಬಲರಿಗಿಂತ ದುರ್ಬಲರು ನಮ್ಮ ಮೇಲೆ ನಡಿಸುವ ದಬ್ಬಾಳಿಕೆಯು ಹೆಚ್ಚು ಘಾತುಕ; ಅಷ್ಟೇ ಸೂಕ್ಷ್ಮ. ಏಕೆಂದರೆ ದುರ್ಬಲರು ನಮ್ಮಲ್ಲಿಯ ಸದ್ಗುಣಗಳನ್ನೋ ಸದ್ಭಾವಗಳನ್ನೋ ತಮ್ಮ ಕೆಲಸಕ್ಕಾಗಿ ನಮ್ಮ ಬಲದ ಮತ್ತು ಛಲದ ವಿರುದ್ಧ ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ಅಂತರಂಗವೇ ಅವರ ಯುದ್ಧ ರಂಗವಾಗುತ್ತದೆ.

ಇದರಿಂದ ನಮ್ಮ ಹಟ ಹುಸಿಯಾಗಿ ಕಸುವೂ ಕಸವಾಗಿ ಬಿಡುತ್ತದೆ. ಏಕೆಂದರೆ ದುರ್ಬಲರೊಡನೆ ಹೋರಾಡಲು ಹೊರಡುವ ಮೊದಲೇ ನಮ್ಮ ಮನಸ್ಸು ಕದಡಿ ಕಸವಿಸಿಯಾಗಿ ಬಿಡುತ್ತದೆ. ನೆಪೋಲಿಯನ್ ಚಕ್ರವರ್ತಿಯು ಯುರೋಪದ ಭೂಖಂಡವನ್ನೇ ಗೆದ್ದು ಆಳಿದನು. ಆದರೆ ತನ್ನ ರಾಣಿ ಜೊಸೊಫಾಯಿನಳನ್ನು ಕೊನೆಯತನಕವೂ ಅಂಕೆಯಲ್ಲಿಟ್ಟುಕೊಳ್ಳದೇ ಹೋದ! ಆಕೆಯ ದೇಹದ ಅಬಲತೆಯು ಹಾಗೂ ಮನದ ಅಂಜುಬುರುಕುತನದ ಮುಂದೆ ಆತನ ಶಕ್ತಿ ಸಾಮರ್ಥ್ಯವೆಲ್ಲ ವ್ಯರ್ಥವಾಯಿತು. ಅವಳು ಪ್ರಯೋಗಿಸುವ ಆಯುಧಗಳನ್ನು ತಡೆಯಲು ಅವನಲ್ಲಿ ತಕ್ಕ ಕವಚವೇ ಇದ್ದಿಲ್ಲ! ಕೆನ್ನೀರ ಕಡಲನ್ನು ಈಸಬಲ್ಲ ಆ ಅಸಹಾಯಶೂರನಿಗೆ ಆಕೆಯ ಕಣ್ಣೀರ ಹನಿಗಳನ್ನು ದಾಟುವದು ದೊಡ್ಡ ಸಂಕಟವಾಗಿತ್ತು!

ಇಂದಿನ ಪರಿಸ್ಥಿತಿಯಂತೂ ಹೆಣ್ಣಿಗೆ ಅನುಕೂಲವೇ ಸರಿ. ಆಧುನಿಕ ಸೌಕರ್ಯಗಳ ವಿರಾಮದ ಬಾಳಿನಲ್ಲಿ ಅರಳುವ ಮಧ್ಯಮ ವರ್ಗದ ಹೆಣ್ಣು ಬಹಳ ಮಕ್ಕಳಿಲ್ಲದ, ಯಾವ ಕೆಲಸವೂ ಇಲ್ಲದ, ಸುಖಾಸೀನ ಸೋಮಾರಿತನದಲ್ಲಿ ಗಂಡಿನ ವಿರುದ್ಧ ಆಯಕಟ್ಟಿನ ಸ್ಥಳವನ್ನೇ ಆಕ್ರಮಿಸಿದಂತಿದೆ. ದಿನದ ಕೆಲಸದಿಂದ ದಣಿದು ನುಗ್ಗಾಗಿ ಮನೆ ಸೇರಿದ ಗಂಡನು ತನ್ನ ಕೆರಳಿದ–ಬೇಸತ್ತ–ಮನಸ್ಥಿತಿಯಲ್ಲಿ ಹೆಂಡತಿಯೆಂಬ ಸನಾತನ ಶತ್ರುವನ್ನು ಎದುರಿಸಬೇಕಾಗುತ್ತದೆ. ಆಕೆಯು ತನ್ನ ಎಲ್ಲ ಶಕ್ತಿ ಶಸ್ತ್ರಗಳನ್ನು ಸಜ್ಜುಗೊಳಿಸಿ, ಹಲವೊಮ್ಮೆ ಬೊಜ್ಜುಗಳಿಸಿ, ಹೋರಾಟಕ್ಕಾಗಿ ಹೊಸ ಹುರುಪಿನಿಂದ ಕಾಯುತ್ತಿರುತ್ತಾಳೆ! ಆಕೆಯ ವೇಷ ಆವೇಶಗಳನ್ನು ಕಂಡು, ಯುದ್ಧಪ್ರಾರಂಭವಾಗುವ ಮೊದಲೇ ಗಂಡು ಸೋತಿರುತ್ತಾನೆ!

ಅಬಲೆಯ ಬಲ!

'ಇನ್ನೊಮ್ಮೆ ಯತ್ನಮಾಡು' ಇದು ಗಂಡಿಗೆ ಗೆಲುವಿನ ಗುಟ್ಟು. ಆದರೆ 'ಇನ್ನೊಮ್ಮೆ ಅತ್ತು ನೋಡು' ಇದು ಹೆಣ್ಣಿನ ವಶದ ಸೂತ್ರ. ಹೆಣ್ಣಿನೊಡನೆ ಸೆಣಸಾಟದಲ್ಲಿ ಗಂಡು ಒಮ್ಮೆ ಗೆಲ್ಲಬಹುದು. ಇನ್ನೊಮ್ಮೆ ಗೆಲ್ಲಲೂಬಹುದು. ಕಾಡಿ ಬೇಡಿ ಇದಿರಾಡಿ ಸೋತ ಹೆಣ್ಣು ಕೊನೆಗೆ 'ಅಶ್ರುವಾಯು' ವನ್ನು ಪ್ರಯೋಗಿಸುವಳು. ನಿಟ್ಟುಸಿರಿನ ಬಿರುಗಾಳಿಯೊಡನೆ ಸುರಿಸುವ ಕಣ್ಣೀರಿನ ಜಡಿಮಳೆಯಲ್ಲಿ ಗಂಡಿನ ಸಿಡಿಗುಂಡುಗಳೆಲ್ಲ ತೋಯ್ದು ಹಾಳಾಗುವವು. ಅವನ ಗಂಡೆದೆಯೂ ಕರಗಿ ತಣ್ಣಗಾಗುವದು. ಕಣ್ಣೀರಿನ ಈ 'ಪರ್ಜನ್ಯಾಶಸ್ತ್ರ'ದ ಪ್ರಯೋಗದ ತಂತ್ರ ಹೆಣ್ಣು ಬಹಳೇ ಚನ್ನಾಗಿ ಬಲ್ಲಳು.

ಇರಲಿ, ಹೆಣ್ಣು ಸಾಮಾನ್ಯವಾಗಿ ಕರ್ಮೇಂದ್ರಿಯಗಳ ಕೆಲಸದಲ್ಲಿ ಹಿಂದೆ ಬೀಳುವಳು. ಜ್ಞಾನೇಂದ್ರಿಯಗಳೇ ಆಕೆಯ ಪ್ರಪಂಚ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಎಲ್ಲ ಚಾತುರ್ಯ-ಮಾಧುರ್ಯಗಳೂ ಹೆಣ್ಣಿಗೇ ಮೀಸಲು. ಅಂಬೆಗಾಲಿಡುವದು, ಹೊಟ್ಟೆ ಹೊಸೆದು ಹರಿದಾಡುವದು, ನಡೆಯುವದು, ಬೀಸಿ ಒಗೆಯುವದು, ಹಾರಾಡುವದು, ಜಿಗಿಯುವದು, ಮರ ಮುಂತಾದವುಗಳನ್ನು ಏರುವದು, ಓಡುವದು ಅಥವಾ ಇವೆಲ್ಲ ಚಲನವಲನ ಪ್ರಧಾನವಾದ ಚಟುವಟಿಕೆಗಳ ಆಟಗಳಲ್ಲಿ ಮೇಲಾಗುವದು ಹೆಣ್ಣಿಗೆ ಅಷ್ಟು ನಿಶ್ಚಿತವಾಗಿ ಸಾಧ್ಯವಿಲ್ಲ. ಇವೆಲ್ಲ ಗಂಡಿನ ಕೌಶಲ್ಯ ಕ್ಷೇತ್ರಗಳು. ಇನ್ನು ನಿಯಮಕ್ಕೆ ಅಪವಾದಗಳಿಲ್ಲದಿಲ್ಲ. ಈಜುವುದರಲ್ಲಿ, ಅಂಗಸಾಧನೆಯ ಹುರಿಯಾಟಗಳಲ್ಲಿ ಹೆಸರಾದ ಹೆಣ್ಣುಗಳಿದ್ದಾರೆ. ಆದರೆ ಅವರೆಲ್ಲ ಬರೇ ಹೆಸರಣಿಕೆಗೇ. ಹೆಣ್ಣಿನ ಜನ ಸಮುದಾಯವೆಲ್ಲ ಇಂಥ ಕೈಕಾಲುಗಳ ಚಟುವಟಿಕೆಗಳಿಂದ ದೂರವಿರುವದು. ಅಂತೆಯೇ ಹೆಣ್ಣು ಹಂಸಗಮನೆ-ಗಜಗಮನೆಯೆಂದು ನಮ್ಮ ಪೂರ್ವಿಕರು ಬಣ್ಣಿಸಿರಬೇಕು. ಈ ಚಟುವಟಿಕೆಗಳೆಲ್ಲ ಆಕೆಯ ಅಲಂಕಾರದ ಹಾಗೂ ಕಲಾವಿಲಾಸದ ರೀತಿಯಲ್ಲಿ ಬರುತ್ತವೆ. ಇವೆಲ್ಲ ಚಟುವಟಿಕೆಗಳಲ್ಲಿ ಗಂಡೇ ಬಲುಮೆಯಿಂದ ನಡೆಯುತ್ತಾನೆ.

ಅಷ್ಟೇ ಅಲ್ಲ, ಹೆಣ್ಣು ಚಲನವಲನಗಳ ಮಟ್ಟಿಗೆ ಹೆಚ್ಚಿನ ಸಂಯಮವನ್ನೂ ಸ್ಥೈರ್ಯವನ್ನೂ ಕಾಣಿಸುತ್ತಿದ್ದರೆ, ಅದಕ್ಕೆ ಪ್ರತಿಯಾಗಿ ಗಂಡು ಆ ಕುರಿತು ವಿಶೇಷ ಮತ್ತು ವಿಪರೀತ ಚಂಚಲತೆಯನ್ನು ತೋರಿಸುತ್ತಾನೆ. ಹೆಣ್ಣು ಅತಿರೇಕದ ಸ್ಥಿತಿಸ್ಥಾಪಕಳಿದ್ದರೆ ಗಂಡು ಅನವಶ್ಯಕವಾಗಿ ಗತಿಪ್ರಿಯನೂ, ಪ್ರಯೋಜನಕ್ಕೂ ಮಿಗಿಲಾಗಿ-ಚಂಚಲ ಚಲನವಲನದವನೂ ಆಗಿರುತ್ತಾನೆ. ಅಂತೆಯೇ ಗಲಬೆ ಗೊಂದಲಗಳಿಗೆಲ್ಲ ಗಂಡೇ ಮುಂದಾಳು. ಹೆಣ್ಣು 'ಗುಂಡ'ರಾಗುವದು ಕಂಡು ಬರುವದಿಲ್ಲ. ಹೆಣ್ಣು 'ಗೃಹಿಣಿ'ಯಾಗಿರುವದೂ ಅದಕ್ಕಾಗಿಯೇ ಸರಿ. ಪೇಟೆಯ ಪಾರುಪತ್ಯ, ಸಂತೆಯ ಸಂದಣಿ, ಸಂಚಾರದ ಚಾಕರಿ ಇವೆಲ್ಲ ಎಂದಿಗೂ ಗಂಡಿನ ಹೋರೆಗಳಾಗಿಯೇ ಉಳಿದಿವೆ. ಹೊಸಯುಗದ ಹೆಣ್ಣು ತನ್ನ ಮನೆಯ ಒಡತಿಯಾಗಿ ದುಡಿಯುವದರ ಬದಲು, ಆಪ್ತ ಕಾರ್ಯದರ್ಶಿಯಾಗಿಯೋ, ಅಧ್ಯಾಪಕಿಯಾಗಿಯೋ, ಟಂಕಲೇಖಕಿಯಾಗಿಯೋ ಕಚೇರಿಯಲ್ಲಿಯ ಕೋಣೆಯ ಸಿಂಗಾರವನ್ನೇ ಹೆಚ್ಚಿಸುತ್ತಾಳೆ. ಈಗಿತ್ತಲಾಗಿ ಪ್ರವಾಸ ಸೌಕರ್ಯಕ್ಕೆ ಸೌಂದರ್ಯದ ಕಳೆಯನ್ನೂ ಸೌಕುಮಾರ್ಯ ಕಳೆಯನ್ನೂ ಪೂರೈಸಲು ವಿಮಾನ ಸಾರಿಗೆಯಲ್ಲಿ (Air

Hostess) ಏರ್ಪಾಡು ಆಗಿದೆ. ಆಕೆಯ ಕೆಲಸವಾದರೂ, ವಿಮಾನದಲ್ಲಿ ಇರುವಷ್ಟು ಸಮಯ ಪ್ರಯಾಣಿಕರ ಯೋಗಕ್ಷೇಮವನ್ನು ನೋಡಿಕೊಳ್ಳುವದೇ ಇರುತ್ತದೆ. ಅಂದರೆ ಒಂದೆಡೆಗೆ ಕೂತಿರುವದು. ವಿಶೇಷ ಮೈ ಕೈಗಳ ಸಡಿತವಿಲ್ಲದ ವ್ಯವಸಾಯದಲ್ಲಿ ತೊಡಗಿರುವದು ಹೆಣ್ಣಿಗೆ ಯಾವಾಗಲೂ ಇಷ್ಟ.

ಅಂತೆಯೇ ಯುದ್ಧದಲ್ಲಿ ಪ್ರತ್ಯಕ್ಷ ರಣರಂಗದಲ್ಲಿ ಕಾದಾಡಲು ಹೆಣ್ಣು ಹೋಗುವದು ಕಡಿಮೆ. ಯುದ್ಧಖಾತೆಯ ಹಲವು ಕಚೇರಿಗಳಲ್ಲಿ ಆಕೆ ಕೆಲಸ ಮಾಡುವಳು; ಇಲ್ಲವೇ ಯುವಕ–ಪುರುಷರೆಲ್ಲ ಸೈನ್ಯ ಸೇರಿ ತೆರವುಬಿದ್ದ ನಾಗರಿಕ–ಸೌಕರ್ಯದ ವಿವಿಧ ಉದ್ಯೋಗಗಳಲ್ಲಿ ಆಕೆ ಸೇರಿ ದುಡಿಯಬಹುದು; ಕೊನೆಯದಾಗಿ ಮನೆಯಲ್ಲಿಯೇ ಕುಳಿತು ಸೈನಿಕರಿಗಾಗಿಯೋ, ಯುದ್ಧಕೈದಿ–ಗಾಯಾಳು–ರೋಗಿಗಳಿಗಾಗಿಯೋ ಕಾಲು ಚೀಲಗಳನ್ನು ಬಟ್ಟೆ–ಬೂಟುಗಳನ್ನು ತಯಾರಿಸುವಳು.

ಇತಿಹಾಸಕಾಲದಲ್ಲಿಯೂ, ಹೆಣ್ಣು ಸೇನಾಪತಿಯಾಗಿ ಕಾದಾಡಿದ್ದು ಕಡಿಮೆಯೇ. ಜೋನ್ ಆಫ್‌ಆರ್ಕ, ಝೂಂಸೀ ಲಕ್ಷ್ಮೀಬಾಯಿ, ಕಿತ್ತೂರ ಚೆನ್ನಮ್ಮ ಇವೆಲ್ಲ ಹೆಸರುಗಳನ್ನು ಇಲ್ಲಿ ನೆನಪಿಟ್ಟುಕೊಂಡೇ ಈ ಮಾತು ಬರೆದಿದೆ. ನಮ್ಮಲ್ಲಿಯ ರಜಪೂತ ವೀರಾಂಗನೆಯರ ಸಾಹಸ ತಮ್ಮ ಗಂಡು ಜನವನ್ನೆಲ್ಲ ತಿಲಕಹಚ್ಚಿ ಯುದ್ಧಕ್ಕೆ ಕಳಿಸಿ, ತಾವು ಉರಿಯುವ ಚಿತೆಯಲ್ಲಿ ಜೀವಂತ ಹಾರಿಕೊಂಡು ಸುಟ್ಟುಸಾಯುವದರಲ್ಲಿಯೇ, 'ಜೋಹಾರ' ಮಾಡುವದರಲ್ಲಿಯೇ ಹೆಚ್ಚು ಕಂಡು ಬರುತ್ತದೆ. ವೀರಗಲ್ಲುಗಳೆಲ್ಲ ಕನ್ನಡ ದೇಶದಲ್ಲಿ ಗಂಡಿನಪಾಲಿಗೆ. ಹೆಣ್ಣಿನ ಅಮರ ಧೈರ್ಯದ ಸ್ಮಾರಕಗಳೆಲ್ಲ ಮಾಸ್ತಿಗಳು, ಇರಲಿ.

ಆಲಸ್ಯದಲ್ಲಿ ಲಾಸ್ಯ

ಈ ಶಾರೀರಿಕ ಚಟುವಟಿಕೆಯಲ್ಲಿ ಹಿಂಜರಿಯುವದರ ಇನ್ನೊಂದು ಪರಿಣಾಮವೆಂದರೆ ಹೆಣ್ಣಿನಲ್ಲಿ ಅಲಸಿಕೆ–ಸೋಮಾರಿತನ ಹೆಚ್ಚು. ಆಕೆ ಸ್ವಭಾವದಿಂದಲ್ಲವಾದರೂ ಶರೀರದ ಒಲವಿನಿಂದ ಮಂಥರೆ, ಮದಾಲಸೆ ! ಆದರೆ ಈ ಅಲಸಿಕೆಯ ಮೂಲಕವೇ ಆಕೆಯು ಹೆಚ್ಚು ಘಾತುಕಿ. ಅಲಸಿಕೆಯಲ್ಲಿ ಅಲ್ಲದ ಲಾಲಸೆ ಮೊಳೆತು ಬಲಿಯುವ ಭೀತಿ ಹೆಚ್ಚು. ಮೈಮುರಿದು ಚಟುವಟಿಕೆಯಲ್ಲಿ ತನುಮನದಿಂದಲೂ ತೊಡಗಿದವರಿಗೆ ಕಾಮುಕತೆಯಾಗಲೀ ವಿಷಯಲೋಲು ಪತೆಯಾಗಲೀ ತಲೆದೋರಲು ಅವಕಾಶ–ಅನುಕೂಲತೆಗಳು ಸಹಸಾ ಸಿಗುವದಿಲ್ಲ.

ಹಿಡಿದ ಕಾರ್ಯದ ಆಲೋಚನೆ, ಕಾರ್ಯಕ್ಕಾಗಿ ರೂಪಿಸುವ ಕಲ್ಪನೆ ಇವುಗಳಲ್ಲಿಯೇ ವ್ಯಕ್ತಿಯ ಲಕ್ಷ್ಯವೆಲ್ಲ ಶೇಖರಿಸಿ ಶ್ರಮ ಪಡುತ್ತಿದ್ದರೆ ಅದರಿಂದಲೇ ಮನಃಶುದ್ಧಿಯೂ ಮನಃಶಾಂತಿಯೂ, ಮನಃಶಕ್ತಿಯೂ ಬೆಳೆಯುವದು. ಆದರೆ ಅಲಸಿಕೆ, ಮೈಮನದ ಬಿಡುವು–ಬೇಸರಿಕೆಗಳೇ ಎಲ್ಲ ಪಾಪಲೋಭಗಳಿಗೆ ತಂದೆ–ತಾಯಿಗಳು. ಬೇಸರಿಕೆಯನ್ನು ಕಳೆಯಲು ಹೊಣೆಯಿಲ್ಲದ ಹೊರೆಯಾಗದ, ಏನಾದರೊಂದು ಹಗುರಾದ, ಹುರುಪಾದ ಚಟುವಟಿಕೆ ಅಲಸಿಕೆಯವರಿಗೆ ಬೇಕೆನಿಸುತ್ತದೆ. ಆಗ ಸಲ್ಲದ ಯೋಜನೆಗಳು ಹೊಸತಾಗಿ ಬರುವವು. ನಾವಿನ್ಯವೇ ಯಾವದೇ ಮೋಹದ ಅಭೇದ್ಯ ಶಕ್ತಿಯಾಗಿರುತ್ತದೆ.

ಹೆಣ್ಣಿಗೆ ಅಲಸಿಕೆ ಸಹಜ. ಈ ನಾವಿನ್ಯದ ಮೋಹವೂ ಅಷ್ಟೇ ಸ್ವಾಭಾವಿಕ. ಬೆಂಕಿಯೊಡನೆ ಆಡುವದು ಆಕೆಗೆ ಒಂದು ಸೊಗಸಿನ ಚೆನ್ನಾಟವಾಗುವದು. ಹೀಗೆ ಹೆಣ್ಣಿನ ಆಲಸ್ಯವು ಅಭಾದಿತವಾಗಿ ಅಭಿಸಾರಕ್ಕಾಗಲೀ ವ್ಯಭಿಚಾರಕ್ಕಾಗಲಿ ಆಕೆಯನ್ನು ಎಳೆಯುವ ಸಂಭವವಿದೆ. ಅದರ ಅರ್ಥ–ಪ್ರತಿಯೋರ್ವ ಹೆಣ್ಣು ಅಡ್ಡ ಹಾದಿಗೆ–ತಪ್ಪು ಹೆಜ್ಜೆಗೆ ಇಳಿಯುತ್ತಾಳೆಂದಲ್ಲ, ಅಲಸಿಕೆಯು ಸೈತಾನನ ಕೈಗೆಲಸಕ್ಕೆ ತಕ್ಕ ಅನುವೆಂಬುದು ನಿಜವಿದ್ದರೆ, ಇಂಥ ಘಾತುಕ ಅವಸ್ಥೆಯು ಗಂಡಿಗಿಂತ ಹೆಣ್ಣಿಗೇ ಬರುವ ಸಂಭವ ಹೆಚ್ಚು. ಮದುವೆಯ ಮೊದಲು ಊರಿಗೆಲ್ಲ ಮಾಟಗಾರ್ತಿಯೆಂದು ಹೆಸರಾಗಿ ಹಿರಿಯರ ರೊಚ್ಚಿಗೂ ಹರೆಯದವರ ರುಚಿಗೂ ಆಸ್ಪದರಾದ ಎಷ್ಟೋ ಹೆಣ್ಣುಗಳು, ಮದುವೆಯಾದ ಮೇಲೆ, ಮಡದಿಯರಾಗಿ ತಮ್ಮ ತಮ್ಮ ಮನೆಮಕ್ಕಳ ಒಡತಿಯರಾದ ಮೇಲೆ, ಮಾದರಿಯ ಮುತ್ತೈದೆಯರಾಗಿ ಬಾಳನ್ನು ಸುಖವಾಗಿ ಸಾಗಿಸುವದು ಕಂಡುಬರುತ್ತದೆ. ಇದರ ರಹಸ್ಯವಿಷ್ಟೇ : ಗಂಡನ್ನು ಆಕರ್ಷಿಸುವ ಹೆಣ್ಣಿನ ಸಹಜ ಮನೋಧರ್ಮ ವಯೋಧರ್ಮಗಳಿಗೆ ಹೊಸ ಯೌವನದಲ್ಲಿ ಅನುಕೂಲ ಅವಕಾಶವು ದೊರೆತು ವಿವಿಧ ವಿಲಾಸ ವಿಭ್ರಮಗಳಿಗೆ ಆರಂಭವಾಗುತ್ತದೆ– ಮಾಗಿಯ ಮೊದಲು ಮರಗಳೆಲ್ಲ ಹೂತು ಅರಳಿ ''ವಿರಾಗಿ ಭೃಂಗ''ಗಳಿಗೆ ''ಕಂಪಿನ ಕರೆ'' ಯನ್ನು ಸರಾಗವಾಗಿ ಸಾರುವಂತೆ ಕಾದು ಹಣ್ಣಾಗುವ ಹದ ಬಂದಾಗ ಹೂಗಳ ಬೆಡಗು ಬಣ್ಣಗಳಿಗೆ ಎಲ್ಲಿ ಆಸ್ಕರ?

ಆದರೆ ಇಷ್ಟೊಂದು ನಿಜ. ಹಾದಿತಪ್ಪಿ ಹೆಜ್ಜೆ ಇಡಲು ದುಡುಕುತ್ತಿದ್ದರೂ ಅದಕ್ಕೆ ಅನುವು ಸಿಗುವದು ಹೆಣ್ಣಿನ ಅನುಮತಿಯಿಂದಲೇ. ಹೆಣ್ಣಿನ ಪ್ರಕಟ ಇಲ್ಲವೇ ಮೂಕ ಉತ್ತೇಜನವಿಲ್ಲದೇ ಯಾವ ಗಂಡೂ ಕಾಮಾಚಾರಕ್ಕಾಗಲಿ

ಸ್ವೈರವೃತ್ತಿಗಾಗಲೀ ಒಮ್ಮೆಲೇ ಇಳಿಯಲಾರನು. ಒಮ್ಮೆ ಅನುವು ಸಿಕ್ಕರೆ ಗಂಡು ಯಾವ ಪಾತಕಗಳಿಗೂ ಇಳಿದು ಹೆಣ್ಣನ್ನು ಹಾಳುಗೆಡಿಸುವ ನೀಚನಾಗಬಹುದು. ಆದರೆ ಬಲತ್ಕಾರದ ಪ್ರಸಂಗಗಳನ್ನು ಬಿಟ್ಟರೆ, ಗಂಡು ತಾನಾಗಿ ಹೆಣ್ಣಿನೊಡನೆ ತನಗೆ ತಾತ್ಸಾರ ಮಾಡಬಹುದಾದ ಹೆಣ್ಣಿನೊಡನೆ–ಅತಿಪ್ರಸಂಗ ಮಾಡಲು ಧೈರ್ಯ ಪಡುವದಿಲ್ಲ. ಅಂತೆಯೇ ಹೆಣ್ಣಿನ ಹಿತದಂತೆ ಗಂಡಿನ ಹೊಣೆಗಾರಿಕೆಯ ದೃಷ್ಟಿಯಿಂದಲೂ ಹೆಣ್ಣನ್ನು ಅಲಸಿಕೆಯಲ್ಲಿ ಇಡುವದು ಗಂಡಾಂತರದ್ದು! ಸುಖದಂತೆ ಶೀಲದ ಹಾದಿಯೂ ಕಾರ್ಯತತ್ಪರತೆಯದೇ ಸರಿ.

ಇದುವರೆಗಿನ ಚರ್ಚೆ ವ್ಯಕ್ತಿ ಹಾಗೂ ವಂಶಗಳ ದೃಷ್ಟಿಯಿಂದ ಗಂಡು ಹೆಣ್ಣಿನ ಪ್ರಕೃತಿ–ವಿಕೃತಿಗಳ ವಿವರಗಳ ಕುರಿತಾಯಿತು. ಸಾಮಾನ್ಯವಾಗಿ ವ್ಯಕ್ತಿಯನ್ನೂ ವ್ಯಕ್ತಿಯ ರೂಪದಲ್ಲಿ ವಂಶವನ್ನೂ ಉಳಿಸಿ ನಡೆಯಿಸುವ ಮೂಲಪ್ರವೃತ್ತಿಗಳಲ್ಲಿ ಗಂಡಿಗೆ ಲಭಿಸಿರುವ ಶ್ರೇಷ್ಠತೆಯು ಪ್ರತ್ಯಕ್ಷವೇ ಇದೆ – ಅಷ್ಟೇ ಸ್ವಾಭಾವಿಕವೂ ಆಗಿದೆ. ಆದರೆ ಸಮಾಜವನ್ನು ಮಾನವ ಸಮುದಾಯವನ್ನು ಉಳಿಸಿ ಬೆಳಿಸಲು ಉಪಯೋಗಿಯಾಗುವ ಮೂಲ ಪ್ರವೃತ್ತಿಗಳಲ್ಲಿ ಹೆಣ್ಣೇ ಶ್ರೇಷ್ಠಳಾಗಿರುತ್ತಾಳೆ. ಅಂಥ ಸಾಮಾಜಿಕ ಗುಣದೋಷಗಳಿಗೆ ಪ್ರೇರಕವಾಗುವ ಪ್ರವೃತ್ತಿಗಳ ವಿಷಯ ಇನ್ನು ಚರ್ಚೆ ಮಾಡೋಣ.

ಗಂಡಿಗಿಂತಲೂ ಹೆಣ್ಣು ಹೆಚ್ಚು ಸಾಮಾಜಿಕಳು; ಸಮಾಜಪ್ರಿಯಳು. ಮಂದಿಯೊಡನೆ ತಾನೂ ಕಲೆತು, ಮಂದಿಗೂ ತನ್ನೊಡನೆ ಕಲೆಯಲು ಅನುವು ಮಾಡಿಕೊಡುವಳು. ಹೆಣ್ಣಿನಲ್ಲಿ ಏಕನಿಷ್ಠ ಗೆಳೆತನ ವಿರಳವೆಂದರೂ, ಹಲವು ಜತೆಗಾರ್ತಿಯರೊಡನೆ ಒಡನಾಡಿ ತುಂಬ ಸುಖಪಡೆಯುವ ಸಹವಾಸಪ್ರಿಯತೆ ಆಕೆಯಲ್ಲಿದೆ. ಏಕಾಂತವೂ ಏಕಾಕಿಯಾಗಿರುವದೂ ಆಕೆಗೆ ಅಷ್ಟು ಸೇರದು. ಪರಿವಾರ, ಜನಸಂದಣಿ, ಕ್ಲಬ್ಬು, 'ಸಮಾಜ' 'ಮಂಡಳ'ಗಳ ಆಕರ್ಷಣ ಆಕೆಗೆ ಹೆಚ್ಚು. ಜಾತ್ರೆಯ ಜನಜಂಗುಳಿಯಲ್ಲಿ ತನ್ನನ್ನು ಮರೆತು ಹೆಣ್ಣು ಸಮರಸಳಾಗಿಬಿಡುತ್ತಾಳೆ. ನಾಟಕ, ಸಿನೇಮಾಕ್ಕೆ ಹೋಗುವ ಮುನ್ನ ಆಕೆಯು ಕೇಳುವ ಪ್ರಶ್ನೆ–'ಯಾವ ಕಥೆ? ಯಾವ ಚಿತ್ರ? ಎಷ್ಟು ಚೆಂದ?' ಎಂಬುದಲ್ಲ; ಯಾವ ನಾಟಕ ಸಿನೇಮಾಕ್ಕೆ ಬಹಳ ಜನ ನೋಡಲು ಹೋಗುತ್ತಾರೆಂಬುದೇ ಆಕೆಯ ಮಹತ್ವದ ಸಂಗತಿ. ಹಲವು ಮೆಚ್ಚಿದ ಪುಸ್ತಕವಾಗಲೀ, ಚಿತ್ರಪಟವಾಗಲೀ, ಉಪಹಾರಗೃಹವಾಗಲೀ, ಸೀರೆಯ ಮಾದರಿಯಾಲೀ ಆಕೆಗೆ ಬೇಕು–ಅದೂ

ಜನರೆಲ್ಲ ಮೆಚ್ಚಿಂದರೆಂದೇ ಬೇಕು. ಚರಖಾ–ಖಾದಿ ಹಿಂದೀ ಪ್ರಚಾರದಲ್ಲಿ ಹುಚ್ಚು ಹುಮ್ಮಸದಿಂದ ಮುಂದೆ ನುಗ್ಗುವ ಮಂದಿಯಲ್ಲಿ ಹೆಣ್ಣಿಗೆ ಹಿಂದೆ ಹಾಕುವವರು ಯಾರೂ ಇಲ್ಲ. ವಯೋವೃದ್ಧ ಹೆಂಗಸರು ಕೂಡ ಕಂಕುಳಲ್ಲಿ 'ಪಹಲೀಕಿತಾಬ' ಇಟ್ಟುಕೊಂಡು ಶಿಕ್ಷಣ ವರ್ಗಗಳಿಗೆ ಭಕ್ತಿಯಿಂದ ಓಡುವುದನ್ನು ನೀವು ನೋಡಿರಬಹುದು! ಹೀಗೆ ಗಂಡಿಗಿಂತಲೂ ಹೆಣ್ಣಿನ ಮೇಲೆ ಲೋಕಮತದ ಪ್ರಭಾವ ಬಹಳ ಬೇಗ ಆಗುತ್ತದೆ.

ಅದೇ ಮೇರೆಗೆ ಹೆಣ್ಣಿಗಿಂತ ಈ ಜನಮರುಳುತನ ಕಡಿಮೆಯೆನ್ನಬಹುದು. ಅದಕ್ಕೆ ಪ್ರತಿಯಾಗಿ ಹಲವು ಸಲ ಗಂಡು ತನ್ನದೇ ಆದ ಪಂತವನ್ನೋ ಪದ್ಧತಿಯನ್ನೋ ಆರಂಭಿಸುವದುಂಟು, ಅನುಸರಿಸುವದುಂಟು; 'ಮೂರನೇ ದಾರಿ'ಯ 'ಮುರಾರಿ'ಯು ಗಂಡಸೆಂಬುದು ನೆನಪಿಡಬೇಕು. ಹಾಗೆಯೇ ಗಂಡಿಗೆ ಏಕಾಂತಪ್ರಿಯತೆ ಹೆಚ್ಚು; ಒಂಟಿಯಾಗಿ ಇರಬಲ್ಲನು. ಜಗತ್ತಿನ ಸಾಧು–ಸಂತ, ಯೋಗಿ–ಮಹಂತರಲ್ಲಿ ಗಂಡೇ ಹೆಚ್ಚು. ಮೀರಾಬಾಯಿ, ಸೇಂಟ ಥೆರೆಸಾ ಮುಂತಾದವರು ಅಪವಾದ. ಯೋಗಸಾಧನೆ ತಪಾನುಷ್ಠಾನಗಳಿಗೆ ಅಗತ್ಯವಿರುವ ಏಕಾಂತ ಸೇವನೆಯು ಹೆಣ್ಣಿನ ಪ್ರಕೃತಿಗೇ ಒಗ್ಗದು. ಅಂತೆಯೇ ಆಕೆ ಗೃಹಿಣಿ. ವಾನಪ್ರಸ್ಥ, ಸಂನ್ಯಾಸ ಹೆಣ್ಣಿಗೆ ಮೀಸಲಿಲ್ಲ. ಇಲ್ಲಿ ಇನ್ನೊಂದು ವಿಚಾರ–ಹೆಣ್ಣಿಗೆ ಜತೆ ಒಡನಾಟ ಬೇಕು. ಅದೂ ಕೆಲಕಾಲದ ಮಟ್ಟಿಗೆ ಇತರ ಹೆಣ್ಣಿನೊಡನೆಯಾದರೂ; ಚಿರಕಾಲದ ಬಗ್ಗೆ ಗಂಡಿನೊಡನೇ ಬೇಕು. ವೈರಾಗ್ಯವೆತ್ತಿ ಯಾರಾದರೂ ಹೆಣ್ಣು ಯೋಗಿನಿಯಾದರೂ ಆಕೆಯ ಆರಾಧ್ಯದೈವತವು ರಾಮನೋ ಕೃಷ್ಣನೋ (ಹೆಚ್ಚಾಗಿ ಕೃಷ್ಣನೇ!) ಆಗಿರುವದು ಕಂಡುಬರುತ್ತದೆ. ಸ್ತ್ರೀ ಭಕ್ತರು ಸ್ತ್ರೀ ದೈವತವನ್ನು ಆರಾಧಿಸಿದ್ದು ಅಂದರೆ ತಮ್ಮ ಇಷ್ಟ ದೈವತವೆಂದು ಅನನ್ಯವಾಗಿ ಪೂಜಿಸಿದ್ದು ಬಹಳೇ ಕಡಿಮೆ. ಕಾಂತಭಕ್ತಿ, ಮಧುರಭಕ್ತಿ ಇವೆಲ್ಲ ಹೆಣ್ಣು ಹೃದಯದ ಅವತಾರಗಳು! ಇದು ಸಹಜವೇ ಸರಿ. ಹೆಣ್ಣಿಗೆ (ಇಹದಲ್ಲಿಯಾಗಲಿ, ಪರದಲ್ಲಿಯಾಗಲಿ,) ಯಾವಾಗಲು ಗಂಡಿನ ರಕ್ಷಣೆಯೂ ಆತನ ಮುಂದಾಳುತನವೂ ಅವಶ್ಯವೆನಿಸುತ್ತದೆ. ಅಂತೆಯೇ ಗಂಡನೇ ದೇವರಾಗಬೇಕು! ಕೊನೆಗೆ ಗಂಡುದೇವರಾದರೂ ಬೇಕು.

ಕುಂತಿಯ ಶಾಪ ನಿಜವೆ?

ಈ ಸಮಾಜಪ್ರಿಯತೆಯ ಇನ್ನೊಂದು ಪರಿಣಾಮವೆಂದರೆ, ಆಕೆಯ ವಾಚಾಳಿತನ. ಗಂಡಿಗಿಂತ ಹೆಣ್ಣು ಹೆಚ್ಚು ಮಾತುಗಂಟಿ. ಗುಟ್ಟು ರಟ್ಟು

ಮಾಡುವುದರಲ್ಲಿ ಹೆಣ್ಣು ಗಟ್ಟಿಗಳೆಂದು ಲೋಕಾಪವಾದವೇ ಇದೆ. ಹೆಣ್ಣಿನ ನಾಲಿಗೆಯಲ್ಲಿ ಎಳ್ಳು ನೆನೆಯದೆಂದು ಗಾದೆಯ ಮಾತೇ ಇದೆ. ಆದರೆ ರಹಸ್ಯಗಳನ್ನು ಬಚ್ಚಿಡುವಮಟ್ಟಿಗೆ ಹೆಣ್ಣು ಹೀಗೆ ದುರ್ಬಲಳೆಂದು ಹೇಳಲು ಬರುವಂತಿಲ್ಲ. ತನ್ನ ಎದೆಯಾಳದಲ್ಲಿ ಅಸಾಧ್ಯ ದುಃಖವನ್ನೂ ಗಂಭೀರ ರಹಸ್ಯವನ್ನೂ ಹುದುಗಿಸಿಟ್ಟುಕೊಂಡು ಆಯುಷ್ಯವೆಲ್ಲ ಆ ಕುರಿತು ಮಾತಿಲ್ಲವೇ ಕಳೆಯುವ ಹೆಂಗಸರಿದ್ದಾರೆ! ಮೂಕ ವೇದನೆಯನ್ನು ಸಹಿಸುವದಂತೂ ಗಂಡಿಗಿಂತ ಹೆಣ್ಣಿಗೇ ಹೆಚ್ಚು ಮೈಯುಂಡು ಹೋಗಿದೆಯೆಂಬುದನ್ನು ಹಿಂದೆಯೇ ಹೇಳಲಾಗಿದೆ. ಕರ್ಣನ ರಹಸ್ಯವನ್ನು ಕೊನೆಯತನಕವೂ ಬಚ್ಚಿಟ್ಟ ಕುಂತಿಯ ಗಂಭೀರಮೂರ್ತಿ ಮಹಾಭಾರತಕೇ ಹಿನ್ನೆಲೆಯಾಗಿ ನಿಂತಿದೆ.

ಹೆಣ್ಣಿನ ಹೃದಯ ಒಂದು ಸಮಾಧಿ–ಎಷ್ಟೋ ಸಂತಪ್ತ ಅಸಂತೃಪ್ತ ಆಶೆ–ಆಕಾಂಕ್ಷೆಗಳು, ವಿಕಾರ–ವೇದನೆಗಳು, ಹಂಬಲ–ಹಳಹಳಿಗಳು ಅಲ್ಲಿ ಹತ್ತಿಕ್ಕಿ ಹತವಾಗಿ ಬಿದ್ದಿವೆ. ಪುರುಷಪ್ರಧಾನವಾದ ಈ ಪ್ರಪಂಚದಲ್ಲಿ ಹೆಣ್ಣಿಗೆ ಈ ಮನೋದಮನ ಅನಾದಿಯಿಂದಲೂ ಮೈಯುಂಡು ಬಂದಿವೆ. 'ಒಳ ಒಳಗೆ ಕುದಿವ ಭೂಕಂಪ'ವಿದ್ದರೂ ಮೇಲೆ ಹುಲ್ಲಿನ ಹಸಿರು ತಂಪನ್ನೂ ಹೂವಿನ ನರುಗಂಪನ್ನೂ ಹಬ್ಬಿಸುವ ಭೂಮಿತಾಯಿಯಂತೆಯೇ ಹೆಣ್ಣಿನ ಹೃದಯ.

ಈ ದಮನ ಮಿಕ್ಕ ಹೆಣ್ಣುಗಳಿಗಿಂತಲೂ ಸುಸಂಸ್ಕೃತ, ಮೇಲ್ವರ್ಗದ ಗರತಿಯರಲ್ಲಿ ವಿಶೇಷ. ಇದಕ್ಕೆ ಚಿಕ್ಕದೊಂದು ಉದಾಹರಣೆ ಸಾಕು. ಸಮಾಜವು ಆಕೆಯ ಮೇಲೆಯೇ ಹೆಚ್ಚಾಗಿ ಹೇರಿದ ನಿಯಮ–ನಿರ್ಬಂಧಗಳ ನೈತಿಕ ಒತ್ತಾಯದಿಂದ ಹೆಣ್ಣಿನ ದಮನವು ಅತಿರೇಕವಾಗಿ ಆಕೆಯಲ್ಲಿ ಮಾನಸಿಕ ವಿಕೃತಿಗಳು ಒದಗಿಬರುವ ಸಂಭವ ಹೆಚ್ಚು. ಭೂತ ಸಂಚಾರ, ಸ್ವಪ್ನ ದೃಷ್ಟಾಂತ, ಮಜ್ಜಾತಂತುಗಳ ವಿಕೃತಿ–ಇವೆಲ್ಲ ಬಾಧೆಗಳಿಗೆ ಗಂಡಿಗಿಂತ ಹೆಣ್ಣು ಬಲಿಯಾಗುವದು ಹೆಚ್ಚು. ಇಂಥವುಗಳಲ್ಲಿ ಹುಚ್ಚಿನ ಉದಾಹರಣೆಯನ್ನೇ ತೆಗೆದುಕೊಂಡರೆ, ಸಾಧಾರಣವಾಗಿ ಕಂಡುಬರುವ ಒಂದು ಸಂಗತಿಯೇನೆಂದರೆ, ವೇಶ್ಯೆ ಅಥವಾ ಸ್ವೈರವೃತ್ತಿಯ ಕೀಳುತರಗತಿಯ ಒಂದು ಹುಚ್ಚಿಗಿಂತಲೂ, ಮೇಲ್ವರ್ಗದ ಸಾಧು ತರಗತಿಯ ಹುಚ್ಚಿಯ ವಿಕಾರಗೆಟ್ಟ ಬಡಬಡಿಕೆ ಹೆಚ್ಚು ಅಪದ್ಧ, ಅಶ್ಲೀಲ ಹಾಗೂ ಅಸಹ್ಯವೆನಿಸುವದು. ಅದೇಕೆ? ಕಾರಣ ಸ್ಪಷ್ಟವಿದೆ. ಹುಚ್ಚಿನಲ್ಲಿ ಮನೋದಮನದ ನಿಯಂತ್ರಣವೇ ಇಲ್ಲವಾಗಿ ಬಿಡುತ್ತದೆ. ಆಗ ಅದುವರೆಗಿನ ದಮಿತವಾದ

ವಿಕಾರಗಳೆಲ್ಲ ಹೊರಹೊಮ್ಮುತ್ತವೆ. ಮೇಲ್ವರ್ಗದ ಶಿಷ್ಟಾಚಾರ ಸುಸಂಸ್ಕಾರಗಳಲ್ಲಿ ಬೆಳೆದ ಹೆಣ್ಣಿನ ಮನೋದಮನ ಆತ್ಮಸಂಯಮ ಎಷ್ಟು ಪಾಲು ಬಿಗಿಯೋ, ಮಿಗಿಲೋ, ಅಷ್ಟುಪಟ್ಟು ಆಕೆ ಹುಚ್ಚಾಗಿದ್ದು, ಹೊರಬರುವ ವಿಕಾರಗೆಟ್ಟ ಬಡಬಡಿಕೆಯ ಅಶ್ಲೀಲ–ಅಸಹ್ಯತೆಗಳ ತೀವ್ರತೆ ಹೆಚ್ಚು. ಈ ಉದಾಹರಣೆಯಿಂದ ಹೆಣ್ಣಿಗೆ ದಮನ ಹೆಚ್ಚು ಎಂಬುದು ಮನದಟ್ಟಾಗುವದು.

ಇಂಗಿತಜ್ಞರ 'ಮುಖ ಸಾಮುದ್ರಿಕ'

ಈ ಆತ್ಯಂತಿಕ ಉದಾಹರಣೆಯನ್ನು ಬಿಟ್ಟರೆ ಹೆಣ್ಣಿನ ಮನೋದಮನ ಇನ್ನೊಂದು ಪರಿಣಾಮವನ್ನು ನಾವು ಸಾಮಾನ್ಯವಾಗಿ ಕಾಣುವದು ಆಕೆಯ ಭಾವವ್ಯಂಜನೆ. ಇದರ ಪ್ರತ್ಯಕ್ಷ ಪ್ರಭಾವವೆಂದರೆ ಆಕೆಯ ಭಾವವ್ಯಂಜನೆ, ಅಂದರೆ ವಿವಿಧ ಭಾವಭಂಗಿಗಳನ್ನು ಮುಖದ ಮೇಲೆ ವ್ಯಕ್ತವಾಗಿ ಬಿಂಬಿಸುವ ಬಗೆ, ಹೆಣ್ಣಿನ ನಾಲಿಗೆಯಷ್ಟೇ ಮುಖಭಾವವೂ ಚಂಚಲ. ಅಳು–ಅಂಜಿಕೆ, ನಗು–ನಲವು, ಮುನಿಸು–ಮೂದಲಿಕೆ, ಬೆರಗು–ಬೆದರಿಕೆ ಇವೆಲ್ಲ ಅಲೆ–ಅಲೆಯಾಗಿ, ಛಾಯೆ–ಛಾಯೆಯಾಗಿ ಹೆಣ್ಣಿನ ಮೋರೆಯಲ್ಲಿ–ಕಣ್ಣಿನಲ್ಲಿ ಮೂಡಿ ಆಡುವವು. ತಾತ್ಕಾಲಿಕ ಭಾವ ಪರಿವರ್ತನಗಳನ್ನು ಹೀಗೆ ಪ್ರವಾಹಿಯಾಗಿ, ಪ್ರಕಟವಾಗಿ, ಪ್ರತಿಬಿಂಬಿಸುವ ಶಕ್ತಿಯೊಡನೆಯೇ ಪರರ ಮನೋಗತವನ್ನೂ, ಅಂತರಂಗದ ಇಂಗಿತವನ್ನೂ, ಅವರವರ ಮುಖಲಕ್ಷಣಗಳಿಂದ ತಟ್ಟನೆ ತಪ್ಪದೇ ಊಹಿಸುವ ಶಕ್ತಿಯೂ ಹೆಣ್ಣಿನಲ್ಲಿ ಗಂಡಿಗಿಂತಲೂ ವಿಶೇಷವಾಗಿ ಕಂಡುಬರುತ್ತದೆ. ತನ್ನ ಒಡನಾಡಿ ಹೆಂಗಸರ ಮುಖಮುದ್ರೆ–ಕಣ್ಸನ್ನೆಗಳಿಂದ ಅವರ ಎದೆಯಾಳದ ಭಾವನೆಗಳನ್ನು ಊಹಿಸಿಕೊಳ್ಳುವಂತೆಯೇ ಗಂಡಸಿನ ಅಂತರಂಗವನ್ನು ಕೂಡಲೇ ಅರಿತುಕೊಳ್ಳುವ ಈ ಹದ ಹೆಣ್ಣಿಗೆ ಹೆಚ್ಚಾಗಿ ಸಾಧ್ಯವಿದೆ. ಗಂಡನ ಮುಖಮುದ್ರೆಯಿಂದಲೇ ದಿನದ ಸುಖದುಃಖಗಳ 'ಗ್ರಹಚಾರ'ದ ಗಣಿತಹಾಕುವ 'ಸಾಮುದ್ರಿಕ'ವು ಹೆಣ್ಣಿಗೆ ಒಳ್ಳೇ ಹಸ್ತಗತವಾಗಿದೆ. ಅಂತೆಯೇ ತನ್ನ ಸಿಟ್ಟು ಹೊರಹೊಮ್ಮುವ ಮೊದಲೇ ಹೆಂಡತಿಯು ಅದನ್ನು ಮರೆಯಿಸುವದನ್ನೂ, ಸಂಶಯವು ತಲೆಯೆತ್ತುವ ಮೊದಲೇ ಅವರ ನಿರಸನದ ಮಾತನ್ನು ಹೆಣ್ಣು ಸಹಜವಾಗಿ ಆಡುವದನ್ನೂ, ತನ್ನ ಬೇಕು–ಬೇಡಗಳ ಹೊಲವರಿತು ಮುಂಚಿತವಾಗಿಯೇ ಹಾಗೆ ನಡೆಯುವದನ್ನೂ ಕಂಡು ಎಷ್ಟೋ ಗಂಡಂದಿರು ಬೆರಗಾಗುವದುಂಟು.

ಇದರ ಇನ್ನೊಂದು ಫಲವೆಂದರೆ-ಚತುರ ಗಂಡಿಗಿಂತಲೂ ಚತುರ ಹೆಣ್ಣಿಗೆ ಇತರ ಹೆಣ್ಣುಗಳ ಹಾಗೂ ಹೆಚ್ಚಾಗಿ ಇತರ ಗಂಡಸರ ಸ್ವಭಾವದ ಪರಿಜ್ಞಾನವು ಬಹುಬೇಗ ಆಗುತ್ತದೆ. ತನ್ನ ಗಂಡನ ಇಷ್ಟ ಮಿತ್ರರಲ್ಲಿ ದುಷ್ಟನಾರು, ಶತ್ರುವಾರು ಎಂಬುದನ್ನು ಜಾಣ ಹೆಂಡತಿ ಮೊದಲೇ ಊಹಿಸುತ್ತಾಳೆ. ತನ್ನ ಮನೋಗತವನ್ನು ಹೆಣ್ಣು ಹೇಗೆ ಕಾಣಿಸಿ, ಹೆರವರನ್ನು -ಹೆಚ್ಚಾಗಿ ಗಂಡಸನ್ನು-ನಂಬಿಸಬಲ್ಲಳೋ ಹಾಗೆಯೇ ಹೆರವರ ಹಾಗೂ ಗಂಡಸಿನ ಬಹಿರಂಗದ ಹಾವಭಾವಗಳ ಆಳಕ್ಕೆ ಇಣಿಕಿ ನೋಡಿ ಹೆಣ್ಣು ಆತನ ಅಂತರಂಗವನ್ನು ಅರಿಯಬಲ್ಲಳು. ಆದ್ದರಿಂದ ಹೆಣ್ಣು ಪರರನ್ನು ವಂಚಿಸುವಷ್ಟು ತಾನು ಪರರಿಂದ ವಂಚಿತಳಾಗುವದಿಲ್ಲ. ಇದೇನು ಕಟ್ಟುನಿಟ್ಟು, ನಿಯಮವಲ್ಲ. ತೀರ ಅಪರಿಚಿತ ವ್ಯಕ್ತಿಗಳಿಂದ ಹೆಣ್ಣು ಸಂಪೂರ್ಣ ಮೋಸ ಹೋಗುವದುಂಟು,-ಹೋದದ್ದುಂಟು. ರಾವಣನ ಸನ್ಯಾಸವನ್ನು ಸಾಧುವೆಂದು ಸೀತೆ ನಂಬಿ ಮೋಸ ಹೋಗಲಿಲ್ಲವೇ?

ಆದರೂ ಒಮ್ಮೆ ಪರಿಚಿತರಾದಮೇಲೆ ಪರಿವಾರದವರಾದವರಲ್ಲಿ ಗಂಡಿಗಿಂತ ಹೆಣ್ಣು ಇನ್ನೊಬ್ಬರನ್ನು ಹೆಚ್ಚು ಅರಿತುಕೊಳ್ಳಬಲ್ಲಳು. ಇದರಿಂದ ಗಂಡಿಗಿಂತಲೂ ಹೆಣ್ಣನ್ನು ಮೋಸಗೊಳಿಸುದು ಹೆಚ್ಚು ಬಿಗಿಯಾಗುವದು. ಇದರ ಕಟು ಅನುಭವ ಎಷ್ಟೋ ಗಂಡಂದಿರಿಗೂ ಬಾರದೇ ಇಲ್ಲ. ತನ್ನ ತಪ್ಪು ಮುಚ್ಚಿಕೊಳ್ಳಲು ಎಷ್ಟೇ ಅಚ್ಚುಕಟ್ಟು ಸುಳ್ಳನ್ನು ಹೆಣೆದರೂ ಅದರ ಬಲೆಯೆಲ್ಲ ಹೆಂಡತಿಯ ಕಣ್ಣೆದುರು ಕಡಿದುಹೋಗುವ ಕಂಗೆಡಿಸುವ ಪ್ರಸಂಗಗಳು ಎಷ್ಟೋ ಗಂಡಂದಿರಿಗೆ ಬಂದಿವೆ!

ಈ ಸಹವಾಸದ ಪ್ರಿಯತೆ ಅಥವಾ ಸಾಮಾಜಿಕತೆಯೊಂದಿಗೇ ಹೆಚ್ಚು ಕಡಿಮೆ ಕೂಡಿರುವ ಗುಣವೆಂದರೆ-ಭೀರುತನ, ಅಂಜಿಕೆ. ಅಂಜಿಕೆಯದೇ ಇನ್ನೊಂದು ಛಾಯೆಯೆಂದರೆ-ಹಿಂಜರಿಕೆ, ಹಿಂದುಳಿಯುವಿಕೆ, ಯಾವದೇ ಸಂಗತಿಯಲ್ಲಿ ತಾನೇ ಉಪಕ್ರಮ ಮಾಡದಿರುವಿಕೆ. ಜೀವನದಲ್ಲಿ ಉಪಕ್ರಮ ಆರಂಭಗಳು ಗಂಡಿನ ಹೊಣೆ ಅನುಕರಣ, ಅನುಸರಣ ಹೆಣ್ಣಿನಹೆಜ್ಜೆ. ಹೀಗೆ ಗಂಡಿಗೆ ಮುಂದಾಗಲು ಬಿಡುವದು. ಗಂಡಿನಿಂದಲೇ ಮೊದಲು ಹೆಜ್ಜೆಯನ್ನು ಬಯಸುವದು, ಪ್ರೇಮ ಪ್ರಪಂಚದಲ್ಲಿಯೂ ಅಷ್ಟೇ ಸ್ಪಷ್ಟವಾಗಿ ಕಂಡುಬರುತ್ತದೆ. ಗಂಡಿಗೆ ಸಲ್ಲುವ ಪ್ರಾಧಾನ್ಯ-ಪ್ರಭುತ್ವಗಳ ಅನುವು ಹೆಣ್ಣಿನ ಹಿಡಿಕೆಯಲ್ಲಿಯೇ ಇದೆ. ನೂರಕ್ಕೆ ತೊಂಭತ್ತು ಉದಾಹರಣೆಗಳಲ್ಲಿ ಗಂಡು 'ಪ್ರೀತಿಮಾಡುತ್ತಾನೆ!' ಹೆಣ್ಣು 'ಪ್ರೀತಿ

ಮಾಡಲ್ಪಡುತ್ತಾಳೆ' ಅಥವಾ ಗಂಡಿಗೆ ತನ್ನನ್ನು ಪ್ರೀತಿಸಲು ಬಿಡುತ್ತಾಳೆ. ಹೆಣ್ಣಿನ ಸ್ವಭಾವದ ಈ ಮರ್ಮವನ್ನು ಅರಿಯದ ಗಂಡು ಕೆಲವೊಮ್ಮೆ ದಾರುಣ ದುರಂತಕ್ಕೆ ಗುರಿಯಾಗುವದುಂಟು.

ಹೊಸ ಪ್ರೇಮದ ಉನ್ಮಾದದಲ್ಲಿ ಕಾಮನೆಯ ನವೀನತೆಯ ಮದ್ಯವು ಗಂಡಿಗೆ ತನ್ನ ಪ್ರೇಮವನ್ನು ಹೆಣ್ಣಿನೆದುರು ವ್ಯಕ್ತ ಮಾಡಲು ಧೈರ್ಯವೀಯುವಷ್ಟು ಉದ್ರೇಕಗೊಳಿಸದೇ ಹೋದರೆ ಆ ಬಡಪಾಯಿಯು ಮನವಿದ್ದರೂ ಮನ ಬಿಚ್ಚಲು ಬಾಯಿ ಇಲ್ಲದೇ, ಅವನ ಪ್ರೇಮಯಾಚನೆಗಾಗಿಯೇ ದಾರಿ ಕಾಯುತ್ತಿರುವ ಮುಗುದೆಯಾದ ಹೆಣ್ಣನ್ನು ವರ್ಷಗಟ್ಲೆ ಕ್ರೂರವಾದ ಪ್ರತೀಕ್ಷೆಯಲ್ಲಿಯೇ ನಿಲ್ಲುವಂತೆ ಮಾಡಬಹುದು. ಇತ್ತ ಮದುವೆಯ ಸಾಹಸಕ್ಕೆ ಎಡೆಯಿಲ್ಲದೇ ಮಡದಿಯಾಗೆಂದು ಆಕೆಯ ಕೈ ಹಿಡಿಯಲು ಧೈರ್ಯಪಡದೇ ಎಣಿಕೆ ಹಾಕುತ್ತ ಗಳಿಕೆ ಮಾಡುತ್ತ ಮೀನ-ಮೇಷ-ನೋಡುತ್ತ ಬದುಕಿನ ಪ್ರಯೋಗಗಳಲ್ಲಿಯೇ ಬಾಳುವ ಸಂಧಿಯನ್ನು ಕಳೆದುಕೊಳ್ಳುತ್ತ ಗಂಡು ಕಾಲಹರಣ ಮಾಡುತ್ತಿದ್ದಾಗಲೇ, ಅವನಿಗಾಗಿ ಹಾರೈಸಿ ಸೋತ ಹೆಣ್ಣು ಗಂಭೀರಳಾಗಿ ಬುದ್ಧಿ ಕಲಿತು ಮತ್ತೊಬ್ಬ ವ್ಯವಹಾರಿಕ ಎದೆಗಾರರನ್ನು ವರಿಸಿ, ತನ್ನ ಒಂಟಿಬಾಳಿನ ಒಗಟನ್ನು ಮದುವೆಯ ಗಂಟಿಕ್ಕಿಕೊಂಡು ಬಿಡಿಸಿಕೊಳ್ಳಬಹುದು! ಹಾಗಾಗದಿರುವಂತೆ ಗಂಡು ಉಪಕ್ರಮದ ಎದೆಗಾರಿಕೆಯನ್ನು ಮೊದಲೇ ತಕ್ಕ ಸಮಯಕ್ಕೆ ಕಾಣಿಸಬೇಕು. ಇಂಗಿತಜ್ಞಳಾದ ಹೆಣ್ಣು ಗಂಡಿನ ಅಂತರಂಗವನ್ನು ಅಂತರಂಗದಲ್ಲಿಯೇ ಅರಿತಿದ್ದರೂ ಬಹಿರಂಗದಲ್ಲಿ ಆತನೇ ಮೊದಲು ತನ್ನ ನಚ್ಚು-ಮೆಚ್ಚನ್ನು ನಿಚ್ಚಳವಾಗಿ ನಡೆನುಡಿಯಲಿ ಒಡಮೂಡಿಸಬೇಕೆಂದೇ ಹೆಣ್ಣಿನ ಹವಣಿಕೆ ಇರುತ್ತದೆ.

ಈ ಹವಣಿಕೆ ಕಾರಣ ಹೆಣ್ಣಿನ ಅಂಜಿಕೆ. ಒಂದೆಡೆಗೆ ಮಿತಿಮೀರಿದ ಆತ್ಮಗೌರವವಿದ್ದರೆ, ಇನ್ನೊಂದೆಡೆಗೆ ಅಷ್ಟೇ ಆತ್ಮವಿಶ್ವಾಸದ ಅಭಾವವಿರುತ್ತದೆ. ಆಕೆಗೆ ತನ್ನ ನಿರ್ಧಾರ ತನಗೇ ಇರುವದು ಕಡಿಮೆ. ದೇಹದ ದುರ್ಬಲತೆಯೂ, ದಾನದ ಪರತಂತ್ರವೂ ಆಕೆಯ ಹಂಬಲದಲ್ಲಿ ಯಾವಗಾಲೂ ಹೊರೆಯಾಗಿ ನಿಲ್ಲುತ್ತವೆ. ಈ ಶಾರೀರಿಕ ವ್ಯವಹಾರಿಕ ಪರಾವಲಂಭನೆಯು ಆಕೆಯ ಸಾಹಸದ ಮೊನೆಯನ್ನೆ ಸವೆದು ಮೊಂಡ ಮಾಡುತ್ತದೆ. ಬಂಡಾಯದಿಂದಲೂ ಹೊಸ ಉಪಕ್ರಮದಿಂದಲೂ ಹಿಂಜರಿಯುವಂತೆ – ದೂರ ಹಿಂದುಳಿಯುವಂತೆ ಮಾಡುತ್ತವೆ. ಅಸಹ್ಯ ಅನ್ಯಾಯ ದಡಿಗೂ ಮೂಕವಾಗಿ ಬಾಳನ್ನು ಸಾಗಿಸುವ, ದೈನ್ಯ-ದುಃಖದಲ್ಲಿಯೂ ದಿನ

ದೂಡುವ ಹೆಣ್ಣಿನ ಸಹನೆಗೆ ಹೊಸ ಚಟುವಟಿಕೆಯ ಕುರಿತು ಇರುವ ಅಳುಕೇ ಕಾರಣವೆನ್ನಬಹುದು.

ಹಿಂಬಾಲಿಕೆಯ ಬಾಲಿಕೆ

ಇದರಿಂದಲೇ ಗಂಡಿಗಿಂತ ಹೆಣ್ಣು ಹೆಚ್ಚು ಪರಂಪರಾಪ್ರಿಯಳು; ಸಂಪ್ರದಾಯ ಶರಣಳು; ರೂಢಿಮೂಢಳು; ಅಂತೆಯೇ ಗತಾನುಗತಿಕಳು. ಗಂಡಿಗಿಂತಲೂ ಹೆಚ್ಚು ಧಾರ್ಮಿಕಳು. ವಿಧಿನಿಯಮ-ವ್ರತವೈಕಲ್ಯಗಳ ಬಂಧನಗಳಲ್ಲಿ -ಬಿಗಿದುಳಿಯುವದು ಹೆಣ್ಣಿಗೆ ಬೇಕೆನಿಸುವದು, ಪರಿಚಿತವಾದದನ್ನೇ ಅನುಚರಿಸಿ ಪ್ರಸಿದ್ಧವಾದುದನ್ನೇ ಅನುಕರಿಸಿ ಪುರಾತನವನ್ನೇ ಆಚರಿಸುತ್ತಾ ಹೆಣ್ಣು ಪ್ರಶಸ್ತವಾಗಿ ಬಾಳುವಳು. ಹೊಸ ಮಾಟ ಹೊಸ ಮಾದರಿಗಳನ್ನು ಆಕೆ ಎತ್ತಿಕೊಳ್ಳುವದಾದರೂ ಒಮ್ಮೆಗೇ ಅಲ್ಲ, ಒಳಿತೆಂದು ಅಂತೂ ಅಲ್ಲವೇ ಅಲ್ಲ, ಹಲವು ಹೆಂಗಸರು ಹೋದ ಹಾದಿಯಲ್ಲಿಯೇ ಆಕೆಯೂ ಹುರುಪಿನಿಂದ ಹೆಜ್ಜೆ ಇಡುವಳು. ಒಟ್ಟಾರೆ ಹೆಣ್ಣಿಗೆ ರೂಢಿಬಲ ಬೇಕು. ಹಳೆಯ ರೂಢಿಯಿರಲಿ; ಹಲವರ ರೂಢಿಯಿರಲಿ; ಈ ಸನಾತನ ವೃತ್ತಿಯು ಎಂಥ ಆಧುನಿಕ ಅದ್ಯಶಿಕ್ಷಿತ-ಸದ್ಯಸಂಸ್ಕೃತ ಹೆಣ್ಣಿಗೂ ಬಿಟ್ಟಿಲ್ಲ. ಯಾವ ಹೊಸ ಚಳವಳಿಯನ್ನು ಹೆಣ್ಣು ಮೊದಲು ಎಷ್ಟು ಸಂದೇಹದಿಂದ ನೋಡುವಳೋ ಕೊನೆಗೆ ಅಷ್ಟೇ ಸಂಭ್ರಮದಿಂದ ನಡೆಸುವಳು. ಅಂತೆಯೇ ಹೊಸ 'ವಾದ'ಗಳಿಗೂ ಹೊಸ 'ವೈಶಿಷ್ಟ್ಯ'ಗಳಿಗೂ ಹೆಣ್ಣು ಗಂಡಿಗಿಂತ ಹೆಚ್ಚು ಲಗು ಮನಸೋಲುವಳು. ಸಾಧುಸಂತರ ಶಿಷ್ಯಮಂಡಳಿಗಳಲ್ಲಿಯೂ ನಿಸರ್ಗೋಪಚಾರ, ಮಾನಸೋಪಚಾರ ಮುಂತಾದ ಹೊಸ ಚಿಕಿತ್ಸೆಗಳ ಬೇನಿಗರಲ್ಲಿಯೂ ಗಂಡಿಗಿಂತ ಹೆಣ್ಣಿನ ಸಂಖ್ಯೆ ಬಹಳ.

ಗಂಡು ಸರ್ವಸಾಧಾರಣಪಾತಳಿಯಿಂದ ಒಮ್ಮೆಲೇ ವಿಚಾರವಿಲ್ಲದೇ ದೂರಾಗಬಲ್ಲನು; ದುಡುಕಬಲ್ಲನು. ಆದರೆ ಹೆಣ್ಣು ಸಾಮಾನ್ಯತೆಯ ಹಾಗೂ ವ್ಯಾವಹಾರಿಕತೆಯ ಹದವನ್ನು ಬಿಟ್ಟು ಕದಲಲು ಒಲ್ಲಳು. ಇದರ ಇನ್ನೊಂದು ಪರಿಣಾಮವೆಂದರೆ, ಗಂಡು-ಗಂಡಿನಲ್ಲಿ ಎಷ್ಟು ಭೇದ-ವೈವಿಧ್ಯಗಳಿರುವವೋ ಅಷ್ಟು ಹೆಣ್ಣು-ಹೆಣ್ಣಿನಲ್ಲಿ ಸಹಸಾ ಕಂಡುಬರುವದಿಲ್ಲ. ಒಂದು ಹೆಣ್ಣನ್ನು ಅರಿತುಕೊಂಡರೆ ಹೆಚ್ಚು ಕಡಿಮೆ ಆಕೆಯ ಜಾತಿಯ ಎಲ್ಲರನ್ನು ತಿಳಿಕೊಂಡಂತೆಯೇ. ತೋರಿಕೆಯ ಭೇದವಿದ್ದರೂ ಮೂಲದಲ್ಲಿ ಹೆಣ್ಣು ಜನವೆಲ್ಲ ಒಂದೇ ಪಡಿಯಚ್ಚಿನಲ್ಲಿ ಮೂಡಿದಂತೆ ಇರುವರು. ಆದರೆ ಗಂಡಿನ ಬಗೆ ಬೇರೆ. ಪ್ರಯೋಗ, ಪ್ರಯತ್ನ,

ಪಾಪ್ರಂಚಿಕ ಸಂದರ್ಭ, ಪರಾಕ್ರಮದ ಅವಶ್ಯಕತೆ ಇವೆಲ್ಲವುಗಳ ಒತ್ತಾಯದಿಂದ ಗಂಡಿನ ಪ್ರಕೃತಿಯಲ್ಲಿ ಬಹಳ ಪಲ್ಲಟಕ್ಕೆ ಎಡೆಯಾಗಿದೆ. ಆದ್ದರಿಂದ ಗಂಡಿನಂತೆ ಗಂಡು ಇರುವದೂ ತೋರುವದೂ ಕಡಿಮೆ. ಬದಲಾಗುವ ಪರಿಸ್ಥಿತಿಗಳೂ, ಉದರ ನಿರ್ವಾಹದ ಉಪಯೋಗ ಉದ್ಯೋಗಗಳೂ, ಅವುಗಳಿಂದ ಮಾರ್ಪಟ್ಟ ಶಿಕ್ಷಣ ಸಂಸ್ಕಾರಗಳ ಬೇರ್ಪಾಟಗಳೂ ಗಂಡಿನ ವ್ಯಕ್ತಿತ್ವವನ್ನೂ ಬಿಡಿಬಿಡಿಯಾಗಿ-ಬಹಳ ಮಾದರಿಯಾಗಿ ರೂಪಗೊಳಿಸಿವೆ. ಆದರೆ ಇದೆಲ್ಲ ಸ್ಥಿತಿ-ಗತಿಯ ವ್ಯತ್ಯಾಸ ಹೆಣ್ಣಿನ ಪಾಲಿಗೆ ಹಿಂದಿನಿಂದಲೂ ಬಂದಿಲ್ಲ. ಪೂರ್ವಾರ್ಜಿತವಾಗಿ ಬಂದ ಮನೆಗೆಲಸವೇ ಆಕೆಯ ಪ್ರಧಾನ ಉದ್ಯೋಗ. ಅನುರೂಪ ವರನನ್ನೋ ವಲ್ಲಭನನ್ನೊ ಹುಡುಕಿ ಪಡಕೊಂಡು ತನ್ನ ಮಕ್ಕಳನ್ನು ಸಂಗೋಪಿಸುವದೇ ಆಕೆಯ ಅನಾದಿಕಾಲದ ಅಗತ್ಯದ ಕಾರ್ಯ. ಹೆಣ್ಣು ಜಾತಿಗೆಲ್ಲ ಬಹಳವಾಗಿ ಇದೊಂದೇ ಉದ್ಯೋಗ ಕಾರ್ಯ ಮೀಸಲಾಗಿ ಹೂಡಿಬಂದ ಮೂಲಕ, ಎಲ್ಲ ಹೆಣ್ಣು ಒಂದೇ ಎರಕದಲ್ಲಿ ಒಂದೇ ಅಚ್ಚಿನಲ್ಲಿ ಹಾಕಿ ತೆಗೆದಂತೆ ಸಾವಿರಾರು ವರ್ಷಗಳಿಂದಲೂ ಬೆಳೆದು ಬಂದಿದ್ದಾರೆ. ಇದರಿಂದ ಸಾಮಾನ್ಯವಾಗಿ ಹೆಣ್ಣಿನ ಸ್ವರೂಪ ಬೇರೆಬೇರೆಯಾಗಿದ್ದರೂ ಸ್ವಭಾವ ಒಂದೇ ಪರಿಯಾಗಿರುತ್ತದೆ. ಆಕೃತಿ ಭಿನ್ನವಾದರೂ ಪ್ರಕೃತಿ ಒಂದೇ. ಮೋರೆಯ ಚಂದ ಬಗೆಬಗೆಯಾದರೂ ಮನದ ಬಗೆಯ ಅಂದ ಒಂದೇ ತೆರನಾಗಿದೆ.

ಗಂಡು ಅನೇಕ ನಿಷ್ಠನೇಕೆ ?

ಗಂಡಿನ ಭೃಂಗವೃತ್ತಿಗೆ-ಪ್ರೇಮದಲ್ಲಿ ಏಕನಿಷ್ಠೆ ಇರದಿರುವದಕ್ಕೆ ಇದೂ ಒಂದು ಕಾರಣವಿರಬಹುದೇನೋ! ಗಂಡು ಹೆಣ್ಣಿನಿಂದ ಹೆಣ್ಣಿಗೆ, ಹಗುರಾಗಿ ಹಳವಳವಿಲ್ಲದೇ ಪ್ರೀತಿಗಾಗಿ ಹಾಯುವುದನ್ನು ಕಂಡರೆ, ಅವನಿಗೆ ಪ್ರೀತಿಯ ಮಟ್ಟಿಗೆ ಹೆಣ್ಣು ಹೆಣ್ಣಿನ ಭೇದವಿಶೇಷವೆನಿಸುವದಿಲ್ಲವೆಂತಲೇ ಹೇಳಬೇಕಾದೀತು. ನಾವಿನ್ಯದ ಹಾಗು ಲಾವಣ್ಯದ ಹೊಸ ಮೋಹ ವಾಡಿಕೆಯಿಂದ ಕಡಿಮೆಯಾದ ಮೇಲೆ ಭೃಂಗವೃತ್ತಿಯ ವಿಲಾಸಿ ಗಂಡಿಗೆ ಹೊಸ ವಲ್ಲಭೆಯ ದೇಹದಲ್ಲಿಯೂ ಹಳೇ ವಲ್ಲಭೆಯ ಆತ್ಮವೇ ಅನುಭವಕ್ಕೆ ಬಂದು ಇನ್ನೂ ಹೊಸ ಕೆಳದಿಯನ್ನು ಹುಡುಕಲು ಆತನು ಆತುರನಾಗುವನು. ಇಂಥ ವಿಟಪುರುಷನಿಗೆ ಹೊಸದೊಂದು ಹೆಸರನ್ನಷ್ಟೇ ನೆನಪಿಡುವ ಆಯಾಸವೇ ಹೊರತು ಅವರು ಪ್ರಣಯ ತಂತ್ರದಲ್ಲಿ ಯಾವ ಹೊಸ ಪಾಠವನ್ನೂ ಕಲಿಯಬೇಕಾಗುವದಿಲ್ಲ!

ಈ ದೃಷ್ಟಿಯಿಂದ ನಮ್ಮ ಭಾರತೀಯ ಲಾಕ್ಷಣಿಕರು ನಾಯಕಾ ನಾಯಿಕಾ ಭೇದವನ್ನು ಕಲ್ಪಿಸುವಾಗಲೂ ಇದೇ ಅನುಭವವನ್ನೇ ಗಮನಿಸಿದಂತಿದೆ. ಶರೀರ ಸೌಂದರ್ಯದ ಮಟ್ಟಿಗೆ ಪದ್ಮಿನಿ, ಶಂಕಿನಿ, ಹಸ್ತಿನಿ ಮುಂತಾದ ಮಾದರಿಗಳನ್ನು ಕಾಮಸೂತ್ರಕಾರರು ಕಲ್ಪಿಸಿದರೂ ಸ್ವಭಾವಭೇದದ ಮಟ್ಟಿಗೆ ಎರಡೇ ಮಾದರಿಗಳನ್ನು ಅವರು ಬಣ್ಣಿಸಿದರು–ಒಂದು ಮುಗ್ಧೆ; ಇನ್ನೊಂದು ಪ್ರಗಲ್ಭೆ. ಹಾಗೆಯೇ ಪ್ರೇಮಿಕೆಯರೂ ಇವೆರಡಕ್ಕೆ ಸರಿಹೋಗುವಂತೆ ಎರಡೇ ವಿಧವಾಗಿ ಗಣಿಸಲಾಗಿದೆ – ಒಂದು ಅಭಿಸಾರಿಕೆ. ಸರಳ–ಸಹಜ. ದಿಟ್ಟತನದಲ್ಲಿ ಪ್ರೇಮ ಪರವಶವಳಳಾಗಿ ತನ್ನ ರಮಣನಿದ್ದೆಡೆಗೆ ನಡೆದು ಹೋಗುವವಳ ಮಾದರಿ; ಇನ್ನೊಂದು ವಾಸಕಸೆಜ್ಜೆ ಪ್ರಗಲ್ಭತೆಯ ಪ್ರೌಢಿಮೆಯಲ್ಲಿ ಮಾನಿನಿಯಾಗಿ ತನ್ನ ಅಂತಃಪುರದಲ್ಲಿಯೇ ರಮಣನಿಗಾಗಿ ಕಾಯುವವಳ ಮಾದರಿ.

ಆದರೆ ನಾಯಕರಲ್ಲಿ ಮಾತ್ರ ನಾಲ್ಕು ವಿಧ ಮಾಡಲು ಅನುವಾಯಿತು. ನಾಯಕತ್ವಕ್ಕೆ ಅವಶ್ಯವಾದ ಧೀರತನ. ಒಂದು ಸಾಮಾನ್ಯ ಧರ್ಮವಾಗಿಟ್ಟುಕೊಂಡು, ಉದಾತ್ತ, ಶಾಂತ ಮತ್ತು ಲಲಿತ ಎಂಬ ನಾಲ್ಕು ಪ್ರಕಾರದ ಪೌರುಷಭೇದಗಳನ್ನು ನಮ್ಮ ಪೂರ್ವಿಕರು ಬಣ್ಣಿಸಿದರು. ಇವುಗಳಲ್ಲಿಯೂ ಕಲಬೆರಕೆಯ–ಹಲಬೆರಕೆಯ ರುಪಗಳೂ ಹೇರಳವಾಗಿ ಗಂಡಿನಲ್ಲಿ ಕಂಡುಬರುತ್ತವೆ.

ಹೀಗೆ ಹೆಣ್ಣಿಗೆ ಸಾಧಾರಣವಾಗಿ ಒಂದೇ ಸತ್ವ–ಒಂದೇ ಬಗೆಯ ವ್ಯಕ್ತಿತ್ವ ಪರಂಪರೆಯಿಂದ ಬೆಳೆದು ಬಂದಿದೆ. ಇದೇನು ತ್ರಿಕಾಲಬಾಧಿತವೇನೂ ಅಲ್ಲ. ಸಾಮಾಜಿಕ ಜೀವನದಲ್ಲಿ ಆಮೂಲಾಗ್ರಪರಿವರ್ತನವಾದರೆ, ಆರ್ಥಿಕವ್ಯವಸ್ಥೆಯಲ್ಲಿ ಪುನರ್ಘಟನೆ ಯಾದರೆ ಕ್ರಮೇಣ ಹೆಣ್ಣಿನ ಬದುಕಿನ ಹೊಸದೊಂದು ಪರಂಪರೆಯು ಬೆಳೆದು ಸಾಗಿ ಹೆಣ್ಣು ಸತ್ವದ ಹೊಸ ಮಾದರಿ ಮಾರ್ಪಡಲು ಮುಂದೆ ಯಾವ ಅಡ್ಡಿಯೂ ಇಲ್ಲ. ಆದರೆ ಇಂದಿಗೆ ಇದೇ ವಸ್ತುಸ್ಥಿತಿ. ಗಂಡಿನ ವ್ಯಕ್ತಿತ್ವದ ವೈಶಿಷ್ಟ್ಯ ಪೂರ್ಣವಾದ ಪ್ರಕಾರಗಳು ಹೆಣ್ಣಿನಲ್ಲಿ ಕಂಡು ಬರುವದಿಲ್ಲ. ಇದರ ಒಂದು ಅನುಕೂಲ ಮೇಲೆ ಹೇಳಿದಂತೆ ಗಂಡಿನ ಭೃಂಗವೃತ್ತಿಗೂ ಸ್ತ್ರೀಸಹವಾಸದ ರುಚಿಭೇದಕ್ಕೂ ಕಾರಣವಾಗಿದ್ದರೆ, ಇನ್ನೊಂದು ಪ್ರತಿಕೂಲ ಹೆಣ್ಣಿನ ಬಾಳಿಗೆ ಬಾಧಕವಾಗಿದೆ. ಹೆಣ್ಣಿಗೆ ಎಲ್ಲ ಗಂಡೂ ಒಂದೇ ಬಗೆಯಾಗಿ ತೋರುವದೇ ಇಲ್ಲ. ಪರಿಚಯ–ಪ್ರಣಯಪ್ರೇಮಗಳು ಹೆಜ್ಜೆ ಹೆಜ್ಜೆಯಾಗಿ ಬೆಳೆದು ಒರ್ವ ಗಂಡಿನೊಡನೆ

ಆಕೆಯ ಬಾಳು ಹೊಂದಿಕೊಂಡು ಹದಗೊಂಡು ಸಾಗುವಾಗ ಒಮ್ಮೆಲೇ ಆತನಿಂದ ಅಗಲಿ ಪ್ರೇಮ ಭಂಗವನ್ನು ಪಟ್ಟು ಬದುಕುವ ಪ್ರಸಂಗ ಬಂದರೆ ಹೆಣ್ಣು ಅಸಹ್ಯಯಾತನೆಯನ್ನು ತುಂಬಿಕೊಳ್ಳಲು ಅಶಕ್ಯವಾದ ಕೊರತೆಯನ್ನು ಅನುಭವಿಸುತ್ತಾಳೆ. ಹೊಸದೊಂದು ಪುರುಷ ಸಹವಾಸ ಆಕೆಗೆ ಅತ್ಯಂತ ದುಷ್ಕರವಾಗುತ್ತದೆ. ಹೊಸ ಗಂಡುವ್ಯಕ್ತಿತ್ವದ ಹಿಡಿತವನ್ನು ಅರಿತು ಕೊಳ್ಳುವದು ಬಹಳೇ ಕಷ್ಟವಾಗುತ್ತದೆ. ಒಂದು ವಿಶಿಷ್ಟ ವ್ಯಕ್ತಿಯ ಪ್ರತಿಮೆಯು ಒಮ್ಮೆ ಆಕೆಯ ಹೃದಯದಲ್ಲಿ ಬಿಂಬಿಸಿ ನಿಂತರೆ ಆಕೆ ಆಯುಷ್ಯವನ್ನೆಲ್ಲ ಅದರ ಹಂಬಲದಲ್ಲಿಯೇ ಕಳೆಯುತ್ತಾಳೆ. ಯಾವ ಹೊಸ ಬದುಕಿಗೆ ಹೋದರೂ ಆಕೆಯು ತನ್ನ ನಷ್ಟ ಪ್ರೇಮದ ಪುತ್ಥಳಿಯನ್ನೆ ನೆನೆದು ನಡೆಯುತ್ತಾಳೆ.

ಮೇಲೆ ಹೇಳಿದುದರ ತಾತ್ಪರ್ಯ-ಹೆಣ್ಣು ಯಾವಾಗಲೂ ಏಕನಿಷ್ಠಳಾಗಿಯೇ ಉಳಿಯುವವಳೆಂದಲ್ಲ; ಐವರು ಪತಿಗಳನ್ನು ಏಕಕಾಲಕ್ಕೆ ವರಿಸಿದ ದ್ರೌಪತಿಯ ಕತೆಯನ್ನು ಅಪವಾದವೆಂದು ಬಿಟ್ಟರೂ ಹೆಣ್ಣು ಹಲವರೊಡನೆ ಅಲ್ಲವಾದರೂ ಕೆಲವರೊಡನೆ ಪ್ರೇಮಸಂಬಂಧವನ್ನು ಇಟ್ಟುಕೊಂಡು ಬಂದುದುಂಟು. ಆದರೆ ಒಂದೇ ಸಮಯ ಒಂದಕ್ಕಿಂತ ಹೆಚ್ಚು ಪ್ರೇಮ ಸಂಬಂಧವನ್ನು ಹೆಣ್ಣು ಬೆಳೆಸಿಕೊಳ್ಳಲಾರಳು. ಗಂಡು ಹಾಗಲ್ಲ; ಆತ ಹಲವು ಪತ್ನಿಯರನ್ನೋ ಉಪಪತ್ನಿಯರನ್ನೋ ಪ್ರೇಮಿಕೆಯರನ್ನೋ ಏಕ ಕಾಲಕ್ಕೆ ಬೇರೆ ಬೇರೆಯಾಗಿ ಮನವಾರೆ ಮೆಚ್ಚಬಲ್ಲ; ಮೆಚ್ಚಿಸಬಲ್ಲ. ಆತನ ಶಾರೀರಿಕ-ಮಾನಸಿಕ ವೃತ್ತಿಗಳೇ ಅದಕ್ಕೆ ಅನುಕೂಲವಿರುತ್ತವೆ. ಅಲ್ಲದೇ ಹಿಂದೆ ಅಂದಂತೆ ಹೆಣ್ಣು ತನದಲ್ಲಿ ಮೂಲಭೂತ ವೈವಿಧ್ಯ ಅಷ್ಟೊಂದು ಕಂಡುಬರುವದಿಲ್ಲವಾದ್ದರಿಂದಲೂ, ಗಂಡು ಹಲವು ಹೆಂಗಸರನ್ನು ಕಾಮಿಸಿ ಪ್ರೇಮಿಸಿ ಸುಖಿಯಾಗುವ ಹದವನ್ನು ನುರಿಸಿಕೊಳ್ಳಬಲ್ಲ. ಈ ಹದಕ್ಕೇ ನಮ್ಮ ಪ್ರಾಚೀನ ಕವಿಗಳು ''ಸೌಭಾಗ್ಯ''ವೆಂದು ಕರೆದರು. ಅನೇಕ ಸ್ತ್ರೀಯರ ಪ್ರೇಮಾದರಕ್ಕೆ ಪಾತ್ರನಾಗಬಲ್ಲವೇ ''ಸುಭಗ''

ಆದರೆ ಈ ಸೌಭಾಗ್ಯ ಹೆಣ್ಣಿನದಲ್ಲ. ದುಷ್ಯಂತನಿಗೆ ದುರಂತವಿಲ್ಲದಿದ್ದರೂ ಶಕುಂತಲೆಗೆ ದುಃಖ ತಪ್ಪಿದ್ದಿಲ್ಲ. ಅಂದರೆ, ಹೆಣ್ಣಿಗೆ ಪ್ರತಿಯೊಂದು ಬೇರೆ ಪ್ರೇಮಸ್ಥಾನವೂ ಹೊಸದಾಗಿಯೇ ಮೊದಲಾಗಬೇಕು. ಒಬ್ಬ ರಮಣನನ್ನೋ ವಲ್ಲಭನನ್ನೋ ಅಗಲಿ ಕಳಕೊಂಡ ನಂತರವೇ ಆಕೆ ಇನ್ನೊಬ್ಬ ಇನಿಯನ ಸನಿಯಕ್ಕೆ ಹೋಗಬಲ್ಲಳು. ಗಂಡಿನಂತೆ ಗಂಡು ಇರುವದು ವಿರಳವಾಗಿರುವದರಿಂದ ಹೆಣ್ಣಿಗೆ

ಪ್ರೇಮದ ಮಾರ್ಗ ಸರಳವಾಗುವದಿಲ್ಲ. ಪ್ರತಿಯೊಂದು ಗಂಡಸೂ ಒಂದು ಹೊಸ ಒಗಟಾಗಿ ಅದನ್ನು ಬಗೆಹರಿಸಲು ಹೊಸ ಯತ್ನ ಬೇಕಾಗುತ್ತದೆ. ಒಬ್ಬರೊಡನೆ ಸಂಬಂಧ ಬಲಿಯಿತೆಂದರೆ ಹೆಣ್ಣಿನ ಸಮಗ್ರ ವ್ಯಕ್ತಿತ್ವ–ಜೀವನ ಸತ್ವವೆಲ್ಲ ಏಕಮುಖವಾಗಿ ಆತನೊಡನೆ ಹೊಂದಿಕೊಳ್ಳುತ್ತದೆ. ಆಗ ಮಿಕ್ಕವರ ಸಂಬಂಧ ಸಡಿಲಾಗಿಯೂ ಸಪ್ಪಗಾಗಿಯೂ ಅಷ್ಟಕಷ್ಟೇ ಉಳಿಯುತ್ತದೆ. ಋತುವಿಗೊಂದು ರತಿಯಿದ್ದರೂ ರತಿಗೆ ಒಂದೇ ರಮಣನಾಗುತ್ತಾನೆ. ಹೊಸ ರತಿಗೆ ಹೊಸ ಋತುವೇ ಬರಬೇಕು. ಹೆಣ್ಣಿನ ಈ ಬಗೆಯು ಶ್ರೀ ಮಾಸ್ತಿಯವರ ಒಂದು ಅತ್ಯುತ್ಕೃಷ್ಟ 'ಗೌತಮಿ ಹೇಳಿದ ಕತೆ'ಯಲ್ಲಿ ಚಂದವಾಗಿ ಬಿಂಬಿತವಾಗಿದೆ. ತಾತ್ಪರ್ಯವೇನಂದರೆ ಹೆಣ್ಣಿನ ಪ್ರೀತಿ ಏಕಾಂತಿಕ. ಅದಕ್ಕೆ ಒಮ್ಮೆಗೆ ಒಂದೇ ಗುರಿ; ಇದಕ್ಕೆ ಒಂದೇ ಕಾರಣ. ಗಂಡಿನ ವ್ಯಕ್ತಿತ್ವದ ಹೊಸ ಹೊಸ ಮಾದರಿಯೇ ಸರಿ.

ಹೆಣ್ಣಿಗೆ ಮತವಿದೆಯೆ ?

ಹೀಗೆ ಸಾಮಾಜಿಕತೆಯಿಂದ ಹೆಣ್ಣೆಲ್ಲ ಒಂದೇ ಪಡಿಯಚ್ಚಿನಲ್ಲಿ ಮೂಡುವದು ಒಂದು ಪರಿಣಾಮವಾದರೆ, ಅದರ ಇನ್ನೊಂದು ಪರಿಣಾಮ ಹೆಣ್ಣಿನ 'ಪರಪ್ರತ್ಯಯನೇಯ ಬುದ್ಧಿ' –ಅಂದರೆ ಸಮಾಜದ ಪ್ರಶಂಸೆ ಪ್ರಸನ್ನತೆಗಾಗಿ ಆಕೆಯು ಹಿಡಿಯುವ ಹವ್ಯಾಸ. ನಾಲ್ಕು ಜನ (ಅಂದರೆ ನೆರೆಹೊರೆಯ ಹೆಣ್ಣು) ನಡೆದಂತೆ ನುಡಿದಂತೆ ತಾನು ನಡೆಯದಿದ್ದರೆ ನಾಲ್ಕು ಜನರ ಮೆಚ್ಚಿಗೆಗೆ ತಾನು ಬರಲಾರನೆಂಬ ಆಳವಾದ ಅಂಜಿಕೆ! ಈ ಪರಪ್ರಶಂಸಾಪ್ರೇಮವು ಹೆಣ್ಣಿನಲ್ಲಿ ಒಂದು ಬಲವಾದ ಆವೇಶವಾಗಿದೆ. ಗಂಡು ನೆರೆಹೊರೆಯ ಇಲ್ಲವೇ ನೆರವಿಯ ಮಾತುಮತಗಳಿಗೆ ಅಷ್ಟೊಂದು ಮಹತ್ವ ಕೊಡುವದಿಲ್ಲ. ತನ್ನ ಮೂಗಿನ ನೇರಕ್ಕೆ ಆತ ನಡೆಯಬಲ್ಲ. ಆದರೆ ಹೆಣ್ಣಿಗೆ ಅದು ಕಷ್ಟ. ಪತಿಯ ಸೇವೆ, ವಲ್ಲಭನ ಆರಾಧನೆ, ಮಕ್ಕಳ ಆರೈಕೆ ಇವೆಲ್ಲ ಮುಗಿದು ಉಳಿದ ಸಮಯವೆಲ್ಲ ಹೆಣ್ಣು ಸಾಮಾಜಿಕ ಪ್ರಶಂಸೆಯ ಪ್ರಾಪ್ತಿಗಾಗಿಯೇ ಕಳೆಯುವಳು. ನೆರೆಮನೆಯವರು ಫೋಟೋ ತೆಗಿಸಿಕೊಂಡರೆ, 'ಸತ್ಯನಾರಾಯಣ' ಮಾಡಿಸಿದರೆ, ಇವಳೂ ಅದನ್ನೇ ಮಾಡಬೇಕು.

ದೊಡ್ಡ ಶಹರಗಳಲ್ಲಿ ದಿನಗಟ್ಲೆ ಕ್ರಿಕೆಟ ಪಂದ್ಯಾಟಗಳೂ ನಡೆಯುವದುಂಟು. ಆಗ ನೋಡಬೇಕು ಹೆಣ್ಣಿನ ಈ ಪರಪ್ರಶಂಸಾಪ್ರಿಯತೆಯ ಚಿತ್ರವನ್ನು. ಅಡಿಯಿಂದ ಮುಡಿಯತನಕ ಸಿಂಗರಿಸಿಕೊಂಡು ೫–೧೦

ರೂಪಾಯಿಗಳ ಟಿಕೇಟು ತೆಗೆಯಿಸಿಕೊಂಡು ತಮ್ಮ ಗಂಡಂದಿರ 'ಗೌರವರಕ್ಷೆ'ಯಲ್ಲಿ ತಾಸುಗಟ್ಲೆ ಉರಿಬಿಸಿಲಿನಲ್ಲಿ ನಿಯಮಿತವಾಗಿ ಹೋಗಿ ಕುಳಿತು ಈ ಮಾನನಿಯರು ಪಂದ್ಯಾಟಗಳನ್ನು ನೋಡಿ ಬರುವರು; ಅಂಥವರಲ್ಲಿ ಕೆಲವರು ಕೊನೆಗೂ ಒಳ್ಳೇ ಸೋಜಿಗದಿಂದ ಆಟಗಾರನು ಚಂಡಿನ ಹಿಂದೆ ಓಡದೇ ಬರೇ ಎರಡು ಕೋಲುಗಳ ನಡುವೆ ಮತ್ತೆ ಮತ್ತೆ ಏಕೆ ಓಡಾಡುತ್ತಾನೆಂದು ಗಂಭೀರವಾಗಿ ಗಂಡಂದಿರನ್ನು ಕೇಳುವದೂ ಉಂಟು! ಇಂಥವರ ಅಜ್ಞಾನವೆಷ್ಟು ಮೇಲೋ ಅವರ ಸೌಂದರ್ಯವೂ ಅಷ್ಟೇ ಮಿಗಿಲೂ ಇರುವದುಂಟು! ಹೀಗಿದ್ದರೂ ಹಲವು ವಾರಗಳ ತನಕವೂ ಏನೂ ಬೇಸರವಿಲ್ಲದೇ, ತನಗೆ ಏನೂ ತಿಳಿಯದ ಚಟುವಟಿಕೆಯನ್ನು ತಾಸುಗಟ್ಲೆ ನೋಡಲು ಗಾಳಿ ಮಳೆ ಬಿಸಿಲು ಬೀದಿಗಳ ಆಯಾಸವನ್ನು ನಗುತ್ತ ಸಹಿಸುವ ಈ ಹೆಂಗಸರ ನಿಷ್ಠೆಯ ಮೂಲವೆಲ್ಲಿ? ಪ್ರತಿಯೋರ್ವ ಹೆಂಗಸೂ ಮತ್ತೊಬ್ಬಳನ್ನು ಅನುಕರಿಸಲು ಹೋಗಿ ಆಟವನ್ನು ಕಾಣುವದಕ್ಕಿಂತ ಆಟದ ಬೈಲಲ್ಲಿ ತನ್ನನ್ನು ಮಿಕ್ಕ ತನ್ನವರೊಡನೆಯೇ ಕಾಣಿಸಿಕೊಳ್ಳುವದಕ್ಕಾಗಿ ಹವ್ಯಾಸ ಪಡುವಳು. ಹಾಗೆ ಹೋಗದಿದ್ದರೆ ತನಗೆಲ್ಲಿ ಕುಂದೋ ಎಂದು ಭಾವಿಸುವಳು. ಪ್ರಶಂಸಾಪ್ರೀತಿಯ ಇದಕ್ಕೂ ಪ್ರಕಟವಾದ ಪ್ರದರ್ಶನ ಬೇಕೇ?

ಹೆಣ್ಣಿನ ಈ ಸಮಾಜಪ್ರಿಯತೆಯಿಂದ ಇಲ್ಲವೇ ಸಾಮಾಜಿಕ ಪ್ರವೃತ್ತಿಯಿಂದ ಹಲವು ಗುಣಗಳು ಆಕೆಯಲ್ಲಿ ಮೈಗೊಂಡಿವೆ. ಮಂದಿಯೊಡನೆ ವ್ಯಾವಹಾರಿಕ ಸಂಬಂಧಗಳನ್ನು ಒಳ್ಳೇ ಕೌಶಲ್ಯದಿಂದ ನಿರ್ವಹಿಸುವ ಕಲೆ ಹೆಣ್ಣಿಗೆ ಸಹಜ ಸಾಧ್ಯ. ಹತ್ತಿರದ, ಸುತ್ತಲಿನ ಹೆಣ್ಣುಗಳೊಡನೆ–ಅವರ ಪರಿವಾರದೊಡನೆ ತನ್ನ ಗಂಡಿಗಿಂತ ಹೆಣ್ಣು ಪರಿಚಯವನ್ನೂ ಸಲಿಗೆಯನ್ನೂ ಬೆಳೆಸಿಕೊಳ್ಳಬಲ್ಲಳು. ಅಕ್ಕ–ಪಕ್ಕದ ಮನೆಯ ಗಂಡಂದಿರು ಜಗಳಾಡಿದ್ದರೂ ಮಾತು ಬಿಟ್ಟಿದ್ದರೂ ಹೆಣ್ಣುಗಳು ಮೈತ್ರಿಯಿಂದಲ್ಲದಿದ್ದರೂ ವೈರವಿಲ್ಲದೇ ಬದುಕಬಲ್ಲರು; ಮನೆವಾರ್ತೆಯ ಅಡಚಣೆ ಬಂದರೆ ಒಬ್ಬರಿಂದೊಬ್ಬರು ಕಡತರುವ ಇಲ್ಲವೇ ಕೊಡಕೊಳ್ಳುವ ವ್ಯವಹಾರವನ್ನು (ಗಂಡಂದಿರಿಗೆ ತಿಳಿಸದೇ ಅಥವಾ ಕೆಲವೊಮ್ಮೆ ಅವರ ಮೂಕಸಮ್ಮತಿಯಿಂದಲೇ!) ನಡೆಸಬಲ್ಲರು. ಸದ್ಯ ಜಾತೀಯತೆಯ ಉಗ್ರವಾದ ಕಲಹ ಕೇವಲ ಗಂಡಸರ ಗುಂಡಬುದ್ಧಿಯು ಉಂಟು ಮಾಡಿದ ಗಂಡಾಂತರ. ಯಾವ ಜಾತಿಯದೇ ಇರಲಿ, ಯಾವ ಧರ್ಮದ್ದೇ ಇರಲಿ. ಹೆಣ್ಣು ಜನ ಗಂಡಿಗಿಂತಲೂ ಕೂಡಿ ಒಡನಾಡುವದು ಹೆಚ್ಚು. ಇದೇ ರೀತಿ ಅತಿಥಿ ಸತ್ಕಾರ, ಉಪಚಾರ ಶಿಷ್ಟಾಚಾರ ವಿಧಿಗಳಲ್ಲಿ ಗಂಡಿಗಿಂತ ಹೆಣ್ಣಿಗೆ ತಾತ್ಪರ್ಯ ಹೆಚ್ಚು. ಇವೆಲ್ಲವೂ ಸಾಮಾಜಿಕ ನಡತೆಯ ಕಟ್ಟುಗಳು.

ಮಾನಿನಿಯ ಮಹಿಮೆ

ಇದರದೇ ಇನ್ನೊಂದು ಮಗ್ಗುಲು ಬಿಂಕ. ಇಲ್ಲವೇ ಆತ್ಮಾಡಂಬರ. ನಾಲ್ಕು ಜನ ತನ್ನ ನೋಡಬೇಕು-ನೋಡಿ ಮೆಚ್ಚಬೇಕು ಎಂಬ ಲವಲವಿಕೆ ! ಇದು ಹೆಣ್ಣಿನಲ್ಲಿ ಸದಾಕಲವೂ ಜಾಗೃತವಾಗಿರುತ್ತದೆ. ಸ್ವಾಭಿಮಾನದಲ್ಲಿ ಗಂಡಿಗಿಂತಲೂ ಹೆಣ್ಣಿನ ಕೈ (ಅಲ್ಲ ಕಣ್ಣು?) ಮೇಲೆ. ಇದರಿಂದ ತನ್ನ ನಡೆನುಡಿಯ ಗುಣದೋಷಗಳನ್ನು ತನ್ನೊಡನೆ ಸಂಪರ್ಕವಿಡುವ ಹೆಣ್ಣು ಗಂಡುಗಳ ವರ್ತನದ ತಪ್ಪುತಡೆ ತಾರತಮ್ಯಗಳನ್ನೂ ಹೆಣ್ಣು ಗಂಡಿಗಿಂತಲೂ ಹೆಚ್ಚು ಎಚ್ಚರದಿಂದ ನಿರೀಕ್ಷಿಸುವಳು. ಪರೀಕ್ಷಿಸುವಳು. ತನ್ನ ಶಾರೀರಿಕ ದುರ್ಬಲತನ ಮತ್ತು ಆರ್ಥಿಕ ಪರಾಧೀನತನಗಳ ಆಳವಾದ ಅರಿವು ಹೆಣ್ಣಿನಲ್ಲಿದೆ. ಆದ್ದರಿಂದ ಇತರ ಯಾವದೇ ನ್ಯೂನಗಂಡವುಳ್ಳ ವ್ಯಕ್ತಿಯಂತೆ ಹೆಣ್ಣು ತನ್ನ ಗೌರವವನ್ನು ಸ್ಥಾಪಿಸಲೂ ಸಂರಕ್ಷಿಸಲೂ ಎಂದಿಗೂ ದಕ್ಷಳಾಗಿರುತ್ತಾಳೆ. ಆಕೆ ಎಂದಿಗೂ ಮಾನಿನಿ-ಮಹಿಳೆ; ಮಾನ ಮಹತ್ವಗಳಿಗಾಗಿ ಹೆಣಗುವಾಕೆ.

ಇದರ ಫಲವೆಂದರೆ ಹೆಣ್ಣಿಗೆ ತನ್ನ ಚಿಕ್ಕ ಪುಟ್ಟ ಗುಣಗಳ ಅರಿವು ಕೂಡ ಸಂಪೂರ್ಣವಿರುತ್ತದೆ. ತನ್ನ ಸದ್ಗುಣ-ಸೌಂದರ್ಯಗಳ ಗರ್ವವಂತೂ ಆಕೆಗೆ ಇದ್ದೇ ಇರುತ್ತದೆ. ಇದಕ್ಕೂ ಮುಂದೆ ಹೋಗಿ ತನ್ನ ಲೋಪ ದೋಷಗಳನ್ನೇ ಗುಣವಾಗಿ ಕಾಣಿಸುವ ಇಲ್ಲವೇ ಅವುಗಳನ್ನು ಅಡಗಿಸಿ ಅಳವಡಿಸಿಕೊಳ್ಳುವ ನಡೆನುಡಿ, ವೇಷ-ಭೂಷೆಗಳ ಹೊಸ ರೀತಿಯನ್ನೇ ಆಕೆ ಉಂಟುಮಾಡುವಳು! ಹೀಗೆ ಎಷ್ಟೋ ಸಲ ಸಮಾಜದಲ್ಲಿ ಅಗ್ರಗಣ್ಯರಾದ ಹಲವು ಮಹಿಳೆಯರು ಹೊಸ ಪ್ರಸಾದನಪದ್ಧತಿಯನ್ನು ಕೇವಲ ತಮ್ಮ ಅನುಕೂಲತೆಗಾಗಿ ಬಳಕೆಯಲ್ಲಿ ತಂದು ಮುಂದೆ ಇತರ ಸ್ತ್ರೀ ಸಮಾಜವು ಅವುಗಳನ್ನೇ ಸಂಭ್ರಮದಿಂದ ಅನುಕರಿಸಿದ್ದುಂಟು. ಇದೇ ಮೇರೆಗೆ ಆತ್ಮಪ್ರದರ್ಶನದ ಮೋಹಕ್ಕೆ ಬಿದ್ದು ವಾಚಾಳಿತನವನ್ನೂ ಅನುಕರಣದ ಮೂಲಕ ಕುರುಡು ರೂಢಿಯನ್ನೂ ಆಕೆ ಮೈಚಟವಾಗಿ ಮಾಡಿಕೊಳ್ಳುವಳು. ಹೊಸದೊಂದು ಪ್ರಾಂತಕ್ಕೆ ಚಾಕರಿಗಾಗಿ ವರ್ಗಾಂತರಿಸಲ್ಪಟ್ಟ ಗಂಡಸಿಗಿಂತ ಆತನ ಹೆಂಡತಿ ಅಲ್ಲಿಯ ಭಾಷೆ-ವೇಷ-ವ್ಯವಹಾರಗಳನ್ನು ಹೆಚ್ಚು ತ್ವರೆಯಿಂದ ಮತ್ತು ತತ್ಪರತೆಯಿಂದ ಕಲಿಯುವದು ಕಂಡುಬರುತ್ತದೆ. ಇದರಿಂದಲೇ ಸಾಮಾಜಿಕ ವಿದ್ಯೆ ಕಲೆಗಳಲ್ಲಿ ಗಂಡಿಗಿಂತಲೂ ಹೆಣ್ಣು ಎಂದಿಗೂ ಮುಂದೆ, ಚತುರಸಂಭಾಷಣೆ ಸುಶಿಕ್ಷಿತ ಗಂಡಿಗಿಂತ ಹೆಣ್ಣಿಗೇ ಹೆಚ್ಚು ಲೀಲೆಯಿಂದ ಸಾಧ್ಯ. ವ್ಯವಸಾಯದ ಕಲೆ ಕೈಗಾರಿಕೆಗಳಲ್ಲಿ ಹೆಣ್ಣಿಗಿಂತ ಗಂಡಿನ ಕೈಮೇಲೆ. ಆದರೆ

ಲಲಿತಕಲೆಯಲ್ಲಿಯೂ ಭಾಷಾನೈಪುಣ್ಯದಲ್ಲಿಯೂ ಹೆಣ್ಣು ಹೆಚ್ಚು ಮುಂದುವರಿಯುವದುಂಟು. ಗಣಿತ ವಿಜ್ಞಾನದಂಥ ವಿಷಯಗಳಲ್ಲಿ ಹೆಣ್ಣಿಗೆ ರುಚಿ ಕಡಿಮೆ. ಇದಕ್ಕೆ ಇತರ ಕಾರಣಗಳಿವೆ. ಆದರೆ ಇಲ್ಲಿ ಹೇಳಬೇಕಾದುದೆಂದರೆ ಅಂಥ ವಿಷಯಗಳಿಗೆ ಏಕಾಂತ ಸಾಧನೆ ಮತ್ತು ಚಿಂತನಶಕ್ತಿ ಬೇಕು. ಹೆಣ್ಣಿಗೆ ಅಂಥ ಪರಿಶ್ರಮ ರುಚಿಸುವದಿಲ್ಲ. ಆದರೆ ಭಾಷೆಯೇ ಮುಂತಾದ ಸಂಸ್ಕೃತಿಪ್ರಧಾನವಾದ ವಿಷಯಗಳಲ್ಲಿ ಹೆಣ್ಣಿನ ಅಭಿರುಚಿ ಸಹಜ.

ಸಂಸ್ಕೃತಿಯೆಂದೊಡನೆ ಇನ್ನೊಂದು ಸಂಗತಿ ನೆನಪಾಯಿತು. ಸಾಮಾಜಿಕ ಸಂಬಂಧಗಳಲ್ಲಿ ಯಶವನ್ನೂ ಶ್ರೇಯವನ್ನೂ ಪಡೆಯುವ ಹಟ ಹೆಣ್ಣಿಗೆ ಹೆಚ್ಚಿದ್ದದ್ದರಿಂದ ಆಕೆಯಲ್ಲಿ ವಿನಯ, ಸಾತ್ವಿಕತೆ, ಸೇವಾವೃತ್ತಿ ಪರೋಪಕಾರ, ಸಹಾನುಭೂತಿ ಇವೇ ಮುಂತಾದ ಸಾಮಾಜಿಕ ಸದ್ಗುಣಗಳು ಗಂಡಿಗಿಂತಲೂ ಹೆಚ್ಚಾಗಿಯೂ ಸಹಜವಾಗಿಯೂ ಬೆಳೆದುಬಂದಿವೆ. ಯಾವ ಸದ್ಗುಣಗಳನ್ನು ಗಂಡು ಯತ್ನದಿಂದ ಕಲಿತುಕೊಳ್ಳ ಬೇಕಾಗುವದೋ ಅವು ಹೆಣ್ಣಿಗೆ ಕೆಲವೊಮ್ಮೆ ಹುಟ್ಟು ಗುಣವಾಗಿ ಬರುತ್ತವೆ. ಶಿಕ್ಷಣದ ಗುರಿ ಸಂಯಮವಾಗಿದ್ದರೆ. ವಿದ್ಯೆ ವಿನಯವನ್ನೇ ಕೊಡುವದಿದ್ದರೆ, ಮತ್ತು ವಿನಯ-ಸಂಯಮಗಳೇ ಸಂಸ್ಕೃತಿಯ ತಳಹದಿಯಾಗಿದ್ದರೆ ಹೆಣ್ಣಿಗೆ ಸಂಸ್ಕೃತಿಯು ಹತ್ತಿರವೆಂತಲೇ ಹೇಳಬೇಕು. ಅಂದರೆ ನಾರಿಯರಲ್ಲಿ ನಾರಿಯರಿಲ್ಲವೆಂತಾಗಲೀ ಒರಟುತನ ಮರುಳತನ ಗಂಡಿನದೇ ಸೊತ್ತೆಂದಾಗಲಿ ಹೇಳುವ ಹೇತುವಿಲ್ಲ. ಆದರೆ ಸಮಾಜಪ್ರಿಯತೆಯ ಫಲವಾಗಿ ಹೆಣ್ಣಿನಲ್ಲಿ ನಡೆ ನುಡಿ ನಯ-ನಂಬಿಕೆಗಳು ಹೆಚ್ಚು ರೂಪಗೊಂಡಿವೆಯೆಂದರೆ ತತ್ವತಃ ತಪ್ಪಾಗದು.

ಹೆಣ್ಣು ಬಾಳೆ; ಗಂಡು ತೆಂಗು

ಗಂಡಿಗಿಂತ ಹೆಣ್ಣಿಗೆ ಅಧಿಕಾರಲಾಲಸೆ ಹೆಚ್ಚು; ಮಹತ್ವಾಕಾಂಕ್ಷೆ ಹೆಚ್ಚು; ಪ್ರಪಂಚದಲ್ಲಿ ಮೇಲ್ತರಗತಿಯನ್ನು ಮುಟ್ಟಬೇಕೆಂಬ ಹಟ ಆಕೆಯಲ್ಲಿರುತ್ತದೆ. ಎಷ್ಟೋ ಸಲ ಹೆಣ್ಣಿನ ಈ ಹಟವೇ ಆಕೆಯ ಗಂಡನಿಗೆ ಹುರುಪಾಗಿ ಅವನ ಅಭ್ಯುದಯಕ್ಕೆ ಕಾರಣವಾಗುತ್ತದೆ-ಅದಃಪಾತಕ್ಕೂ ಮುಳುವಾಗುವದುಂಟು. ಹಲವು ಸಲ ತಾನೇ ಬುದ್ಧಿ ಬಲದಿಂದಲೋ ವಿದ್ಯಾಬಲದಿಂದಲೋ ಸಮಾಜದಲ್ಲಿ ಪ್ರಾಧಾನ್ಯ ಪ್ರತಿಷ್ಠೆಗಳನ್ನು ಪಡಕೊಳ್ಳುವದು ಬಿಗಿಯಾಗಿದ್ದ ಮೂಲಕ ಹೆಣ್ಣು ತನ್ನ ಗಂಡನನ್ನೇ ಆಧಾರವಾಗಿ ಇಟ್ಟುಕೊಂಡು ತನಗಾಗಿ ಸನ್ಮಾನದ ಸ್ಥಾನವನ್ನು ಪಡೆದುಕೊಳ್ಳುವಳು. ಆಸ್ಥಾನದಲ್ಲಿ ಪ್ರತಾಪ ನಡೆಯಿಸುವ ಸರದಾರನಿರಲಿ,

ಆಫೀಸಿನಲ್ಲಿ ಪ್ರಚಂಡನೆನಿಸುವ ಕಾರಕೂನನಿರಲಿ, ಅಂತಃಪುರದಲ್ಲಿ ಹೆಂಡತಿಯ ಕೈಗೆ ತನ್ನ ಮೂಗುದಾಣ ಕಡಿವಾಣಗಳನ್ನು ಕೊಟ್ಟು ಆಕೆ ಕುಣಿಸಿದಂತೆ ಮಣಿಸಿದತ್ತ ನಡೆದಾಡುವದು ಕಂಡುಬರುವದು. ಅಂಥ ಆಳಬಲ್ಲ ಹೆಣ್ಣು ತನ್ನ ಮಹತ್ವಾಕಾಂಕ್ಷೆಯನ್ನು ಗಂಡಿನಿಂದಲೇ ಪೂರೈಸಿಕೊಳ್ಳುವಳು. ಗಂಡನ ಸಂಪಾದನೆ ಸನ್ಮಾನಗಳು ಬೆಳೆದಂತೆ ಆಕೆಯ ಅಂತಸ್ತು ಏರುವದು. ಅಂತರಂಗವು ಅರಳುವದು! ಹೀಗೆ ತಾನೇ ಸತ್ತೆ ಸಂಪತ್ತಿನ ಗದ್ದುಗೆಯನ್ನು ಆಕ್ರಮಿಸುವದಕ್ಕಿಂತ ತನ್ನ ಗಂಡನ ಸಿಂಹಾಸನದ ಹಿಂದಿನ ಶಕ್ತಿಯಾಗಿ ಸೂತ್ರಚಾಲನೆ ಮಾಡುವದೇ ಹೆಣ್ಣಿನ ಹಿಂಜರಿಕೆಯ ಸ್ವಭಾವಕ್ಕೆ ಹೆಚ್ಚು ಸೇರುವದು.

ಇದರಿಂದ ಕಂಡುಬರುವ ಇನ್ನೊಂದು ಪರಿಣಾಮವೆಂದರೆ ಹೆಣ್ಣು ತನ್ನ ವರಿಷ್ಠರೆದುರು ಬಹಳೇ ಕನಿಷ್ಠಳಾಗಿಯೂ ಕನಿಷ್ಠರೆದುರು ಬಹಳೇ ವರಿಷ್ಠಳಾಗಿಯೂ ನಡೆದುಕೊಳ್ಳುವಳು. ಒಂದೆಡೆಗೆ ಹೆಣ್ಣುತನದ ಸ್ವಾಭಾವಿಕ ಸಂಗತಿಗಳಲ್ಲಿ ಎಲ್ಲ ಹೆಣ್ಣು ಸರಿಸಮಾನವಾಗಿಯೇ ನಡೆದುಕೊಂಡರೂ, ಸಾಮಾಜಿಕ ಪ್ರತಿಷ್ಠೆಯ ಪ್ರಸಂಗಗಳಲ್ಲಿ ತನ್ನ ಸ್ಥಾನ–ಮಾನಗಳ ದರ್ಪದ ಬಗ್ಗೆ ಹೆಣ್ಣು ಬಹಳೇ ಜಾಗ್ರತಳಾಗಿರುವಳು. ಜಾಜ್ವಲ್ಯ ಈರ್ಷೆಯನ್ನು ಕಾಣಿಸುವಳು. ಕಲೆಕ್ಟರನು ತನ್ನ ಆಪ್ತ ಕಾರ್ಯದರ್ಶಿಯೊಡನೆ ಕೆಲವೊಮ್ಮೆ ಸಲಿಗೆಯಿಂದ ನಡೆಯಬಹುದು; ಆದರೆ ಕಲೆಕ್ಟರನ ಹೆಂಡತಿ ಕಾರ್ಯದರ್ಶಿಯ ಹೆಂಡತಿಯೊಡನೆ ಶಕ್ಯವಿದ್ದಷ್ಟು ಅಂತರವಿಟ್ಟುಕೊಂಡೇ ಅಂತಸ್ತು ಅರಿತುಕೊಂಡೇ ನಡೆಯುವಳು, ಸಾಮಾನ್ಯವಾಗಿ ಹೆಣ್ಣು ಒಂದೇ ವರ್ಗದವರೊಂದಿಗೆ ತೀರ ಸಮರಸಳಾಗುವುದುಂಟು. ಗಂಡಸರಲ್ಲಿಯಾದರೂ ವಯೋಮಾನದಿಂದ ಮೂರುನಾಲ್ಕು ಗುಂಪುಗಳಾಗುವವು. ಮಕ್ಕಳು ತರುಣರೊಡನೆಯೂ ತರುಣರು ವೃದ್ಧರೊಡನೆಯೂ ಕೂಡುವದು ಕಡಿಮೆ. ಅದರಲ್ಲಿಯೂ ಬಾಲ್ಯ–ತಾರುಣ್ಯಗಳ ನಡುವಿನ ಒಂದು ಅಸಡ್ಡಾಳ ಅವಸ್ಥೆಯ ಗಂಡಸು ತೊಗಲುಬಾವಲಿಯಂತೆ ಅತ್ತ ಪಶುವೂ ಅಲ್ಲದೇ, ಇತ್ತ ಪಕ್ಷಿಯೂ ಅಲ್ಲದೆ ಎಲ್ಲೆಡೆಯಿಂದಲೂ ಅಸಡ್ಡೆಗೆ ಎಡೆಯಾಗುವದುಂಟು. ಹತ್ತರಿಂದ ಇಪ್ಪತ್ತು ವರ್ಷ ಪ್ರಾಯದೊಳಗಿನ ಗಂಡು ಇಂಥ ಶೋಚನೀಯ ಸ್ಥಿತಿಯಲ್ಲಿರುತ್ತಾನೆ. ಅತ್ತ ಮಕ್ಕಳೊಡನೆಯೂ ಆತ ಕೂಡಿ ರಮಿಸಲಾರ; ಇತ್ತ ತರುಣರೂ ಆತನನ್ನು ಕೂಡಿಸಿಕೊಳ್ಳಲಾರರು–ಗಮನಿಸಲಾರರು.

ಆದರೆ ಹೆಣ್ಣಿಗೆ ಈ ಅವಸ್ಥೆಯಿಲ್ಲ. ಒಂದು ಪರಿವಾರದಲ್ಲಿ ಬಾಲ್ಯಾವಸ್ಥೆಯನ್ನು ಕಳೆದ ಮೇಲೆ ಪ್ರಾಯಕ್ಕೆ ಬಂದ ಎಲ್ಲ ಹೆಗಸರೂ ಒಂದೇ ರೀತಿಯಾಗಿ ನಡಕೊಳ್ಳುವರು. ಗಂಡು ಮೆಲ್ಲನೆ ತೆಂಗಿನಂತೆ ಬೆಳೆದರೆ ಹೆಣ್ಣು ಒಮ್ಮೆಲೇ ಬಾಳೆಯಂತೆ ಪ್ರೌಢಳಾಗಿ ಬಿಡುವಳು. ಹರೆಯದ ಹುಡುಗಿಯೊಡನೆಯೂ ಹಿರಿಯ ಹೆಣ್ಣು ಮನಬಿಚ್ಚಿ ನಡೆನುಡಿಯುವಳು. ಹೆಣ್ಣು ನಿನ್ನೆ ಹುಡುಗಿಯಾದವಳು ನಾಳೆ ಒಮ್ಮೆಲೇ ಬೆಳೆದ ಹೆಣ್ಣಾಗುವಳು. ತಾಯಿ–ಅಕ್ಕ–ಅತ್ತೆ ಅಜ್ಜಿಯರೊಡನೆ ಸಮಸಾಟಿಯಾಗಿ ಬಾಣಿನ ಪ್ರಶ್ನೆಗಳ ಚರ್ಚೆಯಲ್ಲಿ ಕೂಡುವಳು. ಈ ಸಜಾತೀಯ 'ಸಾಮ್ಯವಾದ' ಗಂಡಿನಲ್ಲಿ ತೋರಿ ಬರುವದಿಲ್ಲ.

ವಿನಯದ ವೈಷಮ್ಯ

ಆದರೆ ಗಂಡು ತನ್ನ ಸಾಮಾಜಿಕ ಸ್ಥಾನಮಾನಗಳನ್ನು ಅರಿತೂ ಮರೆತಂತೆ ನಡೆದು ಇತರ ಕನಿಷ್ಠವರ್ಗದ ಗಂಡಿನೊಡನೆ ಕೂಡಲು ಕಡಿಮೆಯೆನಿಸಿಕೊಳ್ಳುವದಿಲ್ಲ. ಆದರೆ ಹೆಣ್ಣು ಈ ಸಾಮಾಜಿಕ ತಾರತಮ್ಯವನ್ನು ಅಷ್ಟು ಬೇಗ ಮರೆಯುವದಿಲ್ಲ. ಕೆಳಗಿನವರೆದುರಿಗೆ ಔದಾರ್ಯಕ್ಕಾಗಿ ಕೆಲವೊಮ್ಮೆ ಮರೆತರೂ, ಮೇಲಿನವರೆದುರಿಗೆ ತನ್ನ ಮಟ್ಟ–ಮರ್ಯಾದೆಗಳ ಕುರಿತು ಒಳ್ಳೇ ದಕ್ಷಳಿರುತ್ತಾಳೆ. ಗಂಡನನ್ನೂ ಲಕ್ಷ್ಯ ಕೊಡುವಂತೆ ಒತ್ತಾಯ ಪಡಿಸುತ್ತಾಳೆ.! ಹೆಂಡತಿ ಸಕಾಲದಲ್ಲಿ ಕಿವಿದುಂಬಿಸದಿದ್ದರೆ ಎಷ್ಟೋ ಗಂಡಂದಿರಿಗೆ ತನ್ನ ಸ್ಥಾನಮಾನಗಳ ಅರಿವಾಗಲೀ ಪರಿವೆಯಾಗಲಿ ಅನಿಸುವದೇ ಇಲ್ಲ!

ಇದೇ ಕಾರಣದಿಂದ ಹೆಣ್ಣಿನಲ್ಲಿ ವಿನಯವೂ ಹೆಚ್ಚು. ತನ್ನ ಸರಿಸಾಟಿಯೆನಿಸಿದ ಸಮಾಜದಲ್ಲಿ ಗಂಡಿಗಿಂತ ಹೆಣ್ಣು ಹೆಚ್ಚು ವಿನಯವನ್ನು ಪ್ರಕಟಿಸುವಳು. ಈ ವಿನಯದ ಒಂದು ಮಗ್ಗಲಿಗೆ ತಾಯ್ತನದ ಔದಾರ್ಯವೂ ಇರುವದುಂಟು. ಇತರರನ್ನು ಉಪಚರಿಸುವದರಲ್ಲಿ ಅದು ಹೆಚ್ಚು ಪ್ರಕಟವಾಗುತ್ತದೆ. ತನ್ನ ಕುರಿತು ಸಮಾಜವು ಒಳ್ಳೇ ಅಭಿಪ್ರಾಯನ್ನೇ ಪಡಬೇಕೆಂಬ ಹಂಬಲ ಹೆಣ್ಣಿಗೆ ಹೆಚ್ಚಿರುವದರಿಂದ ಆಕೆಯ ವಿನಯದಲ್ಲಿ ತತ್ಪರತೆ ಹೆಚ್ಚು–ಒಣ ಉಪಚಾರ ಕಡಿಮೆ. ಹಾಗೆಯೇ ಆಕೆಯ ಅಹಂಕಾರ–ಆತ್ಮಾಭಿಮಾನವು ಉದ್ಧಟತನವಾಗುವ ಬದಲು ದಯೆಯಾಗಿಯೂ ಸಹಾನುಭೂತಿಯಾಗಿಯೂ ವ್ಯಕ್ತವಾಗುತ್ತದೆ. ಔದಾರ್ಯವು ದಾಕ್ಷಿಣ್ಯವು ಒಂದು ದೊಡ್ಡಸ್ತಿಕೆಯ ಲಕ್ಷಣವಾದ್ದರಿಂದ ಹೆಣ್ಣು ತನ್ನ ವ್ಯಕ್ತಿತ್ವವನ್ನು ಆ ರೀತಿಯಲ್ಲಿಯೇ ಸ್ಥಾಪಿಸುತ್ತಾಳೆ.

ಆದ್ದರಿಂದ ಒಟ್ಟಾರೆ ಹೆಣ್ಣಿನ ವ್ಯಕ್ತಿತ್ವದಲ್ಲಿ ಒಳತಿಗೆ ಪೋಷಕವಾಗುವ ಗುಣಗಳು ಬೆಳೆಯಲು ಅನುವು ಹೆಚ್ಚು. ಮೂಲದಲ್ಲಿಯೇ ಆಕೆ ಅಬಲಳಾಗಿದ್ದು ಪ್ರಕೃತಿಯಿಂದಲೇ ಆಶ್ರಯವನ್ನೂ ಆಧಾರವನ್ನೂ ಬಯಸಿ ಪಡೆದು ಜೀವಿಸಬೇಕಾದ ಪರಿಸ್ಥಿತಿಯು ಹೆಣ್ಣಿನದಾಗಿದ್ದರಿಂದ ಅದಕ್ಕೆ ಅನುಕೂಲವಾಗಿಯೇ ಆಕೆಯ ಮನಃಸ್ಥಿತಿಯು ಮಾರ್ಪಟ್ಟು ಬಂದಿದೆ. ಅಂತೆಯೇ ಸಾಮಾಜಿಕತೆಗೆ ಪೋಷಕವಾಗುವ ಗುಣಗಳಿಗೆಲ್ಲ ಹೆಣ್ಣು ನೆಲೆಯಾಗಿದ್ದಾಳೆ. ಬಿಂಕದೊಡನೆ ಬಿನ್ನಾಣವನ್ನೂ ಮುನಿಸಿನೊಡನೆ ಮಾರ್ದವವನ್ನೂ ಆಗ್ರಹದೊಡನೆ ಆರ್ಜವವನ್ನೂ ಆಕೆ ಕೂಡಿಸಬಲ್ಲಳು. ಅಂತೆಯೇ ಗಂಡಿಗೆ ಆಕೆಯ ಹೆಮ್ಮೆಯೂ ಹರುಷವನ್ನೇ ಕೊಡುತ್ತದೆ, ಹಟವೂ ಹುರುಪನ್ನೇ ನೀಡುತ್ತದೆ. ಆಕೆಗೆ ಸಹಜವಾದ ಸೌಮ್ಯತನವೂ ರಮ್ಯತವೂ ನೀತಿಗೆ ಉಪಕಾರಿಯಾಗುತ್ತವೆ. ಬೇಂದ್ರೆಯವರೆನ್ನುವಂತೆ ಆಕೆಯು 'ದಿನದಿನಕೆ ನವಜಯವನ್ನು ಕೋರುವಾಕೆ' ಯಾಗಿದ್ದರೂ 'ಮಂಗಲವೆ ಬಾ' ಎಂದು ಕರೆಯುವಾಕೆಯೂ ಅಹುದು!

ಇವೆಲ್ಲ ಗುಣಗಳ ಪರಿಪಾಕವಾಗಿ ಆಕೆಯಲ್ಲಿ ಭಾವಿಕತನವೂ ಧಾರ್ಮಿಕತನವೂ ಹೆಚ್ಚು ಪ್ರಕಟಗೊಂಡಿದೆ. ಆಕೆಯಲ್ಲಿ ಭಾವನೆಗಳ ಸೆಳೆತವು ಎಂದೂ ತೀವ್ರವಾಗಿದ್ದುದರಿಂದ ಧರ್ಮದ ಕರೆಗೆ ಹೆಣ್ಣು ಬಲವಾಗಿ ಬೇಗನೇ 'ಓ'ಗೊಡುತ್ತಾಳೆ. ಸಮಾಜ ವ್ಯವಸ್ಥೆಯ ಪ್ರಭಾವದಿಂದ ಗಂಡಿಗಿಂತ ಹೆಣ್ಣಿನಲ್ಲಿ ಕಾಮುಕ ಪ್ರವೃತ್ತಿಗಳ ದಮನವು ವಿಶೇಷವಾಗಿ ನಡೆದುಬಂದಿದೆ. ಈ ದಮನದ ಮೂಲಕ ಆಕೆಯಲ್ಲಿ ಒಂದು ಅಸ್ಪಷ್ಟ ಭಾವಾವೇಶವು ಭಕ್ತಿಗೆ ಅನುಕೂಲವಾಗುವ ಒಂದು ಉದ್ದೀಪನವು–ಸದಾ ಸಂಗ್ರಹಿತವಾಗಿರುತ್ತದೆ. ಅದು ಯಾವದೇ ವ್ಯಕ್ತಿ ವಿಭೂತಿ, ಪ್ರತೀಕ, ದೈವತವನ್ನು ಆರಾಧನೆಯ ಇಲ್ಲವೇ ಆಳವಾದ ಆಸಕ್ತಿಯ ಕೇಂದ್ರವಾಗಿ ಮಾಡಿಕೊಂಡು ಕೃತಾರ್ಥವಾಗುತ್ತದೆ. ನೃತ್ಯ, ಸಂಗೀತ, ಸಮಾಜಸೇವೆ, ಶಿಕ್ಷಣ, ಕಮ್ಯುನಿಷ್ಟಪ್ರಚಾರ–ಮುಂತಾದವುಗಳಿಗೆ ತಮ್ಮ ಜೀವನವನ್ನೇ ಮಾರಿಕೊಂಡು ಆ ಕಾರ್ಯದಲ್ಲಿ ಕಾಯಕಷ್ಟ ಮಾಡಿ ಸುಖಿಯಾಗುವ ಹೆಣ್ಣನ್ನು ನಾವು ನೋಡಬಹುದು. ಯಾವದನ್ನು ಗಂಡು ಬರೇ ಮೆಚ್ಚಬಲ್ಲನೋ ಅದನ್ನೇ ಹೆಣ್ಣು ತನುಮನದಿಂದ ಪೂಜಿಸಬಲ್ಲಳು. ಗಂಡಿನ ಭೋಗದ ವಿಷಯ ಹೆಣ್ಣಿಗೆ ಭಕ್ತಿಯ ವಿಷಯವಾಗಬಹುದು. ಆಕೆಯ ತತ್ವದ ಆಸಕ್ತಿಯು ಗುರುವಿನ ಆರಾಧನೆಯಾಗಿ ಪರಿಣಮಿಸಬಹದು. ಇದರಿಂದ ಬೌದ್ಧಮತದಿಂದ ಕ್ಯಾಥೋಲಿಕ ಮಠಗಳ ತನಕವೂ ಅನೇಕ ಧರ್ಮಸಂಸ್ಥೆಗಳ ಅಧಃಪತನಕ್ಕೆ ಹೆಣ್ಣು ಕಾರಣವಾಗಿದ್ದುಂಟು.

ಹೆಣ್ಣಿನ ಧಾರ್ಮಿಕ ಭಾವನೆಗೆ ಇನ್ನೂ ಒಂದೆರಡು ಸೂಕ್ಷ್ಮ ಕಾರಣಗಳಿವೆ. ಗಂಡಿಗಿಂತ ಹೆಣ್ಣು ಹೆಚ್ಚು ಪ್ರೇಮಜೀವಿಯೆಂಬುದನ್ನು ಹಿಂದೆಯೇ ಹೇಳಿದೆ. ಬಾಳಿನಲ್ಲಿ ವಿಷಕಲಿಸುವ ವಿಯೋಗ ದುಃಖವನ್ನು ಹೆಣ್ಣು ಬಹಳಕಾಲ ಬಹಳ ತೀವ್ರವಾಗಿ ಅನುಭವಿಸಬಲ್ಲಳು. ಹಾಗೆಯೇ ಅಗಲಿಹೋದ ಪ್ರಿಯಜನರ ಪುನರ್ಮಿಲನಕ್ಕಾಗಿ ಹೆಣ್ಣು ಗಂಡಿಗಿಂತಲೂ ಹೆಚ್ಚು ಉತ್ಕಟ ಉತ್ಕಂಠೆಯಿಂದ ತಪಿಸಬಲ್ಲಳು. ಈ ಕಳೆದುಹೋದ ಪ್ರಿಯಜನರ ಪುನರ್ಮಿಲನದ ಆಳವಾದ ಆಶೆಯೇ ಹೆಣ್ಣು ಅಮರತ್ವವನ್ನಾಗಲೀ, ಪುನರ್ಜನ್ಮವನ್ನಾಗಲೀ ನಂಬುವಂತೆ ಮಾಡುತ್ತದೆ. ಜನ್ಮಾಂತರದ ಪ್ರೇಮದ ಸಾಫಲ್ಯಕ್ಕಾಗಿ ಹಾರೈಸಿ, ಹರಕೆಹೊತ್ತು ತಪವನ್ನಾಚರಿಸುತ್ತ ಕಾದುನಿಂತ ಮಹಾಶ್ವೇತೆಯ ಚಿತ್ರವನ್ನು ಬಾಣಭಟ್ಟನು ಬರೆದು ತನ್ನ ಕಾದಂಬರಿಯನ್ನೇ ಹೆಣ್ಣಿನ ಈ ಅಮರ ಶ್ರದ್ಧೆಯ ಹಾಗೂ ಅನನ್ಯ ನಿಷ್ಠೆಯ ಸ್ಮಾರಕವಾಗಿ ಮಾಡಿರುತ್ತಾನೆ. ಗಂಡು ತರ್ಕದಿಂದ ಊಹಿಸಬಲ್ಲ ಆತ್ಮದ ಶಾಶ್ವತೆಯನ್ನು ಹೆಣ್ಣು ತನ್ನ ಹೃದಯದ ಉತ್ಕಟಭಾವನೆಯ ಬಲದಿಂದ ಅನಿಸಿಕೊಳ್ಳಬಲ್ಲಳು. ಸಾವನ್ನು ಒಪ್ಪಿಕೊಳ್ಳಲೊಲ್ಲದ ವ್ಯಕ್ತಿಯ ಅಹಂಕಾರವೇ ಆತ್ಮದ ಅಮರತ್ವವನ್ನು ಕಲ್ಪಿಸಿಕೊಂಡದ್ದರಿಂದ, ಗಂಡಿಗಿಂತಲೂ ಮಿಗಿಲಾಗಿ ಅಹಂಕಾರವುಳ್ಳ ಹೆಣ್ಣು ಅಂಥ ಅಮರತ್ವವನ್ನೂ ಅದಕ್ಕೆ ಸಾಧನವೆನಿಸಿದ ಆಧ್ಯಾತ್ಮಿಕ ಸಾಧನೆಯನ್ನೂ ಅತ್ಯಂತವಾಗಿ ಮನಗಂಡಿದ್ದರೆ ಏನೂ ಸೋಜಿಗವಲ್ಲ.

ಭಕ್ತಿ ಯಾರಿಗೆ ಸುಲಭ

ಸ್ವಭಾವದಿಂದಲೇ ಗಂಡು ಮಣಿಸಿ ಆಳುವಂಥವನು; ಆದರೆ ಹೆಣ್ಣು ಒಲಿಸಿ ಆಳುವಾಕೆಯು. ಇದರಿಂದ ಎಲ್ಲಿ ಗಂಡು ತನ್ನ ನಿಯಂತ್ರಣವನ್ನು ಸ್ಥಾಪಿಸಲು ಹೆಣಗುವನೋ ಅಂಥ ನಿಸರ್ಗದ ಶಕ್ತಿಯನ್ನು ಹೆಣ್ಣು ನಿಯತಿಯೆಂದು ನಮಸ್ಕರಿಸಿ ಆರಾಧಿಸಲು ಬಯಸುವಳು. ಗಂಡಿಗಿಂತಲೂ ಹೆಣ್ಣು ನಿಸರ್ಗದ ಹೆಚ್ಚು ಹತ್ತಿರಳೂ ನೈಸರ್ಗಿಕ ಶಕ್ತಿಗೆ ಹೂಡಿಕೊಂಡವಳೂ ಆಗಿದ್ದರಿಂದ ಆಕೆಗೆ ನಿಸರ್ಗದ ವ್ಯಾಪಾರಗಳೆಲ್ಲ ಒಂದು ದಿವ್ಯಶಕ್ತಿಯ ಲೀಲೆಯಾಗಿ ಕಾಣುವದು ಸಹಜವೇ ಸರಿ. ಇದಲ್ಲದೆ ದೇಹದಿಂದ ಅಶಕ್ತಳಾದ ಹೆಣ್ಣು ಸರ್ವಶಕ್ತವಾದ ಒಂದು ಸಂರಕ್ಷಣೆಯ ಕಲ್ಪನೆಯನ್ನು ಹೆಚ್ಚಿನ ಮನೋಭಾದಿಂದ ಮಾಡಬಲ್ಲಳು. ಭಯಚಕಿತವಾದ ಹೆಣ್ಣು ಹೃದಯವು ಜಗತ್ತಿನ ಹಾಗೂ ಜೀವನದ ಜಟಿಲತೆಯ ಜಂಜಾಟಗಳ ಜಾಲದಲ್ಲಿ ಸಿಲುಕಿ ಜಗತ್ತಿನ ಪರವಾದ ಒಂದು ಶಕ್ತಿಯ ಅನುಗ್ರಹಕ್ಕಾಗಿ ಪ್ರಾರ್ಥಿಸುವದು. ಏಕಾಂತವೇ ಅಸಹ್ಯವಾಗಿದ್ದ ಹೆಣ್ಣು ಸಾಮಾಜಿಕ ಸಮಾಗಮವು ಅಶಕ್ಯವಾದಾಗ ಒಂದು ದೈವೀ ಸನ್ನಿಧಿಯನ್ನು ಮನವಾರೆ ಬಯಸುವಳು.

ಹೀಗಿದ್ದರಿಂದ ಶ್ರದ್ಧೆಯ ಇಲ್ಲವೇ ನಿಷ್ಠೆಯ ಯಾವದೇ ಹೊಸ ಸಂಸ್ಥೆಯನ್ನಾಗಲೀ ಸಂಪ್ರದಾಯವನ್ನಾಗಲೀ ಹೆಣ್ಣು ಮೊದಲಿಗೆ ಬರಮಾಡಿ ಕೊಳ್ಳುವಳು. ಹಾಗೆಯೇ ಹಿಡಿದ ಉಪಾಸನೆಯ ಪಂಥವನ್ನೂ, ಎಷ್ಟೇ ಹಳೆಯದಾದರೂ ಆಕೆ ಬಿಡಲು ಇಷ್ಟಪಡುವದು ಕಡಿಮೆ. ಗಂಡು ತನ್ನ ಹೊರಮೋರೆಯಾದ ಸಾಹಸದಿಂದ ತಾನು ಒಪ್ಪಿಕೊಂಡ ಇಲ್ಲವೇ ಕಂಡುಕೊಂಡ ಧರ್ಮತತ್ವಕ್ಕೆ ಇಲ್ಲವೇ ಆಧ್ಯಾತ್ಮಿಕ ಮತಕ್ಕೆ ಒಂದು ಸಂಸ್ಥೆಯ ಇಲ್ಲವೇ ಮಠಸಾಂಪ್ರದಾಯದ ಸ್ವರೂಪವನ್ನು ಕೊಡಲು ಹವಣಿಸುವನು. ಆದರೆ ಹೆಣ್ಣು ತನ್ನ ಆತ್ಮೋದ್ಧಾರವನ್ನೇ ಮುಖ್ಯವಾಗಿಟ್ಟುಕೊಂಡು ಸಾಗುವಳು. ಗಂಡು ಗುರುವಾಗುವದರಲ್ಲಿ ಮಠಾಚಾರ್ಯನೂ ಧರ್ಮಪ್ರವರ್ತಕನೂ ಸಿಗುವದರಿಂದ ಧನ್ಯತೆಯನ್ನು ಅನುಭವಿಸುವನು. ಆದರೆ ಹೆಣ್ಣು ಕೇವಲ ಭಕ್ತಳಾಗಿ–ಭಕ್ತಿಪರವಶಳಾದ ಯೋಗಿನಿಯಾಗಿ–ದೇವರ ದಾರಿಯಲ್ಲಿ ನಡೆಯುವದರಲ್ಲಿಯೇ ಸುಖಿಯಾಗುವಳು. ಕೆಲವೊಮ್ಮೆ ಇಂಥ ಹೆಣ್ಣು ಹೃದಯದ ಅಂದರೆ ಭಾವನಾಮಯವೂ ಅಂತರ್ಮುಖವೂ ಆದ ಮನೋವೃತ್ತಿಯ ಆರ್ತ ಭಕ್ತರು ತಮ್ಮ ಮಟ್ಟಿಗೆ ತಾವು ಇರಲು ಬಯಸಿದರೂ, ಅವರ ಪುರುಷಾರ್ಥಿಗಳಾದ ಶಿಷ್ಯರು ತಮ್ಮ ಗುರುವನ್ನು ಸಂಸ್ಥೆಯಾಗಿ ಮಾಡಿ ಅವರ ಬೋಧನೆಯನ್ನು ಒಂದು ಸಾಧನೆಯ ಸಾಂಪ್ರದಾಯವಾಗಿ ಕಟ್ಟಿ, ಪರದೊಂದಿಗೆ ಇಹವನ್ನೂ ಸಾಧಿಸುತ್ತಾರೆ. ರಾಮಕೃಷ್ಣ ಪರಮಹಂಸರು ಏಕಾಂತದೇವಿಗಳೂ ಕಾಲೀಮಾತೆಯ ಆರ್ತಭಕ್ತರಾಗಿ ದಕ್ಷಿಣೇಶ್ವರಿಯಲ್ಲಿಯೇ ಉಳಿದರೂ, ಸ್ವಾಮಿ ವಿವೇಕಾನಂದರು ವೇದಾಂತಕೇಸರಿಗಳಾಗಿ ಮೂರೂ ಖಂಡಗಳಲ್ಲಿ ರಾಮಕೃಷ್ಣರ ಸಂದೇಶವನ್ನು ಗರ್ಜಿಸಿ ಮೊಳಗಿ ಒಂದು ಸಮಾಜ ಸೇವೆಯ ಪ್ರಚಂಡ ಸಂಸ್ಥೆಯನ್ನೇ ಕಟ್ಟಿದರು! ಇರಲಿ.

ಹೀಗೆ ಒಂದೆಡೆಗೆ ಗಂಡು ಆದರ್ಶವಾದಿಯೂ ಹೆಣ್ಣು ವ್ಯವಹಾರ ಬುದ್ಧಿಯವಳೂ ಎಂದು ಕಂಡರೂ, ಇನ್ನೊಂದೆಡೆಗೆ ಗಂಡು ಪುರುಷಾರ್ಥವಾದಿಯೂ, ಹೆಣ್ಣು ಪರಮಾರ್ಥ ಪ್ರಿಯಳೂ ಅಹುದು. 'ಪುರುಷಾರ್ಥ' ಶಬ್ದವೇ ಬಹಳ ಮಾರ್ಮಿಕವಿದೆ. ಸ್ತ್ರೀಗೆ ಪುರುಷಾರ್ಥವಿಲ್ಲ! ಆದರೆ ಗಂಡಿನ ಆದರ್ಶವಾದವೂ ಪುರುಷಾರ್ಥವೂ ಅಪಶಯದ ಪರಂಪರೆಯನ್ನು ಬಹುಕಾಲ ತಡೆದು ನಿಲ್ಲದು. ಗೆಲುವಿನ ರಥವನ್ನೇರಿಯೇ ಗಂಡಿನ ಮನೋರಥವು ಮುಂದುವರಿಯುವದು. ಗಂಡಿನ ಆಶೆಗೆ ಎತ್ತರ ಹೆಚ್ಚಿದಂತೆಯೇ ತಳದ ಆಧಾರ

ಅಷ್ಟೊಂದು ಭದ್ರವಿರುವದಿಲ್ಲ. ಅಂದರೆ ಎಲ್ಲ ರೀತಿಯಿಂದಲೂ ಹತಾಶನಾದ ಗಂಡು ಬದುಕನ್ನೇ ಭಾರವಾಗಿ ಕಾಣುತ್ತಾನೆ. ಕಂಗೇಡಿನ ಕಗ್ಗತ್ತಲೆಯಲ್ಲಿ ನಿರಾಶೆಯ ನಿಬಿಡ ನಿಶೆಯಲ್ಲಿ ಗಂಡು ಮುಂದುಗಾಣದೇ ಬಾಳಿನ ಆಶೆಯನ್ನೇ ಬಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬಹುದು.

ಹೆಣ್ಣಿನ ಆಶಾವಾದ

ಆದರೆ ಹೆಣ್ಣಿನ ಆಶಾವಾದ ಜಿನುಗು ಇದ್ದಷ್ಟೇ ಜಿವುಟೂ ಅಹುದು. ಉಕ್ಕಿನ ತಂತಿಗೆ ಬಿರುಸು ಹೆಚ್ಚಿರುವಂತೆ ಬಿರುಕೂ ಹೆಚ್ಚು–ತುಂಡಾಗುವ ಭಯ ಹೆಚ್ಚು. ಹೆಣ್ಣಿನ ಆಶೆ ರೇಶಿಮೆಯ ಎಳೆ. ಒಮ್ಮೆಲೇ ಪೆಟ್ಟಿಗೆ ಹರಿಯುವದಿಲ್ಲ; ಕೋಮಲವಿದ್ದೂ ದುರ್ಬಲವಲ್ಲ. ಕಷ್ಟನಷ್ಟಗಳ ಭಾರದಡಿಗೂ ಅದು ತಾಳಬಲ್ಲದು. ಪ್ರಪಂಚದ ಎಲ್ಲ ಆಶೆ ಆಕಾಂಕ್ಷೆಗಳು ಬೂದಿಯಾಗಿಹೋದರೂ, ಬದುಕಿನ ಶುಭವೆಲ್ಲ ಮಣ್ಣುಪಾಲಾದರೂ, ಹೆಣ್ಣು ಇಹದ ದೈನ್ಯದಲ್ಲಿ ಪರದ ಪುಣ್ಯವನ್ನು ಕಂಡುಕೊಂಡು ದೇವರಿಗೆ ಮೊರೆಯಿಟ್ಟು ಮೋಕ್ಷದತ್ತ ಮೊರೆಯಿಟ್ಟು ಭಗವದನುಗ್ರಹಕ್ಕಾಗಿ ಅಂಗಲಾಚಿ ತನ್ನ ಶೂನ್ಯ ಹೃದಯದಲ್ಲಿ ಆದಷ್ಟು ಶಾಂತಿಯನ್ನೂ ಶಕ್ತಿಯನ್ನೂ ತಂದುಕೊಂಡು ತಾಳ್ಮೆಯಿಂದ ಬಾಳುವಳು. ತಿತಿಕ್ಷೆ ಗಂಡಿಗೆ ಬಹಳ ಮಟ್ಟಿಗೆ ಅಶಕ್ಯ! ಸುಖದ ನಂಬಿಗೆ ಇಲ್ಲದೆ ಗಂಡು ದುಃಖವನ್ನು ಸಹಿಸಲಾರ ಹೆಣ್ಣಿಗೆ ಅಂಥ ಆಗ್ರಹವಿಲ್ಲ. ಮೊದಲು ಸಾವಧಾನ, ಆಮೇಲೆ ಸಮಾಧಾನ ಇದು ಜಾಣ ಹೆಣ್ಣಿನ ಜೀವನದ ಸೂತ್ರ.

ಅಂದಮೇಲೆ ಗಂಡಿಗಿಂತ ಹೆಣ್ಣಿನಲ್ಲಿ ದೇವ–ಧರ್ಮ, ಪುಣ್ಯ–ಪರಲೋಕ. ಪರಮಾತ್ಮ–ಪರಮಾರ್ಥಗಳ ಪ್ರಭಾವಕ್ಕೆ ಮನೋವೃತ್ತಿ ಹೆಚ್ಚು ಅನುಕೂಲವೆಂದಾಯಿತು. ಅಂತೆಯೇ ಆಕೆ ಸಹಧರ್ಮಚಾರಿಣಿ. ಗಂಡಿನ ಯಾವ ಧರ್ಮಕಾರ್ಯಕ್ಕೂ ಹೆಂಡತಿಯ ಸಹಾಯ ಸಹಚರ್ಯ ಬೇಕು. ಗಂಡು ಅಧರ್ಮಿಯಾದರೂ, ಅಕರ್ಮಿಯಾದರೂ ನಡೆದೀತು; ಹೆಂಡತಿಯ ಧರ್ಮ ಪುಣ್ಯಗಳು ಆಕೆಯೊಂದಿಗೆ ಪತಿಯನ್ನೂ ಸಂತತಿಯನ್ನೂ ಕುಲವನ್ನೂ ಉದ್ಧರಿಸುವವೆಂದು ನಮ್ಮ ಪೂರ್ವಿಕರು ನಂಬಿದ್ದರು. 'ಹೆಣ್ಣು ಕೆಟ್ಟರೆ?.....' ಎಂಬುದೇ ಅರ್ಜುನನಿಗೆ ಭೀಕರ ಪ್ರಶ್ನೆಯಾಯಿತು!

ಹೆಣ್ಣಿನ ಸ್ವಭಾವ ಭೇದಗಳನ್ನು ವರ್ಣಿಸುವಾಗ ಗಂಡಿನ ಸ್ವಭಾವದ ಕುರಿತು ನಮ್ಮ ಪ್ರಾಚೀನ ಲಾಕ್ಷಣಿಕರು ಇಟ್ಟುಕೊಂಡ ನಾಯಕ ಭೇದಗಳನ್ನು ಈ

ಹಿಂದೆ ಎತ್ತಿ ಹೇಳಲಾಯಿತು. ಆದರೆ ಅದಕ್ಕೂ ಆಳದಲ್ಲಿ ಹೋಗಿ ಗಂಡಿನ ವ್ಯಕ್ತಿತ್ವಕ್ಕೆ ಸಾಮಾಜಿಕ ಜೀವನದ ಪೇಚು-ಪೆಟ್ಟುಗಳ ತೆಕ್ಕೆ-ತಿಕ್ಕಾಟಗಳಲ್ಲಿ ತಡೆದು ನಿಲ್ಲುವಂತೆ ಬೆಳೆದು ಬರುವ ಕೆಲವೊಂದು ರೂಪಗಳನ್ನು ಸ್ವಭಾವದ ಸ್ಥೂಲ ಸ್ವರೂಪಗಳನ್ನು ಇಲ್ಲಿ ಬಣ್ಣಿಸಿದರೆ ಅಪ್ರಸ್ತುತವಾಗಲಿಕ್ಕಿಲ್ಲವೆಂದು ನಂಬಬಹುದಷ್ಟೇ!

ಮೊದಲು ವ್ಯಕ್ತಿತ್ವದ ಮಾತನ್ನೇ ತಿಳಿಯಲು ಯತ್ನಿಸೋಣ. ವ್ಯಕ್ತಿತ್ವವೆಂದರೇನು? ವ್ಯಕ್ತಿತ್ವವು ರೂಪವಲ್ಲ, ಶೀಲವಲ್ಲ, ಕೆಲವೊಂದು ಗುಣವಲ್ಲ. ಆದರೆ ರೂಪ ಗುಣಶೀಲಗಳೆಲ್ಲವೂ ವ್ಯಕ್ತಿತ್ವದ ಅಂಗಗಳಾಗಿಯೇ ಅಂಸಗಳೆನಿಸುವವು. ಸಾಮಾನ್ಯವಾಗಿ ಶೀಲವೆಂದೊಡೆನೆಯೇ ಶಿಷ್ಟರೂ ಅವರನ್ನು ಕಾಡುವ ದುಷ್ಟರೂ ನೆನಪಿಗೆ ಬರುತ್ತಾರೆ. ಆದರೆ ವ್ಯಕ್ತಿತ್ವ ಇದಕ್ಕೂ ವ್ಯಾಪಕವಾದದ್ದು; ಒಳಿತು-ಕೆಡುಕು ನಡತೆ ಕೇವಲ ವ್ಯಾವಹಾರಿಕ ಪಾತಳಿಯ ಅನುಕೂಲ ಪ್ರತಿಕೂಲಗಳಿಂದಲೇ ಅಳೆಯಲಾಗುತ್ತದೆ. ಈ ಅನುಕೂಲ ಪ್ರತಿಕೂಲಗಳು ತಾತ್ಕಾಲಿಕವಿರಬಹುದು. ದೀರ್ಘಕಾಲಿಕಕವಿರಲೂಬಹುದು. ಕೆಲವೊಂದು ನಡತೆಯ ಪರಿಣಾಮ ಅನುಕೂಲವಾಗಿಯೋ ಪ್ರತಿಕೂಲವಾಗಿಯೋ ಕೆಲವೇ ಜನಕ್ಕೆ ಸ್ವಲ್ಪವೇ ಕಾಲ ಅನುಭವಕ್ಕೆ ಬರಬಹುದು ಅಥವಾ ಹಲವಾರು ಜನಕ್ಕೆ ಬಹಳ ಕಾಲಾವಧಿಯ ತನಕವೂ ಸುಖ-ದುಃಖ ಹಿತಾಹಿತಗಳಿಗೆ ಕಾರಣವಾಗಲೂಬಹುದು. ಒಟ್ಟಾರೆ ನಡತೆಯ ಈ ವ್ಯಾವಹಾರಿಕ ಸ್ವರೂಪದ ಅನುಕೂಲ ಪ್ರತಿಕೂಲಗಳನ್ನೇ ಗಮನಿಸಿಕೊಂಡು ಮನುಷ್ಯನು ಶಿಷ್ಟ ದುಷ್ಟರೆಂಬ ಎರಡು ವರ್ಗಗಳನ್ನು ಮಾಡಿಕೊಂಡು ಬಂದಿರುತ್ತಾನೆ.

ಸ್ವಭಾವದ ವರ್ಗೀಕರಣ ಸಾಧ್ಯವೆ?

ಆದರೆ ಈ ವರ್ಗೀಕರಣವೂ ಬಹಳೇ ಕಟ್ಟುನಿಟ್ಟಾಗಿ ಇರುವದಿಲ್ಲ. ಶಿಷ್ಟ-ದುಷ್ಟರನ್ನು ವಿಂಗಡಿಸುವದು ಆಡು-ಕುರಿಗಳನ್ನು ಬೇರ್ಪಡಿಸಿದಷ್ಟು ಸುಲಭ ಕೆಲಸವಲ್ಲ. ಸಜ್ಜನರಲ್ಲಿಯೂ ಕೆಲವು ಕೀಳು, ಕೆಡಕು, ಕುಂದು, ಕೊರತೆ ಇರುವದುಂಟು. ದುರ್ಜನರಲ್ಲಿಯೂ ಒಂದೆರಡು ಒಳಿತು ಗುಣಗಳು ಕಾರ್ಮುಗಿಲ ಮಿಂಚಿನಂತೆ ತೋರಿಬರುವದುಂಟು. ವೈಯಕ್ತಿಕ ಜೀವನದಲ್ಲಿ ಕರ್ತವ್ಯನಿಷ್ಠ ತಂದೆಯಾಗಿ, ಮಮತೆಯುಳ್ಳ ಪತಿಯಾಗಿ, ನಂಬಿಗಸ್ತ ಗೆಳೆಯನಾಗಿ ಇರುವ ವ್ಯಕ್ತಿಯೂ ಸಾಮಾಜಿಕ ಜೀವನದಲ್ಲಿ ಲೋಭಿಯೂ ಲಾಭನಡಕನೂ, ಲಂಚಗುಳಿಯೂ, ಹೊಣೆಗೇಡಿಯೂ, ದಬ್ಬಾಳಿಕೆಯ ದೈತ್ಯನೂ ಆಗಿ ಜನರ

ಕೋಪ-ಶಾಪಕ್ಕೆ ಆಸ್ಪದನಾಗುವದನ್ನು ನಾವು ಕಂಡಿಲ್ಲವೇ? ಹಾಗೆಯೇ ವ್ಯಕ್ತಿಗತವಾಗಿ ತಿಳಿಗೇಡಿಯೆಂದೂ ಉಂಡಾಡಿಯೆಂದೂ ವ್ಯಸನಿ ವಿಲಾಸಿ ಇಲ್ಲವೇ ವ್ಯಭಿಚಾರಿಯೆಂದೂ 'ಕೀರ್ತಿ' ಪಡೆದ ಕಲಿಪುರುಷನು ತನ್ನ ಊರಿಗೋ, ಸಮಾಜಕ್ಕೋ ಆಯಕಟ್ಟಿನಲ್ಲಿ ನೆರವಾಗಲು ಜೀವನದ ಹಂಗುದೊರೆದು ಹೆಣಗಾಡಿದ್ದನ್ನೂ ನಾವು ಕೇಳಿಲ್ಲವೆ? ತುರ್ಕಸ್ಥಾನದ ಹೊಸ ಹುಟ್ಟಿಗೆ ತಂದೆಯೆನಿಸಿಕೊಂಡ ಕಮಾಲಪಾಶಾನ ಚರಿತ್ರ ಇಲ್ಲಿ ನೆನಪಿಗೆ ಬರದೇ ಇರಲಾರದು. ಒಟ್ಟಾರೆ ಶಿಷ್ಟ-ದುಷ್ಟರನ್ನು ತಪ್ಪದೇ ವಿಂಗಡಿಸಲು ಒಮ್ಮೆಲೇ ಬರುವಂತಿಲ್ಲ. ಮೇಲಾಗಿ ಇನ್ನೂ ಒಂದು ಸೂಕ್ಷ್ಮವಿದೆ. ಇಂದಿನ ಶಿಷ್ಟನು ನಿನ್ನೆಯತನಕ ದುಷ್ಟನಾಗಿದ್ದು, ಇಂದಿನ ದುಷ್ಟನು ನಾಳೆ ಶಿಷ್ಟನಾಗಬಲ್ಲನೆಂಬುದರ ಉದಾಹರಣೆಗಳೂ ಹಲವು ಉಂಟು!

ಆದರೆ ಅದೇನೇ ಇದ್ದರೂ ವ್ಯಕ್ತಿತ್ವವೆಂಬುದು ಶಿಷ್ಟ ದುಷ್ಟರನ್ನೂ ಒಳಪಡಿಸಿಕೊಂಡು ನಿಂತ ಸತ್ವವು. ರಾಮನಲ್ಲಿ ಇದ್ದಂತೆ ರಾವಣನಲ್ಲಿಯೂ, ಕೃಷ್ಣನಲ್ಲಿ ಇದ್ದಂತೆ ದುರ್ಯೋಧನನಲ್ಲಿಯೂ ಪ್ರಭಾವಿಯಾದ ವ್ಯಕ್ತಿತ್ವ ರೂಪಗೊಂಡಿತ್ತು. ಅವರೆಲ್ಲರೂ ಮಹಾನುಭಾವರು! ಇಂಥ ವ್ಯಕ್ತಿತ್ವ ಸಾಮಾಜಿಕತೆಯ ಪರಿಪಾಕವಾಗಿದ್ದರೂ, ಮೂಲತಃ ವೈಯುಕ್ತಿಕ ಸತ್ವ ಹಾಗೂ ಸಾಧನೆಯದೇ ಒಂದು ಎರಕ. ದಂಡೆಗಳು ನದಿಯ ಪಾತ್ರಕ್ಕೆ ಆಕಾರವನ್ನು ಕೊಡುತ್ತಿದ್ದರೂ, ಪ್ರವಾಹದ ಆಳ ಅಗಲವೂ ವೇಗ ಒತ್ತಡವೂ ಆ ದಂಡೆಗಳನ್ನು ರೂಪಗೊಳಿಸುವದಿಲ್ಲವೆ? ಹಾಗೆಯೇ ವ್ಯಕ್ತಿ ಮತ್ತು ಸಮಾಜ ಇವೆರಡರ ಕ್ರಿಯೆ-ಪ್ರತಿಕ್ರಿಯೆಗಳಿಂದಲೇ ವ್ಯಕ್ತಿತ್ವವು ಒಡ ಮೂಡುತ್ತದೆ. ಸಾಮಾಜಿಕ ಜೀವನವಿಲ್ಲದೇ ವ್ಯಕ್ತಿತ್ವವಿಲ್ಲ. ಏಕಾಕಿಯಾಗಿ ಏಕಾಂತದಲ್ಲಿ ಗುಡ್ಡದಲ್ಲಿಯೋ ಗವಿಯಲ್ಲಿಯೋ ಮನುಷ್ಯ ಬಾಳಿ ಬೆಳೆದರೆ (ಅಂಥ ಇರುವಿಕೆಗೆ ಬಾಳು-ಬೆಳವಣಿಗೆಯೆಂಬ ಹೆಸರು ಸಲ್ಲುವಂತಿದ್ದರೆ!) ಆ ಪ್ರಾಣಿಗೆ ವ್ಯಕ್ತಿತ್ವವೇ ಇರುವದಿಲ್ಲ! ಪಶುಪಕ್ಷಿಗಳಂತೆಯೇ ಆತನ ಅಸ್ತಿತ್ವ. ತನ್ನತನದ ಅರಿವೇ ವ್ಯಕ್ತಿತ್ವದ ನೆಲೆ. ಈ ಅರಿವಾಗುವದು ಹಲವರ ನಡುವೆಯೇ, ಹೆರವರ ಇದುರಿಗೇ, ಆದ್ದರಿಂದ ವ್ಯಕ್ತಿತ್ವದ ವಿಕಾಸಕ್ಕೆ ಸಮಾಜವೇ ಅಧಿಷ್ಠಾನ. ನಾವು ಬಿಡಿವ್ಯಕ್ತಿಯೆಂದು ಬಾಳುವದು ಸಮಾಜದಲ್ಲಿಯೇ ಸರಿ. ನಾವು ಒಂಟಿಯೆಂದೆನಿಸುವದು ಮಂದಿಯ ಸಂಪರ್ಕದಿಂದಲೇ ಸರಿ!

ವ್ಯಕ್ತಿತ್ವದ ಲಕ್ಷಣ

ಇಂಥ ವ್ಯಕ್ತಿತ್ವದ ಒಂದು ಮುಖ್ಯ ಲಕ್ಷಣವೆಂದರೆ ಸಾಮಾಜಿಕ ಪ್ರಭಾವ. ತಾನು ಹೋದಲ್ಲಿ, ಹೊಂದಿಕೊಂಡಲ್ಲಿ ನಾಲ್ಕು ಜನರ ಕಣ್ಣು ಮನಗಳನ್ನು ಸೆಳೆದು ಇಟ್ಟುಕೊಳ್ಳುವ ಶಕ್ತಿ ತನ್ನದೇ? ಈ ಪ್ರಶ್ನೆಯ ಉತ್ತರವೇ ತನ್ನ ವ್ಯಕ್ತಿತ್ವದ ಗಮಕವು. ಯಾವದೆ ಅಲೌಕಿಕ ಇಲ್ಲವೇ ಅಸಾಮಾನ್ಯ ಕೃತ್ಯವಾಗಲೀ ಗುಣ ವಿಶೇಷವಾಗಲೀ ಇಲ್ಲದೆ, ಸಾಮಾನ್ಯರಲ್ಲಿಯೂ ಒಡೆದೆದ್ದುಕಾಣುವ ಬದುಕಿನ ಮಾದರಿಯೇ ವ್ಯಕ್ತಿತ್ವವು. ಹಾದಿಹೋಕರಿಗಾಗಿ ಇಷ್ಟೊಂದು ವ್ಯಾಖ್ಯೆ ಸಾಕು.

ಈ ವ್ಯಕ್ತಿತ್ವವನ್ನು ಮಾರ್ಪಡಿಸುವದರಲ್ಲಿ ಮನುಷ್ಯನ ಜೀವನದಲ್ಲಿ ಬಯ ಪ್ರವೃತ್ತಿಯು ಬಹಳೇ ದೊಡ್ಡ ಕೆಲಸ ಮಾಡುತ್ತದೆ. ನಿರ್ಭಯವಿದ್ದಷ್ಟು ಮನುಷ್ಯ ಸುಖಿಯಾಗುತ್ತಾನೆ. ಅಭಯದಿಂದಲೇ ಸತ್ವಸಂಸಿದ್ಧಿ. ಸಾಮಾಜಿಕ ಸ್ಥಿತ್ಯಂತರಗಳು. ನೈಸರ್ಗಿಕ ಶಕ್ತಿಗಳು, ಆರ್ಥಿಕ ಅವಸ್ಥಾಂತರಗಳು-ಇವೆಲ್ಲ ಪ್ರಚಂಡ ಸಂಗತಿಗಳ ಇದುರಿಗೆ ವ್ಯಕ್ತಿಯು ಅಸಹಾಯನಾಗಿ ಬದುಕಿ ಬೆಳೆದು ಭಯದೊಡನೆ ಒಡನಾಡುತ್ತಾನೆ; ಹೆಣಗಾಡುತ್ತಾನೆ. ಆದ್ದರಿಂದ ವ್ಯಕ್ತಿಯ ಮನೋರಚನೆಯಲ್ಲಿ ಭಯದ ಪ್ರಭಾವವು ಪ್ರಚಂಡವಿರುತ್ತದೆ. ಕೆಲವರ ವ್ಯಕ್ತಿತ್ವಕ್ಕೆ ಈ ಭಯವೆಂಬುದೇ ಹಿನ್ನೆಲೆಯಾಗಿ ಒಂದು ವಿಕಾರವಾದ ಎರಕ ಹೊಯ್ದಂತೆ ಕಂಡುಬರುತ್ತದೆ. ಅವರ ಬಾಳಿನ ಭಯವೆಲ್ಲ ಸಂಶಯದ ವೃತ್ತಿಯಾಗಿ ಸ್ಫುಟವಾಗುತ್ತದೆ. ಎಷ್ಟೋ ಜನ ಸ್ವಭಾವತಃ ಇಂಥ ಸಂಶಯ ವೃತ್ತಿಯವರಿರುವದನ್ನು ನಾವು ನೋಡುತ್ತೇವೆ. ಇಂಥವರ ಬದುಕು ಕೊನೆಗೂ ಕನಿಕರಕ್ಕೆ ಕಾರಣವು. ಸಂಶಯವೃತ್ತಿಯು ಯಾವ ರಸದಲ್ಲಿಯೂ ಕಸ ಕಲಿಸುವ-ವಿಷಗಲಿಸುವ-ದುಷ್ಟಶಕ್ತಿ, ಕುಟುಂಬ ಸ್ವಾಸ್ಥವನ್ನು ಮನೆತನಗಳ ಘನವಂತಿಕೆಯನ್ನು, ಉದ್ಯೋಗ ವ್ಯವಸಾಯಗಳ ನೈಪುಣ್ಯ-ಯಶಸ್ವತೆಗಳನ್ನು, ಅದೇಕೆ? ರಾಷ್ಟ್ರೀಯ ಜೀವನವನ್ನೇ ಸಂಶಯದ ವೃತ್ತಿಯು ಕೆಡಿಸುವ ಸುರಂಗದಂತೆ ಸಿಡಿಮದ್ದಿನಂತೆ ಇದೆ. ಸಂಶಯವೃತ್ತಿಯ ಜನ ಯಾವಾಗಲೂ ಅಸಂತುಷ್ಟರೂ ಅಸಮಾಧಾನಿಗಳೂ ಇರುತ್ತಾರೆ. ಆದರೆ ಈ ಅಸಂತೋಷವು "ಏಳಿಗೆಯ ಮೂಲವಲ್ಲ". ಆ ಮೂಲವನ್ನೇ ಕೀಳುವ ಶೂಲ. ಈ ಅಸಂತೋಷವು ಒಂದು ಅನುದಿನ ಕುದಿಯುವ ಸಂತಾಪವಾಗಿ ತನ್ನ ದುಃಖಗಳಿಗೆ ಹೆರವರನ್ನೇ ಹೊಣೆಯಾಗಿ ಭಾವಿಸುತ್ತ ತನ್ನ ಸುತ್ತಲೆಲ್ಲ ಒಳಸಂಚಿನ ಬಲೆಯನ್ನೇ ಕಲ್ಪಿಸಿ ಇನ್ನೂ ಹೆಚ್ಚು ದುಃಖ ದುರಂತಗಳಿಗೆ ಮುಳುವಾಗುತ್ತದೆ. ಸಂಶಯಕ್ಕೆ ತಕ್ಕ ಕಾರಣವೇ ಬೇಕಾಗುವದಿಲ್ಲ. ಜಗತ್ತಿನಲ್ಲಿ ಕಾರಣವಿಲ್ಲದೇ ಕಾರ್ಯವಾಗುವದಿದ್ದರೆ

ಅದು ಸಂಶಯದ ಬೆಳವಣಿಗೆಯೇ ಅನ್ನಬೇಕು! ಅಷ್ಟೊಂದು ಅಲ್ಪ ಕಾರಣದಿಂದ ಹುಟ್ಟಿ ಅಕಾರಣವಾಗಿ ಸಂಶಯವು ವೃದ್ಧಿಗೊಳ್ಳುತ್ತದೆ! ಒಂದು ಸನ್ನೆ, ಒಂದು ನೋಟ, ಒಂದು ಮಾತು, ಒಂದು ಊಹೆ ಸಾಕು ಸಂಶಯದ ಹುಟ್ಟಿಗೆ. ಮಿಕ್ಕ ಯಾವ ಕೆಲಸಕ್ಕೂ ಅಯೋಗ್ಯರಾದ, ಮನುಷ್ಯರು ಸಂಶಯವನ್ನು ಹುಟ್ಟಿಸಬಲ್ಲರು; ಹಚ್ಚಿಸಬಲ್ಲರು. ಹಲವರ ಬಾಳನ್ನು ಹದಗೆಡಿಸಿ ಅವರೊಂದಿಗೆ ತಾವೂ ಹಾಳಾಗಬಲ್ಲರು!

ಈ ಸಂಶಯವೃತ್ತಿಯ ಪರಿಣಾಮವಾಗಿ ಹಲವು ಜನ ಗೌಪ್ಯಗೋಪನಕ್ಕೆ ತೊಡಗುವರು; ಮುಚ್ಚಿಡುವ, ಬಚ್ಚಿಡುವ ಬುದ್ಧಿಯವರಾಗುವರು. ಸರಳವಾಗಿ, ಪ್ರಕಟಾಗಿ ನಾಲ್ಕು ಜನ ಕಾಣುವಂತೆ ಕೇಳುವಂತೆ ಯಾವ ಸಾಮಾನ್ಯ ಕೆಲಸವನ್ನೂ ಮಾಡತಕ್ಕ ಸಾಮಾನ್ಯ ಮಾತನ್ನು ಆಡರು. ಚಿಕ್ಕಪುಟ್ಟ ಸಂಗತಿಗಳಿಗೂ ಮಿತಿಮೀರಿದ ಗೌಪ್ಯ! ಗುಜುಗುಟ್ಟದ ಹೊರತು ಇಂಥವರ ಮಾತುಕತೆಯೇ ನಡೆಯದು. ತನ್ನಂತೆ ಪರರೆಂದು ಭಾವಿಸುವದನ್ನು ಸರ್ವಜ್ಞನು ಬೋಧಿಸುವ ಮೊದಲೇ ಎಲ್ಲರೂ ಬಲ್ಲರು. ಆದ್ದರಿಂದ ಈ ಗೌಪ್ಯಗೋಪನದ ಜನರು ಹೆರವರೂ ಅಂಥವರೆಂದೇ ಭಾವಿಸಿ ನಡೆಯುವರು. ಹೆರವರ ಸರಳ ಮಾತಿಗೂ ಒಂದು ವಿಶೇಷ ಅರ್ಥವನ್ನೋ, ವಿಚಿತ್ರ ಧ್ವನಿಯನ್ನೋ ಕಲ್ಪಿಸುವದು ಇವರಿಗೆ ಬಹಳೇ ಸಹಜ ಚಟ. ತನ್ನ ವಿಕಾರ ವಿಚಾರಗಳನ್ನು ಹತ್ತಿಕ್ಕಿ ಹುದುಗಿಸಿಡುವದರೊಂದಿಗೆ ಇತರರ ವಿಕಾರ ವಿಚಾರಗಳನ್ನು ಹೊಳವಿನಿಂದ ಹುಡುಕಾಡುವ ಕಲೆ ಈ ಗೌಪ್ಯಗೋಪಕರಿಗೆ ಮೈಯುಂಡು ಹೋಗಿರುತ್ತದೆ. ಹೆರವರು ಆಡಿದ ಮಾತಿಗಿಂತ ಆಡದಿದ್ದ ಮಾತುಗಳನ್ನೂ, ಮಾಡಿದ ಒಳಿತಿಗಿಂತ ಮಾಡದಿದ್ದ ಕೆಡುಕುಗಳನ್ನು ಇವರು ಚೆನ್ನಾಗಿ ಊಹಿಸಿ ಅರಿತುಕೊಳ್ಳಬಲ್ಲರು! ಈ ಗುಣ ಹದವಾಗಿದ್ದರೆ ಇಂಗಿತಜ್ಞತೆ ಎನಿಸುವುದು ವ್ಯವಹಾರದಲ್ಲಿ ಮಂದಿಯ ಮನಸಿನಲ್ಲಿರುವುದನ್ನು ಮೊದಲೇ ಅರಿತುಕೊಂಡು, ಆ ಮೇರೆಗೆ ನಡೆದು ಯಶವನ್ನೂ ಶ್ರೇಯವನ್ನೂ ಪಡೆಯಲು ಈ ಇಂಗಿತಜ್ಞತೆ ಅತ್ಯಂತ ಉಪಯುಕ್ತವು. ಇಂಥ ಗೌಪ್ಯಗೋಪನ ವೃತ್ತಿಯವರು ತಮ್ಮ ಮುಖಮುದ್ರೆ ಹಾವಭಾವಗಳಲ್ಲಿ ಅಂತರಂಗದ ಯಾವ ಭಾವವನ್ನು ಹೊರಹೊಮ್ಮಲು ಕೊಡದಂತೆ ಧೂರ್ತತೆಯಿಂದ ನಡೆಯಬಲ್ಲರು! ಸಿಟ್ಟನ್ನು ಅಡಗಿಸಿ ನಗಬಲ್ಲರು! ಸ್ವೈರಾಚಾರಿಯಾಗಿಯೂ ಬಹಳ ನಾಚಬಲ್ಲರು. ದುರಾಲೋಚನೆಗಳನ್ನು ಅಡಗಿಸಿಟ್ಟು, ಸಂಭಾವಿತರಾಗಿ ಕಾಣಿಸಿಕೊಳ್ಳಬಲ್ಲರು.

ಸಂಶಯಾತ್ಮರ ಅವತಾರಗಳು

ಇಂಥವರು ಇನ್ನೊಬ್ಬ ಖಲಪುರುಷನ ಮುಂದಿನ ಹೊಂಚು–ಹೆಜ್ಜೆಯನ್ನು ಊಹಿಸಬಲ್ಲರು–ಅದಕ್ಕೆ ತಕ್ಕ ಉಪಾಯವನ್ನೂ ಹೂಡಿಡಬಲ್ಲರು. 'ಕಳ್ಳರ ಹೆಜ್ಜೆ ಕಳ್ಳನೇ ಬಲ್ಲ' ಎಂಬ ಮಾತಿನ ಇಂಗಿತವೂ ಇದೇ. ಹೀಗೆ ಮಿತವಾಗಿದ್ದರೆ ಗೌಪ್ಯಗೋಪನ ವೃತ್ತಿಯೂ ಅದರ ಹಿಂದಿನ ಸಂಶಯವೃತ್ತಿಯೂ ಕೂಡಿಯೇ ಇಂಗಿತಜ್ಞತೆಯಾಗಿ, ವ್ಯಕ್ತಿಗೂ ಸಮಾಜಕ್ಕೂ ಹಿತಕಾರಿಯಾಗಬಲ್ಲವು. ದೂರದರ್ಶಿತನವೂ, ಪ್ರಸಂಗಾವಧಾನವೂ, ತೀಕ್ಷ್ಣ ನಿರೀಕ್ಷಣ, ನಿರೂಪಣದಿಂದ ಗೌಪ್ಯದುಷ್ಟತನವನ್ನು ಕಂಡು ಹಿಡಿಯುವ ಶಕ್ತಿಯೂ ಇಂಥ ಹಿತಮಿತವಾದ ಸಂಶಯವೃತ್ತಿಯ ಫಲಗಳು.

ಸಂಶಯವೃತ್ತಿಯ ಜನಕ್ಕೆ ಬೇರೆಯವರ ಮನಸ್ಸಿನ ಒಳಸುಳುವು ಸೆಳವುಗಳೆಲ್ಲವೂ ಹೊಳೆಯುತ್ತವೆ. ಚಿಕ್ಕಪುಟ್ಟ ಘಟನೆಗಳು, ಮಿಕ್ಕವರ ಲಕ್ಷ್ಯಕ್ಕೆ ಬಾರದ ಸಂಗತಿಗಳು. ಮಂದಿಯ ನಡೆನುಡಿಯ ಸೂಕ್ಷ್ಮವಿಶೇಷಗಳು–ಇವೆಲ್ಲವೂ, ಹಿತಮಿತವಾದ ಸಂಶಯವೃತ್ತಿಯವನ ತೀಕ್ಷ್ಣ ನಿರೀಕ್ಷಣೆಗೆ ಮಹತ್ವದ ವಸ್ತುಪಾದಗಳಾಗಿ ಕಾಣುತ್ತವೆ. ಆದರೆ ಇವೆಲ್ಲವೂ ಸಂಶಯವಿಲ್ಲದ ಸರ್ವಸಂತುಷ್ಟ ಇಲ್ಲವೆ ಸರಳ ಹೃದಯದ ವ್ಯಕ್ತಿಗೆ ಕೊನೆಯವರಿಗೂ ಗಮನಕ್ಕೆ ಬಾರದೆ ಹೋಗುವದುಂಟು. ಆದ್ದರಿಂದ ಒಂದು ರೀತಿಯಲ್ಲಿ ನೋಡಿದರೆ ಸರಳಹೃದಯದ ಸಜ್ಜನರು ಹಲವು ಸಲ ಅಭಾವಿತರಾಗಿಯೇ ಬಹಳೇ ಘಾತಕ್ಕೆ ಕಾರಣರಾಗುವದುಂಟು. ಅವರ ಈ ವ್ಯಕ್ತಿಗತ ಸರಳತನವೇ ಎಷ್ಟೋ ಸಲ ಸಾರ್ವಜನಿಕ ಕಪಟಾಚಾರಣೆಗೂ ಕುಟಿಲ ವ್ಯವಹಾರಕ್ಕೂ ಇಂಬು ಕೊಡುವದುಂಟು, ಒಂದು ಸಂಸ್ಥೆಯಲ್ಲಿ ಒಬ್ಬ ಸರಳ ಹೃದಯಿಯೆಂದು ಹೆಸರಾದ ಸಜ್ಜನಿರುತ್ತಾನೆಂದು ಭಾವಿಸೋಣ. ಅವನಿಂದ ಎರಡು ಬಗೆಯಿಂದ ಗಂಡಾಂತರ ತಲೆದೋರುತ್ತದೆ. ಒಂದೇ, ಆತನು ಧೂರ್ತರ ದುರ್ಯೋಜನೆಗಳಿಗೆ ತಿಳಿಯದೇ ಬಲಿಯಾಗುತ್ತಾನೆ–ತಾನೇ ಅನರ್ಥಕ್ಕೆ ತುತ್ತಾಗುತ್ತಾನೆ. ಇಲ್ಲವೇ, ದುಷ್ಟರ ಸಾಧನೆಗೆ ಒಳ್ಳೇ ತೆರೆಯಾಗುತ್ತಾನೆ. ಅಂದರೆ ಸ್ವತಃ ಸರಳ ಸಜ್ಜನನಿದ್ದುದರಿಂದ ಆತನು ತನ್ನಂತೆ ಪರರೆಂದು ಬಗೆಯುತ್ತಾನೆ. ಆದರೆ ಇದರಿಂದ ಕೈಲಾಸ ಬಿನ್ನಾಣವಾಗುವದಿಲ್ಲ! ಶಠರಿಗೂ ಕಪಟಿಗಳಿಗೂ ಆತನಿಂದ ತಿಳಿಯದೆ ಆಶ್ರಯ ದೊರೆಯುತ್ತದೆ. ಸಾರ್ವಜನಿಕರೂ, ಇಂಥ ಸಂಸ್ಥೆಯಲ್ಲಿ ತಾವೆಲ್ಲ ನಂಬಿದ ಸಜ್ಜನನೋರ್ವನಿರುತ್ತಾನೆಂದು ಕಂಡು ಸಂಸ್ಥೆಯ ವರ್ತನೆ ವ್ಯವಹಾರಗಳ ಕುರಿತು

ಹೆಚ್ಚು ಶಂಕೆಯೆತ್ತುವದಿಲ್ಲ. ಇದರಿಂದ ಸರಳ ಹೃದಯದ ಸಜ್ಜನನನ್ನು ಮುಂದೆ ಇಟ್ಟುಕೊಂಡು ಸಂಧಿಸಾಧಕರೂ, ಲೋಕ ವಂಚಕರೂ ತಮ್ಮ ದುರಾಲೋಚನೆಗಳನ್ನೂ ದೂರಾಲೋಚನೆಗಳನ್ನೂ ಆತಂಕವಿಲ್ಲದೆ ಈಡೇರಿಸಿ ಕೊಳ್ಳಲು ಅನುವಾಗುತ್ತದೆ. ಹೀಗೆ ವ್ಯಕ್ತಿಗತ ಸಾದುತ್ವ, ಸಾರ್ವಜನಿಕ ದುಷ್ಟತನ ಸಂಧಿ ಸಾಧನೆಗೆ ನೆರವಾಗುತ್ತದೆ! ಇದರ ತಾತ್ಪರ್ಯ, ಸಂಸ್ಥೆಗಳಲ್ಲಿ ಸಾಧುಗಳೇ ಇರಬಾರದೆಂದಲ್ಲ! ಇರಲಿ.

ಕೆಲವು ಜನ ಸ್ವಭಾವದಿಂದಲೂ ಕದ್ದು ಮುಚ್ಚುವ ವೃತ್ತಿಯವರೂ, ಕಪಟನರ್ತನೆಯವರೂ, ಡಾಂಭಿಕರೂ, ವಂಚಕರೂ ಇರುವದು ಕಂಡುಬರುತ್ತದೆ. ಆದರೆ ಮತ್ತೆ ಕೆಲವರು ಬಿಚ್ಚು ಮನಸ್ಸಿನವರೂ, ಸಹಜವಾಗಿ ನಂಬುವಂಥವರೂ ಇರುತ್ತಾರೆ. ಸಮಾಜದ ಸದ್ಯದ ಅವಸ್ಥೆಯಲ್ಲಿ ವಿಪರೀತದ ಬಿಚ್ಚುಮನಸ್ಸು ಹಿತವಲ್ಲ. ಕೆಲಮಟ್ಟಿಗೆ ಕದ್ದುಮುಚ್ಚಾಟವು ತೀರ ಅವಶ್ಯ. ತಮ್ಮ ಪ್ರತಿಯೊಂದು ವಿಚಾರವನ್ನೂ ವಿಕಾರವನ್ನೂ ವ್ಯಕ್ತಮಾಡುವ ಮತ್ತೂ ತಮ್ಮ ವ್ಯಕ್ತಿಗತ ಸಂಗತಿಗಳನ್ನೆಲ್ಲ ತಾಳಗೆಟ್ಟ ತರದಲ್ಲಿ ಮಂದಿಯಿದುರು ಮಾತನಾಡುವವರು ನಿಜವಾಗಿಯೂ ಮೂಢರು. ಮಂದಿಗೆ ತೊಡಕೂ ಎಣಿಸಿಕೊಳ್ಳುವರು. ಸ್ವಲ್ಪಮಟ್ಟಿಗೆ ಸಂಶಯ ವೃತ್ತಿಯುಳ್ಳವನು ಯೋಗ್ಯ ಕಾರಣವಿಲ್ಲದೇ ಏನನ್ನೂ ಒಮ್ಮೆಲೇ ನಂಬಲಾರನು. ಮಂದಿಯ ಮಾತಿನಿಂದ ಏನನ್ನೂ ಗೃಹಿತವಾಗಿ ಒಪ್ಪಿಕೊಂಡು ನಡೆಯಲಾರನು. ಆದ್ದರಿಂದ ಇಂಥವನು ಮೋಸ ಹೊಂದುವದೂ ವಂಚನೆಗೊಳ್ಳುವದೂ ಕಡಿಮೆ. ಆದರೆ ಬಿಚ್ಚಿದೆದೆಯ ನಿಷ್ಕಪಟಿಯು ಇತರರನ್ನೂ ಹಾಗೆಯೇ ನಿಷ್ಕಪಟಿಯೆಂದು ಭಾವಿಸಿ ಸುಲಭವಾಗಿ ವಂಚಿತನಾಗುತ್ತಾನೆ!

ಡಂಭಾಚಾರಿಯ ಡೊಂಬವಿದ್ಯೆ

ಭೀತಿಯಿಂದ ಇನ್ನೊಂದು ಪರಿಣಾಮವೂ ಕಂಡುಬರುತ್ತದೆ. ಅಜ್ಞಾನಿಯೂ ಗೊಡ್ಡುತನದವನೂ ಆದ ವ್ಯಕ್ತಿಯು ತನಗಿಂತ ಮೇಲಿನ ಇಲ್ಲವೇ ಮಿಗಿಲಾದ ಜ್ಞಾನದ ಮತ್ತು ಸ್ಥಾನಮಾನದ ಜನರ ಆಚಾರ-ಉಪಚಾರಗಳನ್ನೂ ಸಭ್ಯತೆಯ ರೂಪರೀತಿಗಳನ್ನೂ ಕಪಿಯಂತೆ ಅನುಕರಿಸುವದುಂಟು. ತಾನು ಇದ್ದುದಕ್ಕಿಂತ ಹೆಚ್ಚಿನ ಒಳಿತನ್ನು ಸೋಗಿನಂತೆಯಾದರೂ ತೋರಿಸಿಕೊಳ್ಳುವದುಂಟು. ಪರರ ಪ್ರಶಂಸೆಗೆ ಪಾತ್ರನಾಗಬೇಕೆಂಬ ಬಯಕೆಯು ಸಾಮಾಜಿಕ ಜೀವನದ ಎಷ್ಟೋ ಸೌಕರ್ಯಗಳಿಗೆ ಕಾರಣವಾಗಿದೆ. ಆದಾಗ್ಯೂ ಗೊಡ್ಡುತನದಿಂದಲೂ, ಅರಿವಿಲ್ಲದ ಆಳವಿಲ್ಲದ

ಅನುಕರಣದಿಂದಲೂ, ಉಚಿತವಲ್ಲದ ನಡತೆಯಿಂದ ಹಾಗೂ ತನ್ನ ದೊಡ್ಡ ಹಣವಂತಿಕೆಯೊಡನೆ, ಚಿಕ್ಕ ಬುದ್ಧಿವಂತಿಕೆಯನ್ನೂ ಅನವಶ್ಯಕ ಆಢ್ಯತೆಯಲ್ಲಿ ಪ್ರದರ್ಶಿಸುವದರಿಂದ ವ್ಯಕ್ತಿಯು ಡಾಂಭಿಕ ಆಢ್ಯತೆಯ ಒಂದು ಮಾದರಿಯಾಗಿ ನಿಲ್ಲುತ್ತಾನೆ! ಇಂಥ ಡಂಭದ ಹುಂಜನ ಆತ್ಮಸಂಭಾವನೆಯೂ ಅಹಂಮನ್ಯತೆಯೂ, ಗ್ರಾಮ್ಯವರ್ತನದ ಪ್ರೌಢಪ್ರದರ್ಶನವೂ ಹಾಸ್ಯಾಸ್ಪದವಾಗಿ ಕಾಣುತ್ತದೆ; ಅಥವಾ ಸಾತ್ವಿಕ ಸಂತಾಪವನ್ನೇ ಕೆರಳಿಸುತ್ತದೆ. ಇಂಥವನ ಬುದ್ಧಿಯಾಗಲೀ, ಮಾನಸಿಕ ಶಕ್ತಿಯಾಗಲೀ ಅಲ್ಪವೇ ಇರುತ್ತದೆ. ಆದರೆ ಅಪ್ರಮಾಣದಲ್ಲಿ ಈತನು ತೋರಿಸುವ ಆತ್ಮಪ್ರೌಢಿಮೆಯ ಅನಿರ್ಭಾವವು ಅತ್ಯಂತ ಹುಚ್ಚುತನವಾಗಿ ಕಾಣುವದು. ನಮ್ಮ ಆದರವನ್ನೂ ಸಲ್ಲಿಸಬಹುದಾದ ಯಾವ ಗುಣವೂ ಈತನಲ್ಲಿ ಇರುವದಿಲ್ಲ. ಆದರೂ ಮಂದಿಯ ಆದರಕ್ಕೆಲ್ಲ ತಾನೇ ಅಧಿಕಾರಿಯೆಂದು ಈತನು ದೃಢವಾಗಿಯೇ ನಂಬುತ್ತಾನೆ! ತಿಳಿಯದ ವಿಷಯದಲ್ಲಿ ಜ್ಞಾನವನ್ನೂ, ಸಲ್ಲದ ಸಂಗತಿಯಲ್ಲಿ ಅಭಿಪ್ರಾಯವನ್ನೂ, ಎರವಲವಾಗಿ ಎತ್ತಿಕೊಂಡ ಮತವಾದಗಳನ್ನೂ ನವ ನಾಗರಿಕತೆಯ ಕುರುಡು ಅನುಕರಣವನ್ನೂ ವ್ಯಕ್ತಪಡಿಸಲು ಹೆಣಗಿ ಅಪಹಾಸ್ಯಕ್ಕೆ ಗುರಿಯಾದರೂ ತಿಳಿಯದೆ ಈ ಬಡಪಾಯಿಯು ಬಾಳುತ್ತಾನೆ! ಕಾದಂಬರಿಕಾರರೂ ಕತೆಗಾರರೂ ಇಂಥ ಡಂಭಾಡಂಬರದ ಸ್ವಭಾವದ ಹಾಸ್ಯಾಸ್ಪದ ಪಾತ್ರಗಳನ್ನು ಹೇರಳವಾಗಿ ಆಯ್ದು ಚಿತ್ರಿಸುವದುಂಟು.

ಈ ಡಂಭಾಚಾರದ ಜನಕ್ಕೆ ಇಂಗ್ಲಿಷ ಭಾಷೆಯಲ್ಲಿ ಒಂದು ಸುಟಿಯಾದ ಪುಟ್ಟ ಹೆಸರು ಬಳಿಕೆಯಲ್ಲಿದೆ. Snob ಎಂದು. ಇಷ್ಟೊಂದು ಚಿಕ್ಕ ಶಬ್ದದಲ್ಲಿ ಅಡಕವಾದ ಅರ್ಥವನ್ನು ಒಂದೇ ಪದದಲ್ಲಿ ಕನ್ನಡಕ್ಕೆ ಇಳಿಸುವದು ಬಿಗಿಯೇ ಸರಿ. ಡಂಭಾಚಾರ, ವಂಚಕವರ್ತನೆ, ಅಹಂಮನ್ಯತೆ, ಅಜ್ಞಾನದ ಶೂನ್ಯಸಂಪಾದನೆ ಇವೆಲ್ಲ ಲಕ್ಷಣಗಳಲ್ಲಿ ಈ 'ಸ್ನೋಬ್'ತನದಲ್ಲಿ ಬರುತ್ತವೆ. ಇಂಥ ಡಂಭಾಚಾರಿಯನ್ನು ಗುರುತಿಸುವದೆಂತು? ಸಾಮಾಜಿಕ ಯಶಸ್ವಿತೆಯು ಈತನ ಬದುಕಿನ ಹೆಗ್ಗುರಿ. ಸಮಾಜದಲ್ಲಿ ಆದಷ್ಟು ಮನ್ನಣೆಯನ್ನು ಪಡೆಯಬೇಕೆಂಬುದೇ ಇವನ ಅಟ್ಟಹಾಸ, ಹವ್ಯಾಸ. ಪ್ರತಿಯೊಬ್ಬ ವ್ಯಕ್ತಿಯೂ ಮಂದಿಯ ಮೆಚ್ಚುಗೆ ಮನ್ನಣೆಗಳನ್ನು ಪಡೆಯಲು ಹೆಣಗುತ್ತಾನೆ. ಅದು ಸ್ವಾಭಾವಿಕವೇ ಸರಿ. ಪ್ರಶಂಸೆಗೆ ಪರಾಙ್ಮುಖನಾದವನು. ಶಿಶುವಾಗಲೀ, ಪಶುವಾಗಲೀ ಋಷಿಯಾಗಲೀ ಇರಬೇಕು. ಶಿಶುಗಳಿಗೂ ಮಂದಿಯ ಕಣ್ಣು ತನ್ನ ಕಡೆಗೆ ಸೆಳಕೊಳ್ಳುವ ಹಟವಿದ್ದೇ ಇರುತ್ತದೆ. ಋಷಿಯೂ ಇನ್ನೊಬ್ಬ ಋಷಿಯಿಂದ ಮನ್ನಣೆಯನ್ನು ಪಡೆಯಲು ಹಾತೊರೆಯುವದುಂಟು. ಅಂದರೆ ಪರರ

ಪ್ರಶಂಸೆ ಪ್ರೋತ್ಸಾಹ ಇಲ್ಲವೇ ಪ್ರಭಾವ ಪೂಜೆ ಬೇಡವೆಂದು ಯಾರಿಗೂ ಇಲ್ಲ. ಆದಾಗ್ಯೂ ಸಾಮಾನ್ಯವಾಗಿ ಪ್ರಶಂಸಾಪೇಕ್ಷಿಗಳು ಮಂದಿಯ ಮುಂದೆ ತಮ್ಮ ದೋಷಗಳನ್ನು ಮುಚ್ಚಲೂ ಗುಣಗಳನ್ನು ಹೆಚ್ಚಿಸಿ ತೋರಿಸಲೂ ಯತ್ನಿಸುತ್ತಾರೆ. ಆದರೆ ಡಂಭಾಚಾರಿಯು ತನ್ನ ದೋಷವೇ ಒಂದು ವಿಶೇಷ ಗುಣವೆಂದು ಕಾಣಿಸಲು ಹೆಣಗುತ್ತಾನೆ; ತನ್ನಲ್ಲಿ ಎಂದೂ ಇಲ್ಲದ ಗುಣವನ್ನು ತಾನೇ ಕಂಡುಕೊಂಡು ಅದನ್ನು ಮಂದಿಯ ಮುಂದೆ ಬಿಂಬಿಸಲು ಹವ್ಯಾಸ ಪಡುತ್ತಾನೆ! ಯಾವದೇ ಒಂದು ಬಗೆಯ ಸಜ್ಜನಿಕೆ, ಶಿಷ್ಟಾಚಾರ ಸಾಧುವರ್ತನದ ಕಲ್ಪನೆಯನ್ನು ಇಂಥವನು ಕಟ್ಟಿಕೊಳ್ಳುತ್ತಾನೆ. ಆ ಕಲ್ಪನೆಯೂ ಮಸುಕಾಗಿಯೇ ಇರುತ್ತದೆ.

ಇಂಥ ಸದ್ಗೃಹಸ್ಥತನದ ಪಡಿಯಚ್ಚಿನಲ್ಲಿ ತನ್ನನ್ನು ಎರಕ ಹೊಯ್ಯಲು ಆತನು ಜೀವಮಾನವೆಲ್ಲ ಯತ್ನಿಸುತ್ತಾನೆ.ಆದರೆ ಬಾಳಿನ ಪರಿಜ್ಞಾನವೇ ಆತನದು ಕೆಳಮಟ್ಟದ್ದಿರುತ್ತದೆ; ತೀರ ಗೊಡ್ಡು ಹಳ್ಳಿಗಾಡಾಗಿರುತ್ತದೆ. ಜತೆಗೆ ಮಂದಿಯ ಸ್ವಭಾವದ ಕುರಿತು ಆತನ ಅನುಮಾನ ಪ್ರಮಾಣಗಳೂ ಅಷ್ಟೇ ಕೀಳಾಗಿರುತ್ತವೆ. ಹಣದಿಂದಲೋ, ಹೆದರಿಕೆಯಿಂದಲೋ, ಹೊಗಳಿಕೆಯಿಂದಲೋ ಮಂದಿ ವಶವಾಗುವರು. ಮಂದಿಯ ಮೇಲೆ ವರ್ಚಸ್ಸು ಬೀರಬಹುದು ಎಂದೇ ಆತನು ಗ್ರಹಿಸುತ್ತಾನೆ. ಆದ್ದರಿಂದ ತನ್ನ ವರಿಷ್ಠರ ಇದುರು ತೀರ ನಿಕೃಷ್ಟನಾಗಿಯೂ, ಕನಿಷ್ಠರ ಇದಿರು ತೀರ ವರಿಷ್ಠವಾಗಿಯೂ ಆತನು ನಡಕೊಳ್ಳುತ್ತಾನೆ. ತನ್ನದೇ ಒಂದು ಅಳತೆಯಿಂದ ಸಮಾಜದಲ್ಲಿ ಮನ್ನಣೆಯ ತಾರತಮ್ಯಗಳನ್ನೂ ತರಗತಿಗಳನ್ನೂ ಆತನು ಕಟ್ಟಿಕೊಂಡು ಆ ನಡುವೆ ತನ್ನ ಅಂತಸ್ತು ಗೊತ್ತುಪಡಿಸುವದರಲ್ಲಿಯೇ ನುಗ್ಗಾಗಿ ಹೋಗುತ್ತಾನೆ! ತನ್ನ ಮೇಲಿನವರೆಂದು ತಿಳಿದವರೊಂದಿಗೆ ವಿನಯ, ತನ್ನ ಕೆಳಗಿನವರೆಂದು ತಿಳಿದವರೊಡನೆ ಉದ್ದಟ ವ್ಯವಹಾರ ಇಂಥ ಡಂಭಾಚಾರಿಯ ನಡಾವಳಿ. ಸುಳ್ಳು ಸ್ತುತಿಯ ಮಾದಕ ಗಂಧವನ್ನು ಸುತ್ತಲೂ ಸವಿಯಲಿಕ್ಕೆ ಈತನು ಹಾತೊರೆಯುತ್ತಾನೆ. ತನಗೆ ಸಲ್ಲಿಸಲಾಗದ ಇಂಥ ಸ್ತುತಿಯು ಮಿತಿಗೆಟ್ಟರೂ ಈತನಿಗೆ ಗೊತ್ತಾಗುವದಿಲ್ಲ. ಹಲವೊಮ್ಮೆ ತಾನೇ ಬೇರೆಯವರಿಂದ ಒತ್ತಾಯಪಡಿಸಿ ಇಂಥ ಸ್ತುತಿಯನ್ನು ಮಂದಿಯಿಂದ ಪಡಕೊಂಡು ಈತನು ತಣಿಯುತ್ತಾನೆ. ಇದರ ಪರಿಣಾಮವಾಗಿ ಒಂದು ಅಸಮಂಜಸವಾದ ಉದಾರತೆಯನ್ನೂ ಈತನು ಪ್ರಕಟಿಸುವದುಂಟು. ತನಗಿಂತ ವರಿಷ್ಠರಿಂದ ತನಗೆ ದೊರೆಯದಿರುವ ಮನ್ನಣೆಯನ್ನು ಕನಿಷ್ಠರಿಂದ ಪಡೆಯಬೇಕೆಂಬ ಹವ್ಯಾಸವಿದ್ದರಿಂದ, ಇಂಥ ಡಂಭವಂತನು ಕಾಲ, ಅಕಾಲ, ಪಾತ್ರ-ಅಪಾತ್ರಗಳೆಂಬ ತಾರತಮ್ಯವಿಲ್ಲದೆ

ಔದಾರ್ಯವನ್ನೋ ಐಶ್ವರ್ಯವನ್ನೋ ಪ್ರದರ್ಶಿಸಲಿಕ್ಕೆ ಹೋಗುವನು. ಉಪಾಹಾರಗ್ರಹದಲ್ಲಿ ಪರಿಚಾರಕರಿಗೆ ನಾಲ್ಕಾಣೆ 'ಬಕ್ಷಿಸು' ಕೊಡುವಲ್ಲಿ ಒಂದು ರೂಪಾಯಿ ಒಗೆಯುವದು ಮತ್ತೂ ಆತನಿಂದ 'ರಾವ್‌ಸಾಬ್ ಸಲಾಂ!' ಎಂದು ಹೇಳಿಸಿಕೊಳ್ಳುವದು ಈತನಿಗೆ ಮೆಚ್ಚುಗೆ. ಊರಿಗೆ ಬಂದ ನಾಟಕ ಮಂಡಳಿಯಿಂದ ಹೇಗೋ 'ಫ್ರೀ' ಪಾಸು ತರಿಸಿಕೊಂಡು ಕೊನೆಗೆ ಅವರಿಗೆ ೧೦-೨೦ ರೂಪಾಯಿ ಕಾಣಿಕೆಯಾಗಿ ಕೊಡವದೂ ಈತನಿಗೆ ಯೋಗ್ಯವೆನಿಸುವದು! ಅತ್ತ ಮನೆಯಲ್ಲಿ ಚಾಕರಿ ಆಳುಗಳ ಸಂಬಳ ಕಡಿಮೆ ಇದ್ದರೂ ಬಾಕಿ ಬಿದ್ದರೂ ಅವನ್ನು ತುಂಬಿಕೊಡುವ ಅವಶ್ಯಕತೆ, ಅನಿಸುವದಿಲ್ಲ ಈ ಮಹಾಶಯರಿಗೆ!

ದುಡ್ಡಿನಿಂದ ದೊಡ್ಡಸ್ತನ

ನಿಜವಾದ ಸಭ್ಯಗೃಹಸ್ಥನು ಜನಸಂದಣಿಯಲ್ಲಿ ಯಾರ ಕಣ್ಣಿಗೂ ಬೀಳದಂತೆ ಒತ್ತಟ್ಟಿಗೆ ನಿಲ್ಲುತ್ತಾನೆ. ಇಲ್ಲವೇ ಸುಮ್ಮನೆ ನುಸುಳಿ ಪಾರಾಗುತ್ತಾನೆ. ಆದರೆ ಡಂಭಾಚಾರಿಯು ಹಾಗಲ್ಲ, ತನ್ನ ಅಸ್ತಿತ್ವವನ್ನು ಆತನು ಎಂದೂ ಮರೆಯುವದಿಲ್ಲ, ಮಂದಿಯ ಮುಂದೆ ಅದನ್ನು ಮೆರೆಸಲೂ ಮರೆಯುವದಿಲ್ಲ. ಸಾರ್ವಜನಿಕ ಪ್ರಸಂಗಗಳಲ್ಲಿ, ಸತ್ಕಾರ ಸಮಾರಂಭಗಳಲ್ಲಿ ಇಂಥ ವ್ಯಕ್ತಿ ಒಂದುಬದಿಗೆ ಕುಳಿತಿರುವದು ಯಾರು ಕಂಡಿಲ್ಲ ? ಎಲ್ಲರ ಕೈ ಕುಲಕುತ್ತ ಎಲ್ಲ ಮಾತುಕತೆಗಳಲ್ಲಿಯೂ ಆಢ್ಯತೆಯಿಂದ ಭಾಗವಹಿಸಿ ಬಾಯ್ತುಂಬ ನಗುತ್ತ ತನ್ನ ಕಡೆಗೆ ಎಲ್ಲರ ಕಣ್ಣು ಕಿವಿಗಳನ್ನೂ ಎಳಕೊಳ್ಳುತ್ತ ಕೊನೆಗೆ ಎಲ್ಲರ ಸಂತಾಪಕ್ಕೂ ಕಾರಣವಾಗುವ ಡಂಭಾಚಾರಿಯನ್ನು ಯಾರು ನೋಡಿಲ್ಲ? ಒಮ್ಮೆ ನೋಡಿ ಆತನ ನೋಟದಿಂದ ಪಾರಾಗಲು ಯಾರು ಪೇಚಾಡಿಲ್ಲ? ತನ್ನದೇ ಮನೆಯಲ್ಲಿ ಅತಿಥಿಗಳನ್ನು ಸತ್ಕರಿಸುವಾಗಲೂ ಆತನ ನಡತೆ ಇದೇ ರೀತಿ. ಔಚಿತ್ಯಗೆಟ್ಟು 'ಔದಾರ್ಯದ ಉರುಳಿನ'ಲ್ಲಿ ಮಂದಿಯನ್ನು ಸಿಲುಕಿಸಿ ಇಡುವದು ಈತನ ಹೊಂಚು. ಹಸಿದ, ಬಳಲಿದ, ದಿಕ್ಕಿಲ್ಲದ ಬಡಪಾಯಿಗಳು ಈತನ ಬಾಗಿಲಿನಿಂದ ಬರಿಗೈಯಿಂದಲೇ ಹಿಂದಿರುಗುವರು. ಆದರೆ ಫಂಡು ನಿಧಿಗಳಿಗೂ, ಸತ್ಕಾರ ಉತ್ಸವಗಳಿಗೂ ಈತನ ಕೊಡುಗೈಯ ಕಾಣಿಕೆ ತಪ್ಪುವದಿಲ್ಲ.

ಡಂಭಾಚಾರಿಯು ಸಾಮಾನ್ಯವಾಗಿ ಹಣದಿಂದಲೇ ಜನರ ಪರೀಕ್ಷೆ ಮಾಡುವ ಜಾಣ. ಯಾರು ಎಷ್ಟು ಧನಿಕರೋ ಅಥವಾ ಧನಿಕರನ್ನು ಆಳುವ ಸತ್ತಾವಂತರೋ, ಅವರು ಎಷ್ಟರ ಮಟ್ಟಿಗೆ ಬುದ್ಧಿವಂತರು, ನಿಜವಾದ ಬುದ್ಧಿಶಕ್ತಿ

ಇಲ್ಲವೇ ಜ್ಞಾನಪಾಂಡಿತ್ಯಗಳಿಗೆ ಈತನ ಭಂಡಸಾಲೆಯಲ್ಲಿ ಯಾವ ಬೆಲೆಯೂ ಇಲ್ಲ. ಇದರಿಂದ ಯಾವ ಪುಸ್ತಕಕ್ಕೆ ಹಲವು ಜನರ ಬೇಡಿಕೆಯೋ, ಅದನ್ನೇ ಈತನು ಓದುವಾತನು. ಕಲೆಯ ಬಹುಜನಪ್ರಿಯತೆಯಿಂದಲೂ, ಕಲಾವಿದನ ಲೌಕಿಕ ಅಭಿವೃದ್ಧಿಯಿಂದಲೂ ಈತನು ಕಲಾಕೃತಿಯನ್ನು ಮೆಚ್ಚುವಾತನು. ಹಾಗೆಯೇ ಯಾವದೇ ವಿಷಯದಲ್ಲಿ ತಜ್ಞನ ಸಲಹೆ ಅಗತ್ಯವೆನಿಸಿದರೂ ಈತನು ತಜ್ಞನ ಅನುಭವ ಇಲ್ಲವೇ ಪರಿಜ್ಞಾನಕ್ಕಿಂತ, ಆತನ ಬಿರುದು ಬಿನ್ನಾಣಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವಾತನು. ಇಂಥವನೊಂದಿಗೆ ಯಶಸ್ವಿಯಾಗುವದು ಬಹಳ ಸುಲಭ. ತನ್ನಂತೆ ಪರರೆಂದು ಇಂಥ ಡಂಭಾಚಾರಿಯು ಭಾವಿಸುವನಾದ್ದರಿಂದ ನಾವೂ, ಒಳ್ಳೇ ಪ್ರದರ್ಶನ ಸಾಧಿಸಿದರೆ, ಬೆಲೆಯುಳ್ಳ ವೇಷ–ಭಾಷೆ, ಕಾರು–ಕಚೇರಿ, ಮನೆ ತುಂಬ ಚಾಕರಿಯಾಳುಗಳನ್ನು ಇಟ್ಟು ನಮ್ಮ ಆಢ್ಯತೆಯನ್ನು ಸಜ್ಜಾಗಿ ಕಣ್ಣು ಕುಕ್ಕುವಂತೆ ಕಾಣಿಸುವ ಹದ ಕಲಿತುಕೊಂಡರೆ ಸಾಕು–ಇಂಥ ಅಹಂಮನ್ಯ ಡಂಭವಂತ ಗೊಡ್ಡು ಗೌರವಸ್ಥರನ್ನು ನಮ್ಮ ಕಾರ್ಯಕ್ಕೆ ಹೂಡಬಹುದು.

ಇನ್ನು ಇಂಥ ಡಂಭಾಚಾರಿಯಲ್ಲಿಯೂ ಒಂದು ಗುಣವಿದೆ. ಆ ಗುಣ ಅವನ ಡಂಭಿಕತನದ್ದೇ ಫಲ. ಇಂಥ ಡಾಂಭಿಕನು ತನ್ನ ಮಕ್ಕಳಿಗೆ ಆದಷ್ಟು ಆಧುನಿಕ ಮತ್ತು ಉಚ್ಚ ಶಿಕ್ಷಣ ಕೊಡಲು ಯಾವ ವೆಚ್ಚಕ್ಕೂ ಹಿಂಜರಿಯುವದಿಲ್ಲ. ಮಗಳಿದ್ದರೆ, ಆಕೆಯನ್ನು ಐ.ಸಿ.ಎಸ್. ಅಧಿಕಾರಿಗೋ ಇನ್ನಾವ ಉನ್ನತ ವ್ಯಕ್ತಿಗೋ ಅಭಿಜಾತ ಕುಲದ ವರನಿಗೋ ಆಕೆಯನ್ನು ಕೊಟ್ಟು, ವರನ ಶೀಲಕ್ಕಿಂತಲೂ ಶ್ರೀಮಂತಿಕೆಗೋ ಶ್ರೇಷ್ಠ ಪದವಿಗೋ ಮೆಚ್ಚಿ ಕೃತಾರ್ಥನಾಗುತ್ತಾನೆ. ಮಗನಿದ್ದರೆ, ಆತನಿಗೆ ಉಚ್ಚ ಶಿಕ್ಷಣ ಕೊಟ್ಟು ಪದವೀಧರನಾಗಿ ಮಾಡುವದೇ ಇಂಥವನ ಧ್ಯೇಯವಿರುತ್ತದೆ. ಇದರಿಂದ ಒಂದು ದಾರುಣ ಪರಿಣಾಮವೂ ಒದಗಿಬರುತ್ತದೆ. ತನಗೆ ವಂಚಿತವಾದ ಸಂಸ್ಕೃತಿ ಶಿಕ್ಷಣಗಳನ್ನು ತನ್ನ ಮಗನು ಪಡೆದು ನಿಜವಾದ ಸದ್ಗೃಹಸ್ಥನಾಗಲೆಂದು ಡಾಂಭಿಕನು ಹವ್ಯಾಸಪಟ್ಟರೂ ಕೊನೆಗೆ ಅಂಥ ಸುಸಂಸ್ಕೃತ ಸುಶಿಕ್ಷಿತನಾದ ಸದ್ಗೃಹಸ್ಥ ಮಗನು ತಂದೆಯನ್ನೇ ತಿರಸ್ಕರಿಸುತ್ತಾನೆ. ಶಿಕ್ಷಣ ಸಂಸ್ಕಾರದೊಂದಿಗೆ ತಂದೆಯ ಕುರಿತು ತಿರಸ್ಕಾರವೂ ಬೆಳೆದು ಬರುತ್ತದೆ! ಇದನ್ನು ಕಂಡು ತಂದೆ ವ್ಯಥೆಪಟ್ಟುಕೊಳ್ಳುತ್ತಾನೆ! ಆದರೆ ಬೋಧವೇನೂ ಪಡೆಯುವದಿಲ್ಲ!

ಇನ್ನು ಪುರುಷರ ಬೇರೊಂದು ಮಾದರಿ ಇದೆ. ಅಂಜುಬುರುಕುತನದ ವಿರುದ್ಧ ವೃತ್ತಿಯು ಈ ಮಾದರಿಯದು. ಈ ಮಾದರಿಯವನು ನಾಚುವದಿಲ್ಲ; ಹಿಂಜರಿಯುವದಿಲ್ಲ. ಅನುವು ಒದಗಿದಾಗಲೆಲ್ಲ ಹಲವೊಮ್ಮೆ ಒದಗಿಸಿಕೊಂಡರೂ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುವದೇ ಇವನಿಗೆ ಎಂದಿಗೂ ಮೆಚ್ಚಿಗೆ. ಮಂದಿಯನ್ನು ಆಳಬೇಕೆಂದು ಇವನ ಯತ್ನ. ಲೋಕಪ್ರಿಯತೆಗಿಂತಲೂ ಲೋಕಭಯಂಕರನಾಗುವದೇ ಇವನಿಗೆ ಇಷ್ಟ. ತನ್ನ ಹತ್ತಿರದವರ ಮೇಲೆ ವರ್ಚಸ್ವವನ್ನು ಹೇರುವದು, ಪ್ರಭುತ್ವ ನಡೆಯಿಸುವದು, ಇವನ ಉದ್ದೇಶ. ಇದರ ಲಕ್ಷಣವೆಂದರೆ ಬಿಂಕದ ಹಾಗೂ ಬಲದ ಬಡಿವಾರ. ಯಾವಾಗಲೂ ಜಂಬ ಕೊಚ್ಚಕೊಳ್ಳುವದು; ಹುಂಜದಂತೆ ಹೋರಿಯಂತೆ ಹೋರಾಡುವದು. ಮಾತಿಗೂ ಮುಂದೆ ಮುಷ್ಠಿಯ ಯುಕ್ತಿವಾದ ಇವನದು. ಅಳ್ಳೆದೆಯಯವರನ್ನೂ, ಅಶಕ್ತರನ್ನೂ ಅಂಜಿಸಿ ಅಂಕೆಯಲ್ಲಿಟ್ಟು ನಡೆಯಿಸುವದರಲ್ಲಿ ಇವನು ತತ್ಪರನು. ಬಲಾತ್ಕಾರವೇ ಇವನ ಪ್ರಭಾವದ ತಂತ್ರ. ಇವನ ಮಾದರಿಗೆ ಪುಂಡತನವೆನ್ನಬಹುದು. ಡಂಭಾಚಾರಿಯಂತೆ ಇವನ ಉದ್ದೇಶವೂ ಪ್ರಭಾವಶಾಲಿಯಾಗಬೇಕೆಂಬುದೇ. ಆದರೂ ಪರಿಸ್ಥಿತಿಯ ಹದವರಿತು, ಹಿತವಾದ ಸಹಕಾರ ಸಹಾಯಗಳು ಸಲುವಳಿಯಿಂದ ಲೋಕೋಪಯೋಗಿಯಾಗಿ ಮಂದಿಯ ಮುಂದಾಳು ಆಗುವದು ಇವನ ಮಾರ್ಗವಲ್ಲ. ಯಾವ ಪ್ರಸಂಗವೇ ಇರಲಿ, ಬಲಾತ್ಕಾರದಿಂಲೇ ಹಿಡಿತದಲ್ಲಿ ತರುವ ಹಟ ಇವನದು. ಎಂಥ ಪ್ರಶ್ನೆಯೇ ಬರಲಿ, ಅದರ ಬಿಕ್ಕಟ್ಟನ್ನು ಬಿಡಿಸುವ ಬದಲು ಬಲುಮೆಯಿಂದ ಕಡಿದು ಹಾಕುವದೇ ಚಟ ಇವನದು.

ಪುಂಡರೂ ತಲೆತಿರುಕರೂ

ಪುಂಡರ ಜಂಭದ ಹುಂಜಾಟ ಈ ತರವಾಯಿತು. ಜಂಭದ ಇನ್ನೂ ಒಂದು ಪ್ರಕಾರವಿದೆ. ಅದು ಬರೇ ಬಾಯ್ಬಡಿಸುಕೊಂಡು ಆಯಕಟ್ಟಿಗೆ ಬಾಯ್ಬಿಡುವ ಪಲಾಯನಪಟುಗಳ ವ್ಯರ್ಥ ವಲ್ಗನೆ, ಜೊಳ್ಳು ಜಲ್ಪನೆ. ಈ ಜಂಭವಲ್ಲಿ ಪರವಂಚನೆಗಿಂತ ಆತ್ಮವಂಚನೆಯೇ ವಿಶೇಷವಿರುತ್ತದೆ. ಸತ್ಯವನ್ನು ಇದಿರಾಗದೇ ಅದರಿಂದ ಪಾರಾಗುತ್ತಿರುವಾಗಲೂ ಅದರ ಕುರಿತೂ ಕೂಡ ಆಡಂಬರದ ಆಶ್ವಾಸಗಳನ್ನು ಮಾಡಿ ತನ್ನನ್ನೇ ತಾನು ಒಡಂಬಡಿಸಿಕೊಳ್ಳುವದು ಇಂಥ ಪಲಾಯನ ಪಟುಗಳ ಲಕ್ಷಣ. ಉತ್ತರಕುಮಾರನ ಸರಳವಾದ ಹೇಡಿತನ ಇವರದಲ್ಲ, ಅಶ್ವತ್ಥಾಮನ ವಕ್ರಗತಿ ಇವರದು. ಪೌರುಷದ ಆಢ್ಯತೆ ಆಡಂಬರ ಇವರು ಬೇಕಷ್ಟು ಕಾಣಿಸುವರು. ಆದರೆ ಪ್ರತ್ಯಕ್ಷ ಕಾರ್ಯರಂಗವನ್ನು

ತಪ್ಪಿಸಿಕೊಳ್ಳಲು ಸಾಕಷ್ಟು ಸಬಲ ಕಾರಣವನ್ನು ಹುಡುಕಿಡುವರು. 'ತಾನು ಆಗ ಇದ್ದಿದ್ದರೆ-' 'ತಾನು ಅವನಾಗಿದ್ದರೆ-' ಇಂಥ ಮಾತುಗಳೇ ಇವರ ನಾಲಿಗೆಯಲ್ಲಿ ನಲಿದಾಡುವುದನ್ನು ನಾವು ನೋಡಬಹುದು. ಅಲ್ಲದೆ, ಇವರದು ಇನ್ನೂ ಒಂದು ಚಾಳಿ ಇದೆ, ಪ್ರಿಯವಾದ ವಸ್ತುಸ್ಥಿತಿಯನ್ನು ತಾವೇ ಸರಿಯಾಗಿ ತಿರುಚಿಕೊಳ್ಳಲು ಒಲ್ಲರು. ಕೆಲವೊಂದು ಕಲ್ಪಿತ ಸಂಗತಿಗಳನ್ನು ಆರೋಪಿಸಿ, ಜಟಿಲವಾದ ವಸ್ತುಸ್ಥಿತಿಯನ್ನು ಸರಳವೆಂತಲೂ, ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸಲಿಸವೆಂತಲೂ ಭಾವಿಸಿ ಅದಕ್ಕೆ ಅಗ್ಗದ ಉಪಾಯಗಳು ಸೂಚಿಸುವದರಲ್ಲಿ ಇವರು ನಿಪುಣರು. ಇಂಥವರು ಆತ್ಮ ಸಮರ್ಥನೆಯಲ್ಲಿ ಒಳ್ಳೇ ಚತುರರು-ಸಂಧಿ ಸಾಧಿಸದಿರುವದರಲ್ಲಿ ಒಳ್ಳೇ ಆತುರರು. ತಮ್ಮ ಮೂಲದ ಅನಿಶ್ಚಯವನ್ನೂ ಅಶಕ್ತತೆಯ ಭಯವನ್ನು ಮುಚ್ಚಿಕೊಳ್ಳಲಿಕ್ಕೆ ಅದೂ ಸಪ್ರಮಾಣವಾಗಿ ಸನ್ಮಾನದಿಂದ ಮುಚ್ಚಿಕೊಳ್ಳಲಿಕ್ಕೆ ಅವರು ಬಹಳೇ ಹೆಣಗುವರು. ಇಂಥವರು ಕೆಲ ಸಲ ಹಲವರನ್ನು ಮಂಕುಗೊಳಿಸಬಹುದು; ಕೆಲವರಾದರೂ ಇವರ ಬಣ್ಣ ಬಯಲಿಗೆ ಎಳೆಯದೇ ಹೋಗುವದಿಲ್ಲ.

ಪುರುಷರಲ್ಲಿ ಇನ್ನೂ ಒಂದು ಪ್ರಕಾರವಿದೆ. ಪುರುಷರಿಗೆಂದೇ ಉಂಟಾದ ಪ್ರಕಾರವಲ್ಲ, ಸಾರ್ವಜನಿಕ ಸಾಹಚರ್ಯದ ಅವಕಾಶ ಪುರುಷರಿಗೇ ಹೆಚ್ಚಾಗಿ ಸಿಗುವದರಿಂದ ಈ ಪ್ರಕಾರಗಳು ಪುರುಷರಲ್ಲಿಯೇ ವಿಶೇಷ ಬೆಳೆದು ಬರುವವು, ಇಷ್ಟೇ. ತಾರತಮ್ಯ, ನಿರೀಕ್ಷಣ ಹಾಗೂ ತಾಳ್ಮೆ ಇವು ಕಡಿಮೆಯಿದ್ದ ತಿಳುವಳಿಕೆಯ ಜನರಲ್ಲಿ ಇಚ್ಛಾಶಕ್ತಿಯೇ ತೀವ್ರವಾಗಿದ್ದರೆ, ಅವರು ಹಠವಾದಿಗಳೂ ಖಂಡಿತ ಮತವಾದಿಗಳೂ ಆಗುವದುಂಟು. ಯಾವದೇ ಸಂಗತಿಯ ಕುರಿತು ತೀವ್ರವಾದ ಮತವನ್ನು ಬೆಳೆಸಿಕೊಂಡು ಸದಾಕಾಲವೂ ಅದನ್ನು ಆಡಿ ತೋರಿಸುವ ವಾಡಿಕೆ ಇದ್ದ ಈ ಜನರು 'ತಲೆತಿರುಕ'ರೆನಿಸಿಕೊಳ್ಳುವರು. 'ತಲೆತಿರುಕ'ತನವೆಂದರೆ, ಮನಸ್ಸಿನಲ್ಲಿ ಒಂದೇ ವೃತ್ತಿ ಇಲ್ಲವೇ ಅಭಿಪ್ರಾಯ ಸ್ಥಿರವಾಗಿ ನಿಂತು ಇಡೀ ಬಾಳನ್ನೇ ಅದು ಆಳತೊಡಗುವದು. ಇವರಿಗೆ ಬಂಡಿಬಗೆಯ ಹುಚ್ಚರೆನ್ನಬಹುದು. ಇಂಥವರನ್ನು ಗುರುತಿಸುವದು ಸುಲಭ. ಜನಸಾಮಾನ್ಯರಿಂದ ಬೇರೆಯಾದ ಒಂದು ಚಿಕ್ಕ ಕಿರಿದಾಗಲೀ ಹಿರಿದಾಗಲೀ ವಿಕೃತಿಯು ಅಥವಾ ಅಕ್ಷಿಪ್ತ ವೃತ್ತಿಯು ಇವರ ನಡತೆಯಲ್ಲಿ ವ್ಯಕ್ತವಾಗುವದು, ಇವರು ಮೂರ್ಖರಿರುವದಿಲ್ಲ, ಹಲವೊಮ್ಮೆ ಒಳ್ಳೇ ಆಶೋತ್ತರವುಳ್ಳ ಬಾಳು ಇವರದಾಗಿರುತ್ತದೆ. ಇವರಲ್ಲಿ ಕಲ್ಪನಾಶಕ್ತಿ ನಿರ್ಮಾಪಕ ಶಕ್ತಿ ಮತ್ತು ಅದನ್ನು ಪ್ರಕಟಗೊಳಿಸುವ ಶಕ್ತಿ - ಇವಷ್ಟೂ ಒಳ್ಳೇ

ವಿಪುಲವಾಗಿರುವದೂ ಕಂಡುಬರುತ್ತವೆ. ಆದರೆ ವ್ಯಾವಹಾರಿಕ ದೃಷ್ಟಿಯ ಅಭಾವದಿಂದಲೂ, ಯೋಗ್ಯ ಕರ್ತೃತ್ವದ ಕೊರತೆಯಿಂದಲೂ ಅವರ ಯೋಜನೆಗಳು ವ್ಯರ್ಥವಾಗುತ್ತವೆ. ಆಗ ಆಚಾರಕ್ಕಿಂತ ಪ್ರಚಾರವೇ ಅವರ ಗುರಿಯಾಗಿಬಿಡುತ್ತದೆ. ಇಂಥವರು ವಿಚಾರಕ್ರಾಂತಿಯ ಅಗ್ರದೂತರಾಗುತಾರೆ. ಆದರ್ಶವನ್ನು ಕಂಡು, ಆವೇಶವನ್ನು ಕೊಟ್ಟು ಸಿದ್ಧಾಂತಗಳನ್ನು ಶೋಧಿಸಿ ಸಾರುವ ಸ್ವಪ್ನಜೀವಿಗಳು ಈ ತಲೆತಿರುಕರ ಕೋಟೆಯಲ್ಲಿಯೇ ಹುಟ್ಟುತ್ತಾರೆ. ದಕ್ಷಿಣೋತ್ತರವಾಗಿ ವ್ಯಾಪಿಸಿದ ಭಾರತೀಯ ಸಾಮ್ರಾಜ್ಯಕ್ಕೆ. ಉತ್ತರದಲ್ಲಿಯ ದಿಲ್ಲಿಯು ಯೋಗ್ಯ ರಾಜಧಾನಿಯಲ್ಲವೆಂಬ ಯುಕ್ತವಾದ ವಿಚಾರ ಮಹಮ್ಮದ ತಘಲಕನಿಗೆ ತೋಚಿತು. ಆದರೆ ವಿಚಾರದ ಎಲ್ಲ ಸಾಂಗೋಪಾಂಗ ಪರಿಶೀಲನೆಗೆ ಆತನಲ್ಲಿ ತಾಳ್ಮೆಯಾಗಲೀ ತಾರತಮ್ಯದ ತಿಳುವಳಿಕೆಯಾಗಲೀ ಇದ್ದಿಲ್ಲ. ಆದ್ದರಿಂದ ದಿಲ್ಲಿಯಿಂದ ದೌಲತ್ತಾಬಾದದ ತನಕವೂ ಪಟ್ಟಣಿಗರನ್ನೇ ಸ್ಥಳಾಂತರಿಸುವ ಮೊಂಡಹಟಕ್ಕೆ ಬಿದ್ದು ಇತಿಹಾಸ ಪ್ರಸಿದ್ಧ 'ಹುಚ್ಚ ಮಹಮ್ಮದ'ನೆನಿಸಿಕೊಂಡನು!

ಮತಾಂಧನ ಮಾದರಿ

ತಲೆತಿರುಕರ ಕೋಟಿಗೂ ಆಚೆಯ ಕೋಟಿ ಮತಾಂಧರದು. ಇವರಿಗೆ ಮತ ಒಂದೇ ಅತ್ಯಂತಿಕ ಏಕಾಂತಿಕವಾಗಿರುವದಿಲ್ಲ. ಅದಕ್ಕೆ ಒಂದು ಅಂಥ ಆವೇಶವನ್ನು ಕೊಡುವಂತೆ ಮಾನಸಿಕ ಸ್ಥಿತಿಯಲ್ಲಿಯೇ ಒಂದು ಪ್ರಳಯವೆದ್ದಿರುತ್ತದೆ. ತಲೆತಿರುಕನು ತನ್ನ ಮಟ್ಟಿಗೆ ಮಾತ್ರ ಅಪಯಶಸ್ವಿಯೋ, ನಗೆಗೀಡೋ ಆಗುತ್ತಾನೆ. ಆದರೆ ಮತಾಂಧನು ತನ್ನವರನ್ನೂ ತನ್ನ ದುರ್ದೆಶೆಗೆ ಈಡುಮಾಡುತ್ತಾನೆ. ಮತಾಂಧನ ಮನೋವೃತ್ತಿಯೂ ತೂಕ ತಪ್ಪಿದ್ದು ಅಲ್ಲದೆ ವಿಷಮವಾದ ಭಾವನಾಕ್ಷೋಬದ ವಿಕಾರಗೆಟ್ಟ ಸ್ಥಿತಿಯದು. ಮತಾಂಧನ ಜೀವನ ಪ್ರವಾಹವು ಒಂದು ವಿಶಾಲವಾದ ಪಾತ್ರದಲ್ಲಿ ಸರಾಗವಾಗಿ ಹರಿಯುವ ಬದಲು ಇಕ್ಕಟ್ಟಿನ ತೊಟ್ಟಿಯಲ್ಲಿ ರಭಸದಿಂದ ನುಗ್ಗುವದು. ಇದರಿಂದ ಮತಾಂಧರಲ್ಲಿ ಎರಡು ವಿಶೇಷಗಳು ಒಮ್ಮೆಲೇ ಕಾಣುವವು. ತಾನು ಹಿಡಿದ ಮತದ ಹಿಂದೆ ಮೆಚ್ಚಿದ ಸಂಗತಿಯಲ್ಲಿ ಮಿತಿಮೀರಿದ ಪ್ರಚಂಡ ಕಾರ್ಯೋತ್ಸಾಹದ ಪ್ರೇರಕಶಕ್ತಿ–ಹಾಗೆಯೇ ಅವನ ಬಾಳಿನ ಇತರ ಸಂಗತಿಗಳಲ್ಲಿಯೂ ಕಾರ್ಯಕ್ಷೇತ್ರಗಳಲ್ಲಿಯೂ ಯಾವ ಆಸಕ್ತಿಯೂ ಇಲ್ಲದ ನಿಷ್ಠುರವಾದ ವಿರಕ್ತಿ. ಈ ಮಾತನ್ನು ಓದಿದೊಡನೆ ಇಂಗ್ಲಂಡದ ಕ್ರಾಮವೆಲ್ ಮತ್ತು ಹಿಂದುಸ್ತಾನದ ಔರಂಗಜೇಬರ ನೆನಪಾಗದೇ ಇರದು.

ಮತಾಂಧತೆ ನಿಷ್ಠುರವಿರುತ್ತದೆ. ನಿರ್ದಯವಿರುತ್ತದೆ, ನಿರ್ಬಂಧವನ್ನೂ ನೀತಿಯನ್ನೂ ಲೆಕ್ಕಿಸುವದಿಲ್ಲ. ಇದೆಲ್ಲ ನಿಜ. ಆದರೂ ಅಂಥ ಮತಾಂಧತೆ ಯಾವದೊಂದು ಲೋಕಹಿತದ ಸಾರ್ವಜನಿಕ ಇಲ್ಲದೇ ರಾಷ್ಟ್ರೀಯ ಕಲ್ಯಾಣದ ಉದ್ದೇಶದ ಕುರಿತು ಇದ್ದರೆ ಅದರಿಂದ ಅಷ್ಟೇ ಅಮರ್ಯಾದವಾದ ಅಮೂಲ್ಯವಾದ ಲಾಭವೂ ಆಗುತ್ತದೆ. ಹಿಟ್ಲರನ ಮತಾಂಧತೆ ಜರ್ಮನರ ಸರ್ವನಾಶಕ್ಕೆ ಕಾರಣವಾದರೂ, ಸ್ಟಾಲಿನ್ನನ ಮತಾಂಧತೆಯು ಕಮ್ಯುನಿಷ್ಟ ಕರ್ಮಠತೆಯ ಕರ್ಮಯೋಗದಿಂದ ರಶಿಯನ್ ಮಾನವ ಕೋಟಿಯ ಅಭ್ಯುದಯಕ್ಕೆ ಸಾಧನವಾಯಿತು. ಅಂಥವಾದ ಪ್ರೇರಕಶಕ್ತಿಯ ಲಾಭ. ಅದು ಅಂಟಿಕೊಂಡ ಮತದ ಸಾಧಕ ಇಲ್ಲವೇ ಬಾಧಕ ಸ್ವರೂಪದಿಂದಲೇ ತಾರಕವಾಗಬಹುದು ಮಾರಕವೂ ಆಗಬಹುದು. ಆದ್ದರಿಂದ ದೇಶದ ಎಷ್ಟೋ ರಾಜಕೀಯ ಪ್ರಗತಿಯು ಇಂಥ ಮತಾಂಧರಿಂದಲೇ ಕೈಗೂಡುವದು. ನೆಲೆಗೊಂಡ ಸತ್ತೆ ಇಲ್ಲವೇ ಸಮಾಜ ವ್ಯವಸ್ಥೆಯು ದುಷ್ಟತೆಯ ವಿರುದ್ಧ ಹಾಗೂ ಜನಸಾಮನ್ಯರ ನಿಷ್ಕ್ರಿಯ ಜಡತೆಯ ವಿರುದ್ಧ ಹೋರಾಡಿ ಮುಂದರಿಯಲು ಕೆಲಮಟ್ಟಿಗಾದರೂ ಮತಾಂಧತೆಯ ರೊಚ್ಚಿನ ಮತ್ತು ಕೆಚ್ಚಿನ ರಭಸವು ಬೇಕು. ಸಮಾಧಾನದ ಸ್ಥಿರಪ್ರಜ್ಞರಿಂದ ಈಮಾತು ಸಾಧ್ಯವಿಲ್ಲ.

ಪುರುಷ ಸ್ವಭಾವದಲ್ಲಿ ಇನ್ನೊಂದು ಮಾದರಿಯನ್ನು ನಾವು ನೋಡಬಹುದು. ಈ ಮಾದರಿಯು ಎರಡು ವಿಧವಾಗಿರುತ್ತದೆ. ಅದು ಅವರವರ ಬಾಳಿನ ಒಳನೋಟವನ್ನು ಕಾಣಿಸುತ್ತದೆ. ಜನರು ಆಶಾವಾದಿಗಳಾಗಲೀ ನಿರಾಶಾವಾದಿಗಳಾಗಲೀ ಇರುವದುಂಟು. ಆಶಾವಾದಿಯು ಉತ್ಸಾಹಿಯೂ ಇರುತ್ತಾನೆ. ಕಾರ್ಯತತ್ಪರವಾದ ಚೈತನ್ಯ ಅವನದು. ಆಗುಹೋಗುಗಳ ಹೊಳಪಿನ ಬದಿಯನ್ನೇ ಆತನು ನೋಡುತ್ತಾನೆ. ಇರುಳಿನ ಕತ್ತಲೆಯಿಂದ ಕುಗ್ಗುವದಿಲ್ಲ. ತಾರೆಗಳ ಹೂಬೆಳಕಿನಿಂದ ಹಿಗ್ಗುತ್ತಾನೆ. ಇವನಿಗೆ ಬದುಕಿನಲ್ಲಿ ಹಿತವೂ, ಮಿತವೂ, ಸುಖವೂ ಕಾಣುತ್ತದೆ. ಈತನ ಆಶೆಯ ಬುಗ್ಗೆ ಯಾವಗಲೂ, ಪುಟಿಯುತ್ತಿರುತ್ತದೆ. ಎಷ್ಟೇ ಕಷ್ಟ ನಷ್ಟಗಳ ಸುಳಿಯಲ್ಲಿ ಸಿಲುಕಿದ್ದರೂ, ಬದುಕಿನ ಹೊರೆ ಎಷ್ಟೇ ಭಾರವಿದ್ದರೂ, ಹೋರೆ ಎಷ್ಟೇ ಬೇಸರವಿದ್ದರೂ, ಆವರಣ ಎಷ್ಟೇ ಹೊಲಸಿದ್ದರೂ ಇವನು ಸಮಾಧಾನಿಯಿರುತ್ತಾನೆ. ಇಷ್ಟೆ ಅಲ್ಲ ಬರೇ ಬಾಳಿನಲ್ಲಿಯೇ ಸಂತುಷ್ಟನಿರುತ್ತಾನೆ.

ನಿರಾಶಾವಾದಿ ಎಂಥವನು?

ಆದರೆ ನಿರಾಶವಾದಿ ಹೀಗಲ್ಲ. ಅವನದು ಉದಾಸೀನ ವೃತ್ತಿ; ವೈರಾಗ್ಯದ ನಿವೃತ್ತಿ ಪ್ರೀತಿಯ ಪ್ರವೃತ್ತಿಯಲ್ಲ. ಇವನಿಗೆ ಬೆಳಕೇ ಬದುಕು ಎಂಬ ಮುದವಿಲ್ಲ. ಬಾಳುವದು ಇವನಿಗೆ ಸಾಹಸದ ಸಿರಿಯಲ್ಲ, ಬರೇ ಸಹನೆಯ ಪರಿ, ಇವನು ಗೋಳಾಡದಿದ್ದಾಗೆಲ್ಲ ಬರೇ ಗಂಭೀರ. ಪ್ರಪಂಚದ ಹೊಲಸಿನ ಬದಿಯನ್ನೇ ನೋಡಿ ಮೈಮುದುಡಿಕೊಳ್ಳುತ್ತಾನೆ. ನಿಟ್ಟುಸಿರು ಬಿಡುತ್ತಾನೆ. ಬದುಕಿನಲ್ಲಿ ಕೆಡಕು, ಕುಹಕ, ಕೋಲಾಹಲ – ಹಾಲಾಹಲ, ಕಲಹ–ಪರಿತಾಪ, ಯಶ – ಅಪಮಾನ, ಜಾಡ್ಯ–ಮೌಢ್ಯಗಳೇ ಇವನಿಗೆ ಕಾಣುತ್ತವೆ. ಜಗತ್ತಿನಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚಿದೆಯೆಂದು ನಂಬುತ್ತಾನೆ. ನಮ್ಮ ಹುಟ್ಟು ಹೆತ್ತವರ ನೋವು; ಸಾವು ನಮ್ಮ ನೋವು. ಶ್ರೇಯದ ಇಷ್ಟದ ಬೆಲೆ ಶ್ರಮದ ಕಷ್ಟ; ಪ್ರೀತಿಗೆ ವಿರಹದ ಶಾಪ; ಭೋಗಕ್ಕೆ ರೋಗದ ಭೀತಿ–ಹೀಗೆಲ್ಲ ಒಂದು ಒಳಿತಿಗೆ ಹಲವು ಕೆಡಕುಗಳ ಹಿನ್ನೆಲೆಯನ್ನು ಕಟ್ಟಿ ನಿರಾಶಾವಾದಿಯು ಕಳವಳಗೊಳ್ಳುತ್ತಾನೆ. ಉಭಯ ಸಂಕಟಕ್ಕೆ ಇದಿರಾದರೆ, ಬಿಡುಗಡೆಯ ದಾರಿಯ ಬದಲು ಎರಡಕ್ಕೂ ಮಿಗಿಲಾದ ಮೂರನೇ ಮಹಾಸಂಕಟವನ್ನೇ ಆತನು ಹಂಬಲಿಸುತ್ತಾನೆ. ಇವೆರಡು ಮಾದರಿಯವರಲ್ಲಿ ಬದುಕಿ ಗೆಲ್ಲಬಲ್ಲವನು ಯಾರೆಂಬುದನ್ನು ನಾವು ಸಹಜವಾಗಿ ಊಹಿಸಬಹುದು.

ಪುರುಷ ಸ್ವಭಾವದ ಇನ್ನೂ ಎರಡು ಮಾದರಿಗಳಿವೆ. ನಮ್ಮ ಪುರಾಣಗಳು ಅರ್ಜುನನೋರ್ವನೇ ನರನೆಂದವು. ಅಂದರೆ ಮಿಕ್ಕವರೆಲ್ಲರೂ ನಾರಿಯರೆಂದೇ ? ಹಾಗಲ್ಲ. ಪ್ರತಿವ್ಯಕ್ತಿಯೂ ಅರ್ಧನಾರಿನರೇಶ್ವರನೇ ಸರಿ. ಪ್ರತಿ ಗಂಡಿನಲ್ಲಿಯೇ ಹೆಣ್ಣು ಮನೋಧರ್ಮದ ಕೆಲವಂಶವೂ. ಪ್ರತಿಹೆಣ್ಣಿನಲ್ಲಿಯೂ ಗಂಡು ಮನೋಧರ್ಮದ ಕೆಲವಂಶವೂ ಇದ್ದೇ ಇರುತ್ತದೆ. ಶರೀರಭೇದದಿಂದ ಹೆಣ್ಣು ಗಂಡು ಸ್ಥೂಲವಾಗಿ ಸ್ಪಷ್ಟವಿದ್ದರೂ, ಮನೋಧರ್ಮದಲ್ಲಿ ಅಷ್ಟೊಂದು ಭೇದ ಸೂಕ್ಷ್ಮವಾಗಿ ಬೇರ್ಪಟ್ಟಿರುವದಿಲ್ಲ. ಇದರಿಂದ ನಾವು ನಮ್ಮ ಪರಿಚಿತರಲ್ಲಿಯೂ ಪರಿವಾರದವರಲ್ಲಿಯೂ ಗಂಡಸಿನಲ್ಲಿಯೂ ಕೂಡ ಪೌರುಷಿಗಳೂ ಸ್ತ್ರೈಣರು ಎಂದು ಭೇದಮಾಡಬಹುದು. ಪೌರುಷಿಯು ಕಾರ್ಯತತ್ಪರನೂ, ಚಟುವಟಿಕೆಯವನೂ, ಸತ್ವಶಾಲಿಯೂ, ರಭಸದವನೂ ಆಕ್ರಮಕ ವೃತ್ತಿಯವನೂ ವ್ಯಾವಹಾರಿಕ ಪ್ರಪಂಚದಲ್ಲಿ ಒಳ್ಳೇ ಆಸ್ಥೆಯುಳ್ಳವನೂ ತನ್ನ ಜೀವನ ಮತ್ತು ಜಗತ್ತಿನ ಮೇಲೆ ನಿಯಂತ್ರಣ ದಿಗ್ದರ್ಶನವನ್ನು ಮಾಡಬಯಸುವಂಥವನೂ ಸಾಮರ್ಥ್ಯ ಹಾಗೂ ಪ್ರಭಾವವನ್ನೇ ಗುರಿಯಾಗಿ ಇಟ್ಟುಕೊಂಡವನೂ ಸಂಪತ್ತು ಪ್ರತಿಷ್ಠೆ ಹಾಗೂ

ಲೌಕಿಕ ಸಾಧನ ಸೌಕರ್ಯಗಳನ್ನು ಗಳಿಸಲು ಹೆಣಗುವವನೂ ಇರುತ್ತಾನೆ. ಅಂದರೆ ಪ್ರತಿಯೊಬ್ಬ ಪುರುಷ ಗಂಡಸೂ ಇದೆಲ್ಲವನ್ನೂ ಮಾಡುವನೆಂದಲ್ಲ, ಇಂಥವನಲ್ಲಿ ವಿಚಾರಗಳೂ ಯೋಚನೆಗಳೂ ಆವೇಶಯುಕ್ತವಾಗಿ ಬರುತ್ತವೆ. ತನ್ನ ಯಶ ಸಿದ್ಧಾಂತಗಳ ಕುರಿತು ಈತನು ಪಕ್ಷಪಾತಿಯಾಗಿರುತ್ತಾನೆ. ಸಹಸಾ ಮತಾಂತರಕ್ಕೆ ಒಳಪಡುವದಿಲ್ಲ. ವಿರೋಧಿಗಳನ್ನು ಪ್ರತಿಭಟಿಸುವದರಲ್ಲಿ ನಿಶ್ಚಯಿಯಾಗಿರುತ್ತಾನೆ. ಜೀವನವನ್ನೂ ಜಗತ್ತನ್ನೂ ತನ್ನ ವಿಕಾರ ಭಾವನೆಗಳಿಗಿಂತ ವಿಚಾರಬುದ್ಧಿಯಿಂದಲೇ ಸಾಮಾನ್ಯವಾಗಿ ಅವಲೋಕಿಸುತ್ತಾನೆ. ಹಾಗೆಯೇ ತನ್ನ ಬಲಕ್ಕಾಗಿಯೂ, ಯಶಕ್ಕಾಗಿಯೂ ಪ್ರಶಂಸೆ ಪಡೆಯಬೇಕೆಂದು ಇವನಿಗೆ ಅನಿಸುತ್ತದೆ.

ಸ್ತ್ರೈಣರ ಲಕ್ಷಣ

ಆದರೆ ಸ್ತ್ರೈಣ ಸ್ವಭಾವದವನು ಹಾಗಲ್ಲ. ಇವನು ವಿಶೇಷವಾಗಿ ಭಾವನಾಮಯನಾಗಿರುತ್ತಾನೆ. ಒಮ್ಮೆಲೇ ಪ್ರಭಾವಿತನಾಗುತ್ತಾನೆ; ಇಂಗಿತಜ್ಞನಾಗಿರುತ್ತಾನೆ; ವೇದನೆ ಸಂವೇದನೆಗಳು ಇವನಿಗೆ ಹೆಚ್ಚು; ತಾತ್ವಿಕನೂ ಸಾತ್ವಿಕನೂ ಇರುತ್ತಾನೆ; ಅಂತಃಪ್ರೇರಣೆಯನ್ನು ಇವನು ನಂಬುತ್ತಾನೆ; ಕಲ್ಪಿಕನಾಗಿರುತ್ತಾನೆ. 'ವಾದ'ಗಳ ಪ್ರೀತಿ ಇವನಿಗಿರುತ್ತದೆ. ಭಾವೋನ್ಮಾದ ಇವನಿಗಿರುತ್ತದೆ; ಸಾಮ್ಯನೂ, ಸಭ್ಯನೂ, ಚತುರನೂ, ತಾಳ್ಮೆಯುಳ್ಳವನೂ ಆಗಿರುತ್ತಾನೆ. ಆತ್ಮಸಮರ್ಥನೆಗಿಂತ ಆತ್ಮ ಸಮರ್ಪಣೆ ಇವನಿಗೆ ಸಹಜ. ಅಂದರೆ ತನ್ನ ಹಟವನ್ನೇ ಸಾಧಿಸುವ ಬದಲು ಮತಭೇದಕ್ಕಿಂತ ಮತಾನುಕೂಲವನ್ನೇ ಹೊಂದಿಸಿಕೊಳ್ಳುತ್ತಾನೆ. ಇವನು ರಸಿಕನೂ, ಅಭಿರುಚಿಸಂಪನ್ನನೂ, ಸ್ವಚ್ಛಂದಿಯೂ, ಆದರ್ಶಪ್ರಿಯನೂ, ತತ್ವಪ್ರತಿಪಾದಕನೂ, ನಿರ್ಧಾರ–ನಂಬಿಗೆಗಳಲ್ಲಿ ಚಂಚಲನೂ ಆಗಿರುತ್ತಾನೆ. ಇವನಿಗೆ ಸಂಘರ್ಷ, ಬಿಕ್ಕಟ್ಟು, ಕಾಯಕಷ್ಟ ಸೇರದು. ಸುಖಸೌಕರ್ಯ, ಪ್ರಸನ್ನವಾತಾವರಣ, ವಿಲಾಸ–ವಿರಾಮ ಇವನಿಗೆ ಪ್ರಿಯ. ಇವನು ಸೊಗಸುಗಾರ. ಸೌಂದರ್ಯ, ಅಚ್ಚುಕಟ್ಟು, ಉತ್ತಮತೆ ಇವನಿಗೆ ಮೆಚ್ಚಿಗೆ. ಪರಿಮಾರ್ಜಿತ ಗುಣಕ್ಕೆ ಇವನು ಹೆಚ್ಚು ಮನ್ನಣೆ ಕೊಡುವವನು. ಜೀವನದ ಬಿರುಸು ಇವನಿಗೆ ಒಗ್ಗದು, ದೃಢನಿಶ್ಚಯ ಸತತ ಪರಿಶ್ರಮ ಇವನಿಗೆ ಸಾಧ್ಯವಿಲ್ಲ. ಸಾಹಸದ, ಪ್ರಯೋಗದ, ತೀರ ಹೊಸ ದುಡುಕಿನ ವ್ಯವಹಾರ ವ್ಯವಸಾಯ ಇವನಿಗೆ ಒಪ್ಪಿಗೆಯಿಲ್ಲ. ಹೊಣೆಗಾರಿಕೆಯ ಮೇಲ್ವರ್ಗದ ಅಧಿಕಾರವೂ ಇವನಿಗೆ ಬೇಕೆನಿಸದು. ಸುಶಿಕ್ಷಿತವಾದ ನಿಯಮಿತವಾದ ಪ್ರಾಪ್ತಿಯುಳ್ಳ, ಒಳ್ಳೇ ನಿಯಂತ್ರಣದ ಕೆಳಗಿನ ಕೆಲಸ ಇವನಿಗೆ ಅನುಕೂಲ. ಮಂದಿಯ ಮೆಚ್ಚಿಗೆ ಮನವಾರೆ ಬಯಸುವನು. ಇತರರನ್ನು ಪ್ರತ್ಯಕ್ಷ ಆಳುವದಕ್ಕಿಂತ ಅವರ ಮೇಲೆ ಪ್ರೀತಿ ದಾಕ್ಷಿಣ್ಯಗಳ ವಕ್ರಪ್ರಭಾವವನ್ನು ಬೀರುವದು ಇವನ ರೀತಿ.

ಮೇಲೆ ಕೊಟ್ಟ ಮಾದರಿಗಳು ಅತ್ಯಂತಿಕ ರೂಪದವು. ನಮ್ಮ ಒಡನಾಡಿಗಳಲ್ಲಿ ಕೇವಲ ಪೌರುಷಿ ಇಲ್ಲವೇ ಕೇವಲ ಸ್ತ್ರೈಣ ವ್ಯಕ್ತಿ ಸಿಗುವದು ವಿರಳ, ಆದರೆ ಇವೆರಡೂ ಮಾದರಿಯ ಲಕ್ಷಣಗಳಲ್ಲಿ ಕೆಲವೊಂದು ಅಂಶ ಹೆಚ್ಚಾಗಿದ್ದ ಜನರು ಸಾಮಾನ್ಯವಾಗಿ ತೋರಿಬರುವರು. ಅಂಥವರ ಒಂದೆರಡು ಲಕ್ಷಣಗಳನ್ನು ಕಂಡು ಮಿಕ್ಕವುಗಳನ್ನು ಊಹಿಸಿ ಅದಕ್ಕೆ ತಕ್ಕಂತೆ ನಮ್ಮ ವರ್ತನವಿಡಲು ಅನುಕೂಲವಾಗುವದು. ಇದಲ್ಲದೆ ಇನ್ನೂ ಒಂದು ಸಂಗತಿ ವ್ಯಕ್ತವಾಗುವದೇನೆಂದರೆ, ಸಂಸ್ಕೃತಿಗೆ ಪೋಷಕವಾಗುವ ಗುಣಗಳೆಲ್ಲ ಸ್ತ್ರೈಣತೆಯ ಲಕ್ಷಣಗಳೋ ಎಂದೆನಿಸುವದು. ಹೀಗೆ ಸಂಸ್ಕೃತಿ-ರುಚಿರಸಿಕತೆ ಇವೆಲ್ಲ ಹೆಣ್ಣುತನವೆಂದು ನಾಚಿಕೊಂಡು ಎಷ್ಟೋ ಮೊಂಡು ಗಂಡುವಿಚಾರದವರು ಹುಂಬ ಸಾಮರ್ಥ್ಯದ ಪೂಜೆ ಕಟ್ಟುವ ಅತ್ಯಾಚಾರಿಯೂ ಬಲತ್ಕಾರಿಯೂ ಆದ ಬದುಕಿನ ರೀತಿಯನ್ನು ರೂಢಿಗೊಳಿಸಿ ಜಗತ್ತಿನ ಶಾಂತಿ-ಸುಖಕ್ಕೆ ಭಂಗ ತಂದದ್ದುಂಟು. ಆದರೆ ಪೌರುಷಿಯಾದ ಗುಣಗಳ ಹಂದರದ ಮೇಲೆ ಸ್ತ್ರೈಣವೆನಿಸುವ ಸದ್ಗುಣಗಳನ್ನು ಅರಳಿಸಿದರೇನೇ ಬದುಕಿನ ಬಳ್ಳಿ ತೀಕ್ಷ್ಣ ಅಲಗೂ ಅವಶ್ಯವೆ; ಜತೆಗೆ ಮೃದುವಾದ ಒರೆ ಹಾಗೂ ಮಾಟವಾದ ಹಿಡಿಕೆಯೂ ಅಷ್ಟೇ ಅವಶ್ಯ.

ಇನ್ನೂ ಒಂದು ಬಗೆಯಾಗಿ ಪುರುಷರ ವರ್ಗೀಕರಣ ಮಾಡಲು ಬರುವದು. ಕೆಲವರು ಬಹಿರ್ಮುಖರಿರುತ್ತಾರೆ. ಕೆವರು ಅಂತರ್ಮುಖರಿರುತ್ತಾರೆ. ಬಹಿರ್ಮುಖರು ಹೊರ ಪ್ರಪಂಚದಲ್ಲಿ ಜೀವನದ ಮತ್ತು ಜಗತ್ತಿನ ವಿಷಯ ವ್ಯಾಪಾರಗಳ ವಿವರಗಳಲ್ಲಿ ಆಸಕ್ತಿ ಉಳ್ಳವರಿರುತ್ತಾರೆ. ಅಂತರ್ಮುಖರು ತಮ್ಮೊಳಗೇ ತಾವಾಗಿ ಮಾನಸಿಕ ಇಲ್ಲವೆ ಕಾಲ್ಪನಿಕ ಪ್ರಪಂಚದಲ್ಲಿ ಮಗ್ನರಾಗಿರುತ್ತಾರೆ. ಈ ಅಂತರ್ಮುಖತೆ ಹಗಲುಗನಸು ಕಾಣುವ ಮೈಗಳ್ಳನದೂ ಇರಬಹುದು. ಆತ್ಮಾನುಸಂಧಾನಪರನಾದ ಅನುಭಾವಿಯದೂ ಇರಬಹುದು. ಸಾಮಾನ್ಯವಾಗಿ ಬಹಿರ್ಮುಖರು ಕೆಲಸಗಾರರು-ಕಾರ್ಯಕರ್ತರು; ಅಂತರ್ಮುಖಿಗಳು ಚಿಂತನಶೀಲರು; ವಿಚಾರಪರರು, ತಾತ್ವಿಕರು

ಬಹಿರ್ಮುಖ ಅಂತರ್ಮುಖ

ಕಾರ್ಯಕರ್ತನು ವ್ಯಾವಹಾರಿಕ ಪಾತಳಿಯಲ್ಲಿಯೇ ವಿಚಾರ ಮಾಡುತ್ತಾನೆ. ಉಪಯುಕ್ತತೆಯೇ ಆತನ ಎಲ್ಲ ಅಭ್ಯಾಸ, ಜಿಜ್ಞಾಸೆ ಹಾಗೂ ಕಲ್ಪನೆಯ ಅಡಿಗಲ್ಲು. ಭದ್ರವಾದ ಸ್ಥೂಲವಾದ ಸತ್ಯದ ಆಧಾರವಿಲ್ಲದ ಯಾವ ಕೆಲಸವನ್ನೂ ಇವನು

ಕಾಣಲಾರನು. ಇವನಿಗೆ 'ಗುರುರೇವ ಜಗತ್ಸರ್ವಂ' ಅಂದರೆ ಜಗತ್ತೇ ಈತನ ಗುರು ಹಾಗೂ ಬುದ್ಧಿ ಕಲಿಸುವ ಗ್ರಂಥ. ನೇರವಾಗಿ ತನ್ನ ಹಾಗೂ ಪರರ ಜೀವನದಿಂದ ಇವನು ಬೋಧ ಪಡೆದು ಬಲ್ಲವನಾಗುವನು. ಆದರೆ ಅಂತರ್ಮುಖನಾದ ಚಿಂತನ ಶೀಲ ತಾತ್ವಿಕನು ಹಾಗಲ್ಲ. ಅವನಿಗೆ ವ್ಯಾವಹಾರಿಕ ಕಾರ್ಯಕರ್ತನಿಗಿಂತ ಜ್ಞಾನ ಹೆಚ್ಚಿದ್ದರೂ ಅದೆಲ್ಲ ಗ್ರಂಥಗಳಿಂದ ಬಂದದ್ದು. ಬಹಿರ್ಮುಖನು ಮಾಡಬಲ್ಲ ವಿಚಾರವಂತನು. ವಾಸ್ತವ ಪ್ರಸಂಗಗಳನ್ನೂ ಪ್ರಶ್ನೆಗಳನ್ನೂ ಇದುರಿಸಿಯೇ ಬಿಡಿಸಬಲ್ಲನು. ಘಟನೆಗಳಲ್ಲಿ ತೊಡಗಿಯೇ ಸುಖಿಯಾಗಬಲ್ಲನು. ಆದರೆ ಅಂತರ್ಮುಖನು ಚೆಂದವಾದ ಸೂಕ್ಷ್ಮವಾದ ತತ್ವಸಿದ್ಧಾಂತಗಳ ಜಾಲವನ್ನೇ ಹೆಣೆಯಬಲ್ಲನು. ಸಾಕ್ಷಿಯಾಗಿ ಜೀವನವನ್ನೆಲ್ಲ ನೋಡಿ ವಿಮರ್ಶಿಸಿ ಜಾಣತನದ ಮಾತನ್ನೂ ಮಾತಿನ ಜಾಣತನವನ್ನೂ ವ್ಯಕ್ತಪಡಿಸಬಲ್ಲನು. ಜಗತ್ತಿನ ದಾರ್ಶನಿಕರೂ. ಕವಿಗಳೂ, ಕಲಾವಿದರೂ, ಮತಪ್ರವರ್ತಕರೂ ಇಂಥವರು. ಕಾರ್ಲಮಾರ್ಕ್ಸನು ಲಂಡನ ಪಟ್ಟಣದಲ್ಲಿ ಬ್ರಿಟಿಶ ಮ್ಯೂಝಿಯಂದ ಗ್ರಂಥಾಲಯದಲ್ಲಿ ಕುಳಿತು ಸಾಮ್ಯವಾದದ ಸ್ವಪ್ನವನ್ನು ಚಿತ್ರಿಸಿದನು. ಅದನ್ನು ಸತ್ಯಸೃಷ್ಟಿಯಾಗಿ ಮಾರ್ಪಡಿಸಿ ಒಂದು ಹೊಸಯುಗದ ವಸ್ತುಪಾಠವನ್ನು ಜಗತ್ತಿಗಾಗಿ ಕಲಿಸಲು ರಶಯನ್ನ ಕ್ರಾಂತಿಯನ್ನು ಯಶಸ್ವಿಗೊಳಿಸಲು ಪ್ರಚಂಡ ಕರ್ಮಯೋಗಿಯಾದ ಲೆನಿನ್‌ನೇ ಬೇಕಾಯಿತು.

ಅಂದಮೇಲೆ ಅಂತರ್ಮುಖರು ನಿರುಪಯೋಗಿಯೆಂತಲ್ಲ. ವಿಚಾರವಿಲ್ಲದೆ ವ್ಯವಹಾರ ಕುರುಡು; ವ್ಯವಹಾರ ತಪ್ಪಿದ ವಿಚಾರವೂ ಬರಡು. ಅಂತರ್ಮುಖರು ಜೀವನದ ಸೌಂದರ್ಯವನ್ನು ಕಂಡು ಮಂಗಲವನ್ನು ಸೂಚಿಸುತ್ತಾರೆ. ಬಹಿರ್ಮುಖರು ಜೀವನದ ಸತ್ವಕ್ಕೆ ಅಂಥ ಸೌಂದರ್ಯ-ಮಾಂಗಲ್ಯದ ರೂಪವನ್ನು ಕೊಡುತ್ತಾರೆ. ಅಂತರ್ಮುಖರ ಸ್ಫೂರ್ತಿ ಬಹಿರ್ಮುಖರ ಕೀರ್ತಿಗೆ ಕಾರಣವಾಗುತ್ತದೆ. ಪೈಗಂಬರ ಅಬೂಬಕರ್, ಪರಮಹಂಸ-ವಿವೇಕಾನಂದ, ವಿದ್ಯಾರಣ್ಯ-ಹರಿಹರ, ಮಹಾತ್ಮಾಜಿ, ಸರದಾರ ಪಟೇಲ ಇಂಥ ದ್ವಂದ್ವ ಮೂರ್ತಿಗಳು ಇಲ್ಲಿ ನೆನಪಿಗೆ ಬರುತ್ತವೆ.

ಬಹಿರ್ಮುಖನು ಹೊರಪ್ರಪಂಚದ ಸಂಗತಿಗಳಿಗೆ ಸೆಳೆಯಲ್ಪಟ್ಟು ಪ್ರಸಿದ್ಧಿಯ ಬೆಳಕಿಗೆ ಗುರಿಯಾಗುತ್ತಾನೆ. ಅಂತರ್ಮುಖನು ಒಳಬದುಕಿನ ಅನುಭವದಲ್ಲಿ ತೊಡಗಿದ್ದು ತನ್ನ ಅಂತರಂಗದ ಬೆಳಕಿನಲ್ಲಿಯೇ ನಿದಿಧ್ಯಾಸದಿಂದ

ನಡೆಯುತ್ತ ಏಕಾಕಿಯೂ ಏಕಾಂತಸೇವಿಯೂ ಆಗುತ್ತಾನೆ. ಹೀಗೆ ಅಂತರ್ಮುಖನು ವಿಚಾರ ಶೀಲನಾಗಿ ಬದುಕಿನ ಬೀದಿಯ ಬದಿಗೆ ನಿಂತರೂ, ತತ್ಕಾಲಿಕ ಕಾರ್ಯದಿಂದ ದೂರವಿದ್ದರೂ, ತನ್ನ ದೂರದರ್ಶಿಯಾದ ದೂರಾಲೋಚನೆಯಿಂದ, ಮಿಕ್ಕ ಕಾರ್ಯತತ್ಪರರಿಗೆ ನಿಜವಾಗಿಯೂ ಬಹಳ ಸಹಾಯ ಮಾಡಬಹುದು – ಮಾಡುವದೂ ಅಹುದು. ಇದರಿಂದ ಬಹಿರ್ಮುಖನು, ಅಂತರ್ಮುಖರನ್ನು ಕೆಲವೊಂದು ಮೈಗಳ್ಳರೆಂದೂ ಮನದ ಮಂಡಿಗೆ ತಿನ್ನುವ ಕನವರಿಕೆಯವರೆಂದೂ ಟೀಕಿಸಿದರೂ, ಅನುವು ಬಂದಾಗ ಅಂಥವರಿಂದಲೇ ಮಾರ್ಗದರ್ಶನ ಪಡೆಯುವನು. ಸಾಧಾರಣವಾಗಿ ಬಹಿರ್ಮುಖನು ತನ್ನ ವಿಚಾರದ ಬುತ್ತಿಯನ್ನು ಎರವಲವಾಗಿಯೇ ತಂದಿರುತ್ತಾನೆ. ಇತರರ ಸಲಹೆಸೂಚನೆಗಳನ್ನು ಸ್ವಾಗತಿಸಲು ಯಾವಗಲೂ ಉತ್ಸುಕನಿರುತ್ತಾನೆ. ವಿಚಾರದ ನೆವದಿಂದಲೂ ಅವನಿಗೆ ಕಾಲಹರಣ ಸೇರದು; ಆದ್ದರಿಂದ ಕಾಲಕೆಳಗಷ್ಟೇ ನೋಡಿ ಕೆಲಸಕ್ಕೆ ದುಡುಕಿಬಿಡುತ್ತಾನೆ. ತನ್ನ ವಿಚಾರಭೂಮಿಕೆಯನ್ನು ಕ್ರಮಕ್ರಮವಾಗಿ ಕಟ್ಟಿಕೊಳ್ಳುತ್ತಾನೆ. ಇಲ್ಲವೇ ತನಗಾಗಿ ವಿಚಾರ ಮಾಡಲು ಹೆರವರಿಗೆ ಬಿಟ್ಟುಕೊಡುತ್ತಾನೆ! ಗತಿಪ್ರಿಯನಿದ್ದರಿಂದ ಪ್ರಗತಿಪ್ರಿಯನೂ ಇರುತ್ತಾನೆ. ಪ್ರತಿಕೂಲತೆ ಬಂದಂತೆ ಹುರುಪುಗೊಂಡು ಹೊಸ ಆರಂಭ ಮಾಡುತ್ತಾನೆ. ತನ್ನಂಥ ಇತರ ಕಾರ್ಯಕರ್ತರ ನೆರವನ್ನು ಯೋಗ್ಯ ವಿಚಾರಶೀಲರ ಬೆಂಬಲವನ್ನೂ ಪಡೆದು ಗುಂಪುಗೂಡಿ ಕೆಲಸ ಮಾಡುತ್ತಾನೆ. ಆದರೆ ಅಂತರ್ಮುಖನು ತನ್ನ ಒಡಲಿನಿಂದಲೇ ರೇಶಿಮೆ ನೂಲುವ ಹುಳದಂತೆ ತನ್ನ ವಿಚಾರಗಳ ಜಾಳಿಗೆಯಲ್ಲಿಯೇ ಸುತ್ತಿಕೊಂಡಿರುತ್ತಾನೆ. ಅವನ ಚಟುವಟಿಕೆಗಳಲ್ಲಿ ತನಗಾಗಿಯೇ ಪ್ರತಿಕೂಲತೆಯಿಂದ ಇನ್ನಿಷ್ಟು ಸಂಕೋಚಪಟ್ಟು ಆವೆಯಂತೆ ಒಳಒಳಗೇ ಮುದುಡಿಕೊಳ್ಳುತ್ತಾನೆ. ಮಂದಿ ತನ್ನನ್ನು ತಿಳಿಯಲಾರದೆಂದು ಹಿಗ್ಗಿ ಹೆಮ್ಮೆ ಪಡುತ್ತಾನೆ; ಇಲ್ಲವೇ ತಿಳಿಯಲೊಲ್ಲರೆಂದು ಕುಗ್ಗಿ ದುಮ್ಮಾನದಲ್ಲಿರುತ್ತಾನೆ. ಒಟ್ಟಾರೆ ಏಕಾಂತದಲ್ಲಿಯೇ ಸಂಸಾರಸಾಗರದಲ್ಲಿಯ ಒಂದು ನಡುಗಡ್ಡೆಯಂತೆ ಬಾಳುತ್ತಾನೆ.

ಗತಾನುಗತಿಕೋ ಲೋಕಃ

ಗಂಡಿಗಿಂತ ಹೆಣ್ಣು ಗತಾನುಗತಿಕಳೆಂದು ಹಿಂದೆಯೇ ಹೇಳಿದೆ. ಆದರೆ ಗಂಡೆಂಬ ಮಾತ್ರಕ್ಕೆ ಎಲ್ಲರೂ ಸ್ವತಂತ್ರ ವಿಚಾರಿಗಳೂ ಸ್ವೇಚ್ಛಾಚಾರಿಗಳೂ ಎಂದು ತಿಳಿಯುವದು ತಪ್ಪು. ಗಂಡಿನಲ್ಲಿಯೂ ಪ್ರವಾಹಪತೀತರೇ ಹೆಚ್ಚು. ಬಹುಶಃ ಎಲ್ಲ ಪುರುಷರೂ ತಮ್ಮ ಯುಗದ ಪರಂಪರೆಗೆ ಒಳಪಟ್ಟಿಯೇ ಬಾಳಬಲ್ಲರು. ಪ್ರಚಲಿತ

ರೂಢಿಯ ವಿರುದ್ಧ ಇಲ್ಲವೇ ಹೊರತಾಗಿ ನಡೆಯಲು ಬಹುಸಂಖ್ಯೆ ಗಂಡಸರು ಹೆದರುತ್ತಾರೆ. ಹೊಸ ರೀತಿಯಲ್ಲಿ ನಡೆಯಲು ಹೊಸ ವಿಚಾರಗಳನ್ನು ಆಡಿತೋರಿಸಲೂ ಸಾಮಾನ್ಯ ಸದ್ಗೃಹಸ್ಥನು ಅಂಜುತ್ತಾನೆ. ತಾನು ನಂಬಿದ ಇಲ್ಲವೆ ಅನುಸರಿಸುವ ಆಚಾರಗಳೆಲ್ಲ ತನ್ನ ಸ್ವಂತ ಬುದ್ಧಿಯ ಆಯ್ಕೆಯವೇ ಎಂದು ಆತನು ಭಾವಿಸುತ್ತಾನೆ. ಆದರೆ ವಸ್ತುತಃ ಅವನ ವಿಚಾರಗಳು ಅವನ ನೆರೆಹೊರೆಯವರಿಂದಲೋ, ಕೇರಿಯ ಇಲ್ಲವೇ ಕಚೇರಿ–ಕಟ್ಟೆಯ ಮಾತುಕತೆಗಳಿಂದಲೋ ನಿನ್ನೆ ಓದಿದ ಪತ್ರಿಕೆಯಿಂದಲೋ ಅರಗಿಸಿಕೊಂಡವು ಇರುತ್ತವೆ. ಅವನ ಆಚಾರವು ಸಮಾಜದ, ಅವನ ಜಾತಿಯ, ಇಲ್ಲವೇ ಜತೆಗಾರರ ನಡತೆಯ ವಾಡಿಕೆಯಿಂದಲೇ ಅನುಕರಿಸಿದ್ದಿರುತ್ತದೆ. ಕೆಲವೊಮ್ಮೆ ತನ್ನದೇ ಸ್ವತಂತ್ರ ನಡತೆಯನ್ನು ನಂಬಿಗೆಯನ್ನು ಆತನು ಆಢ್ಯತೆಯಿಂದ ಪ್ರದರ್ಶಿಸುವದುಂಟು. ಆಗಲೂ ಅದು ಅವನದೇ ಆಗಿರುವದಿಲ್ಲ, ಅವನ ಪ್ರಶಂಸೆಗೆ ಪಾತ್ರವಾದ ಒಂದು ಪ್ರಪಂಚದ್ದಾಗಿರುತ್ತದೆ. ಪುರಾಣಿಕರಲ್ಲಿ ಬೆಳೆದ ಯುವಕ ಸಂಗೀತಗಾರನೋ ಸಾಹಿತಿಯೋ ಸಾಮ್ಯವಾದಿಯೋ ಆಗಿ ತಲೆತುಂಬ ಕೂದಲು ಬಾಯಿತುಂಬ ಸಿಗರೇಟ ಹೊಗೆ ಇಟ್ಟುಕೊಂಡು ಮನೆಯ ಹಿರಿಯರನ್ನು ಕೆರಳಿಸಬಹುದು. ಆದರೆ ಅವನದೇ ಆದ ಸಂಗೀತಗಾರರ, ಸಾಹಿತಿಗಳ ಇಲ್ಲವೇ 'ಕಾಮರೆಡ'ರ ಒಂದು ಪ್ರಪಂಚದ ಪರಂಪರೆಯಲ್ಲಿಯೇ ಆತನು ನಡೆಯುತ್ತಿರುತ್ತಾನೆ.

ನಿಜವಾದ ಹೊಸ ವಿಚಾರ ಹೊಸ ಕಲ್ಪನೆ ಬಂದೊಡನೆ ಸಾಮಾನ್ಯ ಸದ್ಗೃಹಸ್ಥನು ಗಾಬರಿಯಾಗುತ್ತಾನೆ. ಬುದ್ಧಿವಾದ, ಸಂತತಿನಿಯಮನ, ನಿಃಶಸ್ತ್ರೀಕರಣ ಅಷ್ಟೇಕೆ ವಾರದ ರೇಡಿಯೋ ಕಾರ್ಯಕ್ರಮದಲ್ಲಿ ತಿದ್ದುಪಡಿ ಇಂಥ ವಿಚಾರಗಳ ಕುರಿತು ಸ್ವಂತ ನಿರ್ಣಯ ಕೊಡುವ ಒತ್ತಾಯ ಬಂದರೆ ಅವನು ದಿಗಿಲುಗೊಳ್ಳುತ್ತಾನೆ. ಅಥವಾ ಸಿಟ್ಟಿಗೇಳುತ್ತಾನೆ.

ಇದರಿಂದ, ಸಾಮಾನ್ಯ ಗಂಡಸು ಸಂಪ್ರದಾಯ ಶರಣತನವನ್ನೇ ಹಿರಿಯ ಸದ್ಗುಣವೆಂದು ತಿಳಿಯುತ್ತಾನೆ. ನಡೆ, ನುಡಿ, ನೀತಿ, ವಾದ, ಉಡಿಗೆ ಎಲ್ಲ ಚಿಕ್ಕ ದೊಡ್ಡ ಸಂಗತಿಗಳಲ್ಲಿಯೂ ಹಾಗೆಯೇ ಸರಿ. ಸಜ್ಜನನೆಂದರೆ ಯಾರು? ತನ್ನ ಸಮಾಜದ ನಿಯಮಗಳನ್ನು ಅನುಸರಿಸುತ್ತ ತನ್ನ ಸಂಪ್ರದಾಯದ ಧರ್ಮದಲ್ಲಿ ನಂಬುತ್ತ, ತನ್ನ ಮನೆತನಕ್ಕೆ ತಕ್ಕಂತೆ ಮಕ್ಕಳನ್ನು ಪೋಷಿಸಿ ಶಿಕ್ಷಣ ಕೊಟ್ಟು, ತನ್ನ ದೇಶವೇ ಜಗತ್ತಿನ ಉತ್ತಮ ದೇಶವೆಂದು ತಿಳಿಯುತ್ತ ಬಾಳುವವನೇ ಸಾಮಾನ್ಯವಾಗಿ

ಸಜ್ಜನನೆಂದು ಎಣಿಸಲಾಗುತ್ತದೆ. ನೆರೆಹೊರೆಯವರು ಬಾಳಿದಂತೆ ಬಾಳಿ ಅವರು ನಿಷ್ಕಲಂಕ ಜೀವನದವನಾಗುತ್ತಾನೆ. ಇಂಥವನ ಮನಸ್ಸು ಬರೇ ಪರಿಸ್ಥಿತಿಯ ಇಲ್ಲವೇ ಪರಿಪಾಟಿಯ ನೆರೆಯಲ್ಲಿಯೇ ನಡೆಯುತ್ತದೆ. ಪಶುಗಳಿಗೆ ಹೇಗೆ ಕೆಲವು ಚಟುವಟಿಕೆಗಳು ರೂಢಿಯಿಂದ ಮೈಚಟವಾಗಿ ಯಾಂತ್ರಿಕವಾಗುವವೋ ಹಾಗೆಯೇ ಈ ಸಜ್ಜನನಿಗೆ ನಡೆನುಡಿ ಊಟ-ಉಡಿಗೆ, ಆಚಾರ-ಉಪಚಾರಗಳ ಕೆಲವು ಪಡಿಯಚ್ಚುಗಳು ದೃಢವಾಗಿ ಬಿಡುತ್ತವೆ. ಅವನು ತಾನೂ ತಪ್ಪುವದಿಲ್ಲ, ಯಾರು ತಪ್ಪಿದರೂ ತಾಳಲಾಗುವದಿಲ್ಲ.

ಆದರೆ ಪ್ರತಿಭಾವಂತನು ಹಾಗಿರುವದಿಲ್ಲ. ಅವನ ವ್ಯಕ್ತಿತ್ವ ತನ್ನದೇ ಆದ ದಾರಿಯನ್ನು ಹಿಡಿಯುತ್ತದೆ. ಇಲ್ಲವೇ ಹುಡುಕುತ್ತದೆ. ಅವನ ಚೈತನ್ಯ ಅವನ ಬುದ್ಧಿಶಕ್ತಿಯ ಸರ್ವಗಾಮಿಯಾದ ತೀವ್ರತೆ ತೀಕ್ಷ್ಣತೆಗಳು ಪದ್ಧತಿಯ ಪಂಜರದ ಗಿಳಿಯಾಗಿ ನಲಿಯಲು ಶಕ್ಯವಿರುವದಿಲ್ಲ. ಸಮಾಜದ ರೀತಿ ರೂಢಿಗಳು ಅವನಿಗೆ ಅವನ ವ್ಯಕ್ತಿತ್ವದ ವಿಕಾಸಕ್ಕೆ-ಅಡೆತಡೆಯಾಗುತ್ತವೆ. ಆಗ ಅವನು ಅನಿವಾರ್ಯವಾಗಿ ಅವುಗಳೊಡನೆ ಹೋರಾಡುತ್ತಾನೆ. ಇಂಥವರು ಪರಿಸ್ಥಿತಿಯ ಆಳಾಗುವದಿಲ್ಲ. ಪರಿಸ್ಥಿತಿಯನ್ನು ಆಳುತ್ತಾರೆ. ತಮ್ಮ ಬಯಕೆಗೆ, ಬದುಕಿಗೆ ತಕ್ಕಂತೆ ಪರಿಸ್ಥಿತಿಯನ್ನು ಮಣಿಸಿ ಅಣಿಗೊಳಿಸಿಕೊಳ್ಳುತ್ತಾರೆ. ಜಗತ್ತಿನ ಯುಗಪ್ರವರ್ತಕರೂ, ಶಕಕರ್ತರೂ, ಧರ್ಮಸಂಸ್ಥಾಪಕರೂ, ಶೋಧಕರೂ ಈ ವರ್ಗದವರು. ಅವರ ಸಮಕಾಲೀನರು, ಅವರನ್ನು ಪಾಷಂಡಿಳೆಂದೂ, ಕಿಡಿಗೇಡಿಗಳೆಂದೂ ಜರೆದರು. ಆದರೆ ಇತಿಹಾಸವು ಅವರಿಗಾಗಿ ಹೊಸ ಪುಟಗಳನ್ನು ಬರೆಯಿತು. ಮನ್ವಂತರಗಳ ಭಾಗ್ಯವನ್ನು ಅವರು ತೆರೆದರೂ, ಮುಂದಿನವರು ಅವರನ್ನು ಪೂಜಿಸಿದರು. ಇಷ್ಟು ದೊಡ್ಡವರ ಮಾತೇಕೆ? ಸಾಮಾನ್ಯ ಜನರಲ್ಲಿಯೂ ಇಂಥ ಹೊಸ ಕಲ್ಪನೆ, ಹೊಸ ಸೌಕರ್ಯ ಹೊಸ ಪರಿಪಾಟಿಯನ್ನು ಸಾಹಸದಿಂದ ಅನುಸರಿಸಿ ಅದನ್ನೇ ಮುಂದೆ ಮಂದಿಗೆ ಒಂದು ಮಾದರಿಯಾಗುವಂತೆ ಮಾಡುವ ಮುಂದಾಳುಗಳೆನಿಸಿಕೊಳ್ಳುವರು.

ವಾಡಿಕೆಯಿಂದ ಸಿಡಿದು, ರೂಢಿಯ ನಡಾವಳಿಗಳನ್ನು ಮುರಿದು ಮುನ್ನುಗ್ಗುವವನೇ ಹೊಸ ಹಾದಿ ಹುಡುಕುವಾತನು. ನಿಂದೆ ನಿರೋಧ ನಷ್ಟಗಳನ್ನು ಲೆಕ್ಕಿಸದೇ ನಿಶ್ಚಯದಿಂದ ನಡೆದು ಹೊಸ ಬದುಕನ್ನು ರೂಢಿಗೊಳಿಸುವನು. ಮೊದಲು ಹೋಟ್ಲು ತೆರೆದ ಬ್ರಾಹ್ಮಣನು, ಮೊದಲು ಸಾಲೆಗೆ ಸೇರಿದ ಬಾಲವಿಧವೆಯು, ಮೊದಲು ಉದ್ಯೋಗಕ್ಕೆ ಇಳಿದ ಸುಶಿಕ್ಷಿತೆಯು – ಇವರೆಲ್ಲ

ಮೊದಲಿಗರು ತಮ್ಮ ಮಟ್ಟಿಗೆ ಕ್ರಾಂತಿಕಾರರೇ, ಯುಗಪ್ರವರ್ತಕರೇ ಸರಿ. ಹಿಂದೆ ಆದಂತೆಯೇ ಮುಂದೂ ಆಗಬೇಕು. ಹಿಂದಿನವರ ಹೊರತಾಗಿ ಮುಂದೇನೂ ಮಾಡಲಾಗದು-ಎಂಬುವ ಹಳೇ ಹಳವಂಡದ ಜನ ಸ್ಥಿತಿಸ್ಥಾಪಕರು-ಪ್ರತಿಗಾಮಿಗಳು ಪ್ರಗತಿವಿರೋಧಿಗಳು. ಇಂಥ ಸಂಪ್ರದಾಯ ಶರಣರನ್ನು ಸದಾಚಾರ ಸಂಪನ್ನರನ್ನು ಜಗತ್ತು ಮರೆತು ಮುಂದೆ ನಡೆಯುತ್ತಿದೆ. ಯಶಸ್ವಿಯಾಗಿ ಪರಂಪರೆಯನ್ನು ಮುರಿಯುವ ಮೂರ್ತಿ ಭಂಜಕರಿಗಾಗಿಯೇ ಜಗತ್ತು ಸ್ಮಾರಕಗಳನ್ನು ಕಟ್ಟಿಸುತ್ತದೆ!

ಆಧುನಿಕರನ್ನು ಗುರುತಿಸುವಿರಾ?

ಕೊನೆಯದಾಗಿ ಆಧುನಿಕ ಪುರುಷನದೊಂದು ಮಾದರಿ ಕಲ್ಪಿಸಬಹುದು. ಇದು ಮಾದರಿಯೆಂದರೆ ಅನುಕರಿಸಬೇಕಾದ ಆದರ್ಶವೆಂದಲ್ಲ. ಇಂದಿನ ಗಂಡು ಸಾಧಾರಣ ಯಾವ ಅಚ್ಚಿನವನೆಂಬುದರ ಒಂದು ಸ್ಥೂಲ ಚಿತ್ರವಿದು. ಆಧುನಿಕನಿಗೆ ತೆರವಿಲ್ಲದ ತ್ವರೆ. ಅವಸರದ ಚಟುವಟಿಕೆ ಅವನ ಲಕ್ಷಣ. ಯಾವ ಗಂಭೀರ ವಿಚಾರವೂ, ಬುದ್ಧಿಯ ಯಾವ ಸೂಕ್ಷ್ಮ ವ್ಯಾಪಾರವೂ ಅವನಿಗೆ ದೀರ್ಘಕಾಲ ರುಚಿಸದು. ಪ್ರಾಚೀನರಂತೆ ಆತನು ಮಹಾಕಾವ್ಯಗಳನ್ನು ದೀರ್ಘ ಕಾದಂಬರಿಗಳನ್ನೂ ಓದಿ ಸವಿಯಲಾರ. ಮಾರುದ್ದ ಪತ್ರಗಳನ್ನು (ಪ್ರಣಯ ಪತ್ರಗಳನ್ನೂ!) ಬರೆಯಲಾರ. ಮಾತಿನ ಜಂಜಾಟ ಆತನಿಗೆ ತಲೆಬೇಸರ. ಅಲ್ಲದೆ ಅಲಂಕಾರ ಆಡಂಬರ ಅವನ ಓದು-ಬರಹಕ್ಕೆ ಒಗ್ಗದು. ಚಟುವಟಿಕೆಯೇ ಪ್ರಧಾನವಾದ ಮನೋರಂಜನೆ ಅವನದು. 'ಇಂಗ್ಲಂಡದ ಮಕ್ಕಳಲ್ಲಿ ಪ್ರತಿಯೊಬ್ಬರೂ ಈಜಲು, ಸಾಯಿಕಲ್ ನಡಿಸಲು, ಮತ್ತೂ ಮೋಟರ ಓಡಿಸಲು ಕಲಿಯಲಿಕ್ಕೇ ಬೇಕೆಂದು' ಮೊನ್ನೆಯೇ ಅಲ್ಲಿಯ ವರಿಷ್ಟ ಧರ್ಮಾಧಿಕಾರಿಗಳೊಬ್ಬರು ಹೇಳಿದರು. ಬಾಯಬಲ್ಲಿನ ಹತ್ತು ಆದೇಶಗಳಿಗೂ ಮೀರಿದ ಇದೊಂದು ಹನ್ನೊಂದನೇ ಆದೇಶ!

ಗಂಭೀರಚಿಂತನೆಯೊಂದಿಗೆ ಸಾತ್ವಿಕ ಮನೋರಂಜನೆಯೂ ಆಧುನಿಕನಿಗೆ ಸೇರದು. ಅದ್ಭುತರಸ ಆತನಿಗೆ ಮೆಚ್ಚುಗೆ. ಸಾಹಸ. ಚಿತ್ತೋದ್ರೇಕ. ರಹಸ್ಯ-ಇವೇ ಪ್ರಧಾನವಾದ ಕಥಾವಾಙ್ಮಯ ಅವನ ನಿತ್ಯ ವಚನ. ಅದೂ ಆದಷ್ಟು ಸಂಕ್ಷಿಪ್ತ ಸ್ವಲ್ಪದರಲ್ಲಿ ಸ್ವಾರಸ್ಯ ಇದು ಆಧುನಿಕ ಅಭಿರುಚಿಯ ಅರ್ಥದ ಸಣ್ಣ ಕತೆ, ಏಕಾಂಕ, ಭಾವಗೀತೆ, ಸಿನೇಮಾ ಸಂಗೀತ, ಇಂಜಕ್ಷನ್ ಚಿಕಿತ್ಸೆ, ಇಲೆಕ್ಟ್ರಿಕ್ ಉಪಕರಣಗಳು,

ರೇಡಿಯೋ ಪ್ರಚಾರ–ಇವೇ ಆಧುನಿಕ ಜೀವನದ ಶೀಘ್ರತೆಯ ಉದಾಹರಣೆಗಳು. ಆಹಾರದಲ್ಲಿ ವ್ಹಿಟಮಿನ್, ಪೇಯದಲ್ಲಿ ಮಾದಕ ದ್ರವ್ಯಗಳು, ವಚನದಲ್ಲಿ ಆರಾಣೆ ಮಾಲೆಯ ಪುಸ್ತಕಗಳು, ವಿವಾಹದಲ್ಲಿ ಸಾಹಚರ್ಯ, ವಿವಾದದಲ್ಲಿ ಸಾಮ್ಯವಾದ ಹಾಗೂ ರಾಜಕಾರಣದಲ್ಲಿ ಸರ್ವಾಧಿಕಾರ, ಆಧುನಿಕ ಗಂಡಸಿನ ರುಚಿವೈಚಿತ್ಯದ ವಿಚಿತ್ರಚಿತ್ರ! ಆಧುನಿಕ ಹಾದಿಹೋಕನ ಧರ್ಮಗ್ರಂಥ ಅಥವಾ ಜ್ಞಾನಕೋಶವೆಂದರೆ ಅವನು ಓದುವ ವೃತ್ತಪತ್ರ. ಅದರಲ್ಲಿಯೂ ಅವನು ಅತ್ಯಂತ ಆಸ್ಥೆಯಿಂದ ಅವಲೋಕಿಸುವ ಅಂಶವೆಂದರೆ ಕೆಲಸಬೇಕೆಂಬ ಜಾಹೀರಾತುಗಳು. ಆಟ ಪಂದ್ಯಾಟಗಳ ವರ್ಣನೆಗಳು, ಹಾಗೂ ಕುದುರೆ ಜೂಜಿನ ಪರಿಣಾಮಗಳು, ಅವರಲ್ಲಿಯೂ ಮೂರ್ಖರು ಘಟಸ್ಫೋಟದ ವರದಿಗಳನ್ನೂ ಧೂರ್ತರು ಹಣ–ಹುಂಡಿಗಳ ಟಿಪ್ಪಣಿಗಳನ್ನೂ ಕರ್ತವ್ಯಬುದ್ಧಿಯಿಂದ ಓದುವದುಂಟು! ಇವರ ರಾಜಕೀಯ ಜ್ಞಾನದ ಹಣೆಬರಹ ಪತ್ರಿಕೆಗಳ ಸುದ್ದಿ ಸ್ತಂಭಗಳ ತಲೆಬರಹಗಳನ್ನೇ ಅವಲಂಬಿಸಿರುತ್ತದೆ.

ಆಧುನಿಕ ಗುಣಗಳೂ ಕೆಲವು ಇವೆ. ಅವನು ವ್ಯವಹಾರಚಾತುರನು! ಹುತ್ತ ಬಡಿದು ಸುತ್ತಾಡುವವನಲ್ಲ. ನೇರವಾಗಿ ತನ್ನ ಮಾತು ತಿಳಿಸಿ ಮತ ಕೊಟ್ಟು ಹಿತ ಸಾಧಿಸುವವನು. ನಿಯಮಿತತನ, ಸಮಯಸೂಚಕತೆ ಇವನಿಗೆ ಅವಶ್ಯವಾಗಿ ಮೈಚಟವಾಗಿದೆ. ಯಂತ್ರದಂತೆ ಶಿಸ್ತಿನಿಂದ ನಡೆಯಬಲ್ಲ. ಅಭಿಮಾನದೊಂದಿಗೆ ವಿನಯ, ಪುಸ್ತಕಪಾಂಡಿತ್ಯದೊಡನೆ ಸಮಾಜಸೇವೆ ಹಾಗೂ ವಿಮರ್ಶಕ ಬುದ್ಧಿಯೊಡನೆ ಕುರುಡು ಭಾವಿಕತೆ ಇವೆಲ್ಲ ವಿರೋಧಿ ದ್ವಂದ್ವಗಳ ನಿತ್ಯ ಸಮಾಸವಾಗಿದೆ ಅವನ ವ್ಯಕ್ತಿತ್ವ! ಆಧುನಿಕನಿಗೆ ಸಾಮಾನ್ಯವಾಗಿ ಪದವಿಯ ವ್ಯಾಮೋಹ ಹೆಚ್ಚು. ಪರೀಕ್ಷೆಯ ವರ್ಚಸ್ಸು ಅವನ ಶಿಕ್ಷಣದ ಮೇಲೆ ಹೆಚ್ಚು. 'ತಜ್ಞ'ರ ಮೇಲೆ ಬಹಳ ಶ್ರದ್ಧೆ!

ಧನವಂತರ ಮಕ್ಕಳು

ಇದಕ್ಕೆ ಅಪವಾದವಿಲ್ಲದಿಲ್ಲ. ಇಂದಿನ ಜಗತ್ತಿನ ಹಲವು ಅಸಾಮಾನ್ಯ ಹಾಗೂ ಸರ್ವಶ್ರೇಷ್ಠರಾದ ವ್ಯಕ್ತಿಗಳು ಯಾವ ಪದವಿ ಪರೀಕ್ಷೆ ಇಲ್ಲವೇ ನಿಯಮಿತ ಶಿಕ್ಷಣ ಸಂಸ್ಕಾರ ಪಡೆಯದೇ ಮೇಲಾಗಿರುವ ಹಣಕಾಸಿನ ವ್ಯವಹಾರ, ಸಾಹಿತ್ಯಪ್ರಪಂಚ, ರಾಜಕೀಯ ಕಾರ್ಯರಂಗ, ಕಲೆ–ಕೈಗಾರಿಕೆ, ಉದ್ಯೋಗ, ವಿಜ್ಞಾನ ಇವೆಲ್ಲ ಕ್ಷೇತ್ರಗಳಲ್ಲಿಯೂ ಅಂಥ ಸ್ವಯಂಭೂ ವಿಭೂತಿಗಳು

ಮಿಂಚಿದ್ದಾರೆ–ಮೆರೆಯುತ್ತಿದ್ದಾರೆ. ಇಂಥ ಸ್ವಯಂಭೂ ವಿಭೂತಿಗಳ ವ್ಯಕ್ತಿತ್ವ ಒಳ್ಳೇ ಬಲಿಷ್ಠವಿರುತ್ತದೆ. ಮಿತ್ರರಿಗಾಗಿ ನೋಡದೆ, ಶತ್ರುಗಳನ್ನು ಲೆಕ್ಕಿಸದೆ ಪ್ರತಿಕೂಲ ಪರಿಸ್ಥಿತಿಯನ್ನು ಹಣ್ಣುಗೊಳಿಸಿ ಬಾಳನ್ನು ಆಳುವ ಶಕ್ತಿ ಅವರ ಮನಸ್ಸು ಪಡೆಯಿತು. ಇದರಿಂದ ಅವರ ಸತ್ವ ಹುರಿಗೊಂಡಿತು. ಹಿರಿದಾಯಿತು. ಆದರೆ ಎಷ್ಟೋ ಸಲ ಇಂಥ ಮಹಾಪುರುಷರ ಮಕ್ಕಳು ಬಹಳೇ ದುರ್ಬಲರೂ ತೀರ ಸಾಮಾನ್ಯರೂ ಇರುವದು ಕಂಡುಬರುತ್ತದೆ. ತಂದೆಯ ಎತ್ತರಕ್ಕೆ ಅವರು ಏರುವದು ಕಷ್ಟವಾಗುತ್ತದೆ. ತಂದೆಯಂತೆ ಪ್ರತಿಕೂಲತೆ ಇದಿರಿಸುವ ಕಷ್ಟದ ಸ್ಥಿತಿ ಈ ಮಕ್ಕಳಿಗಿರುವದಿಲ್ಲ. ತಂದೆಯ ಘನತೆ ಇವರ ಬದುಕಿನ ದಾರಿಯನ್ನು ಸುಗಮ ಮಾಡಿರುತ್ತದೆ. ಮೇಲಾಗಿ ಪ್ರಪಂಚವೇ ಮನೆಯಾದ ಮಹಾಪುರುಷನಿಗೆ ತನ್ನ ಮನೆಯ ಪ್ರಪಂಚಕ್ಕೆ ಲಕ್ಷ್ಯ ಕೊಡಲು ಅವಕಾಶವಾಗಲೀ ಆತುರವಾಗಲೀ ಇರುವದಿಲ್ಲ. ಇವೆಲ್ಲ ಕಾರಣಗಳಿಂದ ಘನವಂತರ ಮಕ್ಕಳು ತೀರ ಸಾಧಾರಣರಾಗುವರು.

ಆದರೆ ಈ ಮಾತಿಗೂ ಅಪವಾದಗಳಿವೆ. ಸಾಮಾನ್ಯವಾಗಿ ಮೊಗಲ ಚಕ್ರವರ್ತಿಗಳೆಲ್ಲ ಬಾಬರನಿಂದ ಔರಂಗಜೇಬನತನಕವೂ–ತಂದೆಯಂತೆಯೇ ಹಿರಿತನವನ್ನು ಸಾಧಿಸಿಕೊಂಡರು. ಆದರೂ ಬಾಬರನಷ್ಟು ಚಾರಿತ್ರ್ಯದ ಕೆಚ್ಚು ಹುಮಾಯೂನನಿಗಿದ್ದಿಲ್ಲ. ಅಕಬರನ ಸತ್ವ ಜಹಾಂಗೀರನಲ್ಲಿ ಅಷ್ಟೊಂದು ಇಳಿದಿಲ್ಲ. ಔರಂಗಜೇಬನ ಪೀಳಿಗೆಯಂತೂ ದುರ್ಬಲವೇ ಆಯಿತು. ಇಂಗ್ಲಂಡದ ಮೊದಲನೇ ಮತ್ತು ಕೊನೆಯ ಸರ್ವಾಧಿಕಾರಿಯಾಗಿಹೋದ ಕ್ರಾಮವೆಲ್ಲನ ಮಗ ತೀರ ಸಾಮಾನ್ಯನಿದ್ದನು. ಆದರೆ ಹಿರಿಯ ಪಿಟ್ಟನಷ್ಟೇ ಮಹತ್ವ ಮಹಾತ್ಮ್ಯಗಳನ್ನು ಕಿರಿಯ ಪಿಟ್ಟನುಗಳಿಸಿದನು. ಶಹಾಜಿಗಿಂತ ಶಿವಾಜಿಯು ಶೌರ್ಯ ಸಾಹಸದಲ್ಲಿ ಒಂದು ತೂಕ ಹೆಚ್ಚೇ ಆಗಿ ಶತಕರ್ತನೆಂದುಕೊಂಡನು. ಆದರೂ ಸಂಭಾಜಿಯೂ ಅವನ ಮಗ ಶಾಹೂ ಉತ್ತರೋತ್ತರ ದುರ್ಬಲ ಸತ್ವದವರಾಗಿ ಹೋದರು. ಮೋತಿಲಾಲ ನೆಹರೂ ಅವರ ಸುಪುತ್ರ ಜವಾಹರಲಾಲ ಮಹಿಮಾಮಯ ಮೂರ್ತಿಯು ನಮ್ಮ ಇದುರಿಗೇ ಇದೆ. ಶಿವಾಜಿ–ಪಿಟ್ಟರಂಥವರ ಉದಾಹರಣೆ ತಂದೆಯ ಪರೋಕ್ಷದಲ್ಲಿಯೇ ಪ್ರತ್ಯಕ್ಷ ಪ್ರೋತ್ಸಾಹವಿಲ್ಲದೆಯೇ ಬೆಳಿಸಿಕೊಂಡ ವ್ಯಕ್ತಿತ್ವದ್ದಾಗಬಹುದು. ಆದರೆ ನೆಹರೂ ಪಿತಾಪುತ್ರರ ಉದಾಹರಣೆ ಹಾಗಿಲ್ಲ. ತಂದೆಯ ಇದುರಿಗೇ ತಂದೆಯ ಉತ್ತರಾಧಿಕಾರಿಯಾಗಿ ಮಗನು 'ರಾಷ್ಟ್ರಪತಿ'ಯಾದನು. ತಂದೆಗೂ ಹಿರಿದಾಗಿ ದಿಗಂತ ಕೀರ್ತಿವೆತ್ತು ಮೆರೆದನು.

ಆದರೆ ಇಲ್ಲಿಯೂ ಸೂಕ್ಷ್ಮದೃಷ್ಟಿಗೆ ಮೋತಿಲಾಲರ ಕೆಚ್ಚು–ಕಸುವು ಪ್ರಚಂಡ ಇಚ್ಛಾಶಕ್ತಿಯ ಪ್ರತಾಪ ಜವಾಹರಲಾಲರಲ್ಲಿ ಇಳಿದಿಲ್ಲವೆಂದೇ ಕಾಣುತ್ತದೆ. ಪ್ರತಿಕೂಲತೆಗಳನ್ನು ಪ್ರತಿಭಟಿಸಿ ಪ್ರಭಾವಿಯಾದ ವ್ಯಕ್ತಿತ್ವ ಜವಾಹರಲಾಲರದಲ್ಲ; ಸಕಲ ಸೌಕರ್ಯಗಳ ಸನ್ನಾಹದಿಂದಲೇ ಸತ್ವಸಂಪನ್ನರಾಗಿ ಮುಂದೆ ಬಂದರು. ಮಹಾತ್ಮರ ಮಕ್ಕಳು ಯಾವ ದೊಡ್ಡ ವ್ಯಕ್ತಿತ್ವವನ್ನು ಪಡೆದಂತಾಗಿದೆ? ಹಿರಿಯ ಮಗ ಅಬ್ದುಲ್ಲಾ ಗಾಂಧಿಯಂತೂ ಮೋಹಾತ್ಮನಾದ ದುರ್ದೈವಿಯೆನಿಸಿಕೊಂಡನು. ಲೋಕಮಾನ್ಯ ತಿಲಕರ ಅಲೌಕಿಕ ವಿಭೂತಿಮತ್ವವು ಅವರ ತಲೆತಿರುಕ ಮಕ್ಕಳಲ್ಲಿ ಸ್ವಲ್ಪವೂ ಬಾರದೇ ಹೋಯಿತು. ವಿಶಾಲವಾಗಿ ಬೆಳೆದ ಮರವು ತಾನೇ ಸುತ್ತಲಿನ ಗಾಳಿ ನೀರು ಮಣ್ಣು ಗೊಬ್ಬರಗಳ ಎಲ್ಲ ಸತ್ವ ಹೀರಿ ಬಲಿತು ಪ್ರಚಂಡವಾಗುತ್ತದೆ. ಅದರ ನೆಳಲಲ್ಲಿ ಅಂಥ ಮರ ಮತ್ತೊಂದು ಬೆಳೆಯುವದಿಲ್ಲ. ದೊಡ್ಡವರ ಮಕ್ಕಳೂ ಹಾಗೆಯೇ.

ಇವೇ ಕಾರಣಗಳು ಇಂದಿನ ಪೀಳಿಗೆಯು ಹಿಂದಿನ ಪೂರ್ಜಜರಿಗಿಂತ ಸತ್ವಶೂನ್ಯರಾಗಿ ಕಾಣುವದರ ಇತ್ಯರ್ಥ ಮಾಡುತ್ತವೆ. ಇಂದಿನ ಗಂಡು ದುರ್ಬಲವೇಕೆಂಬುದರ ವಿವೇಚನೆ ಹಿಂದೆಯೇ ಮಾಡಲಾಗಿದೆ ಇರಲಿ. ಇದುವರೆಗಿನ ಗಂಡು ಸ್ವಭಾವದ ಮಾದರಿಗಳ ವರ್ಣನೆ, ಒಂದು ಬೀಸು ನೋಟದ ಭೇದ ಲಕ್ಷಣವೇ ಹೊರತು ಕಟ್ಟುನಿಟ್ಟಾದ ವರ್ಗೀಕರಣವಲ್ಲವೆಂದು ಇಲ್ಲಿಗೆ ಮುಗಿಸುತ್ತೇವೆ.

ಯಾರು ಹೆಚ್ಚು ಯಾರು ಕಡಿಮೆ?

ಗಂಡು ಹಿರಿದೋ ಹೆಣ್ಣು ಹಿರಿದೋ? ಈ ಪ್ರಶ್ನೆ ಎಂದಿನಿಂದಲೂ ನಮ್ಮ ಎದುರಿಗೆ ನಿಂತಿದೆ. ಜೀವನದ ಬಗೆಹರಿಯದ ಪ್ರಶ್ನೆಗಳಲ್ಲಿ ಇದೂ ಒಂದು ಎಂದುಕೊಂಡು ನಾವು ಹಲವು ಸಲ ಅದರಿಂದ ಬಿಡುಗಡೆ ಪಡೆಯುತ್ತೇವೆ. ಆದರೆ ನಾವು ಪ್ರಶ್ನೆಯನ್ನು ಬಿಟ್ಟರೂ ಪ್ರಶ್ನೆ ನಮ್ಮನ್ನು ಬಿಡುವಂತಿಲ್ಲ. ವಿಶೇಷವಾಗಿ ಹಿರಿಮೆಯ ಕುರಿತು ಈ ಹೆಚ್ಚು ಕಡಿಮೆಯ ಪ್ರಶ್ನೆ ತಲೆಯೆತ್ತುವದು. ಬುದ್ಧಿಯ ಇಲ್ಲವೇ ವಿಚಾರದ ಕ್ಷೇತ್ರದಲ್ಲಿ 'ಎಷ್ಟೆಂದರೂ ಹೆಣ್ಣು ಬುದ್ಧಿ! ' ಎಂಬ ಉದ್ಗಾರವು ಯಾವ ತಿಳಿಗೇಡಿ ಗಂಡಿನ ಬಾಯಿಗೂ ಹಗುರಾಗಿ ಬರುವದು ನಾವು ಕೇಳಬಹುದು. ಇದಕ್ಕೆ ವಿಪರೀತವಾಗಿ ಕೆಲವು ಬಲ್ಲವರು–ಅದೂ ಹೆಣ್ಣಿನ ಹವ್ಯಾಸಕ್ಕೆ ಬಿದ್ದು ''ಬುದ್ಧಿ ಕಲಿತು ತಲೆಕೆಡಿಸಿ ಕೊಂಡವರು 'ಸಾಕಪ್ಪಾ! ಹೆಣ್ಣಿನ ವಿಚಾರ! 'ಸ್ತ್ರೀ ಬುದ್ಧಿಃ

ಪ್ರಲಯಂಕರೀ' ಎಂದು ಹಿರಿಯರು ಹೇಳುವದು ಸುಳ್ಳೋ?' ಎಂದು ಕೆರಳಿ ಆಡುವದನ್ನೂ ನಾವು ಕೇಳುವದುಂಟು.

ಇವೆರಡೂ ಅತಿವಾದಗಳು. ಸತ್ಯ ನಡುವಿನ ಹದವಾಗಿದೆ. ಯಾರು ಹೆಚ್ಚು ಯಾರು ಕಡಿಮೆ ಎಂಬ ಅಳತೆಯೇ ಒಂದು ಬಗೆಯಾಗಿ ಅವಿವೇಕದ್ದು. ಹೆಚ್ಚು ಕಡಿಮೆ ಯಾತರ ನೆಲೆಯಿಂದ, ಯಾರ ನಿಟ್ಟಿನಿಂದ? ಪ್ರಪಂಚದಲ್ಲಿ ವ್ಯಕ್ತಿ ಇರಲಿ ವಸ್ತುವಿರಲಿ ಪ್ರತಿಯೊಂದಕ್ಕೂ ಅದರ ಸ್ಥಾನ ಅದಕ್ಕೆ ತಕ್ಕಮಾನ ಇದ್ದೇ ಇದೆ. ಕತ್ತಿಯ ಕೆಲಸ ಕುಡಗೋಲಿಗೂ, ಕತ್ತೆಯ ದುಡಿತ ಕುದುರೆಗೂ ಸಾಧ್ಯವಿಲ್ಲ. ಹಾಗೆಯೇ ವ್ಯಕ್ತಿ ವ್ಯಕ್ತಿಯೂ ಆದ ತನ್ನ ತನ್ನ ಕ್ಷೇತ್ರದಲ್ಲಿ ಶ್ರೇಷ್ಠವೇ ಸರಿ. ಒಂದೇ ಕ್ಷೇತ್ರದಲ್ಲಿ ಒಂದೇ ಕ್ರಮದಲ್ಲಿ ಕಾರ್ಯಕಾರಿಯಾಗುವ ವ್ಯಕ್ತಿಗಳನ್ನೇ ನಾವು ತಾರತಮ್ಯದ ತಕ್ಕಡಿಯಲ್ಲಿ ತೂಗಬಹುದು. ಆದ್ದರಿಂದ ಹೆಣ್ಣು ಗಂಡಿನ ವ್ಯಕ್ತಿತ್ವ–ಕರ್ತವ್ಯಗಳ ಯೋಗ್ಯತೆ ತಮ್ಮ ತಮ್ಮ ಮಟ್ಟಿಗೆ ಅದ್ವಿತೀಯವೇ ಸರಿ. ಕ್ರಿಯೆ ಮತ್ತೂ ಪ್ರತಿಕ್ರಿಯೆ ಪರಸ್ಪರ ವಿರುದ್ಧ ಮತ್ತೂ ಪರಿಸಮಾನವೆಂದು ನ್ಯೂಟನನು ಸಾರಿದನು. ಹೆಣ್ಣು ಗಂಡೂ ಇದೇ ನ್ಯೂಟನ್ನನ ನಿಯಮದಂತೆ ಅನ್ಯೋನ್ಯ ಸಮ್ಮುಖವಾಗಿಯೂ, ಸರಿ–ಸಮಾನವಾಗಿಯೂ ಪರಿಪೂರಕವಾಗಿಯೂ ಇರುವ ಎರಡು ಶಕ್ತಿಗಳು. ಆದ್ದರಿಂದ ತತ್ವತಃ ಅವರೀರ್ವರಲ್ಲಿ ಹೆಚ್ಚು ಕಡಿಮೆ ಎಣಿಸುವದು ಉಚಿತವಲ್ಲ.

ಆದರೂ ಬುದ್ಧಿಶಕ್ತಿಯಲ್ಲಿ ಹೆಣ್ಣು–ಗಂಡಿನ ವ್ಯತ್ಯಾಸವೇನಿರಬಹುದೆಂಬುದನ್ನು ಅರಿತುಕೊಳ್ಳುವದು ಸೋಜಿಗವಾಗುವದು. ಒಂದು ಮಾತನ್ನು ಒಪ್ಪಿಕೊಳ್ಳಬೇಕು. ಗಂಡಿರಲಿ ಹೆಣ್ಣಿರಲಿ ಮೂಲಭೂತ ಪ್ರವೃತ್ತಿಗಳು ಪಲ್ಲಟಿಸುವದಿಲ್ಲ. ಅನುಭವ ಇಲ್ಲವೇ ಅನುಶಾಸನ (ಶಿಕ್ಷಣ) ದಿಂದ ಅವು ಬೇರ್ಪಡುವದಿಲ್ಲ. ಹೆಣ್ಣು ಗಂಡುಗಳಲ್ಲಿ ಚಟ ಇಲ್ಲವೇ ವಾಡಿಕೆಯ ಹಾಗೂ ಬುದ್ಧಿಶಕ್ತಿಯ ಬೆಳವಣಿಗೆ ಆಗುವದು ನಿಜ. ಈ ಬೆಳವಣಿಗೆಯೂ ಮೂಲ ಪ್ರವೃತ್ತಿಗಳ ತಳಹದಿಯ ಮೇಲೆಯೇ ಆಗುತ್ತದೆ. ಇನ್ನು ಗಂಡು–ಹೆಣ್ಣುಗಳಲ್ಲಿ ಈ ಬುದ್ಧಿಯ ಪರಿಪಾಕವು ಹೇಗೆ ವ್ಯತ್ಯಾಸ ಪಡುವದೋ ನೋಡೋಣ.

ಗಂಡಿನಲ್ಲಿ ಬುದ್ಧಿ ಹೆಚ್ಚು ವ್ಯಾಪಕವಾಗಿದೆ. ಉನ್ನತವಾಗಿದೆ. ಹಲವಾರು ತಲೆಮಾರುಗಳಿಂದಲೂ ಗಂಡು ವಿವಿಧ ವಿಚಿತ್ರವಾದ ವಿಶಾಲ ಜಗತ್ತಿನಲ್ಲಿ ಕಾರ್ಯರಂಗಕ್ಕೆ ಎಳೆಯಲ್ಪಟ್ಟಿದ್ದಾನೆ. ಗಂಡು ಹೊಸ ಸನ್ನಿವೇಶಗಳನ್ನು ಹೊಸ ವಿಕಾರಹೇತುಗಳನ್ನೂ ಇದಿರಾಗುತ್ತ ಬಂದಿದ್ದಾನೆ. ಇಂಥ ಹೊಸ ಸ್ಥಿತಿಗಳಿಗೆ ಹಳೇ

ಪ್ರವೃತ್ತಿಗಳ ಸ್ಥಿರವಾದ ಪ್ರತಿಕ್ರಿಯೆ, ಪ್ರತ್ಯುತ್ತರಗಳು ಸಾಲವಾದವು. ಆದ್ದರಿಂದ ಅವಶ್ಯಕತೆಯಿಂದಲೇ ಪ್ರಾಪ್ತಪರಿಸ್ಥಿತಿಗೆ ಹೊಸದೊಂದು ಸಮರ್ಪಕ ಪ್ರತಿಕ್ರಿಯೆಯನ್ನು ಯಶಸ್ವಿಯಾಗಿ ಸಲ್ಲಿಸುವ ಒಂದು ಮಣಿಬಲ್ಲತನದ ಶಕ್ತಿಯು ಗಂಡಿನ ಮನಸ್ಸಿನಲ್ಲಿ ಹೆಚ್ಚು ಪ್ರತಿಕ್ರಿಯೆ ಸಲ್ಲಿಸಬಲ್ಲ ಶಕ್ತಿಯೇ ಬುದ್ಧಿಮತ್ತೆಯು. ಹೊಸ ಪ್ರಪಂಚದ ಸ್ಥಿತ್ಯಂತರಗಳ ಒತ್ತಾಯಕ್ಕೆ ಗಂಡಿನ ಮನಸ್ಸಿಗೆ ಈ ಬುದ್ಧಿಯ ಹೊಸ ಪಾಕ ಹೊಸ ಪುಟ ಬಂದಿತು.

ಮೂಲ ಪ್ರವೃತ್ತಿಯೂ ಬುದ್ಧಿವಂತವಾಗಬಲ್ಲದು. ಅಂದರೆ ಪ್ರವೃತ್ತಿಯಿಂದ ಬಂದ ಪ್ರತಿಕ್ರಿಯೆಯೂ ಸಮರ್ಥವೂ ಸಮರ್ಪಕವೂ ಆಗಬಹುದು. ಆದರೆ ಅದಕ್ಕೆ ಪ್ರಚೋದಕವಾದ ಪರಿಸ್ಥಿತಿ ಪರಂಪರಾಗತವಿರಬೇಕು. ಶತಮಾನಗಳಿಂದಲೂ ಒಂದೇ ಬಗೆಯಾಗಿ ಇದಿರಿಸುತ್ತ ಬಂದ ಸಮಸ್ಯೆ ಸನ್ನಿವೇಶಗಳಿಗೆ ಮಾತ್ರ ಮಾನವನ ಮೂಲ ಪ್ರವೃತ್ತಿ ತಪ್ಪದೇ ಉತ್ತರ–ಉಪಾಯಗಳನ್ನು ಸಲ್ಲಿಸಬಹುದು. ಇಷ್ಟೇ ಅಲ್ಲ, ಇಂಥ ಪರಂಪರಾಗತ ಪುರಾತನ ಸಂದರ್ಭಗಳಲ್ಲಿ ಬುದ್ಧಿಯ ಹೊಸ ಹಂಚಿಕೆಯ ಸಂದಿಗ್ದ ಪ್ರಯೋಗಕ್ಕಿಂತ ಮೂಲ ಪ್ರವೃತ್ತಿಯ ಕೆಲಸವೇ ಹೆಚ್ಚು ಪರಿಣಾಮಕಾರಿಯೂ ಸಮರ್ಪಕವೂ ಶ್ರೇಯಸ್ಕರವೂ ಆಗುವದುಂಟು.

ಹೆಣ್ಣು ಹೆಡ್ಡವೇ?

ಬುದ್ಧಿ ಪ್ರವೃತ್ತಿಗಳ ಈ ಭೇದವನ್ನು ನೆನಪಿಟ್ಟರೆ ಗಂಡು ಹೆಣ್ಣಿನ ಪ್ರಜ್ಞೆಯ ತಾರತಮ್ಯ ತಿಳಿಯಲು ಸುಲಭವಾಗುವದು. ಹೆಣ್ಣಿನ ಬಾಳಿನ ನಡುಕಟ್ಟಿನ ಕೆಲಸಗಳೆಲ್ಲ ಬಹಳೇ ಪುರಾತನ ಕಾಲದವೂ ಸನಾತನವಾಗಿ ನಡೆದು ಬಂದವೂ ಆಗಿವೆ. ಪ್ರತಿಯೊಬ್ಬ ಹೆಣ್ಣು ಕೂಡ ಆ ಸಮಸ್ಯೆಗಳನ್ನು ಇತಿಹಾಸದ ಆದಿಯಿಂದಲೂ ಸ್ಮರಣದ ತೆಕ್ಕೆಗೆ ನಿಲುಕುವತನಕವೂ ತಪ್ಪದೇ ಇದುರಿಸಿ ಈಡೇರಿಸಿ ಬಂದಿದ್ದಾಳೆ. ಆ ಸಮಸ್ಯೆಗಳೇನು? ಪ್ರಿಯತಮನನ್ನೋ ಪತಿಯನ್ನೋ ಪಡಕೊಳ್ಳುವದು ಮತ್ತು ಮಕ್ಕಳನ್ನು ಕಾಪಾಡಿಕೊಳ್ಳುವದು. ಇವೆರಡು ಸಮಸ್ಯೆಗಳು ಇಂದಿಗೂ ಹೆಣ್ಣಿಗೆ ಜೀವಾಳದ ಮಹತ್ವದವೇ ಸರಿ. ದೊಡ್ಡ ನಗರಗಳ ಹೊರತು ಎಲ್ಲ ಕಡೆಯ ಹೆಣ್ಣಿನ ಬಾಳಿನಲ್ಲಿಯೂ ನಗರಗಳಲ್ಲಿ ಕೂಡ ಮಧ್ಯಮವರ್ಗದವರ ಹೊರತು ಮಿಕ್ಕ ಎಲ್ಲ ತರಗತಿಯ ಹೆಣ್ಣುಗಳಿಗೂ ಇವೆರಡು ಸಮಸ್ಯೆಗಳು ನಡುಕಟ್ಟಿನ ಮರ್ಮವಾಗಿವೆ. ಈ ಅನಾದಿ ಪ್ರಾಪ್ತವಾದ ಸಮಸ್ಯೆಗಳ ಕುರಿತು ಪ್ರಕೃತಿಯಿಂದಲೇ ಹೆಣ್ಣಿನಲ್ಲಿ ಸಹಜಸಿದ್ಧವಾದ ಪ್ರವೃತ್ತಿ–ಪ್ರತಿಕ್ರಿಯೆಗಳು ವಿಕಾಸಗೊಂಡು ಬಂದಿವೆ. ಇಂಥ

ವಿಷಯದ ಆಳವಾದ ತಾನಾಗಿ ಬಂದ ತಿಳುವಳಿಕೆ ಹೆಣ್ಣಿಗೆ ಕೆಲವು ಸಲ ಬಾಧಕವಾದರೂ, ಸಾಧಾರಣವಾಗಿ ಹಿತಸಾಧಕವಾಗಿಯೂ ಕುಶಲವಾಗಿಯೂ ಪರಿಣಮಿಸಿ ಬಂದಿದೆ.

ಆದ್ದರಿಂದಲೇ ಗಂಡಿಗಿಂತ ಹೆಣ್ಣಿನ ಪ್ರವೃತ್ತಿ-ಪ್ರತಿಕ್ರಿಯೆಗಳಲ್ಲಿ ಏಕಾಗ್ರತೆ, ಹಾಗೂ ಸಮರ್ಪಕತೆ ಹೆಚ್ಚು. ಪ್ರವೃತ್ತಿಯಿಂದಲೇ ಆಕೆ ಕೈಕೊಳ್ಳುವ ನಿಶ್ಚಯಗಳಲ್ಲಿ ಹೊಯ್ದಾಟ ಕಡಿಮೆ. ಗಂಡು ಹೆಚ್ಚು ವಿಚಕ್ಷಣ, ಲಕ್ಷಣ, ವಿಮರ್ಶಕ, ವಿವೇಚಕ ಹೆಚ್ಚು ಸಂಶಯಾತ್ಮ. ಅವನ ಪ್ರವೃತ್ತಿಗಳ ಹದ-ಹದನ ಮುರಿದು ಮೊಂಡವಾಗಿ ಆ ಬದಲು ಹಲವು ಪ್ರತಿಕ್ರಿಯೆಗಳಿಗೆ ಅನುಕೂಲವಾಗುವಂತೆ ಮಣಿಯಬಲ್ಲತನ ಬೆಳೆದು ಬಂದಿದೆ. ಇದರಿಂದ ತಾತ್ಕಾಲಿಕ ಆಪತ್ಕಾಲಿಕ ನಿರ್ಣಯ ಆತನು ಕಳಕೊಂಡಿದ್ದಾನೆ. ಸತ್ಯದ ಸಂಕಟಕ್ಕೆ ಸಿಲುಕಿ ತೊಳಲುವಾಗ ಹರಿಶ್ಚಂದ್ರನಿಗಿಂತ ತಾರಾಮತಿಗೇ ಮಾರಿಕೊಳ್ಳುವ ಹಂಚಿಕೆ ಮೊದಲು ತಟ್ಟನೆ ಹೊಳೆಯಿತು. ಸರ್ವಸ್ವವನ್ನು ಸೋತು ತೆಪ್ಪಗೆ ತಲೆಕೆಳಗೆ ಹಾಕಿ ಕೂತ ಪಾಂಡವರ ಪೇಚನ್ನು ಸಡಿಲಿಸಿ ದ್ರೌಪದಿಯೇ ಶಸ್ತ್ರಾಸ್ತ್ರಗಳನ್ನು ತನ್ನ ಯುಕ್ತಿವಾದದಿಂದ ಗೆದ್ದುಕೊಂಡಳು. ಹೀಗೆ ಪ್ರತ್ಯುತ್ಪನ್ನ ಮತಿ ಹೆಣ್ಣಿನಲ್ಲಿ ಹೆಚ್ಚು. ಹೆಣ್ಣಿನ ಇದುರಿಗಂತೂ ಗಂಡು ಮತ್ತೂ ಪೆಚ್ಚು. ಹೇಗೆ ಮಾತಾಡಬೇಕು. ಏನು ಮಾಡಬೇಕು-ಪ್ರಸಂಗವನ್ನು ಹೇಗೆ ತೂಗಿಸಿಕೊಂಡು ಹೋಗಬೇಕು-ಎಂಬುದೇ ಗಂಡಿನ ತಲೆ ತಿನ್ನುತ್ತದೆ.

ಗಂಡಿನಿದುರು ಹೆಣ್ಣು ಹಾಗೆ ಹತಪ್ರಭಳಲ್ಲ; ತನ್ನ ಮೇಲೆ ಆಕೆಯ ಹಿಡಿತ ಹೆಚ್ಚು; ವ್ಯವಹಾರ ಚಾತುರ್ಯವೂ ಹೆಚ್ಚು. ವಿಶೇಷವಾಗಿ, ತನ್ನೆದುರಿಗಿದ್ದ ಪ್ರಶ್ನೆ ಗಂಡನ್ನು ಒಲಿಸಿಕೊಳ್ಳುವ, ಒಲಿದವನನ್ನು ಉಳಿಸಿಕೊಳ್ಳುವ, ಇಲ್ಲವೆ ಕೂಡಿ ಸಂಸಾರ ಹೂಡುವ ಕುರಿತಿನದಾದರೆ, ಆಗ ಹೆಣ್ಣು ಯೋಜನೆಯಲ್ಲಿ ಹೆಚ್ಚು ಚತುರಳೂ, ಕಾರ್ಯದಲ್ಲಿ ಹೆಚ್ಚು ತ್ವರಿತಳೂ, ಇರುತ್ತಾಳೆ. ಪ್ರಣಯದ ಕೂಟಯುದ್ಧದಲ್ಲಿ ೨೦ ವರ್ಷದ ಕೆಳಗಿನ ಹೆಣ್ಣು ಕೂಡ ೨೦ವರ್ಷದ ಕಿಶೋರನಿಗೆ ಸರಿಗಟ್ಟಲಾರಳು. ಗಂಡು ಹೆಣ್ಣು ಪ್ರಣಯಪಾಶದಲ್ಲಿ ಸಿಲುಕಿದಾಗ ನಿರೀಕ್ಷಿಸಿರಿ, ಗಂಡು ಎಷ್ಟೇ ಹಿರಿಯನಿರಲಿ, ಹೆಣ್ಣು ಎಷ್ಟೇ ಕಿರಿಯಳಿರಲಿ ಯಾರು ಯಾರ ಮಣಿಯುವರೆಂದು ಸ್ಪಷ್ಟವಾಗುತ್ತದೆ. ಹೆಣ್ಣು ಗಂಡನ್ನು ತನ್ನ 'ಅನುಯಾಯಿ' ಯಾಗಿ ಕುಣಿಸಿ ದಣಿಸುತ್ತಾಳೆ. ಇಂಥ ಕೆಲವು ಸಂಗತಿಗಳು ಹೆಣ್ಣಿಗೆ ಹುಟ್ಟಿಗೂ ಮುಂಚಿತವಾಗಿ ಗೊತ್ತು, ಆದರೆ ಗಂಡು ಕಠಿಣ ಅನುಭವದಿಂದಲೂ, ಕಟುವಾದ ಭ್ರಮನಿರಸನದಿಂದಲೂ ಅವನ್ನು ಕಲಿತುಕೊಳ್ಳುತ್ತಾನೆ.

ಹೆಣ್ಣು ಆಡಿ ತೋರಿಸುವದಕ್ಕೂ ಒಡಮೂಡಿಸುವದಕ್ಕೂ ಹೆಚ್ಚು ಕಂಡುಕೊಳ್ಳುತ್ತಾಳೆ. ಆದರೆ ಗಂಡು ಕಂಡುಕೊಳ್ಳುವದಕ್ಕೂ ಹೆಚ್ಚಾಗಿ ಆಡಿತೋರಿಸುತ್ತಾನೆ. ಒಡಮೂಡಿಸುತ್ತಾನೆ. ಹೆಣ್ಣಿಗೆ ಉದ್ದೇಶ ಹೆಚ್ಚು, ಉದ್ಗಾರ ಕಡಿಮೆ. ಗಂಡಿಗೆ ಉದ್ಗಾರ ಹೆಚ್ಚು, ಉದ್ದೇಶ ಕಡಿಮೆ. ಅನಿಸಿದ್ದನ್ನೆಲ್ಲ ತನಗೆ ತಾನೇ ತಿಳಿಯಾಗಿ ಪ್ರತಿಪಾದಿಸಿಕೊಳ್ಳಲೂ ಹೆಣ್ಣು ಅರಿಯಳು. ಹೆಣ್ಣು ವಸ್ತುವಿಲ್ಲದೆಯೂ ವಿಚಾರ ಮಾಡಬಲ್ಲಳು. ಪೂರ್ವಯೋಜನೆ ಇಲ್ಲದೆಯೇ ಸುಳ್ಳಾಡಬಲ್ಲಳು. ಸುಳ್ಳನ್ನು ಕಟ್ಟಿ ಲೀಲಾಜಾಲವಾಗಿ ಹೇಳುವದರಲ್ಲಿ ಗಂಡಿಗಿಂತ ಹೆಣ್ಣೇ ಚುರುಕು ಹೆಚ್ಚು! ಸಿಕ್ಕಿ ಬೀಳುವಂಥ ಪೇಚಿನ ಪ್ರಸಂಗದಲ್ಲಿ ಹಲವೊಮ್ಮೆ ಗಂಡು ಪೆಚ್ಚು ಬೀಳುತ್ತಾನೆ. ಆದರೆ ಹೆಣ್ಣು ಕ್ಷೋಭೆಗೊಳ್ಳದೇ 'ಸ್ಪಷ್ಟೀಕರಣ' ನೀಡುತ್ತಾಳೆ, 'ತಿಳುವಳಿಕೆ' ಕೊಡುತ್ತಾಳೆ!

ದೇಹದ ಭಾರದ ಪ್ರಮಾಣದಲ್ಲಿ ಗಂಡಿಗಿಂತಲೂ ಹೆಣ್ಣಿನ ಮಿದುಳಿನ ಪ್ರಮಾಣ ಹೆಚ್ಚು. ಬಹುಶಃ ಹೆಣ್ಣಿನ ರಭಸದ ಪೌಗಂಡಾವಸ್ಥೆಯು ಮೂಲತಃ ಹಾಗಿದ್ದಿಲ್ಲವೇನೋ. ಪುರಾತನ ಕಾಲದಿಂದಲೇ, ಪ್ರಾಯ ಬರುವದರೊಳಗೆ ತಾಯ್ತನವನ್ನು ತರುವ ಒತ್ತಾಯದ ವಾಡಿಕೆಗೆ ಬಲಿಯಾಗಿ ಹೆಣ್ಣು ಹೀಗೆ ತ್ವರೆಯಿಂದ ಯೌವನಕ್ಕೆ ತಲ್ಪುವಂತೆ ಆಗಿರಬಹುದು. ಅಂದರೆ ಋತುವತಿಯಾದ ಮಾತ್ರಕ್ಕೆ ಅಥವಾ ಆಗುವ ಮುಂಚೆಯೇ ಗಂಡಿನ ಬಲತ್ಕಾರಕ್ಕೆ ಹೆಣ್ಣು ತಾಯಿಯಾಗುವ ಪ್ರಸಂಗಗಳು ಅನಾದಿಯಿಂದಲೂ ಹೆಚ್ಚಾಗಿ ಒದಗಿ ಬಂದಿರಬಹುದು. ಅದರಿಂದ ಕ್ರಮೇಣ ಹೆಣ್ಣಿನ ಶಾರೀರಿಕ ಮಾನಸಿಕ ಬೆಳವಣಿಗೆಯ ವೇಗ ಬರದಿಂದ ಹೆಚ್ಚಿರಬೇಕು. ಆಧುನಿಕ ಗಂಡಸು ಮದುವೆಗೆ ಮುಟ್ಟುವ ವಯೋಮಾನದ ಅರ್ಧಕ್ಕೇ ಹಿಂದಿನ ಗಂಡು ತಂದೆಯಾಗಲು ಸಾಮರ್ಥ್ಯ ಪಡೆಯುತ್ತಿದ್ದನು. ಇಂದಿಗೂ ಮದುವೆಯ ಯೋಗ್ಯತೆಗೆ ಆರ್ಥಿಕ ಪರಿಸ್ಥಿತಿಯೇ ಅಡ್ಡ ಬರುವದೇ ಹೊರತು ಗಂಡಿನ ಶಾರೀರಿಕ ಸ್ಥಿತಿಯು ಎಂದಿನಂತೆ ಮುಂಚಿತವಾಗಿಯೇ ಯೋಗ್ಯತೆಯನ್ನು ಪಡಕೊಳ್ಳುತ್ತದೆ.

ಋತು-ಪ್ರಾಯ

ಪೌಗಂಡಾವಸ್ಥೆ-ಋತುಪ್ರಾಪ್ತಿಯ ಪ್ರಾಯ ಶಾರೀರಿಕವಷ್ಟೇ ಅಲ್ಲ, ಮಾನಸಿಕವೂ ಇರುತ್ತದೆ. ಗಂಡಿನಲ್ಲಿಯೂ ಅದು ಒಬ್ಬೊಬ್ಬರಿಗೆ ಒಂದೊಂದು ರೀತಿ ಇರುತ್ತದೆ. ಕೆಲವರು ಮುಂಚಿತವಾಗಿಯೇ 'ಪ್ರಾಯಕ್ಕೆ ಬರುತ್ತಾರೆ.' ಕೆಲವರು ವಿಲಂಬದಿಂದ ಮತ್ತೂ ಕೆಲವರು ಕೊನೆತನಕವೂ ವಯಸ್ಸಾದರೂ ಪ್ರಾಯಕ್ಕೆ

ಬರುವದಿಲ್ಲ! ಜಗತ್ತನ್ನೂ ಜೀವನವನ್ನೂ ಜಟ್ಟಿಗತನದಿಂದ ಇದುರಿಸಲಿಕ್ಕೆ ತಕ್ಕವನೆಸಿಸುವದೇ ಪ್ರಾಯಕ್ಕೆ ಬಂದವನ ಲಕ್ಷಣ. ಈ ಲಕ್ಷಣ ನಮಗಿಂತ ನಮ್ಮ ಪೂರ್ವಜರಲ್ಲಿ ಹೆಚ್ಚು ಮುಂಚಿತವಾಗಿಯೇ ಬರುತ್ತಿತ್ತು. ಅಂದಿನ ಪರಿಸ್ಥಿತಿಯಲ್ಲಿ ಗಂಡು–ಹೆಣ್ಣು ತಮ್ಮ ಸಂಸಾರದ ಭಾರವನ್ನು ಹೊರಲು ತಕ್ಕದಾದ ಶಾರೀರಿಕ ಮಾನಸಿಕ ಸಾಮರ್ಥ್ಯವನ್ನು ತ್ವರೆಯಿಂದ ಬೆಳೆಸಿಕೊಳ್ಳುತ್ತಿದ್ದರು. ಆದರೆ ಸದ್ಯದ ಸ್ಥಿತಿ ಹಾಗಿಲ್ಲ. ಸಾಮಾಜಿಕ ನಾಗರಿಕತೆಯೂ ವೈಯುಕ್ತಿಕ ಸಂಸ್ಕೃತಿಯೂ ಬೆಳೆದಂತೆ ಜೀವನದ ಜಟಿಲತೆ ಕುಟಿಲತೆಗಳು ಬಹುಮುಖವಾಗಿ ಬೆಳೆದಿವೆ. ಅದರ ಇದುರಿಗೆ ವ್ಯಕ್ತಿಯ ಅಸಹಾಯಕತೆಯೂ ಪ್ರೌಢತೆಗೆ ಮುಟ್ಟುವ ಅವಧಿಯೂ ಬೆಳೆಯ ತೊಡಗಿದೆ. ನಮ್ಮ ಅನಾದಿಯ ಸರಳ ಪ್ರವೃತ್ತಿಗಳ ಕೆಲವೇ ಆದ ಯುಕ್ತಿ ಪ್ರಯುಕ್ತಿಗಳಿಗೆ ಆಧುನಿಕ ಜಗತ್ತು ದಿನನಿತ್ಯವೂ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿವೆ. ಇದರಿಂದ ನಮ್ಮಲ್ಲಿ ಪ್ರೌಢತೆಯು ಹಿಂದಿನವರಷ್ಟು ಬೇಗ ಇಲ್ಲವೇ ಬಲುಮೆಯಿಂದ ಬರುವದಿಲ್ಲ. ಸದ್ಯಕ್ಕೆ ನಡುವಯಸ್ಸಿನ ಮಟ್ಟು ದಾಟುವ ಮುಂದೆ ಮನಸ್ಸಿನ ಪ್ರೌಢತೆಯನ್ನು (ಪ್ರಾಯಸ್ಥಿಕೆಯನ್ನು) ಮುಟ್ಟುವ ಮಂದಿ ಕೆಲವರೇ ಸರಿ! ಇಂಥ ಅಪ್ರಾಯಸ್ಥ ಮನಸ್ಸಿನ ಜನಸಮುದಾಯ ಇಂದಿನ ಜಗತ್ತಿನಲ್ಲಿ ಹೆಚ್ಚಾಗಿದ್ದರಿಂದಲೇ ಕುರುಡು ಮತಪ್ರಚಾರಕ್ಕೂ ಸರ್ವಾಧಿಕಾರಿಗಳ ಅವತಾರಕ್ಕೂ ಅನುಕೂಲವಾಗಿದೆ.

ಗಂಡಿನ ಮನಸ್ಸಿನ ಪ್ರಾಯ–ಪ್ರೌಢತೆಯ ಈ ಹದಗೇಡು ಹೆಣ್ಣಿನಲ್ಲಿ ಕಂಡುಬರುವದಿಲ್ಲ. ಹೆಣ್ಣಿನ ಬಾಳು ಬಹುಮಟ್ಟಿಗೆ ಸರಳ–ಸಹಜ ಸಂಗತಿಗಳಿಂದ ಕೂಡಿ ಸೀರಾಗಿ ಸಾಗಿದ್ದು, ಆದ್ದರಿಂದ ಆಕೆ ಶರೀರದೊಂದಿಗೆ ಮನಸ್ಸಿನಿಂದಲೂ ಮುಂಚಿತವಾಗಿಯೇ ಪ್ರೌಢಳಾಗುವಳು. ಇದರಿಂದ ಸಾಮಾಜಿಕ ನಡೆ–ನುಡಿಯ ಕಟ್ಟುನಿಟ್ಟುಗಳನ್ನೂ, ಸೌಂದರ್ಯಗಳನ್ನೂ ಆಕೆ ಕೂಡಲೆ ಕಲಿತುಕೊಳ್ಳುವಳು. ಶಾಲೆಯ ಶಿಕ್ಷಣದಲ್ಲಿಯೂ ಕೂಡ ಪೌಗಂಡಾವಸ್ಥೆಯಲ್ಲಿರುವ ಮಕ್ಕಳಲ್ಲಿ ಹುಡುಗಿಯೇ ತನ್ನ ವಯಸ್ಸಿನ ಹುಡುಗನಿಗಿಂತ ಹೆಚ್ಚು ಚತುರಳು ಕುಶಲಳೂ ಕಾಣುವಳು. ಹೀಗೆ ಪ್ರಾಯಕ್ಕೆ ಬರುವ ಅವಧಿಯಲ್ಲಿ ೧೦–೨೦ ವರ್ಷದೊಳಗಿನ ವಯೋಮಾನದಲ್ಲಿ ಗಂಡಿಗಿಂತ ಹೆಣ್ಣೇ ಬುದ್ಧಿಯ ಬೆಳವಣಿಗೆಯಲ್ಲಿ ಭರದಿಂದ ಸಾಗುವಳು. ಬೇಗನೇ ತನ್ನ ಪೂರ್ಣ ವಿಕಾಸವನ್ನು ಸಾಧಿಸುವಳು.

ಆದರೆ ಇದಕ್ಕೆ ಇನ್ನೊಂದು ಬದಿಯೂ ಇದೆ. ಪ್ರಾಪಂಚಿಕ ಪ್ರಯತ್ನ ಪ್ರಯೋಗಗಳ ಒತ್ತಾಯಕ್ಕೆ ಬಲಿಯಾದ ಗಂಡು ಮೆಲ್ಲನೆ ಸಾಗಿದರೂ ಬಹುಕಾಲ

ಮಾನಸಿಕ ಬೆಳವಣಿಗೆಯನ್ನು ಹೊಂದುತ್ತಲೇ ನಡೆಯುವನು. ಆದರೆ ಹೆಣ್ಣು ಹಾಗಲ್ಲ. ಹುಟ್ಟಿನೊಂದಿಗೆ ಬಂದ ಬುದ್ಧಿ ಸುಟ್ಟರೂ ಹೋಗುವದಿಲ್ಲವೆಂಬ ನಾಣ್ಣುಡಿಯು ಹೆಣ್ಣಿಗೆ ಹೆಚ್ಚು ಒಪ್ಪುತ್ತದೆ. ಬೇಗನೆ ಬೆಳವಣಿಗೆಯನ್ನು ಮುಗಿಸಿಕೊಂಡ ಹೆಣ್ಣು ಬದಲಾವಣೆಯನ್ನು ಹೊಂದುವದಿಲ್ಲ. ಗಂಡು ಬದಲಾವಣೆಯನ್ನು ಮೆಚ್ಚಿಕೊಳ್ಳುವಂತೆ, ಹೆಣ್ಣು ಬುನಾದಿಯ ನಡಾವಳಿಯನ್ನು ಅಂಟಿಕೊಳ್ಳುತ್ತಾಳೆ. ಇದರಿಂದ ಗಂಡು ಕ್ರಾಂತಿಯ ಅಗ್ರದೂತ–ಪ್ರಗತಿ–ಪರಿವರ್ತನದ ಪ್ರವರ್ತಕ. ಹೆಣ್ಣು ಮಾನವವಂಶದ ಪರಂಪರೆಯ ಪ್ರಾಣಾಧಾರ. ಸ್ಥಿತಿಸ್ಥಾಪಕಶಕ್ತಿ

ಹೆಣ್ಣು ಮತ್ತು ಕ್ರಾಂತಿ

ಇದರ ಇನ್ನೊಂದು ಮಗ್ಗಲಾಗಿ ಹೆಣ್ಣಿನಲ್ಲಿ ಭಾವನೆಯ ಸಂಕೋಚವೂ ವಿಚಾರದ ಅಪರ್ಯಾಪ್ತತೆಯೂ ಇರುತ್ತವೆ. ಅಂದರೆ ಹೆಣ್ಣಿನ ಉದ್ರಿಕ್ತವಾದ ಭಾವನೆಗಳು ಬಹುಕಾಲ ತೀವ್ರವಾಗಿ ತಡೆಯಬಲ್ಲವು. ಹಾಗೆಯೇ ತೀರ ಹೊಸ ಹೊಸ ವಿಚಾರಗಳೂ ಶುದ್ಧಜ್ಞಾನದ ಪ್ರಮೇಯ–ಪ್ರತಿಪಾದನೆಗಳೂ ಹೆಣ್ಣು ಬುದ್ಧಿಗೆ ತೋಚಲಾರವು; ತಿಳಿಯಲಾರವು. ಹೆಣ್ಣಿನ ರುಚಿ ವೈಚಿತ್ರ್ಯದ ಸಂಗತಿಗಳು ಹೆಚ್ಚಾಗಿ ಕೌಟುಂಬಿಕ ಪಾರಿವಾರಿಕ ಪರಿಚಯದವು. ಆಕೆಯ ಆವರಣವು ಕುಟುಂಬದ ಮನೆಯೇ. ಹೆಣ್ಣಿನ ಬುದ್ಧಿ ನಿಸರ್ಗದಷ್ಟೇ ಗಹನ ಗಂಭೀರ; ಆದರೆ ಮನೆಯ ನಾಲ್ಕು ಗೋಡೆಗಳಷ್ಟೇ ಸಂಕುಚಿತ! ಯಾವದೇ ತಜ್ಞನು ತನ್ನ ಜ್ಞಾನದ ವಿಶೇಷ ಪ್ರಭುತ್ವದ ಕ್ಷೇತ್ರವನ್ನು ಪ್ರೀತಿಸುವಂತೆಯೇ ಹೆಣ್ಣು ಪರಂಪರಾಗತ ಆಚಾರ–ವಿಚಾರವನ್ನು ಪ್ರೀತಿಸುವಳು. ಮಾನಸಿಕ ವ್ಯಾಪಾರದಲ್ಲಿಯೂ ನೀತಿಯಲ್ಲಿಯೂ ಹೆಣ್ಣು ಅಷ್ಟು ಪ್ರಯೋಗಪ್ರಿಯಳಲ್ಲ. 'ಪ್ರಣಯ ಸ್ವಾತಂತ್ರ'ದಲ್ಲಿ ಬಿದ್ದ ಹೆಣ್ಣು ಕೂಡ ಹಾಗೆ ಸ್ವೈರ ನಡೆಯುವದು ಅಷ್ಟೊಂದು ಸ್ವಾತಂತ್ರ್ಯ ಪ್ರೇಮಕ್ಕಾಗಿ ಅಲ್ಲ. ಹೊಣೆಗಾರನಾದ ಗಂಡನೊಬ್ಬನೊಡನೆ ನಿರಾಮಯವಾದ ದಾಂಪತ್ಯಜೀವನವನ್ನು ಸಾಧಿಸಲು ಹತಾಶಳಾಗಿಯೇ ಆಕೆಯು ಪ್ರಣಯದ ಸ್ವೈರಾಚಾರಕ್ಕೆ ಅಣಿಯಾಗುತ್ತಾಳೆ– ಸ್ವಾಸ್ಥ್ಯಗೆಟ್ಟು ನಾಲಿಗೆಯ ಸಾತ್ವಿಕ ಆಹಾರ ಬಿಟ್ಟು ತೀವ್ರವಾದ ರುಚಿ ವೈಚಿತ್ರ್ಯಕ್ಕೆ ಹಾತೊರೆದಂತೆ! ಇದಕ್ಕೆ ಸಾಕ್ಷಿಯೆಂದರೆ,–ಸಾಧ್ಯವಿದ್ದರೆ ತಾನು ಮೆಚ್ಚಿದ ಯಾವದೇ ಗಂಡಸರನ್ನೂ ಆಕೆ ದೃಢವಾಗಿ ತನ್ನ ಮನೆ ಮಕ್ಕಳ ಮುದ್ದುಮಾಟದಲ್ಲಿ ತನ್ನೊಡನೆ ತನ್ಮಯ ಮಾಡಲು ಎಂಥ ಸ್ವೈರವೃತ್ತಿಯ ಹೆಣ್ಣು ಕೂಡ ಆಳವಾಗಿ ಬಯಸುತ್ತಾಳೆ.

ಹೊಸ ಹರಯ ಹುರುಪು ಹುಮ್ಮಸದಲ್ಲಿ ಒಂದು ಹೆಣ್ಣು ರಾಜಕೀಯ ಸುಧಾರಣೆಗಳ ಇಲ್ಲವೇ ಸಾಮಾಜಿಕ ಕ್ರಾಂತಿಯ ಉಗ್ರ ಉಪಾಸನೆಯಿಂದ ಉದ್ರೇಕಗೊಳ್ಳಬಹುದು. ಅಖಿಲ ಮಾನವಕೋಟಿಯನ್ನೇ ಉದ್ಧರಿಸಲು ತನ್ನ ಹೃದಯದ ಮೃದು ಭಾವನೆಗಳನ್ನು ತಿಳಿಯಾಗಿ ಚೆಲ್ಲಬಹುದು. ಆದರೆ ಇದು ಆಕೆಯ ಯಥಾರ್ಥ ಸ್ವರೂಪವಲ್ಲ. ತನಗೆ ಪ್ರಾಮಾಣಿಕನಾದ ಪ್ರಭಾವಿಯಾದ ಒಬ್ಬ ಗಂಡು ಒಡನಾಡಿಯು ದೊರೆತನೆಂದರೆ, ವಿಶ್ವಪ್ರೇಮದ ಕ್ರಾಂತಿಕಾರಿಣಿಯಾದ ಹೆಣ್ಣು ಕ್ರಮೇಣ ತನ್ನ ಕಾರ್ಯಕ್ಷೇತ್ರವನ್ನು ಕುಗ್ಗಿಸುತ್ತ ಸಾಮುದಾಯಿಕ ಸಾಧನೆಯಿಂದ ಹಿಂಜರಿಯುತ್ತ ತನ್ನೊಂದಿಗೆ ತನ್ನ ಸಹಕಾರಿ ಯಾವ ಗಂಡಸನ್ನೂ ಅಸ್ಪಷ್ಟ ವಿಶ್ವಪ್ರೇಮದಿಂದ ಮೆಲ್ಲಗೆ ಬಿಡಿಸಿಕೊಂಡು ಕುಟುಂಬದ ಸಂಕುಚಿತವಾದರೂ ಉತ್ಕಟವಾದ ನಿಷ್ಠೆಗೆ ಮಣಿದು ದಣಿಯಲು ಕಲಿಸುವಳು. 'ನಿನಗಾಗಿ ಪ್ರಪಂಚವನ್ನೇ ಬಿಡಬಲ್ಲೇ, ಓ ನನ್ನ ನಲ್ಲೆ!' ಎಂದು ಅನಭಿಜ್ಞನಾದ ತರುಣನು ಪ್ರಣಯದ ಉನ್ಮಾದದಲ್ಲಿ ಹೆಣ್ಣಿನ ಕೈ ಹಿಡಿದು ಉದ್ಗರಿಸುವನು. ಮುಂದೆ ಕೈಹಿಡಿದ ಹೆಣ್ಣಿಗಾಗಿ ಗಂಡನಾದ ಅವನು ಹಾಗೆಯೇ ಮಾಡಿ ಕಾಣಿಸುವನು.

ನಿಜವಾಗಿ ಹಿತವಾದ ಸುಧಾರಣೆಯು ಮನೆಯಲ್ಲಿಯೇ ಮೊದಲಾಗುವದೆಂಬ ಮಾತು ಹೆಣ್ಣು ಹುಟ್ಟಾ ಬಲ್ಲಳು. ವಿಚಾರ ಮಾಡುವ ಗೋಜಿಗೆ ಹೋಗದೆಯೂ ಬಲ್ಲಳು. ಆದ್ದರಿಂದಲೇ ಆಕೆಯು ಆದರ್ಶವಾದಿಯಾಗಿ ಆಕಾಶಪುಷ್ಪಕ್ಕಾಗಿ ಅಲೆದಾಡುವ ಗಂಡನ್ನು ತನ್ನ ಮಕ್ಕಳ ಅನನ್ಯ ಆರಾಧಕನನ್ನಾಗಿ ಮಾರ್ಪಡಿಸುವಳು! ನಿಸರ್ಗವು ಕಾಯಿದೆ ಕಾನೂನು ರಾಜ್ಯ–ರಾಷ್ಟ್ರಗಳ ಕುರಿತು ಕಾಸಿನ ಪರಿವೆಯನ್ನೂ ಮಾಡುವದಿಲ್ಲ; ಕುಲ ಮತ್ತು ಮಕ್ಕಳು ಇವೇ ನಿಸರ್ಗದ ಅಚ್ಚುಮೆಚ್ಚಿನ ವಿಷಯ. ಸದ್ಯಕ್ಕೆ ಕುಲದ ಕ್ಷೇಮದ ಈ ಕಾರ್ಯದಲ್ಲಿ ನಿಸರ್ಗವು ತಪ್ಪಿದಂತೆ ಇದೆ. ಅದಕ್ಕೆ ಕಾರಣ, ಹೆಣ್ಣು ನಿಸರ್ಗವನ್ನು ಇಂದಿನವುಟ್ಟಿಗೆ ಮರೆತಂತಿದೆ. ಆದರೆ ಬಹುಕಾಲ ನಿಸರ್ಗವನ್ನು ಸೋಲಿಸುವದು ಶಕ್ಯವಿಲ್ಲ !

ಪುರುಷರ ಪ್ರತಿಭೆಗೆ ಮೆಚ್ಚಬೇಕು. ಸ್ತ್ರೀಯರ ಪ್ರತಿಮೆಗೆ ಮೆಚ್ಚಬೇಕು–ಎಂದು ಹೊಸದೊಂದು ಜಾಣ್ನುಡಿಯನ್ನು ಮಾಡುವ ಮೋಹ ಬುದ್ಧಿಯು ಬಿಂಕದ ಗಂಡಿಗೆ ಆಗುವದುಂಟು. ಆದರೆ ಮಾರ್ಮಿಕವಾಗಿ ನೋಡಿದರೆ, ಈ ನುಡಿಯಲ್ಲಿ ಜಾಣ್ಮೆ ಎಷ್ಟು? ಹೆಣ್ಣು ಹುಟ್ಟ ತಿಳುವಳಿಕೆ ತರುತ್ತಾಳೆ. ಕೆಲವು ಗಂಡು ತಿಳುವಳಿಕೆಯನ್ನು ಗಳಿಸಿಕೊಳ್ಳುತ್ತಾರೆ. ಆದರೆ ಹಲವು ಗಂಡು ತಿಳುವಳಿಕೆಯನ್ನು

ಎರವಲು ತರುತ್ತಾರೆ. ಇಲ್ಲವೇ ಬರಿದೇ ತಿಳುವಳಿಕೆ ಹೇರಲ್ಪಡುತ್ತಾರೆ. ತಿಳಿದವರೆಂದು ಕರೆಯಿಸಿಕೊಳ್ಳುತ್ತಾರೆ!

ಹೆಣ್ಣಿನ ಅಭಿರುಚಿ

ಹೀಗಿದ್ದರೂ ಹೆಣ್ಣಿನ ಮನಸ್ಸು ಗಂಡಿನಿಂದ ಕೆಲಮಟ್ಟಿಗೆ ಬೇರೆ ಬಗೆಗಳನ್ನು ಬೆಳೆಸಿಕೊಂಡಿದೆ. ಬುದ್ಧಿಯ ಕ್ಷೇತ್ರದಲ್ಲಿಯೂ ಕೂಡ ಹೆಣ್ಣಿನ ಬಗೆ ಗಂಡಿನಿಂದ ತುಸು ಬೇರೆ. ಅಮೂರ್ತವಾದ ಶುದ್ಧ ತಾತ್ವಿಕ ವಿಚಾರದಲ್ಲಿ ಗಂಡಿನಷ್ಟು ನಿರಾಯಸವಾಗಿ ಹೆಣ್ಣಿನ ಬುದ್ಧಿ ಹರಿದಾಡುವದಿಲ್ಲ. ವಿವರಗಳನ್ನೂ ಘಟನೆಗಳನ್ನೂ ಬಿಡಿಸಂಗತಿಗಳನ್ನೂ ಕಂಡು ನೆನಪಿಡುವ ತೀಕ್ಷ್ಣ ಬುದ್ಧಿ ಅವಳದು. ಆದರೂ ಅಂಥ ಘಟನೆ–ವಿವರಗಳ ಸಮನ್ವಯ ಮಾಡಿ–ಅನ್ವಯಾರ್ಥ ಹೂಡಿ ವ್ಯಾಪಕ ಸಿದ್ಧಾಂತಗಳನ್ನು ತೆಗೆಯಲಾಗಲೀ ಸ್ವತಂತ್ರ ಮೌಲಿಕವಾದ ಉಪಪತ್ತಿಗಳನ್ನು ಹುಡುಕಲಾಗಲೀ ಹೆಣ್ಣಿಗೆ ಅಷ್ಟೊಂದು ಬಾರದು. ನಮ್ಮಲ್ಲಿ ಸ್ತ್ರೀಯರಿಗಾಗಿಯೇ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಮಿಕ್ಕ ಎಲ್ಲ ವಿಷಯಗಳಿಗೆ ಅಧ್ಯಾಪಿಕೆಯರಿದ್ದರೂ, ವಿಜ್ಞಾನ, ತತ್ವಜ್ಞಾನ, ಗಣಿತ, ಸಂಸ್ಕೃತ ಮುಂತಾದವುಗಳಿಗೆ ಅಧ್ಯಾಪಕರೇ ಇರುವುದುಂಟು.

ಹೆಣ್ಣಿಗೆ ಪ್ರಕ್ರಿಯೆ–ಪದ್ಧತಿಗಳಿಗಿಂತಲೂ ವ್ಯಕ್ತಿಯಲ್ಲಿ ಹೆಚ್ಚು ಆಸ್ಥೆ–ಆಸಕ್ತಿ ಅವಳು ಸಮಸ್ಯೆಗಳನ್ನು ಚರ್ಚಿಸುವದಿಲ್ಲ. ಗಂಡಿನ ವಿಷಯವನ್ನೇ ಚರ್ಚಿಸುತ್ತಾಳೆ. ಏಕೆಂದರೆ ಹೆಣ್ಣಿಗೆ ಗಂಡೇ ಒಂದು ಸಮಸ್ಯೆ. ವ್ಯಾಪಕ ವ್ಯವಹಾರಗಳ ಸುಳಿ ಗಾಳಿಯಲ್ಲಿ ಬಿದ್ದು ಕಾರ್ಯ–ಕಾರಣ–ಕ್ರಮ ಕ್ರಿಯೆ ಪ್ರತಿಕ್ರಿಯೆಗಳನ್ನೂ ಗಂಡು ಹೆಣ್ಣುಗಳನ್ನು ತಿಳಿದು ವ್ಯಹರಿಸುವದು ಗಂಡಿನ ಹಣೆಬರಹವಾಗಿದೆ. ಯಾವದೊಂದು ತತ್ವವನ್ನು ಇಲ್ಲವೇ ಹೊಸ ವಿಚಾರವನ್ನು ಕುರಿತು ಒಂದು ಪುಸ್ತಕ ತೆರೆದು ಗಂಡು ಅದರಲ್ಲಿ ತನ್ಮಯತೆಯಿಂದ ತೊಡಗಬಹುದು. ಆದರೆ ಹೆಣ್ಣು ಓದುವ ಪುಸ್ತಕ ಕತೆಯಾಗಿರಬೇಕು–ಗಂಡಿನ ಕತೆಯಾಗಿರಬೇಕು; ಅದೂ ಗಂಡು ಹೆಣ್ಣಿಗೆ ಸೋತ ಕತೆಯಾದರೆ ಇನ್ನಿಷ್ಟು ಚಂದ! ಕೇವಲ ಮೂರ್ತ ಗೋಚರ ಸಂಗತಿಗಳನ್ನೇ ಅರಿಯಬಲ್ಲಳಾದ್ದರಿಂದ ಹೆಣ್ಣು ಭೌತಿಕ ಸಾಮಾಜಿಕ ಇಲ್ಲವೆ ಆರ್ಥಿಕ ಕಾರಣಗಳಿಂದ ಒದಗುವ ಮನುಷ್ಯನ ವಶವನ್ನು ಮೀರಿದ ವ್ಯಾಪಾರಗಳ ಹಿಂದೆಯೂ, ದೈವೀ ವ್ಯಕ್ತಿಗಳ ಇಲ್ಲವೇ ದಿವ್ಯ ಇಚ್ಛಾಶಕ್ತಿಗಳ ಕೈವಾಡವಿದೆಯೆಂದೇ ಸಹಜವಾಗಿ ನಂಬುವಳು. ಸ್ವಭಾವದಲ್ಲಿ ಹೆಣ್ಣುತನ ಇರುವವರೆಲ್ಲ ಹೀಗೆಯೇ.

ಮಹಾತ್ಮರು ಕೂಡ ಬಿಹಾರದ ಭೂಕಂಪವು ಅಸ್ಪೃಶ್ಯತೆಯ ನಿವಾರಣವಾಗದಿರುವದಕ್ಕೆ ವ್ಯಕ್ತವಾದ ದೈವೀಪ್ರಕೋಪವೆನ್ನಲಿಲ್ಲವೇ? ಅವನ್ನು ಸಾವಿರಾರು 'ಗಾಂಧಿ ಜನ' ನಂಬಲಿಲ್ಲವೆ?

ಜಗತ್ತಿಗೆ ಹೆಣ್ಣು ಪ್ರತಿಭೆಯನ್ನು ಪೂರೈಸಿದ್ದು ತೀರ ಕಡಿಮೆ. ಇದನ್ನು ಕಂಡು ಗಂಡು ಬಹಳೇ ಸಮಾಧಾನಪಟ್ಟಿದ್ದಾನೆ. ಸಂಶೋಧಕರಾದ ವಿಜ್ಞಾನಿಗಳಲ್ಲಿ ಹೆಣ್ಣು ಜನವೆಷ್ಟು? ರೇಡಿಯಂ ಶೋಧದಿಂದ ಒಬ್ಬ ಮೆಡಮ್ ಕ್ಯೂರಿಯೇ. ಶಿಕ್ಷಣ ಪದ್ಧತಿಯ ಶೋಧದಿಂದ ಒಬ್ಬ ಮೊಂಟೆಸೋರಿಯೇ ಹೆಸರಾಗಿದ್ದಾರೆ. ವಿಜ್ಞಾನಿಗಳ ಪ್ರತಿಭಾವಂತ ಸಂಶೋಧಕರ ಹೆಂಡಂದಿರಾಗಿ ಅವರ ಕಾರ್ಯಕ್ಕೆ ಸ್ಫೂರ್ತಿಯನ್ನೋ ಸಹಕಾರವನ್ನೋ ನೀಡಿ ಹೆಣ್ಣು ಪ್ರತಿಭೆಯ ಶ್ರೇಯದಲ್ಲಿ ಪಾಲುಗಾರ್ತಿಯಾಗಿರ ಬಹುದು. ಆದರೆ ತಾನೇ ಅಂಥ ಪ್ರತಿಭೆಯ 'ನವೋನವೋನ್ಮೇಷ'ವನ್ನು ಪ್ರಕಟಿಸಿದ್ದು ವಿರಳವೆ.

ಕತೆಯ ಪ್ರಪಂಚದಲ್ಲಿಯೂ ಹಾಗೆಯೇ. ಪ್ರಿಯ ಶಿಷ್ಯೆ, ಲಲಿತೆ, ಕಲಾವಿದೆ ಆಗುವದು ಇಂದುಮತಿಯ ಗುಣ. ಆದರೆ ಗುರುವಾಗುವ ಧರ್ಮ ಅಜರಾಜನದೇ ಸರಿ. ಕಲೆಯ ಉಪಾಸನೆ ಜೋಪಾಸನೆ ಹೆಣ್ಣಿನ ಸೊತ್ತು ನಿಜ. ಆದರೆ, ಕಲೆಯ ನಿರ್ಮಿತ ಗಂಡಿನದೇ ಶಕ್ತಿಯಾಗಿದೆ. ಗಂಡಿಗಿಂತ ಹೆಚ್ಚು ಹೆಣ್ಣು ಸಂಗೀತ ಕಲಿಯುತ್ತಿದ್ದರೂ, ಹೆಣ್ಣಿಗಿಂತ ಗಂಡೇ ಹೆಚ್ಚಾಗಿ ಸಂಗೀತ ದಿಗ್ದರ್ಶನವನ್ನೂ ಹೊಸ ಸ್ವರಾಲಾಪ ರಚನೆಯನ್ನೂ ರಾಗ-ರೀತಿಗಳನ್ನೂ ಉಂಟು ಮಾಡುವನು. ಕಲೆಯು ಚೆಲುವಿಗೆ ಸಂಬಂಧಪಟ್ಟಿದ್ದು. ಭಾವನೆಗಳ ಉದ್ರೇಕದ ಅನುಕೂಲತೆಯಿಂದ ಪುಟಿದು ಪುಟಗೊಳ್ಳುವಂತಹದು. ಅಂದರೆ ಹೆಣ್ಣಿನ ಹೃದಯ ಅದಕ್ಕೆ ಹೆಚ್ಚು ಹದ ಆದಾಗ್ಯೂ, ಗಂಡಿಗೆ ಈ ಕಲಾಕಲ್ಪಕ ಪ್ರತಿಭೆಯ ವಿಕಾಸ-ವಿಲಾಸಗಳು ಸಹಜ ಸಿದ್ಧವಾಗಿವೆ!

ಮಾತೃತ್ವ ಮತ್ತು ಪ್ರತಿಭೆ

ಇದರ ಕಾರಣವೇನು? ಪ್ರತಿಭೆಯಾಗಿ ಮಿಂಚಲಿಕ್ಕೆ ಮನಸ್ಸಿನಲ್ಲಿ ಚೈತನ್ಯದ ಸಂಚಯವಾಗಬೇಕು. ಬುದ್ಧಿ-ಭಾವನೆಗಳಿಗೆ ಅಲೌಕಿಕ ಉದ್ದೀಪನೆಯ ಸಂದರ್ಭವಾಗಲಿ ಸಂಸ್ಕಾರವಾಗಲಿ ಹೆಣ್ಣಿಗೆ-ಮನೆಯ ನಾಲ್ಕು ಗೋಡೆಗಳಲ್ಲಿಯೇ ನಿಂತ ಹೆಣ್ಣಿಗೆ-ಎಂದಿನಿಂದಲೂ ದೊರೆತಿಲ್ಲ. ಅಲ್ಲದೆ ಪ್ರಚಂಡ ಚೈತನ್ಯದ ಸಂಚಯವೂ ಆಕೆಯ ಮನಸ್ಸಿನಲ್ಲಿ ಸಂಗ್ರಹವಾಗುವಂತಿಲ್ಲ. ಆಕೆಯ ಮನದ

ಶಕ್ತಿಯು ದೇಹದ ಸತ್ವದೊಡನೆಯೇ ತಾಯ್ತನದ ತಪಾಚರಣೆಗೆ ವ್ಯಯವಾಗುತ್ತ ಬಂದಿದೆ. ಆದ್ದರಿಂದ ಹೊಸ ಜೀವವನ್ನೊಂದು ಹೊತ್ತು ಹೆತ್ತು ಸಲಹುವ ಜೀವಂತನಿರ್ಮಿತಿಯ ಕಾರ್ಯವೇ ಆಕೆಯ ಪ್ರಜ್ಞೆ–ಪ್ರತಿಭೆಗಳ ಕೆಲಸವಾಗಿ ಬಿಟ್ಟಿದೆ. ಹೀಗೆ ಮಾತೃತ್ವ ಮತ್ತು ಪ್ರತಿಭೆ ಇವೆರಡರಲ್ಲಿಯೂ ಒಂದು ಬಗೆಯ ದ್ವಂದ್ವ ಸಂಘರ್ಷವಿದೆ. ಆದ್ದರಿಂದ ಯಾವ ಹೆಣ್ಣೂ ಅಸಾಮಾನ್ಯ ಬುದ್ಧಿಶಕ್ತಿಯನ್ನು ಪ್ರಕಟಿಸಲಾರಳು. ಅಂಥವಳಿದ್ದರೆ ಆಕೆಯು ಮಾತೆಯಾಗಲು ತಪ್ಪಿರಬೇಕು. ನಿಸರ್ಗದ ನಿಯತ ಕಾರ್ಯಕೆ ದ್ರೋಹ ಬಗೆದಿರಬೇಕು. ಅಷ್ಟರಮಟ್ಟಿಗೆ ಆಕೆಯ ಮನಸ್ಸು ವಿಕೃತವಾಗಿರಬೇಕು. ಸಮತೂಕವಿಲ್ಲದೆ ಘಾತುಕರಾಗಿ ಸ್ವಾಸ್ಥ್ಯ ಕೆಟ್ಟಿದ್ದ ಹೆಣ್ಣಿನ ಮನಸ್ಸಿಗೇ ಅಲೌಕಿಕ ಬುದ್ಧಿ–ಮತ್ತೆ ಇಲ್ಲವೇ ಪ್ರತಿಭೆ ಸಾಧ್ಯ. ಆದ್ದರಿಂದ ಸಾಮಾನ್ಯವಾಗಿ ಹೆಣ್ಣಿನಲ್ಲಿ ಹುಚ್ಚರೂ, ಪ್ರತಿಭಾವಂತರೂ, ಸಾಧುವಂತರೂ ಕಡಿಮೆಯೇ. ಅವರದು ಸಾಮಾನ್ಯವಾದ ಸರ್ವಮಾನ್ಯವಾದ ವಿವೇಕದ ವ್ಯಾವಹಾರಿಕ ವಿಚಾರದ ತಿಳುವಳಿಕೆಯ ಪಾತಳಿ.

ಆದರೆ ಹೀಗೆ ಹೆಣ್ಣಿಗೆ ಪ್ರತಿಭೆ ಇಲ್ಲವೆಂಬುದರಲ್ಲಿ ನಮ್ಮದೂ ಒಂದು ದೋಷವಿರಬಹುದು. ಪ್ರತಿಭೆಯೆಂಬುದರ ವ್ಯಾಖ್ಯೆ–ವ್ಯಾಪ್ತಿಗಳೇ ನಾವು ಸಂಕುಚಿತವಾಗಿ ಪುರುಷ ಪಕ್ಷಪಾತಿಯಾಗಿ ತಿಳಿದಿರಬಹದು. ರಾಜಕಾರಣದಲ್ಲಿ, ರಾಷ್ಟ್ರನಿರ್ಮಾಣದಲ್ಲಿ ರಸಪ್ರಪಂಚದ ಇಲ್ಲವೇ ಯುದ್ಧೋಪಕರಣಗಳ ಶೋಧನಿರ್ಮಾಣದಲ್ಲಿ ಹೇಗೊ ಹಾಗೆಯೇ ತಾಯ್ತನದಲ್ಲಿಯೂ ಅಷ್ಟೇ ಪ್ರತಿಭೆ ಇರುವದೆಂದು ಏಕೆ ಅನ್ನಬಾರದು? ಸವ್ಯಸಾಚಿತ್ರವೇ ಪ್ರತಿಭೆಯ ಒರೆಗಲ್ಲಾಗಬಾರದು. 'ಧೀಮಂತರಿಗೆ ಬಾರದ ವಿಷಯವೆಂಬುದಿಲ್ಲ' ಎಂದು ಕಣ್ವನ ನಿಮಿತ್ತವಾಗಿ ಕಾಲಿದಾಸನೆಂದಿದ್ದರೂ ಸರ್ವಾವಧಾನಿತನದಿಂದಲೇ ಪ್ರತಿಭೆಯ ನಿರ್ಣಯವಾಗಬಾರದು. ಎಲ್ಲ ಕೆಲಸಗಳನ್ನು ಒಂದೇ ಕೌಶಲ್ಯದಿಂದ ಮಾಡುವದಕ್ಕಿಂತಲೂ, ತನ್ನ ವಯಸ್ಸಿಗೂ, ಜಾತಿ (ಹೆಣ್ಣು ಗಂಡುತನ)ಗೂ ಉಚಿತವಾದ ಕಾರ್ಯ ಕರ್ತವ್ಯಗಳನ್ನು ಆದಷ್ಟು ಉತ್ತಮತೆಯಿಂದ ನೆರವೇರಿಸುವ ನೈಪುಣ್ಯವೇ ಪ್ರತಿಭೆಯ ದ್ಯೋತಕವಾಗಬೇಕು.

ನಮ್ಮ ಕಾಲದಲ್ಲಿ ಪ್ರತಿಭೆಯ ಹ್ರಾಸವಾಯಿತೇ?

ಈ ವಿಷಯದಲ್ಲಿ ನಮ್ಮದೊಂದು ಅನ್ಯಾಯವಾಗುತ್ತದೆ. ನಮ್ಮ ಕಾಲಮಾನದಲ್ಲಿ ಪ್ರತಿಭೆಯ ಹ್ರಾಸವಾಗಿದೆಯೆಂದು ನಾವು ವ್ಯರ್ಥವಾಗಿ

ತಿಳಿಯುತ್ತೇವೆ. ಕಲ್ಪನೆಯಲ್ಲಿ ರಮ್ಯವೆನಿಸುವ ಗತಿಸಿಹೋದ ಯುಗದ ಪ್ರತಿಭೆಯ ಮಾದರಿಗಳೇ ನಮಗೆ ಯುಕ್ತವೆನಿಸುತ್ತದೆ. ಇದು ಯೋಗ್ಯವಲ್ಲ. ಹಿಂದಕ್ಕೆ ಯಾವ ಕಾರ್ಯಕ್ಷೇತ್ರಗಳಲ್ಲಿ ಪ್ರತಿಭೆಯು ಅರಳಿ ಅಚ್ಚರಿಗಳಿಸಿತೋ ಅವೇ ಕ್ಷೇತ್ರಗಳಲ್ಲಿ ಅದೇ ಪ್ರತಿಭೆಯ ಪಡಿಯಚ್ಚನ್ನು ನಾವು ಬಯಸಿ ಬೇಸರಪಡಿಸುತ್ತೇವೆ. ಅಂದು ಸಾಹಿತ್ಯ–ಕಲೆಗಳಲ್ಲಿ ಉಜ್ವಲ ಕೃತಿಯಾಗಿ ಮೆರೆದಾಡಿದ ಮನಃಶಕ್ತಿಯೇ ಇಂದು ಉದ್ಯೋಗ ವಿಜ್ಞಾನದ ಜಟಿಲವ್ಯಾವಹಾರಿಕ ಪ್ರಪಂಚದಲ್ಲಿ ಹೆಚ್ಚು ಹೆಚ್ಚು ವಿಸ್ತಾರದಿಂದ ವ್ಯಯವಾಗುತ್ತಿರಬಹುದು. ನಮ್ಮ ಹೊಸ ಜ್ಞಾನ ಮತ್ತು ಭೌತಿಕ ಸಾಮರ್ಥ್ಯದಿಂದ ನಮ್ಮ ಸುತ್ತಲಿನ ಪ್ರಪಂಚವನ್ನೇ ಹೊಸದಾಗಿ ಪುನರ್ಘಟಿಸುವ ಪ್ರಚಂಡ ಸಾಹಸದಲ್ಲಿ ನಾವು ಬಂದು ತೊಡಗಿದ್ದೇವೆ. ಹಿಂದಿಗಿಂತ ಹೆಚ್ಚು ಪಟ್ಟು ಶೋಧಕರು, ಕಲ್ಪಕರು, ವಿಜ್ಞಾನಿಗಳು, ಅಂತರ್‌ರಾಷ್ಟ್ರೀಯ ವ್ಯವಹಾರದ ಜಾಗತಿಕ ಕಾರ್ಯನಿರ್ವಾಹದ ಸಂಸ್ಥೆಗಳ ಸಂಘಟಕರು, ಖಂಡಗಳನ್ನೇ ತಮ್ಮ ಅಖಂಡ ಪ್ರಭಾವದಲ್ಲಿ ತರುವ ಆರ್ಥಿಕ ವ್ಯವಹಾರದ ಧೂರ್ತ ಧನಿಕರು ಇಂದು ನಮ್ಮಲ್ಲಿ ಸಿಗುತ್ತಾರೆ. ಇದೇ ಸಮಯ ಪ್ರಚಂಡ ಕಾರ್ಯಯುಗದಲ್ಲಿ ಮತ್ತೆ ವಾಲ್ಮೀಕಿ, ಶೇಕ್ಸಪೀಯರ, ಪ್ಲೇಟೋ – ಶಂಕರಾಚಾರ್ಯ; ಇಲ್ಲವೇ ತ್ಯಾಗರಾಜ, ಬಿಂದೋವ್ಹೆನ್‌ರನ್ನು ಅಪೇಕ್ಷಿಸುವದೆಂದರೆ ಮಾನವನ ಮನಃಶಕ್ತಿಗೆ ಅನ್ಯಾಯವಾದೀತು!

ಇನ್ನೂ ಒಂದು ಮಾತು, ಪ್ರತಿಭೆಯು ಪ್ರಕಟವಾಗುವದು ಯಾವಾಗಲೂ ಸುಶಿಕ್ಷಿತರಾದ ಅಲ್ಪಸಂಖ್ಯರಲ್ಲಿಯೇ. ಗಂಡಿರಲಿ ಹೆಣ್ಣಿರಲಿ ಅವರವರ ಜನಸಂಖ್ಯೆಯಲ್ಲಿ ಶಿಕ್ಷಣ ಹೊಂದಿದ ವರ್ಗಗಳಲ್ಲಿಯೇ ಮಾತ್ರ ಪ್ರತಿಭಾವಂತರು ವ್ಯಕ್ತವಾಗುವರು. ಆದ್ದರಿಂದ ಹೆಣ್ಣು–ಗಂಡಿನಲ್ಲಿ ಪ್ರತಿಭೆಯ ಮಟ್ಟಿಗೆ ತುಲನೆ ಮಾಡುವ ಮೊದಲು ಇವೆರಡೂ ಜನರಲ್ಲಿ ಸುಶಿಕ್ಷಿತರ ಸಂಖ್ಯಾಬಲ ಸರಿ ಸಮಾನವಿರಲಿಕ್ಕೆಬೇಕು. ಗಂಡುಜನರಲ್ಲಿಯ ಪ್ರತಿಭಾಶಾಲಿಗಳೂ ಲಕ್ಷಗಟ್ಲೆ ಸುಶಿಕ್ಷಿತ ಹೆಣ್ಣಿನಿಂದ ಬಂದವರು. ಆದರೆ ಹೆಣ್ಣುಜನರಲ್ಲಿ ಪ್ರತಿಭಾವತಿಯರು ನೂರುಗಟ್ಲೆ ಸುಶಿಕ್ಷಿತೆಯರೊಳಗಿಂದ ಉದಿಸಿದವರು. ಈಗಿನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಹೆಣ್ಣು ಕಲಿತು ಮುಂದೆ ಬಂದರೆ ಆ ಪ್ರಮಾಣದಲ್ಲಿ ಅವರಲ್ಲಿಯ ಪ್ರತಿಭಾವತಿಯರ ಸಂಖ್ಯೆಯೂ ಬೆಳೆಯುವದು. ಗಂಡು ಹೆಣ್ಣುಗಳಲ್ಲಿ ಪ್ರತಿಭೆ ಯಾರಿಗೆ ಹೆಚ್ಚೆಂಬುದನ್ನು ಕೇಳುವ ಮೊದಲು ಅವರವರ ಜನಸಂಖ್ಯೆಯ ಮಾನಕ್ಕೆ ಬೀಳುವ ಪ್ರತಿಭಾಸಂಪನ್ನರ ಪ್ರಮಾಣವನ್ನು ತಿಳಕೊಳ್ಳಬೇಕು. ಯೋಗ್ಯ ಸಂಧಿ ಮತ್ತೂ ಶಿಕ್ಷಣವನ್ನು

ಒದಗಿಸಿದರೆ ಹೆಣ್ಣು ಜನವೂ ಸಾಕಷ್ಟು ಪ್ರತಿಭೆಯನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ–ಜ್ಞಾನ, ಕಾರ್ಯ, ಕಲೆಗಳ ಕ್ಷೇತ್ರದಲ್ಲಿ–ಗಂಡುಗಳಿಗೆ ಸರಿಸಾಟಿಯಾಗಿ ಕಾಣಿಸಬಹುದು. ಈಗಲೇ ಈ ವಿಷಯದಲ್ಲಿ ಗಂಡಿಗೇ ಅನುಕೂಲವಾಗಿ ತೀರ್ಪು ಕೊಡುವದು ತೀರ ತಪ್ಪು!

ಹೆಣ್ಣು ಅರಸಿಕಳೆ?

ಆದರೆ ಒಂದು ಸಂಗತಿ ನಿಜ. ಕಲಾನಿರ್ಮಿತಿಗೆ ಅವಶ್ಯವಾದ ಅತ್ಯಂತಿಕ ಶಾರೀರಿಕ ಚೈತನ್ಯ ದೀರ್ಘಕಾಲದ ಏಕಾಗ್ರಪರಿಶ್ರಮದ ಶಕ್ತಿ–ಹೆಣ್ಣಿನಲ್ಲಿ ಇರುವದು ವಿರಳ. ಇದಲ್ಲದೆ ಸೌಂದರ್ಯ ದೃಷ್ಟಿಯೂ ಗಂಡಿಗಿಂತ ಹೆಣ್ಣಿಗೆ ಮಂದವೆನ್ನಬೇಕು. ಈ ಮಾತಿಗೆ ಗಾಬರಿಯಾಗಬೇಕಿಲ್ಲ. ಸೌಂದರ್ಯ ವಿಮರ್ಶೆ ಗಂಡುಕಣ್ಣಿನ ಪ್ರಪಂಚ. ಒಂದು ಬಗೆಯ ಆಧ್ಯಾತ್ಮಿಕ ಉನ್ಮಾದವನ್ನು ಕೆರಳಿಸಿ ಕಲಾಕೃತಿಯನ್ನು ಕಲ್ಪಿಸುವ ಸೌಂದರ್ಯ ಸಮಾಧಿಯಲ್ಲಿ ತನ್ಮಯವಾಗುವ ರಸಮಯತೆ ಹೆಣ್ಣಿನಲ್ಲಿ ಗಂಡಿನಲ್ಲಿರುವಷ್ಟು ತೀವ್ರವಿರುವುದಿಲ್ಲ. ಗಂಡು ಕೇವಲ ರಸಾನಂದದ ಅನುಭೂತಿಗಾಗಿಯೇ ಸೌಂದರ್ಯದ ಸಾಧನೆ ಮಾಡುವನು. ಆದರೆ ಹೆಣ್ಣಿಗೆ ಸೌಂದರ್ಯ ಒಂದು ಸಾಧನ ಸಾಧ್ಯವಲ್ಲ. ಗಂಡಿನ ಹೃದಯವನ್ನು ವಶಪಡಿಸಿಕೊಳ್ಳಲು ಹೆಣ್ಣಿಗೆ ಸೌಂದರ್ಯ ಒಂದು ಸಾಮರ್ಥ್ಯ. 'ಶಿವನನ್ನು ಒಲಿಸಿಕೊಳ್ಳಲು ಅಸಮರ್ಥಳಾದ ಸತಿಯು ತನ್ನ ರೂಪವನ್ನು ಮನವಾರೆ ಹಳಿದುಕೊಂಡಳು. ಏಕಂದರೆ ಪ್ರಿಯೆಯಾಗುವವಳಿಗೆ ಸೌಭಾಗ್ಯದ ಫಲ ಕೊಡುವದೇ ಸೌಂದರ್ಯದ ಧರ್ಮ' ಎಂದು ಕಾಲಿದಾಸನು ಕುಮಾರಸಂಭವದಲ್ಲಿ ಉದ್ಗರಿಸುತ್ತಾನೆ. (ಕೂಪಂ ಹೃದಯೇನ ಪಾರ್ವತಿ! ಪ್ರಿಯಾಸು ಸೌಭಾಗ್ಯಫಲಾ ಹಿಚಾರತಾ॥) ಅಂದರೆ ಸೌಂದರ್ಯದ ಸಂವೇದನೆಯ ಮಟ್ಟಿಗೆ – ಅಷ್ಟೇಕೆ ಎಲ್ಲ ಶೃಂಗಾರ ಸಂವೇದನೆಯ ಮಟ್ಟಿಗೂ ಹೆಣ್ಣಿನ ಹೃದಯ ಗಂಡಿಗಿಂತಲೂ ಮಂದವಾಗಿ ಉತ್ತೇಜನ ಪಡೆಯುವಂತದ್ದು. ಸೌಂದರ್ಯಕ್ಕಿಂತ ಸಾಮರ್ಥ್ಯವನ್ನೇ ಹೆಚ್ಚಾಗಿ ಹೆಣ್ಣು ಗಂಡಿನಲ್ಲಿ ಬಯಸುತ್ತಾಳೆ. ಸುಕುಮಾರ ಸುಂದರನಾದ ಕಾಮಿಯೂ ಕೂಡ ಹಲವೊಮ್ಮೆ ತಾನು ಆರಾಧಿಸುವ ಹೆಣ್ಣು ತನ್ನಂಥ ಸದ್ದುಮುದ್ದಾದ ಕಾಮದೇವನನ್ನು ಬಿಟ್ಟು ತೀರ ಅಸಡ್ಡಾಳವಾಗಿ ಕಾಣುವ ಕಾಮರೇಡನನ್ನೋ ಕ್ಲೀನರನ್ನೋ ಮೆಚ್ಚಿದ್ದನ್ನು ಕಂಡು ಹೌಹಾರುವದುಂಟು! ನಿಸರ್ಗವೇ ಹೆಣ್ಣನ್ನು ಸಂರಕ್ಷಣೆಗಾಗಿ ಸಾಮರ್ಥ್ಯ ಪೂಜಕಳನ್ನಾಗಿ ಮಾಡಿದೆ. ಆದ್ದರಿಂದ ಸೌಂದರ್ಯಪ್ರೇಮ ಹೆಣ್ಣಿಗೆ ಸಹಜವಲ್ಲ.

ಆದರೆ ಗಂಡು ಸಹಜವಾಗಿಯೇ ಸೌಂದರ್ಯಪ್ರಿಯನು, ರೂಪ ರಸಿಕನು. ಒಲವಿಗಿಂತಲೂ ಚಲುವನ್ನೇ ಅರಸುವಾತನು. ಇದಕ್ಕೆ ಕಾರಣ ಚೆಲುವು ಬರೇ ಆನಂದದ ಆಶ್ವಾಸನವೀಯುತ್ತದೆಂದಲ್ಲ, ಚೆಲುವು ತನು ಮನ ತುಂಬಿತುಳುಕುವ ಆರೋಗ್ಯ ಸ್ವಾಸ್ಥ್ಯದ ಚಿತ್ರವು; ಶರೀರ ಸಂಪತ್ತಿನ ಸುವರ್ಣಮುದ್ರೆಯು! ಇದಲ್ಲದೆ ಹೆಣ್ಣು ವಶಪಡಿಸಿಕೊಳ್ಳುವದಕ್ಕಿಂತಲೂ ವಶವಾಗುವದನ್ನು ಬಯಸುವಳು. ಆಕ್ರಮಣಕ್ಕಿಂತಲೂ ಆತ್ಮೀಯತೆಯ ಆಕರ್ಷಣ ಉಳ್ಳವಳು. ಆದ್ದರಿಂದ ಕಲಾತ್ಮತೆಯ ಜೀವಾಳವಾದ ರಸಲೋಲುಪತೆಯನ್ನು ಹೆಣ್ಣು ಕಳಕೊಳ್ಳುವಳು. ಇದರ ಪರಿಣಾಮವೆಂದರೆ ಕಲಾಕೃತಿಯನ್ನು ತಾನೇ ರಚಿಸುವದಕ್ಕಿಂತ ಗಂಡು ರಚಿಸುವಂತೆ-ಅದೂ ತನ್ನ ಕುರಿತು ರಚಿಸುವಂತೆ! – ಆಕೆ ಪ್ರೇರಣಿಸುವಳು.

ಯಾರಿಗೆ ಗೊತ್ತು? ಗಂಡಿಗೆ ಹೆಣ್ಣು ಚಲುವೆಯಾಗಿ ಕಾಣುವಂತೆ ಹೆಣ್ಣಿಗೆ ಗಂಡು ಅಹಂಕಾರಿಯೂ ಅಸಡ್ಡಾಳನೂ ಆದ ಗಂಡು-ಅಷ್ಟೊಂದು ಚೆಲುವಾಗಿ ಕಲಾಕೃತಿಗೆ ಸ್ಫೂರ್ತಿ ಕೊಡುವಷ್ಟು ಚೆಲುವಾಗಿ ತೋರುವದಿಲ್ಲವೇನೋ! ಇದಲ್ಲದೆ, ಇನ್ನೊಂದು ಪ್ರಶ್ನೆ. ಹೆಣ್ಣು ತಾನೇ ಚೆಲುವಿನ ತೆನೆಯಾಗಿರುವಾಗ ಕಲೆಯಲ್ಲಿ ಹೊಸದೊಂದು ನಿರ್ಜೀವ ಚೆಲುವನ್ನು ಏಕೆ ಹುಡುಕಬೇಕು? ಸಜೀವ ಸೌಂದರ್ಯವು ಯಾವದೇ ಅತ್ಯುತ್ತಮ ಶಿಲ್ಪ ಸೌಂದರ್ಯಕ್ಕಿಂತ ಎಂದಿಗೂ ಶ್ರೇಷ್ಠವು. ಅಷ್ಟೇ ಏಕೆ? ಸೌಂದರ್ಯವು ಬುದ್ಧಿಗಿಂತಲೂ ಕೂಡ ಹೆಚ್ಚು ಉದಾತ್ತವಾಗಿದೆ, ಭವ್ಯ ದಿವ್ಯವಾಗಿದೆ, ಸಜೀವ ಸೌಂದರ್ಯವು ಹೀಗೆ ಕಲೆಗಿಂತಲೂ ಜ್ಞಾನಕ್ಕಿಂತಲೂ ಶ್ರೇಷ್ಠವೇಕೆಂದರೆ ಅದು ಕಲೆಗೆ ಪ್ರೇರಣೆಯಾಗಿದೆ. ಜ್ಞಾನಕ್ಕೆ ಪ್ರಯೋಜನೆಯಾಗಿದೆ. ಸತ್ಯವನ್ನು ಸುಂದರವಾಗಿ ಮಾರ್ಪಡಿಸುವದೇ ಶಿವವಾದ ಶುಭವಾದ ಕೆಲಸ. ಜೀವನವು ಸುಂದರವಾಗಿದ್ದಾದರೆ ಅದು ಬೇರೆ ಬುದ್ಧಿವಂತವಾಗಬೇಕಿಲ್ಲ; ಆದರೆ ಅದು ಬುದ್ಧಿವಂತವೇ ಆಗಿದ್ದರೆ ಸುಂದರವಾಗಲು ಯತ್ನಿಸುತ್ತದೆ! ಗಂಡಿನಲ್ಲಿ ಇದು ಯತ್ನ. ಹೆಣ್ಣಿನಲ್ಲಿ ಇದು ಯಶ!

ಈ ಸ್ವಭಾವ ಭೇದವು ಶಾಶ್ವತವೇ?

ಇನ್ನು ಕೊನೆಯದೊಂದು ಪ್ರಶ್ನೆ ಉಳಿಯಿತು. ಹೆಣ್ಣು ಗಂಡಿನ ಈ ಮನೋಧರ್ಮದ ವ್ಯತ್ಯಾಸ ಮೂಲಭೂತವೇ? ಅಪರಿಹಾರ್ಯವೇ? ಈ ವ್ಯತ್ಯಾಸಗಳು ಕೇವಲ ಆನುವಂಶಿಕವಾಗಿಯೇ ಅಥವಾ ಆರ್ಜಿತವಾದವೆ? ಈ ಪ್ರಶ್ನೆಗೆ ಒಮ್ಮೆಲೇ ಒಂದೇ ಉತ್ತರ ಸಾಧ್ಯವಿಲ್ಲ. ಆದರೂ ಇಷ್ಟೊಂದು

ಹೇಳಬಹುದು. ಈ ವ್ಯತ್ಯಾಸಗಳೆಲ್ಲ ಹೆಣ್ಣು ಗಂಡಿನ ಮೂಲ ಪ್ರವೃತ್ತಿಗಳ ಶಾರೀರಿಕ ರಚನೆಯ ಹಾಗೂ ದೇಹ ಧರ್ಮಗಳ ಹುಚ್ಚುಚಟಗಳೊಡನೆ ಕೂಡಿ ಬಂದಿವೆಯಾದರೂ ಅವು ಬಹುಭಾಗ ಸಾಮಾಜಿಕ ಸಂಸ್ಕಾರದ ಫಲವಾಗಿ ಬಂದು ವೈಯುಕ್ತಿಕವಾಗಿ ಸಂಪಾದಿಸಲ್ಪಟ್ಟಿರುವವು. ಕೆಲವೊಂದು ಕಾಲಖಂಡದಲ್ಲಿ ಕೆಲವೊಂದು ಭೂಖಂಡದಲ್ಲಿ ಗಂಡು ಸಾವಿರಾರು ಬಗೆಯ ಪಾರಿವಾರಿಕ ಪರಿಸ್ಥಿತಿಗಳ ಪ್ರಭಾವಗಳನ್ನು ಬೀರಿ ತನ್ನ ಉಪಯೋಗ ಉಪಭೋಗಗಳಿಗಾಗಿ ಕೆಲವೊಂದು ಆದರ್ಶಗಳನ್ನು ಹೆಣ್ಣು ಜೀವನದ ಮೇಲೆ ಹೇರಿ ಬಂದುದರ ಪರಿಪಾಕವಾಗಿಯೇ ಹೆಣ್ಣು ಗಂಡಿನ ಮೂಲದ ವ್ಯತ್ಯಾಸವು ಜಟಿಲ ಕುಟಿಲ ವೈಷಮ್ಯಗಳ ವಿಕೃತ ರೂಪ ತಾಳಿದೆ. ಗಂಡಿಗೆ ವ್ಯಕ್ತಿತ್ವದ ವಿಕಾಸಕ್ಕೆ ವಿಚಾರದ ಸ್ವಾತಂತ್ರ್ಯಕ್ಕೆ ವ್ಯವಹಾರದ ಸರ್ವತಂತ್ರಕ್ಕೆ ಆಸ್ಪದವಿದೆ. ಆದರೆ ಹೆಣ್ಣಿಗೆ ಶತಮಾನಗಳಿಂದಲೂ ವಿಧೇಯತೆ, ವಿನಯ, ಬರೇ ವನಪು ವೈಯಾರ್ಯಗಳನ್ನೇ ಕಲಿಸಲಾಗಿದೆ. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬುದು ಕೇವಲ ಮನುವಿನದೇ ಅಲ್ಲ, ಎಲ್ಲ ಮಾನವಸಮಾಜದ ಶಾಸನವಾಗಿ ಬಂದಿದೆ.

ಆದರೆ ಈ ವಿಷಮ ಸ್ಥಿತಿಯು ಪಲ್ಲಟಿಸಿದಲ್ಲ. ಗಂಡು ಹೆಣ್ಣಿನಲ್ಲಿಯ ವೈಷಮ್ಯ ತಾರತಮ್ಯಗಳು ಇಲ್ಲವಾಗುತ್ತಲಿವೆ. ಔದ್ಯೋಗಿಕರಣದ ಆಧುನಿಕ ಸಮಯದಲ್ಲಿ ಸಾಮಾಜಿಕ ಸಮಾನತೆಯ ಅಧಿಕಾರಯುಗದಲ್ಲಿ ಹೆಣ್ಣು ಗಂಡಿನೊಡನೆ ನಿಜವಾಗಿಯೂ ಸಹಚಾರಿಣಿಯಾಗುತ್ತಿದ್ದಾಳೆ. ಯಂತ್ರಸೌಕರ್ಯಗಳು ಶಾರೀರಿಕ ಶ್ರಮವನ್ನು ಸಾಮಾಜಿಕ ಸಹಕಾರ ಸಂಘಟನೆಗಳು ವೈಯುಕ್ತಿಕ ವರ್ಚಸ್ಸನ್ನು ಕಡಿಮೆ ಮಾಡಹತ್ತಿದಂತೆ, ಕಾಯಿದೆ, ವೈದ್ಯಕ, ಶಿಕ್ಷಣ, ಶಾಸನ, ಉದ್ಯೋಗ, ಅಷ್ಟೇ ಏಕೆ ಸೈನಿಕ ನಾವಿಕ ವೈಮಾನಿಕ ಕ್ಷೇತ್ರಗಳಲ್ಲಿ ಕೂಡ ಲಿಂಗಭೇದದಿಂದ ಬಂದ ಮಾನಸಿಕ ನೈತಿಕ ತಾರತಮ್ಯಗಳು ಕಾಣದಾಗುತ್ತವೆ ಮತ್ತು ಅಂಥ ವ್ಯತ್ಯಾಸಗಳು ಒಂದು ಪಾಲು ಪ್ರಕೃತಿ ಮೂರು ಪಾಲು ಸಂಸ್ಕೃತಿಯಿಂದಾಗಿದ್ದ ಮೂಲಕ ಉತ್ತರೋತ್ತರ ಹೊಸ ಸಮಾಜರಚನೆಯಲ್ಲಿ ಗಂಡು ಹೆಣ್ಣಿನ ಗುಣಶೀಲಗಳಲ್ಲಿ ಸಮಾನತೆಯು ಬರುವದು.

ಇಂದಿಗೆ ಗಂಡಿಗೆ ಸರಿಸಾಟಿಯಾಗುವವರಲ್ಲಿ ಹೆಣ್ಣು ಸಾಧಿಸಿದ ಪ್ರಗತಿ ನೋಡಿದರೆ ನೀತಿ ಬಲ್ಲವರು ಗಾಬರಿಯಾಗುವಂತಿದೆ. ಅಬಲ-ಕೋಮಲಳಾದ ಹೆಣ್ಣಿನ ಗಡಸು ಗಂಡಸುತನ ಗಂಡಿಗೂ ನಾಚಿಸುವಂತಿದೆ-ಎಂದು ಸಮಾಜದ ಧುರೀಣರು ಬೊಟ್ಟು ಕಚ್ಚಿಕೊಳ್ಳುವಂತಿದೆ. ಹೀಗೆ ಔದ್ಯೋಗಿಕ ಆಧುನಿಕ

ಜೀವನದಲ್ಲಿ ಹೆಣ್ಣು ಗಂಡನ್ನು ಪೂರ್ಣವಾಗಿ ಅನುಕರಿಸಿದರೆ, ಆಕೆಯ ಮಾನಸಿಕ ಮತ್ತೂ ನೈತಿಕ ಲಕ್ಷಣಗಳೆಲ್ಲ ಗಂಡಿನಂತಾಗಿಬಿಡಬಹುದು. ಅದರಿಂದ ಜೀವನದ ಅರ್ಥ ಮಾಧುರ್ಯವೇ ಲೋಪವಾಗಬಹುದು. ಆದರೆ ಹೆಣ್ಣು ಇಂಥ ಹೆಡ್ಡತನ ಮಾಡಲಿಕ್ಕಿಲ್ಲ. ಇಂದಿನ ಅನುಕರಣದ ಅವಸ್ಥೆ ಮುಗಿದೀತು. ಅನುಕರಣ ಒಂದು ಬಗೆಯ-ಕನಿಷ್ಟ ಬಗೆಯ-ಸ್ತುತಿ; ಕನಿಷ್ಠರು ಶ್ರೇಷ್ಠರಿಗೆ ಮಾಡಿ ತೋರಿಸುವ ಸ್ತುತಿ! ಗಂಡು ತನ್ನಿಂದ ಇಂಥ ಸ್ತುತಿಯನ್ನು ಪಡೆಯಲು ಪಾತ್ರನಲ್ಲವೆಂದೇ ಹೆಣ್ಣು ಬೇಗನೆ ಮನಗಾಣಬಹುದು! ಬರೇ ಬೌದ್ಧಿಕತೆಯೆಂದರೆ ಬುದ್ಧಿವಂತಿಕೆಯಲ್ಲವೆಂದು ಆಕೆ ಬುದ್ಧಿಕಲಿಯಬಹುದು.

ಸುಖದ ಸೂತ್ರ

ಸುಖವು ಸೌಂದರ್ಯದಂತೆ, ಪೂರ್ಣತೆಯಂತೆ ನಮ್ಮ ನಮ್ಮ ಸಹಜ ವ್ಯಕ್ತಿತ್ವವನ್ನು ಪೂರ್ತಿಯಾಗಿ ವಿಕಾಸ ಮಾಡಿಕೊಳ್ಳುವದರಲ್ಲಿಯೇ ಇದೆ. ತನ್ನ ಮನೋಧರ್ಮಕ್ಕೆ ಪ್ರಕೃತಿಗೆ ವಿರೋಧಿಯಾದ ಬಾಳಿನಿಂದ ಶಾಂತಿಸಿಗದು ಮತ್ತು ಅಶಾಂತಿಗೆ ಸುಖವೆಲ್ಲಿಯದು? ಆದ್ದರಿಂದ ಛಲಕ್ಕೆ ಬಿದ್ದು ಅಪೂರ್ಣ ಗಂಡ ಸಾಗುವದಕ್ಕಿಂತ ತನ್ನ ಬಲದಿಂದ ಪರಿಪೂರ್ಣ ಹೆಂಗಸಾಗುವದೇ ಶ್ರೇಯಸ್ಕರವೆಂದು ಹೆಣ್ಣು ತಿಳಿಯಬಹುದು. ಹೊಸ ಸ್ವಾತಂತ್ರ್ಯದೊಂದಿಗೆ ಹೆಣ್ಣಿನ ಇದುರಿಗೆ ಹೊಸ ಸಮಸ್ಯೆಗಳು ಬಂದಿವೆ. ಇವು ಅವರ ಹಳೇ ದಾಸ್ಯದ ತೊಡಕುಗಳಿಗಿಂತ ಹೆಚ್ಚಿನ ಜಿಡುಕಿನವು, ತೊಡಕಿನವು. ಆದರೆ ಇವುಗಳ ಬಗೆಹರಿಕೆಯಲ್ಲಿ ಗಂಡಿನ ಸಹಾಯ ಬಯಸುವದು ಸರಿಯಲ್ಲ. ಹೊಸ ಕಾಲದ ಹೆಣ್ಣಿನ ಬಾಳನ್ನು ಕದಡಿ ಗಾಬರಿಗೊಳಿಸುವ ಘಾಸಿಗೊಳಿಸುವ ಸ್ಥಿತ್ಯಂತರಗಳನ್ನೆಲ್ಲ ಕೇವಲ ಸಹಾನುಭೂತಿಯಿಂದ ಅರಿತು ನೆರವಾಗುವಷ್ಟು ಜಿನುಗಾದ ಜಾಣ್ಮೆ ಗಂಡಿನ ಯಾಂತ್ರಿಕ ಮತ್ತೂ ಸ್ಥೂಲ ಬುದ್ಧಿಯಲ್ಲಿ ಇರುವದಿಲ್ಲ. ಹೊಸ ಬಿಡುಗಡೆಯನ್ನು ಗಳಿಸಿಕೊಂಡ ಹೆಣ್ಣು ತನ್ನದಾದ ಹೊಸ ತಿಳುವಳಿಕೆಯಿಂದಲೇ-ತಪ್ಪಿ ತಿದ್ದಿ ತಿಳಿಯಾದ ತಿಳುವಳಿಕೆಯಿಂದಲೇ – ಈ ಹದಗೆಡಬಹುದಾದ ಹೊಸ ಪರಿಸ್ಥಿತಿಯ ಕಂಗೆಡಿಸುವ ಕೂಟ ಪ್ರಶ್ನೆಯನ್ನು ಬಿಡಿಸಿಕೊಳ್ಳಬೇಕು. ಹೆಚ್ಚಾಗಿ ಅವಳು ಈ ಬಿಡುಗಡೆಯನ್ನು ಪಡೆಯುವಳು. ನಿಸರ್ಗದಿಂದ ಜಾಣ್ಮೆಯನ್ನೂ ನಿಯತಿಯಿಂದ ತಾಳ್ಮೆಯನ್ನು ಪಡೆದು ಬಂದ ಹೆಣ್ಣು ಯಾವ ಶಕ್ತಿಯಿಂದ ಸ್ವಾತಂತ್ರ್ಯವನ್ನು ಸಾಧಿಸಿಕೊಂಡಳೋ ಅದೇ ಶಕ್ತಿಯಿಂದಲೇ ತನ್ನ ಸ್ವಾತಂತ್ರ್ಯವು ತಂದೊಡ್ಡಿದ ಸಮಸ್ಯೆಗಳನ್ನೂ ಸಾವಧಳಾಗಿ ಬಗೆಹರಿಸಿಕೊಳ್ಳದೇ ಇರಲಾರಳು.

ಇದುವರೆಗೆ ಹೆಣ್ಣು ಕಮಲ; ಗಂಡು ಭ್ರಮರವಾಗಿ ಜೀವನ ಸಾಗಿತು. ಇದರಿಂದ ಗಂಡಿಗೆ ಜೇನೆಲ್ಲ ಸಿಕ್ಕರೂ ಹೆಣ್ಣಿನ ಪಾಲಿಗೆ ಕದಡಿದ ಕೆಸರೇ ಉಳಿಯಿತು. ಇದರಿಂದ ಬಾಳಿನ ಕೊಳದಲ್ಲಿ ಕೊಳೆ ತುಂಬಿತು. ಇನ್ನೂ ಮುಂದೆ ಪ್ರೇಮ ಮತ್ತು ಜ್ಞಾನದಿಂದ ಪ್ರೇರಿತವಾದ ಹೊಸ ಬದುಕಿನಲ್ಲಿ ಹೆಣ್ಣೊಂದು ಮೃಣಾಲವಾದರೆ ಗಂಡೊಂದು ಮರಾಳವಾಗಿ ಸಂಸಾರದ ಸರೋವರದ ಸಿರಿಯನ್ನೂ ಸೊಬಗನ್ನೂ ಹೆಚ್ಚಿಸುವದು. ಕಮಲವೂ ಸ್ವತಂತ್ರ; ಹಂಸವೂ ಸ್ವತಂತ್ರ, ಅವರೀರ್ವರ ಸ್ವಚ್ಛಂದ ಆನಂದದಲ್ಲಿ ಯಾವ ಸ್ಪರ್ಧೆಯೂ ಇಲ್ಲ! ಈ ಕಮಲಹಂಸದ ನಿಸ್ಪೃಹವಾದರೂ ನಿಕಟ ಸಾಹಚರ್ಯದ ಚಿತ್ರವೇ ಗಂಡು-ಹೆಣ್ಣಿನ ಹೊಸ ಭಾಗ್ಯದ ಪ್ರತೀಕವೆನ್ನಬಹುದು.

ಸಂಸಾರದ ರಥಕ್ಕೆ ಹೆಣ್ಣು ಗಂಡು ಎರಡು ಚಕ್ರಗಳೆಂಬ ಹೇಳಿಕೆಯ ಮಾತು ಹಳೆಯದಾಯಿತು. ಚಕ್ರಗಳು ಸಮಾನವಿದ್ದರೂ ಸಮಾಂತರವಾಗಿ ಸಾಗುತ್ತವೆ. ಹೊಸ ಕಾಲದ ಹೆಣ್ಣು ಗಂಡಿನ ಸ್ಥಾನಮಾನ ಇಗ್ಗಾಲಿಯ (ಬಾಯಸಿಕಲ್) ಚಕ್ರಗಳಂತೆ ಗಂಡು ಮುಂದೆ ಹೆಣ್ಣು ಹಿಂದೆ-ಹೀಗಿದ್ದರೂ ಮುಂದರಿಯುವ ಗತಿ ಮತ್ತು ವೇಗವೆಲ್ಲ ಹಿಂದಿನ ಗಾಡಿಯಿಂದಲೇ ಬರುವದು. ದಿಶೆಯನ್ನು ಕಾಯ್ದು ದಾರಿ ಕಾಣಿಸುವದು ಮುಂದಿನ ಕಾರ್ಯ. ಪ್ರಗತಿಗೆ ಎರಡೂ ಅತ್ಯವಶ್ಯ, ಪರಸ್ಪರ ಪೂರಕ. ಇನ್ನು ಒಂದು ಹೋಲಿಕೆ, ಹೆಣ್ಣು ಎಡ ಗಂಡು ಬಲ ಅನ್ನುವದುಂಟು. ಬಲಗೈಯ ಬಲಕ್ಕೆ ಅವಶ್ಯವಾದ ರಕ್ತ ಎಡಗೈಯ ಧಮನಿಯೊಳಗಿಂದಲೇ ಪುಟಿದು ಹರಿಯುತ್ತದಲ್ಲವೇ? ಬಾಳೆಂಬ ಬಂಟನಿಗೆ ಗಂಡು ತ್ರಾಣವಾದರೆ ಹೆಣ್ಣು ಪ್ರಾಣ!

❖❖❖

ಪ್ರೀತಿ

ಪ್ರೀತಿ

ಕವಿಯ ಎಚ್ಚರಿಕೆ

ಒಲವೆಂಬ ಹೊತ್ತಗೆಯ ಓದಬಯಸುವ ನೀನು
ಬೆಲೆ ಎಷ್ಟು ಎಂದು ಕೇಳುವಿಯೊ ಹುಚ್ಚ!
ಹಗಲಿರುಳು ದುಡಿದರೂ ಹಲಜನುಮ ಕಳೆದರೂ
ನೀ ತೆತ್ತಲಾರೆ ಬರಿ ಅಂಚೆ ವೆಚ್ಚ !

ನಮ್ಮ ಕನ್ನಡದ ವರಕವಿ **ಅಂಬಿಕಾತನಯ ದತ್ತರು** ಪ್ರೀತಿಯ ಪುಸ್ತಕವನ್ನು ಓದಲು ಬಯಸುವ ಹುಚ್ಚರಿಗಾಗಿ ತೆಗೆದ ಎಚ್ಚರಿಕೆಯ ಉದ್ಗಾರವಿದು! ಈ ಪುಸ್ತಕವನ್ನು ಅರ್ಥಮಾಡಿ ಅರಗಿಸಿಕೊಳ್ಳುವದಿರಲಿ, ಅದನ್ನು ಓದಲು ಪಡಕೊಳ್ಳುವದೂ ಒಂದು ಭಾಗ್ಯ. ಆ ಭಾಗ್ಯಕ್ಕಾಗಿಯೂ ಕೂಡ ಮನುಷ್ಯನು ಆದಷ್ಟು ತಪಿಸಬೇಕೆಂಬುದನ್ನು ಕವಿತಿಲಕರು ಮಿಂಚಿನಲ್ಲಿ ಮೂಡಿಸಿದಂಥ ನಾಲ್ಕು ಮಾತುಗಳಲ್ಲಿ ನಮ್ಮ ಕಣ್ಣುಕಟ್ಟುವಂತೆ ಬಣ್ಣಿಸಿದ್ದಾರೆ. ಅಂಚೆವೆಚ್ಚಕ್ಕೇ ಜನ್ಮಾಂತರಗಳ ಪರಿಶ್ರಮ ಬೇಕೆಂದಮೇಲೆ ಈ ಪುಸ್ತಕವೂ ಅದರ ವಿಷಯವಾದ ಪ್ರೀತಿಯೂ ಎಷ್ಟು ಅಮೂಲ್ಯವೆಂಬುದನ್ನು ಮತ್ತೆ ಹೇಳಬೇಕೇ?

ಅಂಚೆವೆಚ್ಚದ ತಲೆಭಾರದ ಈ ಮಾತಿನಲ್ಲಿ ಇನ್ನೂ ಒಂದು ಸ್ವಾರಸ್ಯವಿದೆ. ಪುಸ್ತಕವನ್ನು ಕಳುಹಿಸುವವರು ಅದರ ಅಂಚೆಯ ವೆಚ್ಚವನ್ನು ಗ್ರಾಹಕರಿಂದಲೇ ಕೊಳ್ಳುವರು. ಪ್ರೀತಿಯ ಬರಹವೆಲ್ಲವೂ ಒಂದು ರೀತಿ ಹಾಗೆಯೇ. ಅಂಚೆಕಟ್ಟೆಯ

ಕಟ್ಟುನಿಟ್ಟುಗಳ ಪರಿವೆಯಿಲ್ಲದೆ ಪ್ರೀತಿಯ ಪತ್ರಗಳನ್ನು ಪುಟಗಟ್ಲೆ ಬರೆಯುವ ಉದ್ದಾಮ ಪ್ರೇಮವೀರರು ಎಷ್ಟಿಲ್ಲ ! ಇಂಥವರ ಪ್ರೀತಿಯ ಹೊತ್ತಿಗೆಯಲ್ಲಿ ನಾಟ–ಪೇಡ್ (ತೆರ–ಹೊತ್ತ) ಅಂಚೆಯೇ ಅಲ್ಲವೇ? ಅರ್ಥವು ವಾಚ್ಯವಿರಲಿ ಸೂಚ್ಯವಿರಲಿ; ಪ್ರೀತಿಯು ನಾಟಪೇಡ್ ಪತ್ರದಂತೆಯೇ ಸರಿ ! ಗಳಿಕೆ ಇಲ್ಲದ ನಿರುದ್ಯೋಗಿಗಳಿಗೇ ಪ್ರೇಮ ಪತ್ರಗಳನ್ನು ಬರೆಯುವ ಅವಕಾಶವೂ ಆವೇಶವೂ ಹೆಚ್ಚು ! ಹಾಗೆಯೇ ಬರೆದ ಪತ್ರಗಳ ಅಂಚೆವೆಚ್ಚ ಹೊರುವ ಬಲವೂ ಕಡಿಮೆ! ತನ್ನ ಪ್ರೀತಿಯ ಸಂದೇಶವನ್ನು ಹಾಯುವ ಮುಗಿಲಿನಲ್ಲಿ ಗಾಳಿಗೆ ತೂರಿಬಿಡುವ ಕೆಲಸಗೇಡಿಯಾದ ಯಕ್ಷನು ಜಗತ್ತಿನ ಇಂಥ ಎಲ್ಲ ಪ್ರಣಯ 'ಪತ್ರಿಕೋದ್ಯಮಿ' ಗಳಿಗಾದಿಪುರುಷನು ! ಅಂದಿನಿಂದಲೂ ಪ್ರೀತಿಯ ಸಂದೇಶವೆಲ್ಲ ತೆರಲಾರದ ಅಂಚೆವೆಚ್ಚದ ಭಾರವನ್ನು ಹೊತ್ತುಕೊಂಡೇ ಪ್ರಿಯ ಜನರ ಬಳಿಗೆ ಸಾರುವಂತಿದೆ. ಈ ವಿವಶತೆಯಲ್ಲಿಯೂ ಒಂದು ವಿಶೇಷತೆ ಇದೆ. ತನ್ನ ಪ್ರೀತಿಗಾಗಿ ಪ್ರಿಯತಮನೋ–ತಮೆಯೋ ಮಾಡುವ ಪ್ರತೀಕ್ಷೆಯು ಎಷ್ಟು ಆತುರದ್ದೆಂಬುದರ ಪರೀಕ್ಷೆಗೆ ನಾಟಪೇಡ್ ಪತ್ರಕ್ಕಿಂತ ಹೆಚ್ಚು ದಿವ್ಯವಾದ ಉಪಾಯವು ಮತ್ತಾವದು? ತನ್ನ ಪ್ರೀತಿಸಂದೇಶದ ಅಂಚೆವೆಚ್ಚವನ್ನು ಪ್ರಿಯ ಜನವು ತೆರುವಷ್ಟು ತತ್ಪರತೆ ತೋರಿಸುವದೋ ಇಲ್ಲವೋ ಎಂಬುವದರಿಂದಲೇ ಅವರ ಪ್ರೀತಿಯ ತಾತ್ಪರ್ಯವು ತನ್ನಾರೆ ತಿಳಿಯುವದಲ್ಲವೇ ?

ಇರಲಿ ಇದಾಯಿತು ನಗೆಯ ಮಾತು. (ಮಾತಿಗೆ ನಗಲೇ ಬೇಕಾಗಿಲ್ಲ ಮತ್ತೆ!). ಸೂಕ್ಷ್ಮ ಸೂಚ್ಯ ಅರ್ಥದಿಂದಲೂ ಪ್ರೀತಿಯು ನಾಟಪೇಡ್ ಟಪಾಲಿನಂತೆಯೇ ಪ್ರೀತಿಸುವದು–ಯಾವ ಪ್ರತಿಫಲ ಪ್ರತ್ಯಾಶೆಯ ಲೆಕ್ಕ ಹಾಕದೆ ಪ್ರತೀಕಾರ ಪ್ರತಿಬಂಧವನ್ನೂ ಲೆಕ್ಕಿಸದೇ ಪ್ರೀತಿಸುವದು ಮಾತ್ರ ವ್ಯಕ್ತಿಯ ವಶದ ಮಾತು ಅಲ್ಲ ವಶಕ್ಕೂ ಮಿಕ್ಕಿದ ಮಾತು! ತನ್ನ ಅವಶ್ಯವಾದ ವಿವಶವಾದ ಪ್ರೀತಿಯ ಸ್ವೀಕಾರ ಪುರಸ್ಕಾರ ಪರಿಷ್ಕಾರಗಳೆಲ್ಲ 'ಅನ್ಯ'ರ ವಶದ ವಿಷಯ? ಪ್ರೀತಿಗೆ ಬೆಲೆಕಟ್ಟುವದೂ ಕೊಡುವದೂ ಅವರ ಹೃದಯದ ಸಂಸ್ಕಾರದ ಫಲ. ನಾಟ–ಪೇಡ್ ಪತ್ರ ನಮಗಾಗಿಯೇ ಬರುತ್ತದೆ. ಆದರೆ ನಾವಾಗಿ ಹಣತೆತ್ತು ಪಡೆದ ಹೊರತು ಅದು ನಮ್ಮದಾಗುವದಿಲ್ಲ! ಪ್ರೀತಿಯ ಪರಿಯೂ ಹಾಗೆಯೇ! ಪ್ರತಿಯೊಂದು ಪ್ರಿಯ ವ್ಯಕ್ತಿಯೂ ತನ್ನ ಪಾಲಿನ ಪ್ರೀತಿಯನ್ನು ತ್ಯಾಗದಿಂದ, ಸೇವೆಯಿಂದ, ಶ್ರಮದಿಂದ, ತಪಸ್ಸಿನಿಂದ, ಆರಾಧನೆಯ ವ್ರತದಿಂದ ಗಳಿಸಿಕೊಳ್ಳಬೇಕಾಗುತ್ತದೆ. ಅಂತೆಯೇ ಒಲವೆಂಬ ಹೊತ್ತಗೆಯ ಅಂಚೆವೆಚ್ಚ ಅಷ್ಟೊಂದು ಭಾರಿಯಾಗಿದೆ!

ಕವಿವರ್ಯರು ಮುಂದಿನ ಸೊಲ್ಲಿನಲ್ಲಿ ಆ ಹೊತ್ತಗೆಯ ಒಳನೋಟವನ್ನು ಸ್ವಲ್ಪದರಲ್ಲಿ ನಿರೂಪಿಸುತ್ತಾರೆ. ಅದೆಷ್ಟು ಸೋಜಿಗವೆಂದು ನೋಡಿರಿ:

ಬೆವರು ಹನಿಯಲಿ ಕೆಲವು ಕಣ್ಣೀರಿನಲಿ ಹಲವು
ನೆತ್ತರದಿ ಬರೆದುದಕೆ ಲೆಕ್ಕವಿಲ್ಲ
ಚಿತ್ರ ಚಿತ್ರಾಕ್ಷರದ ಲಕ್ಷ ಪತ್ರಗಳುಂಟು
ನಕ್ಷತ್ರ ಓದುತಿವೆ ಮರೆತ ಸೊಲ್ಲ !

ಎಂಥ ಅದ್ಭುತರಮ್ಯ ಪುಸ್ತಕವಿದು ! ಲಕ್ಷಾಂತರ ಪುಟಗಳಲ್ಲಿ ಬರೆದ ಸೊಲ್ಲಿಗೆ ಲೆಕ್ಕವಿಲ್ಲ ! ಅವನ್ನು ಓದುವದು ಯಾರು? ಇಂದ್ರನ ಸಾವಿರ ಕಣ್ಣುಗಳಂತೆ ಎವೆಯಿಕ್ಕದೆ ಮಿನುಗುವ ಸಾವಿರದ ನಕ್ಷತ್ರಗಳೇ ಈ ಪುಸ್ತಕದ ಮರೆತು ಹೋದ ಸೊಲ್ಲಿಗೆ ಲೆಕ್ಕವಿಲ್ಲ ! ಅವನ್ನು ಓದುವದು ಯಾರು? ಇಂದ್ರನ ಸಾವಿರ ಕಣ್ಣುಗಳಂತೆ ಎವೆಯಿಕ್ಕದೆ ಮಿನುಗುವ ಸಾವಿರದ ನಕ್ಷತ್ರಗಳೇ ಈ ಪುಸ್ತಕದ ಮರೆತು ಹೋದ ಸೊಲ್ಲನ್ನು ಓದುವವು!

ಪ್ರೀತಿಗಾಗಿ ದುಡಿತ, ಪ್ರೀತಿಗಾಗಿ ದುಃಖ, ಪ್ರೀತಿಗಾಗಿ ದುರ್ಘಟನೆ! ಮಹಾಕಾವ್ಯದಿಂದ ಹಳ್ಳಿಯ ಹಾಡಿನತನಕ ಪ್ರತಿಯೊಂದು ಕಥನ, ಪ್ರತಿಯೊಂದು ಕವನ, ಕಲ್ಮನೆಯಲ್ಲಿ ಕೆತ್ತಿರಲಿ, ಕಲ್ಪನೆಯಲ್ಲಿ ಕೊರೆದಿರಲಿ–ಪ್ರೀತಿಯ ಅನಾದಿ ಅನಂತ ಲೇಖವು ಬೆವರು, ಕಣ್ಣೀರು ಮತ್ತು ನೆತ್ತರಗಳಿಂದಲೇ ವಿಚಿತ್ರವಾಗಿ ಬರೆದು ಬಂದಿವೆ. ಪ್ರೀತಿಗಾಗಿ ಪಟ್ಟಣಗಳು ಉರಿದಿವೆ, ದಂಡಯಾತ್ರೆಗಳು ನಡೆದಿವೆ; ಸಿಂಹಾಸನಗಳು ಉರುಳಿವೆ; ಯುದ್ಧಗಳು ಎಸಗಿವೆ; ಜಗತ್ತಿನ ಇತಿಹಾಸ, ಮಾನವ ಜೀವನದ ಮಹಾಭಾರತ–ಪ್ರೀತಿಯ ರಸದಲ್ಲಿಯೇ ಅದ್ದಿ ಅರಳಿದಂತಿದೆ.

ಆದರೆ ನಕ್ಷತ್ರನೇತ್ರಗಳು ಓದುವ ನಕ್ಷತ್ರಗಳಷ್ಟು ಪ್ರಾಚೀನವಾದ ಪ್ರೀತಿಯ ಪುಸ್ತಕವನ್ನು ನಾವು ಇಲ್ಲಿ ಓದಲು ಹೊರಟಿಲ್ಲ. ಇಷ್ಟು ಭವ್ಯತೆಯ ಭಾಷೆ ನಮ್ಮ ಈ ಪುಟ್ಟ ಪುಸ್ತಕದ್ದಲ್ಲ. ನಾವು ವರರೂ ಅಲ್ಲ, ಕವಿಗಳೂ ಅಲ್ಲ, ನಕ್ಷತ್ರಗಳನ್ನು ಓದುವರೆಂಬ ಭರವಸೆಯೂ ನಮಗಿಲ್ಲ. (ಚಿತ್ರಪಟಗಳ 'ನಕ್ಷತ್ರ'ಗಳು ಕೂಡ ಈ ಬಡ ಪುಸ್ತಕವನ್ನು ಓದುವರೋ ಇಲ್ಲವೋ ಎಂಬ ಭಯವಿದೆ ನಮಗೆ;) ಓರ್ವ ಸಾಮಾನ್ಯ ಸಹೃದಯನು ಇತರ ಸಾಮಾನ್ಯ ಸಹೃದಯರಿಗಾಗಿ ಎಲ್ಲ ಸಹೃದಯತೆಗೂ ಆಧಾರವಾದ, ಎಲ್ಲ ಹೃದಯಗಳಿಗೂ ಸಾಮಾನ್ಯವಾದ ಪ್ರೀತಿಯೆಂಬ ಭಾವನೆಯ ತರಹ, ತರಗತಿ ತಥ್ಯ, ತತ್ವಗಳ ಕುರಿತು ತಿಳಿದಷ್ಟು ತಿಳಿಸಲು ಬರುವಷ್ಟು ತಿಳಿಯಾಗಿ

ಮಂಡಿಸಿದ ಮಾತುಗಳಿವು. ಹೃದಯಗಳ ಹಂದರದ ಮೇಲೆ ಹುಲುಸಾಗಿ ಹಬ್ಬಿ ಬೆಳೆದ ಬಾಳಿನ ಬಳ್ಳಿಯಲ್ಲಿ ತಿಳಿಲಾಗಿ ಹರಿದಾಡಿ ಕುಡಿಯಾಗಿ ಕೊನರಿ ಹೂವಾಗಿ ಅರಳಿ ಹಣ್ಣಾಗಿ ಪಾಕವನ್ನು ಪಡೆಯುವ ಪ್ರೀತಿಯೆಂಬ ರಸಭಾವದ ರೂಪ ರೀತಿಯನ್ನು ಸರಸವಾಗಿ ರಸಿಕರಿಗೆ ಅರುಹಲು ಹೊರಟ ಹರಟೆಯಿದು. ಇದರಲ್ಲಿ ಚಿತ್ರ ಚಿತ್ರಾಕ್ಷರಗಳು ಇಲ್ಲ. ಲಕ್ಷಪತ್ರಗಳೂ ಇಲ್ಲ. ಓದುತ್ತ ಬೇಸತ್ತು ನಡುವೆಯೇ ಸೊಲ್ಲುಮರೆತು ಕಣ್ಣಿಗೆ ನಕ್ಷತ್ರಗಳು ಕವಿದರೂ ಸರಿಯೇ! ಹಾಗೆ ಆದಲ್ಲಿ ಅದು ವಿಷಯದಲ್ಲಿ ರಸವಿಲ್ಲವೆಂದಲ್ಲ; ನಮ್ಮ ಒಕ್ಕಣೆಯಲ್ಲಿ ಕಸುವಿಲ್ಲವೆಂದು ತಿಳಿಯಬೇಕು. ನಾರದ ಭಕ್ತಿಸೂತ್ರಗಳಲ್ಲಿ ಈಶ್ವರನ ವ್ಯಾಖ್ಯೆ 'ಅನಿವರ್ಚನೀಯ ಪ್ರೇಮಸ್ವರೂಪ' ನೆಂದು ಬಂದಿದೆ. ಪ್ರೇಮದ ವ್ಯಾಖ್ಯೆಯೂ ಅದೇ ಸರಿ. ಅದೂ ಈಶ್ವರನಂತೆ ಅನಿರ್ವಚನೀಯವೇ ಸರಿ.

ಅಂದರೆ ಅದರ ಸ್ವರೂಪದ ಸವಿಸ್ತರ ವರ್ಣನೆ ಸುಲಭವಲ್ಲ. ಸವಿಯುವದು ಎಷ್ಟು ಸಲೀಸವೋ ಸವಿಯನ್ನು ತಿಳಿಸಿ ಹೇಳುವದು ಅಷ್ಟೇ ಬಿಗಿ. ಆದಾಗ್ಯೂ ಸವಿಯನ್ನು ಬಣ್ಣಿಸಬೇಕೆಂಬ ಹುಚ್ಚು ಹವ್ಯಾಸ ಬೇರೆ ಉಳಿಯುತ್ತದೆ! ಪ್ರೀತಿಯ ರೀತಿಯೂ ಅದೇ ಮಾದರಿ.

ವಸಂತ ಸೇನೆಯ ವರ

'ರಮತಾಂ, ರಮತಾಂ ಮಾ ಕಸ್ಯಚಿತ್ ಪ್ರೀತಿಚ್ಛೇದೋ ಭವತು!' (ನಲಿಯಲಿ, ನಲಿಯಲಿ, ಯಾರ ಪ್ರೀತಿಯ ಛೇದವೂ ಆಗದಿರಲಿ!) ಇದಕ್ಕೂ ಮಿಗಿಲಾದ ಆಶೀರ್ವಾದ ಇನ್ನಾವದು? ಸಾವಿರ ವರ್ಷಗಳ ಆಚೆಯಿಂದಲೂ ಪ್ರೇಮ-ಮಯವಾದ ಒಂದು ಹೆಣ್ಣು ಹೃದಯದಿಂದ ಈ ಉದ್ಗಾರವು ಎದೆಯಿಂದ ಎದೆಗೆ ಪಡಿನುಡಿಯುತ್ತ ಮೊಳಗುತ್ತ ಬಂದಿದೆ. ಮಾನವ ಪ್ರೀತಿಯ ಅಜರಾಮರ ರೂಪಕದ ನಿತ್ಯ-ನೂತನಳಾದ ನಾಯಿಕೆ ವಸಂತ ಸೇನೆಯು ಅಂತರಾಳದಿಂದಲೂ ಉದ್ಗರಿಸಿದ ಆರ್ಶಿವಾರ್ದವಿದು! ಪ್ರೀತಿಯ ಛೇದದ ಕರುಣ ದಾರುಣವಾದ ಕಥೆಯನ್ನು ಕ್ರೌಂಚಮಿಥುನಗಳ ವಿರಹ ವ್ಯಥೆಯಿಂದ ಸ್ಫೂರ್ತಿಗೊಂಡ ಆದಿಕವಿಯು ಲೋಕದ ಶೋಕವೇ ಶ್ಲೋಕವಾಗುವಂತೆ ಮಾಡಿ ಇನ್ನೊಂದು ಅಜರಾಮರ ಕಾವ್ಯದಲ್ಲಿ ಹಾಡಿದ್ದಾನೆ. ಶಕುಂತಲೆಯ ಪ್ರೀತಿ, ಹೆಲನ್ನಳ ಪ್ರೀತಿ, ರೋಮಿಯೋ ಜ್ಯೂಲಿಯೆತರ ಪ್ರೀತಿ, ಲೈಲಾ-ಮಜ್ನು ಅವರ ಪ್ರೀತಿ, ಶಾಹಜಹಾ-ಮುಮತಾಜಳ ಪ್ರೀತಿ ಪ್ರಪಂಚದ ಎಲ್ಲ ದೇಶಗಳ ಎಲ್ಲಕಾಲಗಳ ಚರಿತ್ರೆಯ ಬಣ್ಣದ ಪುಟಗಳಲ್ಲಿ

ಪ್ರೀತಿಯು ಚಿನ್ನದ ಎಳೆಯಂತೆ ಹಾಸುಹೊಕ್ಕಾಗಿ ನೆಯ್ದು ಬಂದಿದೆ. ಇಂಥ ಪ್ರೀತಿಯ ಇಂಗಿತವೇನು? ಸಂಗತಿಯೇನು?

ಮಾನವನ ಅನುಭವವು ಅನೇಕ ರೂಪವಾಗಿದೆ. ಸುಖವಾಗಿ ದುಃಖವಾಗಿ, ಜ್ಞಾನವಾಗಿ, ಉನ್ಮಾದವಾಗಿ, ಉತ್ಸಾಹವಾಗಿ, ಕಾಮ ಕ್ರೋಧಾದಿ ವಿಕಾರಗಳ ವಿಕೋಪವಾಗಿ, ವಿನೋದವಾಗಿ – ಒಂದಲ್ಲ ಎರೆಡಲ್ಲ ದೇವರ ಅವತಾರ ಗಳಿಗಿಂತಲೂ ಅನೇಕ ರೂಪವಾಗಿ ಮಾನವನ ಅನುಭವವು ವ್ಯಕ್ತವಾಗುತ್ತಿದೆ. ಇದೆಲ್ಲ ರೂಪಗಳಲ್ಲಿ ಪ್ರೀತಿಯೆಂಬ ಅನುಭವವು ಅಲೌಕಿಕವಾದದ್ದು. ಅನುಭವದ ಅವತಾರಗಳಲ್ಲಿ ಅದು ಕೃಷ್ಣಾವತಾರವೆನ್ನಬಹುದು. ಪ್ರೀತಿಯಷ್ಟು ರಂಜಕವೂ ರೋಚಕವೂ ಆದ ಅನುಭವವು ಜೀವನದಲ್ಲಿ ಬೇರೊಂದಿಲ್ಲ. ಆದ್ದರಿಂದಲೇ ಇಂಗ್ಲಿಷ ಕವಿಯೋರ್ವನು ಹಾಡಿದ್ದಾನೆ. 'ಇಟ್‌ಈಜ ಬೆಟರ್ ಟು ಹ್ಯಾವ ಲವ್ಹಡ್ ಆ್ಯಂಡ ಲೊಸ್ಟ ದ್ಯಾನ್ ನೆವರ ಟು ಹ್ಯಾವ ಲವ್ಹಡ್ ಎಟ್‌ಆಲ್' (ಪ್ರೀತಿಸಿ ಕಳೆದುಕೊಳ್ಳುವುದಾದರೂ ಲೇಸುಃ ಪ್ರೀತಿಯಿಲ್ಲದೇ ಬಾಳು ಕಳೆಯುವದು ಬೇಡ) ಪ್ರೀತಿ ಮಾಡಿ ಅದಕ್ಕೆ ಪ್ರತಿಫಲ ಸಿಗದೇ ಭಂಗಪಟ್ಟುಕೊಂಡು ಕಂಗೆಟ್ಟವನು ಅಭಾಗಿಯೇ ಸರಿ. ಆದರೆ ಯಾರು ಎಂದೂ ಪ್ರೀತಿಸಿಲ್ಲವೋ ಅವನಂಥ ದುರ್ದೈವಿಯು ಜಗತ್ತಿನಲ್ಲಿ ಬೇರೊಬ್ಬನಿಲ್ಲ! ಎಲ್ಲದೇಶದ ಎಲ್ಲಕಾಲದ ಬದುಕಿನ ಎಲ್ಲ ಮಟ್ಟದ ಜನರಿಗೂ ಪ್ರೀತಿಯೆಂಬ ಅನುಭವವು ಸರಿಯಾಗಿ ಸೊಗಸಾಗಿ ಸೋಜಿಗವಾಗಿ ಅನಿಸುವದು.

ಅಂದಮೇಲೆ ಇಷ್ಟೊಂದು ರಮ್ಯವಾದ ರಹಸ್ಯಮಯವಾದ ಅನುಭವದ ಮೂಲವೇನು? ವಿಕಾಸವೆಂತು? ಈ ವಿಷಯದ ಕುರಿತು ಗಮನ ಕೊಟ್ಟವರು ತೀರ ಕಡಿಮೆ ಜನ. ಪ್ರೀತಿಯ ಅನುಭವ ಎಷ್ಟು ವ್ಯಾಪಕ ಸ್ವರೂಪದ್ದೋ ಅದರ ಅಭ್ಯಾಸವು ಅಷ್ಟೇ ವಿರಲ, ಅಷ್ಟೇ ಅಪರೂಪವಾದದ್ದು. ಈ ಮಾತು ಪ್ರೀತಿಯಷ್ಟೇ ಸೋಜಿಗವಲ್ಲವೇ? ಬಾವಿಯಲ್ಲಿ ಬಿದ್ದವರು ಮೇಲೆ ಕೆಳಗೆ ನೀರು ಗುಟಕರಿಸುತ್ತ ತೇಲಾಡಿದರೂ ಬಾವಿಯ ಆಳವನ್ನು ಅಳೆಯುವರೇ? 'ಪ್ರೀತಿಯಲ್ಲಿ ಬೀಳು'ವವರೂ ಹಾಗೆಯೇ !

ಛೇ! ಇದೆಲ್ಲ ಬರೇ ಮಾತಿನ ಮಂತ್ರವಾಯಿತು. ಪ್ರೀತಿಯು ಏನೆಂಬುದು ನಮಗೆಲ್ಲ ಗೊತ್ತು! ಅದು ಹೊಸತೇನೂ ಅಲ್ಲ. ಎಂದಿನಿಂದಲೂ ಪುರುಷರು ಸ್ತ್ರೀಯರನ್ನು ಬಯಸುತ್ತ ಬಂದಿದ್ದಾರೆ; ಸ್ತ್ರೀಯರು ಪುರುಷರನ್ನು ವರಿಸುತ್ತ

ಬಂದಿದ್ದಾರೆ. ಮೆಚ್ಚುತ್ತ ಬಂದಿದ್ದಾರೆ. ಪ್ರೀತಿಯ ಒಂದು ಮೈ ಆ ಬಯಕೆ ಇನ್ನೊಂದು ಮೈ ಈ ಮೆಚ್ಚುಗೆ. ಪ್ರೀತಿಯ ಆವೇಶದಲ್ಲಿ ಪ್ರಣಯದ ಉನ್ಮಾದದಿಂದ ಪ್ರಿಯತಮೆಯ ಪ್ರಸನ್ನತೆಗಾಗಿ ಪುರುಷನು ಉದಾತ್ತನಾಗುತ್ತಾನೆ, ಉನ್ನತಿಗೇರುತ್ತಾನೆ. ಬಾಳು ಸಪ್ಪಗಾಗಿ ಒಂದು ಸಿವುಡು ಸಿಪ್ಪೆಯಾಗಿ ಕೊನೆಗೊಳ್ಳಬಹುದು. ಆದರೆ ನಡುವೆ ಪ್ರೀತಿಯ ಬುಗ್ಗೆಯು ಆ ಬಾಳಿನಲ್ಲಿ ಒಡೆದು ಚಲ್ಲುವರಿದರೆ, ಆ ಒಲವಿಗೆ 'ಕೊರಡು ಕೊನರುವದು'. ಬಾಳು ಮುಗಿಯುವ ಮುಂಚೆ ಒಮ್ಮೆ ಪ್ರೀತಿಯ ದಿವ್ಯ ಸ್ಪರ್ಶದಿಂದ ಜೀವವು–ಪ್ರತಿಯೊಂದು ಪ್ರಿಯ ಜನವು–ಒಂದು ಭಂಗುರವಾದರೂ ಭವ್ಯದಿಂದ ಉತ್ತಮತೆಯ ಹತ್ತಿರ ಹಾಯ್ದು ಧನ್ಯವೆನಿಸಿಕೊಳ್ಳುವದು! ಲಕ್ಷ್ಮಿಯನ್ನು ಒಲಿಸುವ ಉದ್ಯೋಗವು ಪುರುಷಸಿಂಹನನ್ನು ಹುಟ್ಟಿಸುವುದು. ಶ್ರೀಗಾಗಿ ಸಾಹಸವು ಉದಯಿಸುವದು. ಸೀತೆಗಾಗಿ ಸಾಗರಕ್ಕೆ ಸೇತುಬಂಧವಾಗುವದು. ವಸಂತಸೇನೆಗಾಗಿ ಚಾರುದತ್ತನು ಶೂಲವನ್ನು ಸಮಾಧಾನದಿಂದ ಏರಲು ಸಿದ್ಧನಾಗುವನು! ತನ್ನ ಪ್ರೀತಿದೇವತೆಯ ಪೂಜೆಯ ಸಾಹಿತ್ಯಕ್ಕಾಗಿ ಪುರುಷನು ಮಾಡದ ಪಾಪವಿಲ್ಲ, ಓಡದ ದೂರವಿಲ್ಲ, ಕಾಡದ ವೈರಿ ಇಲ್ಲ, ಹಾಡದ ಕಾವ್ಯವಿಲ್ಲ, ತೊಡದ ಪಂಥವಿಲ್ಲ, ಬಿಡದ ಸ್ವಾರ್ಥವಿಲ್ಲ, ಪಡದ ಸಾಹಸ ಸಂಕಟವಿಲ್ಲ! ಹಿಡಿಂಬೆಗಾಗಿ ದುಡಿಯುವ ಭೀಮನಿಂದ ಮುಂತಾಗಿ ಎಲಿಝಬೆತ್ ರಾಣಿಗಾಗಿ ಪೃಥ್ವಿಪ್ರದಕ್ಷಣೆ ಮಾಡಿ ಬರುವ ನೌಕಾಸೇನಾಪತಿಗಳ ತನಕವೂ ಪುರಾಣೇತಿಹಾಸಗಳು ಪ್ರೀತಿಯು ಪ್ರೇರಿಸುವ ಅಲೌಕಿಕ ಸಾಧನೆಯ ಉದಾಹರಣೆಗಳನ್ನೇ ಸಾರುತ್ತವೆ. ಶರ್ವಿಲಕನನ್ನು ಕಳವಿಗಾಗಿ ಪ್ರಚೋದಿಸುವ ಪ್ರೀತಿಯು ಅವನ ಮದನಿಕೆಯ ಮೋದಕ್ಕಾಗಿ ಕಳವನ್ನು ಒಪ್ಪಿಕೊಳ್ಳುವಂತೆ ಪ್ರಾಮಾಣಿಕತೆಯನ್ನು ಪ್ರೇರಿಸುತ್ತದೆ! ಪರಾಕ್ರಮದ ಬಿಚ್ಚುಗತ್ತಿಗೆ ಪ್ರೀತಿಯೇ ವಜ್ರದ ಹಿಡಿಕೆಯಾಗಿದೆ!

ಬಾಳು ಎಂದಾದರೂ ಒಂದು ದಿನ ತೀರುವದೇ ಸರಿ. ಆದರೆ ಆ ಮೊದಲು ಆ ಪ್ರೀತಿಯು ಮನುಷ್ಯನನ್ನು ಅಲ್ಪಕಾಲವಾದರೂ ಒಂದು ಘನತೆಗೆ ಒಯ್ದು ತಲ್ಪಿಸುತ್ತದೆ. ಪ್ರೀತಿಯ ಈ ಶಕ್ತಿಯ ರಹಸ್ಯವೇನು? ಸೂಜಿಗಲ್ಲಿನ ಸೋಂಕಿಗೆ ಸೂಜಿ ಕುಣಿಯುವಂತೆ, ಓರೆಗಣ್ಣುಗಳ ಮೇಲೆ ಮಿನುಗುವ ಕುರುಳುಗಳನ್ನು ಕಂಡು ಹರೆಯ ಹುಡುಗನ ಮೈಯು ಜುಮ್ಮೆನ್ನುವದೇಕೆ? ಕೋಮಲ ಕೈ ಬೆರಳುಗಳ ಮೃದುಸ್ಪರ್ಶವು ಭುಜದ ಮೇಲೆ ಆದೊಡನೆ ತರುಣ ರಕ್ತದ ಎದೆಯು ಝಲ್ಲೆನ್ನುವುದೇಕೆ? ಪುರುಷನು ಪ್ರೀತಿಸುವನೇಕೆ?

ಮನುಷ್ಯ ಜೀವನದಲ್ಲಿ ಸೋಜಿಗಗಳು ಹಲವು ಇರುತ್ತವೆ. ಆದರೆ ತುಸು ತಟಸ್ಥ ವೃತ್ತಿಯಿಂದ ನೋಡಿದರೆ ಎಲ್ಲಕ್ಕೂ ಮಿಗಿಲಾದ ಸೋಜಿಗವು ಯಾವದು ಕಾಣುವದು ಬಲ್ಲಿರಾ? ಅದು ಸ್ತ್ರೀಯನ್ನು ಅನುಸರಿಸುವದರಲ್ಲಿ ಪುರುಷನ ತತ್ಪರತೆ ! ಮುದಿ ಹುಚ್ಚಿಗೆ ಒಂದು ನರೆಗೂದಲಿನಷ್ಟು ಅಂತರ ಬಿಟ್ಟು, ಈಚೆಗಿನ ವಯಸ್ಸಿನ ಯಾವ ಮಟ್ಟದಲ್ಲಿಯೇ ನಿಂತಿರಲಿ, ಪುರುಷನು ಸ್ತ್ರೀಯನ್ನು ಅರಸಲೂ ಆರಿಸಲೂ ವರಿಸಲೂ ತಾನು ಜನ್ಮಸಿದ್ಧ ಅಧಿಕಾರಿಯೆಂದೇ ನಿರ್ಧರಿಸಿ ನಡೆಯುವನು. ಇನ್ನು ಇದೊಂದೇ ಸೋಜಿಗವೆಂದು ತಿಳಿಯುವದೂ ತಪ್ಪಾದೀತು. ಇದಕ್ಕೆ ಸರಿಯಾಗಿ ತೂಗುವ ಇನ್ನೊಂದು ಸೋಜಿಗವೂ ಇದೆ. ಅದು ಯಾವದೆಂದರೆ ಪುರುಷನ ಗಮನಕ್ಕೆ ಗುರಿಯಾಗಬೇಕೆಂಬ ಸ್ತ್ರೀಯ ತತ್ಪರತೆ !– ಚಿತೆಯ ಈಚೆಗಿನ ವಯಸ್ಸಿನ ಯಾವ ಮಟ್ಟದಲ್ಲಿಯೇ ಇರಲಿ ಸ್ತ್ರೀಯು ತಾನು ಪುರುಷನ ಅನುನಯ ಪರಿಣಯಗಳಿಗೆ ಎಂದಿಗೂ ಯೋಗ್ಯಳೆಂದೇ ಮನಗಂಡಿರುತ್ತಾಳೆ. ಇತ್ತ ಹೆಣ್ಣನ್ನು ಪ್ರೀತಿಸಲಿಕ್ಕೆ ಮೀರಿದ ವಯಸ್ಸು ತನ್ನದೆಂದು ಒಪ್ಪಿಕೊಳ್ಳುವ 'ಪುರುಷೋತ್ತಮನು' ವಿರಳವಾದರೆ, ಅತ್ತ ಗಂಡನನ್ನು ಆಕರ್ಷಿಸಲು ಅಶಕ್ಯವಾದ ರೂಪವು ತನ್ನದೆಂದು ಒಪ್ಪಿಕೊಳ್ಳುವ 'ರಮಣಿ' (?)ಯೂ 'ಅಪರೂಪ'ಳೇ ಸರಿ!

ರತಿಗೆ ಋತು ಬೇಕೆ?

ಕಾಮರತಿಗೆ ವಸಂತಋತುವೇ ಬೇಕೆಂಬ ಕಡ್ಡಾಯ, ಕವಿಗಳ ಕಟ್ಟಳೆಯಲ್ಲಿ. ಪ್ರೀತಿಯ ಆವಿರ್ಭಾವಕ್ಕೆ ಆಯುಷ್ಯದ ಯಾವ ಅವಸ್ಥೆಯೂ ಅನುಕೂಲವೇ ಸರಿ. ನಡುಹರೆಯದ ಎಂಟನೇ ಎಡ್ವರ್ಡನಿಗೆ ಮೂರು ಸಲ 'ಘಟಸ್ಫೋಟಿತ'ಳಾದ ಸಿಂಪಸನ್ನಳೇ ಮೆಚ್ಚಿಗೆ ಆಗಿಲ್ಲವೇ? ಪಿಠಾಪುರದ ಸುಂದರಿ ಸೀತಾದೇವಿಗೆ ಏಳು ಮಕ್ಕಳ ತಂದೆ ಗ್ವಾಲ್ಹೇರದ ಭೂಪನೇ ಅನುರೂಪನೆನಿಸಲ್ಲವೇ? ಚೀನದ ಕ್ರಾಂತಿ ಪುರುಷರಾಗಿ ಹೋದ ಡಾ॥ ಸನ್‌ಯೆತ್ ಸೇನರ ೫೦ ವರುಷವನ್ನು ದಾಟಿದ ವಿಧವೆಯು ೩೦ ರ ಒಳಗಿರುವ ಓರ್ವ ತರುಣ ಅಮೇರಿಕನ್ ಸೈನಿಕನನ್ನು ವರಿಸಿದ್ದು ಪ್ರಸಿದ್ಧವಾಗಿಲ್ಲವೇ? ಅಷ್ಟು ದೂರವೇಕೆ? ವಯೋವೃದ್ಧ ಸಿನೇಮಾ ನಟಿ ದುರ್ಗಾಖೋಟೆಯು ಹಚ್ಚಹರೆಯ ಮುಸ್ಲಿಮ ವೈಮಾನಿಕನನ್ನು ಮದುವೆಯಾಗಿರುವಳೆಂದು ಪ್ರಸಿದ್ಧವಾಗಿಲ್ಲವೇ? ಕಿಶೋರಿ ಅರುಣಾ ಕೃಪಲಾನಿಯು ೪೦ರ ಮನೆಯಲ್ಲಿ ನಿಂತ ಬ್ಯಾರಿಸ್ಟರ ಅಸಫ ಅಲಿಯನ್ನು ಮನವಾರೆ ಪ್ರೀತಿಸಿ ವರಿಸಿದ್ದು ಯಾರಿಗೆ ಗೊತ್ತಿಲ್ಲ? ನೈಷ್ಠಿಕ ಬ್ರಹ್ಮಚಾರಿಗಳೆಂದೆನಿಸಿಕೊಂಡ(?) ನರಿಮನ್– ಬ್ರೆಳ್ವಿಯವರು ಮುಪ್ಪಿನ ಅಂಗಳದಲ್ಲಿ ನಿಂತು ಮದುವೆಯ

ಹೊಸ್ತಿಲನ್ನೇರಿಲ್ಲವೇ? ಆಯುಷ್ಯದ ಇಳಿಜಾರಿನಲ್ಲಿ ನಡೆಯುತ್ತಿದ್ದ ಅಂಬೇಡಕರ-ಗಾಡಗೀಳರು 'ಪಚ್ಚ ಪಸಿಯ' ಪ್ರೀತಿ-ವಿವಾಹವನ್ನೇ ಮಾಡಿಕೊಂಡಿಲ್ಲವೆ?

ಇವೆಲ್ಲ ಉದಾಹರಣೆಗಳು ಕಾಣಿಸುವದೇನು? ಕಾಮನ ಶರಸಂಧಾನಕ್ಕೆ ಪ್ರೇಮದ ಅನುಸಂಧಾನಕ್ಕೆ ಆಯುಸ್ಸು ಒಂದಿದ್ದರೆ ಸರಿ. ವಯಸ್ಸಿನ ಅಡೆ ತಡೆ ಇಲ್ಲ. 'ತರುಣಃ ತಾವತ್ ತರುಣೀ ರಕ್ತಃ ವೃದ್ಧಃ ತಾವತ್ ಚಿಂತಾಮಗ್ನಃ' ಎಂದು ಶಂಕರಾಚಾರ್ಯರು ಹಾಡಿ ಹಾಕಿಕೊಟ್ಟ ವರ್ಗಿಕರಣವು ಬರೇ 'ಚರ್ಪಟ ಪಂಜರಿ'ಯೇ ಸರಿ. ವೃದ್ಧನು ಚಿಂತಾಮಗ್ನನಾಗುವದೂ ತರುಣೀ ಲಗ್ನಕ್ಕಾಗಿಯೇ!

ಸಂಸಾರದ ದೃಷ್ಟಾಂತಗಳನ್ನು ಮೇಲೆ ಕೊಟ್ಟಾಯಿತು; ಸಾಹಿತ್ಯದಲ್ಲಿಯೂ ಇವುಗಳ ಪ್ರತಿಬಿಂಬಗಳು ಸಾಕಷ್ಟು ಸಿಗುವವು. ರೂಪಸುಂದರಿ ಡೆಸ್ಡೆಮೊನಾ ವರಿಸಿದ್ದು ಯಾರನ್ನು? ವಯಸ್ಕನೂ ಕಪ್ಪು ಕುರುಪಿಯೂ ಆದ ಅಥೆಲ್ಲೋನನ್ನು. ವಸಂತ ಸೇನೆಯು ತನುಮನಧನದಿಂದಲೂ ಕಾಮಿಸಿದ್ದು ಯಾರನ್ನು? ಪ್ರೌಢನಾದ, ಹೆಂಡತಿ ಮಕ್ಕಳಿದ್ದ ದರಿದ್ರ ಚಾರುದತ್ತನನ್ನು. ಶಕುಂತಲೆಯ ಹೃದಯವನ್ನು ಗೆದ್ದ ನಾಯಕನು ಯಾರು? ತಾರುಣ್ಯದಾಚೆಗೆ ನಿಂತ ದುಷ್ಯಂತನು. ಅತ್ತ ಟಾಲಸ್ಟಾಯಿಯ ಜಗತ್ಪ್ರಸಿದ್ಧ ನಾಯಿಕೆ ಎನ್ನಾಕರೇನಿನಾ ಮೆಚ್ಚಿದ್ದು ಯಾರನ್ನು? ತನಗಿಂತಲೂ ತರುಣನಾದ ಪ್ರಿಯಕರನನ್ನು ! ತಾತ್ಪರ್ಯವಿಷ್ಟೇ : ಸ್ತ್ರೀ-ಪುರುಷರು ರೂಪ, ಗುಣ, ಪ್ರಾಯ ಏನೇ ಇರಲಿ; ಅನುವು ದೊರೆತಾಗ ಅನುರಾಗವನ್ನು ತೋರಲು ಸದಾಸಿದ್ಧರು.

ಮನುಷ್ಯ ಜೀವನದಲ್ಲಿ ಹೆಣ್ಣನ್ನು ಅವಲೋಕಿಸಿ ತೂಗಿ ನೋಡುವ ಗಂಡಿನ ನೋಟದಷ್ಟು ಎಡೆಬಿಡದೇ ಎಚ್ಚರವಾಗಿರುವ ಚಟುವಟಿಕೆ ಬೇರೊಂದಿಲ್ಲ. ಇದು ಅತಿಶಯೋಕ್ತಿಯಲ್ಲ. ಭಯದ ಕಾತರತೆಯಿಂದ, ಜಯದ ಆತುರತೆಯಿಂದ, ನಯದ ಚತುರತೆಯಿಂದ, ಪ್ರಣಯದ ಅಧೀರತೆಯಿಂದ, ಸಲಿಗೆಯ ಮಧುರತೆಯಿಂದ, ಪ್ರಶಂಸೆಯ ರಸಿಕತೆಯಿಂದ, ಸೌಂದರ್ಯದ ಸರಸತೆಯಿಂದ, ತಿರಸ್ಕಾರದ ಕುಟಿಲತೆಯಿಂದ, ವಿಮರ್ಶೆಯ ಮಾರ್ಮಿಕತೆಯಿಂದ, ಔದಾರ್ಯದ ಕರುಣತೆಯಿಂದ ವಿಕಾರದ ವಿವಶತೆಯಿಂದ, ಹೀಗೆ ಒಂದಲ್ಲ ಎರಡಲ್ಲ ಸಾವಿರ ಕಣ್ಣುಗಳಿಂದ 'ಇಂದ್ರಿಯಗಳ ಇಂದ್ರ'ನಾದ ಪುರುಷನು ಸ್ತ್ರೀಯನ್ನು ಕಂಡುಕೊಳ್ಳುವ ನೆಪವನ್ನಾಗಲೀ ಅನುವನ್ನಾಗಲೀ ಹೋಗಗೊಡುವದಿಲ್ಲ! ಇದರ ಮರ್ಮವನ್ನು ಚನ್ನಾಗಿ ಬಲ್ಲವರೇ ಚಿತ್ರಪಟಗಳಲ್ಲಿ, ಸಾಪ್ತಾಹಿಕ-ಮಾಸಿಕಗಳಲ್ಲಿ, ಭಿತ್ತಿ ಪತ್ರಗಳಲ್ಲಿ,

ಜಾಹಿರಾತುಗಳಲ್ಲಿ, ವ್ಯಾಪಾರೀ ಸಂಸ್ಥೆಗಳಲ್ಲಿ, ಉಪಹಾರ ವಿಶ್ರಾಂತಿ ಗೃಹಗಳಲ್ಲಿ ಜನರ ಕಣ್ಮನಗಳನ್ನು ಸೆಳೆಯಬೇಕಾದ ಎಲ್ಲ ಸ್ಥಳಗಳಲ್ಲಿ ಪುರುಷರ ಸ್ವಭಾವ ಸಿದ್ಧವಾದ ಈ ಲಂಪಟತನವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲು ತಪ್ಪುವದಿಲ್ಲ. ಆದ್ದರಿಂದ ಕಚೇರಿ, ಬಸ್ಸು-ನಿಲ್ದಾಣ, ಬೀದಿ-ಕೂಟ, ಆಟದ ಬಯಲು, ದೇವಸ್ಥಾನ, ಅಶ್ವತ್ಥ ಕಟ್ಟೆ, ಕ್ಲಬ್ಬು-ಕಾಲೇಜು, ಸಭೆ-ಸಮ್ಮೇಲನ, ಥಿಯೇಟರು, ಆಸ್ಪತ್ರೆ, ಕಾಂಗ್ರೆಸ ಭವನ, ಕಮ್ಯುನಿಸ್ಟ ಕ್ಯಾಂಟೀನು, ವಾಚನಾಲಯ ಶಾಲೆ-ಶಿಬಿರ, ಹಡಗ-ವಿಮಾನ ಎಲ್ಲೆಡೆಗಳಲ್ಲಿ ಈ ಸ್ತ್ರೀ ಶೋಧಕ ಪುರುಷ ದೃಷ್ಟಿಯ ಪ್ರದರ್ಶನವೂ ಈ ದೃಷ್ಟಿಯನ್ನು ಕೆರಳಿಸಬೇಕೆಂಬ ಹೊರಳಿಸಬೇಕೆಂಬ ಸ್ತ್ರೀಸುಲಭ ಚಾಪಲ್ಯ ಚಾಂಚ್ಯಲ ನಿದರ್ಶನವೂ 'ಕಣ್-ಗೊಳಿ'ಸುತ್ತದೆ.

ಈ ಪ್ರಯತ್ನವೇಕೆ?

ಪುರುಷನೆಂಬ ಠಕ್ಕ ಪಶುವಿನ ಈ ನೋಟವು ತನ್ನ ಭಕ್ಷ್ಯವನ್ನು (ಸ್ತ್ರೀಯನ್ನು) ಪ್ರತಿಯೊಂದು ಹೆಳೆಯಿಂದಲೂ ಹಿಂಬಾಲಿಸಲು ಅರಳಿ ಅರಸುತ್ತಿರುತ್ತದೆ. ಅವನ ಮಾತುಕತೆಯು ಅದೇ ಅನಾದಿಯಾದ ಅನಂತವಾದ ಬೇಟದ ಬೇಟೆಯ ಸುತ್ತಲೂ ಸುಳಿಯುತ್ತಿರುತ್ತದೆ. ಅವನ ಹರಟೆಯ ಕೂಟದಲ್ಲಿ ಹೆಣ್ಣಿನ ಕುರಿತು ಹೆಣ್ಣು-ಗಂಡಿನ ಸಂಬಂಧದ ಕುರಿತು ಅವರ ಅಂಗೋಪಾಂಗಗಳ ವಿರೂಪ ಶೊರೂಮಗಳ ಕುರಿತು ಒಮ್ಮೆಯಾದರೂ ಹಾಸ್ಯದ ಮಾತು ನಡೆಯದೇ ಹೋಗುವುದಿಲ್ಲ. ಅವನು ಅವಳು ಮತ್ತು ಇನ್ನೊಬ್ಬನು ಅಥವಾ ಇವನು ಇವಳು ಹಾಗೂ ಈ ಮಾದರಿಯ 'ಮೂರು ಮಗ್ಗಲಿನ' ಕತೆಯಿಲ್ಲದೇ ಯಾವ ಲಲಿತಸಾಹಿತ್ಯವೂ ಲಲಿತವೆನಿಸುವದಿಲ್ಲ. ರಸಗಳಲ್ಲಿ ಶೃಂಗಾರ, ಭಕ್ತಿ ಅವತಾರಗಳಲ್ಲಿ ರಾಧಾಕೃಷ್ಣ, ಋತುಗಳಲ್ಲಿ 'ವಿರಹಿಜನ ಹೃತ್‌ಶೂಲ'ವಾದ ವಸಂತಮಾಸ,-ಹೀಗೆ ಸ್ತ್ರೀ-ಪುರುಷ ಸಂಬಂಧದ ಸಂಪರ್ಕವಿದ್ದ ಸಂಗತಿಗಳೇ ರಸಿಕರೆನಿಸುವರಿಗೆ ನಮ್ಮಲ್ಲಿ ಮೆಚ್ಚಿಗೆಯಾಗುತ್ತದೆ. ಅರಸಿಕರು ಅಶ್ಲೀಲ ಲೈಂಗಿಕ ಅಪಹಾಸ್ಯಕ್ಕೆ ಹಲ್ಲುಕಿರಿಯುವರಾದರೆ ರಸಿಕರು ಲಿಂಗಜ್ಞಾನ ಮತ್ತು ದಮಿತ ಕಾಮದ ಮನೋಗಂಡಗಳ ಕುರಿತು ಬಾಯಿ ಚಪ್ಪರಿಸಿಕೊಳ್ಳುತ್ತ ಚರ್ಚಿಸುವರು! ಕೊನೆಗೆ ಹೀಗೆ ಕಾಮ-ಪ್ರೇಮಗಳ ವ್ಯಾಮೋಹದಿಂದ ಮಾತನ್ನು ಮೈಲಿಗೆ ಮಾಡಿಕೊಳ್ಳುವ ಮಂದಮತಿಗಳನ್ನು ಮೂದಲಿಸಿಯಾದರೂ ಮಡಿವಂತರೆನಿಸಿಕೊಳ್ಳುವ ಮಹನೀಯರು, ಆ ಕುರಿತು ತಮ್ಮ 'ವಿರೋಧ ಭಕ್ತಿ'ಯನ್ನು ಪ್ರಕಟಿಸುವರು! ಶಂಕರಾಚಾರ್ಯರ ಅದ್ವೈತ ವೇದಾಂತದ ವಿತಂಡದವಾದದಲ್ಲಿಯೂ ಕೊನೆಗೆ

ಉಭಯ ಭಾರತಿಯು ಸ್ತ್ರೀ–ಪುರುಷ ಸಂಬಂಧ ವಿಷಯಕ ಪ್ರಶ್ನೆಗಳನ್ನೆತ್ತಿ ಈ ಬ್ರಹ್ಮಚಾರಿ ಸನ್ಯಾಸಿಯನ್ನು ಭ್ರಮೆಗೊಳಿಸತೊಡಗಿದಳೆಂದು ಉಲ್ಲೇಖವಿದೆ. ಮಾತು ಬಂದಾಗ ಸೋತು ಹೋಗುವ ಜಾಣತನಕ್ಕಿಂತ ಮಾತು ಸೋತಾಗ ಜಾಣತನವು ಬರುವದು ಲೈಂಗಿಕ ಲಗ್ನವಿಷಯಕ ಶೃಂಗಾರ ಕಾಮುಕ ಕುಚೇಷ್ಟೇಗಳಿಂದಲೇ ಎಂಬುವದು 'ವಿದ್ವದ್ಗೋಷ್ಠಿ'ಯಿಂದ 'ಸುರಾಮತ್ತ ಕಲಹ'ದ ತನಕವೂ ಎಲ್ಲ ಎಡೆಗಳಲ್ಲಿ ಪಡೆಯಬಹುದಾದ ಅನುಭವವು! ಇದರ ನೀತಿ–ಅನೀತಿ ಇಷ್ಟ–ಅನಿಷ್ಟಗಳನ್ನು ಇಲ್ಲಿ ಯೋಚಿಸುವುದಿಲ್ಲ. ಮಂದಿಯ ಅದೂ ಗಂಡು ಮಂದಿಯ, ಮತುಗಳೂ, ಕತೆಗಳೂ ಹಿಡಿತ ತಪ್ಪಿದಾಗಲೆಲ್ಲ ಸಡಿಲು ಬಿಟ್ಟಲ್ಲೆಲ್ಲ ಕಾಮ–ಕಾಮಿನಿಯರ ಕುರಿತೇ ಹಾಯುವುದು ಒಂದು ಸಾಧಾರಣವಾದ ಅವಲೋಕನೆಯು. ಇಷ್ಟೇ ಇಲ್ಲಿ ಸೂಚಿಸುವದಿದೆ. ಪುರುಷನ ಕಲ್ಪನೆಯ ಪತಂಗವು ಅದೇ ಮೋಹಚುಂಬಕ ಜ್ಯೋತಿಯ ಸುತ್ತಲೂ ಹಾರಾಡುವುದು. ಋಷಿಯಿಂದ ಪಶುವಿನ ತನಕ ಈ ಪ್ರವೃತ್ತಿಯು ಪ್ರಕಟವಾಗುವುದೇಕೆ? ಲಾಂಛಿತ ಲಾಲಸೆಯ ಈ ಕಲಂಕಿತ ಕಾಮನೆಯ ಮೂಲವೇನು?

ಪ್ರೀತಿಯ ಪ್ರವೃತ್ತಿಯು ಯಾವ ಯಾವ ಮಟ್ಟಗಳೊಳಗಿಂದ ಹಾಯ್ದು ಮೆಟ್ಟಲುಗಳನ್ನು ಹತ್ತಿ ನಾಗರಿಕ ಸುಸಂಸ್ಕೃತ ಮಾನವರಲ್ಲಿ ಇಂಥ ಕಾವ್ಯಮಯ ರಮಣಿಯತೆಯನ್ನೂ ವೈಭವದ ವಿಲಾಸವನ್ನೂ ಉಜ್ವಲವಾದ ಹುಚ್ಚನ್ನೂ ಹೊಂದುವ ಹಿರಿಮೆಗೆ ಏರಿತು?

ಈ ಪ್ರಶ್ನೆಗಳಿಗೆ ಉತ್ತರಕೊಡುವ ಉಪದ್ವ್ಯಾಪಕ್ಕೆ ನಾವು ದುಡುಕುವದಿದೆ. ಈ ಪ್ರಶ್ನೆಗಳನ್ನು ನಾವೇ ಕೇಳಿಕೊಳ್ಳುತ್ತೇವೆ. ಪ್ರೀತಿಯ ಜ್ಯೋತಿಯಲ್ಲಿ ಬೆಳಕು ಕಂಡವರಾಗಲಿ, ಬೆರಳು ಸುಟ್ಟುಕೊಂಡವರಾಗಲೀ ಇವುಗಳನ್ನು ಕೇಳುವದಿಲ್ಲ! ಕೇಳುವ ಬಿಡುವಾಗಲೀ ಬಯಕೆಯಾಗಲೀ ಅವರಿಗೆಲ್ಲಿದೆ? ಹಳ್ಳದ ಸೆಳುವಿಗೆ ಸಿಕ್ಕಿ ಸಾಗುವವರಿಗೆ ಅದರ ಆಳ–ಅಗಲ ಉಕ್ಕು ದಿಕ್ಕುಗಳನ್ನು ಅರಿತುಕೊಳ್ಳುವ ತೆರವು ತಾಳ್ಮೆಗಳು ಎಲ್ಲಿವೆ? ದಂಡೆಗೆ ನಿಂತು ನೋಡುವ ಬಡ ಬುದ್ಧಿಯವರಿಗೇ ಈ ವಿಚಾರ ಸೂಚಿಸುವದು. ಅಂತೆಯೇ ಈ ಪ್ರಯತ್ನವು.

ಒಂದು ಸಂಗತಿಯ ಸಂದರ್ಭವನ್ನು ಸರಿಯಾಗಿ ಅರಿತು ಅದರ ಅನುಪೂರ್ವಿಯನ್ನು ಬದಿಯ ಬೆನ್ನಿನ ಹೊಂದಿಕೆಗಳನ್ನು ಮನಗಂಡರೆ ಅದರ ಅರ್ಥವೂ ಕಾರ್ಯವೂ ತಿಳಿದುಬರುವದು. ಪ್ರೀತಿಯನ್ನು ಪರಿಶೀಲಿಸುವ ನಮ್ಮ

ಪ್ರಯತ್ನವೂ ಹಾಗೆಯೇ ಸಾಗಬೇಕು. ಅಂದರೆ ಪ್ರಾಣಿಯ ಜೀವನ ಕ್ರಮದಲ್ಲಿ ಪ್ರೀತಿಯ ಮೂಲವು ಎಲ್ಲಿಂದ? ಶೀಲವು ಯಾವ ರೀತಿಯಿಂದ? ಅದರ ಸಂದರ್ಭ–ಸಂಪರ್ಕಗಳು ಯಾತರೊಂದಿಗೆ? ಇವೆಲ್ಲ ಸಂಗತಿಗಳನ್ನು ಬಲ್ಲೆವಾದರೆ ಪ್ರೀತಿಯ ಧರ್ಮವೇನು? ಕಾರ್ಯವು ಯಾವದು? ಸಾರ್ಥಕತೆ ಯಾತರಲ್ಲಿ? ಇತ್ಯರ್ಥವು ಹೇಗೆ ಎಂಬುದೆಲ್ಲವು ತಿಳಿವಳಿಕೆಗೆ ನಿಲುಕಲಿಕ್ಕೆ ಅನುವಾಗಬಹುದು. ಆದ್ದರಿಂದ ಆ ಕುರಿತು ತಿಳಿದುಕೊಳ್ಳೋಣವೇ?

೨

ಪ್ರೀತಿಯ ಮೂಲ

ವ್ಯಕ್ತಿಯಲ್ಲಿ ಅನುಕ್ರಮವಾಗಿ ಅದಲುಬದಲಾಗಿ ತಲೆದೋರುವ ಮತ್ತು ತಲೆ ತಿನ್ನುವ ಪ್ರವೃತ್ತಿಗಳು ಎರಡು. ಒಂದು ಹಸಿವೆ, ಇನ್ನೊಂದು ಒಲವು ಇಲ್ಲವೆ ಪ್ರೀತಿ. ವ್ಯಕ್ತಿಯ ಜೀವನದಲ್ಲಿ ಇವೆರಡು ಪ್ರೇರಣೆಗಳು ಜಾಗೃತವಾಗಿ ಕೆಲಸ ಮಾಡುವುದರ ಫಲವಾಗಿ ಮಾನವ ಸಮಾಜದ ಜೀವನವೇ ಒಟ್ಟಾರೆ ಅನ್ನಪೋಷಣೆ ಮತ್ತು ಪ್ರಜೋತ್ಪಾದನೆ ಇವೆರಡು ಬಿಂದುಗಳ ಸುತ್ತಲೂ ಸುಳಿಯುತ್ತದೆ. ಅನ್ನ ಸಂತತಿಗೆ ಸಾಧನ. ಸಂತತಿ ಮತ್ತೆ ಅನ್ನಕ್ಕೆ ಸಾಧನ. ನಾವು ಉಣ್ಣುವದೇತಕ್ಕೆ? ಬದುಕಲಿಕ್ಕೆ; ಬದುಕಿ ಬೆಳೆಯಲಿಕ್ಕೆ; ಬೆಳೆದು ತಾಯ್ತನದಲ್ಲಿಯೋ ತಂದೆತನದಲ್ಲಿಯೋ ನಮ್ಮ ಸ್ವಾಭಾವಿಕವಾದ ಪೂರ್ಣತೆಯನ್ನು ಪಡೆಯಲಿಕ್ಕೆ. 'ಆತ್ಮನೇ ಪುತ್ರನಾಗುವನು.' ಎಂದು ಉಪನಿಷತ್ತೇ ಸಾರುವದು. ವಂಶವೃದ್ಧಿಗೆ ದೇಹವು ಒಂದು ಸಾಧನ. ಆ ಸಾಧನಕ್ಕೆ ಅನ್ನವು ಪೋಷಕದ್ರವ್ಯ. ಇದೇ ಮೇರೆಗೆ ತಾಯ್ತನ, ತಂದೆತನ ಬರುವುದರ ಪರಿಣಾಮವೇನು? ಸಂತತಿಯಲ್ಲಿ ನಾವು ಸಾಧಿಸುವದೇನು? ನಮ್ಮ ನರೆಯುತ್ತಲಿರುವ – ನಾಶ ಹೊಂದಲಿರುವ–ಮಾಂಸ ಪಿಂಡದಿಂದ ಹೊಸ ಜೀವನವನ್ನು ವಿಂಗಡಿಸಿ ವಿಕಾಸಗೊಳಿಸುವದು; ನಾವು ಸತ್ತರೂ ನಮ್ಮ ಈ ಅಂಶ ಬೇರೆಯಾಗಿ ಬೆಳೆದು ತನ್ನ ಅನ್ನವನ್ನು ಪಡೆಯುವ ಬಲವನ್ನು ತಳೆದು ಬಾಳಿನ ಬಳ್ಳಿಯನ್ನು ನಳನಳಿಸುವ ಕುಡಿಕೊಂಬುಗಳೊಡೆಸಿ ಲೋಕದಲ್ಲಿ ಬಿತ್ತರಿಸುವದು ಯಾರಿಗೆ ಗೊತ್ತು? ನಮ್ಮಿಂದ ಬೇರಾದ ಈ ಅಂಶವು ನಮಗಿಂತಲೂ ಮಿಗಿಲಾಗಿ ಎಂದಿಗಿಂತಲೂ ಅಂದು ಚಂದವಾಗಿ ವಂಶದ ಬಿತ್ತರದೊಂದಿಗೆ ಗುಣದ ಎತ್ತರವನ್ನು ಉತ್ತರೋತ್ತರ ಸಾಧಿಸಲೂ ಅಹುದು. 'ಮಮ ಏವ ಅಂಶಃ ಜೀವಲೋಕೇ ಜೀವಭೂತ ಸನಾತನಃ' ಎಂದು ಭಗವಂತನು ಭಗವದ್ಗೀತೆಯಲ್ಲಿ ಅಂದದ್ದು ಒಳ್ಳೇ ಸ್ವಾರಸ್ಯದ ಮಾತು. ಜೀವಲೋಕದಲ್ಲಿ ಜೀವಿಯಾಗಿ ಹುಟ್ಟುವ ಪ್ರತಿ ಜೀವಾಂಶವೂ ಸನಾತನವಾಗಿದೆ. ದೀಪದಿಂದ ದೀಪ ಉರಿದು ಜ್ಯೋತಿಯು ಕುಂದದೆ ಬೆಳಕಿನ ಬಳ್ಳಿಹಬ್ಬುವಂತೆ ಪೀಳಿಗೆಯಿಂದ ಪೀಳಿಗೆಗೆ ನಮ್ಮ ಜೀವ ನಿರಂತವಾಗಿ ಮುಂದರಿಯುವದು. ಹೀಗೆ ಸತತವಾಗಿ ಬಾಳುವುದೇ ಸಂತತಿಯು.

ಈ ಸಂತತಿಯ ಆದಿಯೆಲ್ಲಿ? ಆದಿಜೀವನವು ಅಣುಕೋಶವು. ಏಕದೇಶೀಯ ಜೀವಾಣು. ಅಂಥ ಒಂದು ಅಲ್ಪದರಲ್ಲಿ ಅಲ್ಪವಾದ ಮೂಲದ

ಅಣುಕೋಶವನ್ನು ತೆಗೆದುಕೊಳ್ಳೋಣ. ಅಲ್ಲಿ ಸಂತತಿ ಅಥವಾ ಪ್ರಜೋತ್ಪಾದನೆಯು ಹೇಗೆ ಜರುಗುವದು? ಪ್ರೀತಿಯ ಹುಚ್ಚು ಎಲ್ಲಿಂದ? ಪ್ರಣಯದ ಮೂಲ ಅಲ್ಲಿಂದಲೇ ಇರುವದೇ?

ಮೂಲದ ಅಣುಕೋಶವು ದೇವರಂತೆಯೇ ಸೃಷ್ಟಿಸುವದು. ದೇವರು 'ಬಹಸ್ಯಾಂ' ಅಂದೊಡನೆ ತಾನೇ ಬಹಳ ಬಗೆಯಾದ ವರ್ಣನೆ ವೇದಾಂತದಲ್ಲಿದೆ. ಅಣುಕೋಶವೂ ಒಡೆದು ಎರಡಾಗುವದು. ಅದರ ಬೆಳವಣಿಗೆಯೇ ಅದರ ಒಡೆತಕ್ಕೆ ಕಾರಣವಾಗುವದು. ಅಣುಕೋಶಕ್ಕೆ ಹೊರಮೈಯೇ ಪೋಷಣೆಯ ಇಂದ್ರಿಯವು ಒಳಗಿನ ಸತ್ವವೆಲ್ಲ ಅದರ ಜೀವಾಳ. ಸತ್ವವು-ಒಳಗಿನ ದ್ರವ್ಯವು ಬಲಿತು ದೊಡ್ಡದಾದಂತೆ ಹೊರಮೈಯು ಪೂರೈಸುವ ಪೋಷಣೆ ಸಾಲದಾಗುತ್ತದೆ. ಅಥವಾ ಹೊರಮೈಯು ಒದಗಿಸಬಲ್ಲ ಪೋಷಣೆಯ ಪ್ರಮಾಣವನ್ನು ಮೀರಿ ಒಳಗಿನ ಸತ್ವ ದ್ರವ್ಯವು ಪರಿಮಾಣದಲ್ಲಿ ಬೆಳೆಯುತ್ತದೆ. ಇದು ಅವೆರಡರ ತ್ವರೆಯ ತಾರತಮ್ಯದ ಫಲ. ಒಳಗಿನ ಸತ್ವ ಯಾವ ಭರದಲ್ಲಿ ಬಲಿತು ಬೆಳೆಯುವದೋ ಆ ತ್ವರೆಯಲ್ಲಿ ಹೊರಮೈಯು ಅನ್ನವನ್ನು ಒದಗಿಸಲಾರದು. ಇದರಿಂದ ಮೈಯನ್ನು ಒಡೆದು ಸತ್ವ ಎರಡು ಪಾಲಗುತ್ತದೆ. ಒಡಕಿನ ಬಿರುಕನ್ನು ಮುಚ್ಚಿಕೊಂಡು ಹೊರಮೈಯು ಹಬ್ಬುತ್ತದೆ. ಪೋಷಣೆ ಸಂವರ್ಧನೆಗಳ ಪ್ರಮಾಣ ಸಮತೋಲನವಾಗುತ್ತದೆ. ಪ್ರತಿ ಪಾಲಿನ ಗಾತ್ರಕ್ಕೆ ಸರಿಯಾಗಿ ಸುತ್ತಲೂ ಅನ್ನ ಪೂರೈಕೆಯ ಮೈಯು ದೊರೆಯುತ್ತದೆ. ಹೀಗೆ ಒಳದ್ರವ್ಯ-ಹೊರಮೈ ಇವೆರಡರ ಸರಿಹೊಂದಿಕೆಯಾಗುವದೆಂದರೆ ಒಂದು ಕೋಶವು ಎರಡಾಗುವುದು. ಕೋಶವು ತಾನೆ ಪೃಥಕ್ಕರಣ ಹೊಂದಿ ಪಿತೃತ್ವವನ್ನು ಪಡೆಯುತ್ತದೆ! ಎರಡು ಜೀವ ಕೂಡಿ ಒಂದಾಗುವ ಇಂಬಿನಲ್ಲಿ ಮೂರನೆಯದೊಂದು ಜೀವ ಹುಟ್ಟಿ ಬರುವ ಬದಲು ಒಂದು ಜೀವವೇ ಎರಡಾಗುತ್ತದೆ. ತನ್ನ ಸಂತತಿಗೆ ತಕ್ಕ ಸಂಪತ್ತಿ ಮಾಡಿಕೊಳ್ಳುವದು ಮನುವಿನ ಮಕ್ಕಳ ಧರ್ಮವಾದರೆ, ತನ್ನ ಸಂಪತ್ತಿಗೆ ತಕ್ಕ ಸಂತತಿ ಮಾರ್ಪಡಿಸಿಕೊಳ್ಳುವದು ಅಣುವಿನ ಮಕ್ಕಳ ಧರ್ಮ.

ಅಣುಕೋಶದ ಈ ಕ್ರಿಯೆಯಲ್ಲಿ ಪ್ರಜೋತ್ಪಾದನೆಯ ಪೃಥಕ್ಕರಣವಿದೆ. ಆದರೆ ಲಿಂಗಭೇದದ ವರ್ಗೀಕರಣವಿಲ್ಲ. ಅಂಗಭೇದವಾಗುವದೇ ಹೊರತು ಲಿಂಗಭೇದವಾಗುವದಿಲ್ಲ. ಆದ್ದರಿಂದ ಪ್ರೀತಿಯ ಇಂಗಿತವೂ ಇಲ್ಲ. ವಿಯೋಗದಲ್ಲಿ ಶೃಂಗಾರವೂ ಇರಬಹುದು. ಆದರೆ ಪ್ರೀತಿಯಿರುವದು ಸಂಯೋಗದಲ್ಲಿಯೇ.

ಅಣುಕೋಶವು 'ಇರಲಾರೆನೇಕಾಕಿ' ಎಂದು 'ನನ್ನಾಕಿಯನ್ನು' 'ಬಾ' ಎನ್ನುವದಿಲ್ಲ ತಾನೆ ಎರಡಾಗಿ ಬೆಳೆಯುತ್ತದೆ! ಒಂದಾಗುವದು ಪ್ರೀತಿ; ಎರಡಾಗುವದು ಬರೆ ಸಂತತಿ. ಜೀವದ ಸಾತತ್ಯಕ್ಕಾಗಿ ನಿಸರ್ಗವು ಈ ಸೇಂದ್ರಿಯ ಸತ್ವದ ಪೃಥಕ್ಕರಣದ ತಂತ್ರವನ್ನು ರಚಿಸುತ್ತದೆ. ಜೀವಕೋಶವು ಹೀಗೆಯೇ ಹಲವು ಪಟ್ಟಾಗಿ ಬೆಳೆದು ಒಂದು ಸೇಂದ್ರಿಯ ಸತ್ವವನ್ನು ಅಸಂಖ್ಯ ಅಣುಕೋಶಗಳ ಸಂಘಟನೆಯಾದ ಒಂದು ಸಜೀವ ದೇಹವನ್ನು ರೂಪಗೊಳಿಸುತ್ತದೆ. ಬೀಜ-ಗರ್ಭ-ಶಿಶು-ಮಾನವ ಈ ಸ್ವರೂಪದಲ್ಲಿ ಜೀವವಿಕಾಸವಾಗುವದು ಇದೇ ಕ್ರಮ. ಬೀಜ-ಕುಡಿ-ಮೊಗ ಹೂ-ಮಿಡಿ-ಕಾಯಿ- ಈ ಕ್ರಮವೂ ಇದೇ ವಿಕಾಸದ ಇನ್ನೊಂದು ರೂಪ ರೂಪದಿಂದ ರೂಪ ಆದರಿಂದ ಪ್ರತಿರೂಪ. ಹೀಗೆ ಸತ್ವದ ಸಿದ್ಧಿ ವಂಶದ ವೃದ್ಧಿ

ಆದರೆ ಈ ನಡುವೆಯೇ ಕೆಲವೊಮ್ಮೆ ಒಂದು ಚಮತ್ಕಾರವ ಒದಗಿಬರುತ್ತದೆ. ಒಂದು ಏಕಪೇಶಿಪ್ರಾಣಿಯ (ಅಣುಕೋಶದ) ಒಡೆದು ಬೇರೆಬೇರೆಯಾದ ಅಂಶಕೋಶಗಳೆಲ್ಲ ಬಿಡಿಬಿಡಿಯಾಗಿ ಬದುಕುವ ಬದಲು ಒಂದು ಪುಂಜವಾಗಿ ಅಂಟಿಕೊಂಡಿರುತ್ತದೆ. ಅಂಟಿನಂಥ ಒಂದು ಜಿಗುಟು ದ್ರವದ ಆವರಣದಲ್ಲಿ ಅವು 'ವಸಾಹತು' ಮಾಡಿ ಒಟ್ಟಾಗಿಬಾಳುತ್ತವೆ. ಆಗ ಅವುಗಳ ಕಾರ್ಯದಲ್ಲಿ ಒಂದು ಸೋಜಿಗದ ವ್ಯತ್ಯಾಸ ಒಮ್ಮೆಲೇ ಕಂಡುಬರುತ್ತವೆ. ಈ ವ್ಯತ್ಯಾಸವು ಒಂದು ವರ್ಗೀಕರಣವು. ಪೃಥಕ್ಕರಣ ಪಡೆದ ಬಿಡಿ ಅಂಶಗಳು ಹಿಂದೆ ಇಡಿಯಾದ ಅಣು ಕೋಶಗಳಾಗಿಯೇ ಕೆಲಸ ಮಾಡುತ್ತಿದ್ದವು. ಆದರೆ ಈ ಪುಂಜವಾಗಿ ಒಟ್ಟು ಬದುಕುವ ಅಂಶಕೋಶಗಳಲ್ಲಿ ಕೆಲಸದ ವರ್ಗೀಕರಣವ ಒಮ್ಮೆಲೇ ನೆಲೆಗೊಳ್ಳುತ್ತದೆ. ಹೊರಮಗ್ಗಲಿನ ಅಥವಾ ಹೊರಸುತ್ತಿನ ಕೋಶಗಳೇ ಪೋಷಣೆಯ ಅಂದರೆ ಅನ್ನ ದ್ರವ್ಯದ ಪೂರೈಕೆಯ ಕೆಲಸವನ್ನೇ ವಿಶೇಷವಾಗಿ 'ಕೈ ಗೊಳ್ಳುತ್ತವೆ. (ಅವುಗಳಿಗೆ ಕೈಗಳೆಲ್ಲಿ? ಮೈಗೊಳ್ಳುತ್ತವೆ ಎನ್ನುವುದೇ ಲೇಸು!) ಮತ್ತ ಒಳಮಗ್ಗಲಿನ ಅಥವಾ ಒಳಸುತ್ತಿನ ಕೋಶಗಳು ಸಂತತಿಯ ಪ್ರಜೋತ್ಪಾದನೆಯ ಕೆಲಸಕ್ಕೆ ಮೀಸಲಾಗುತ್ತವೆ. ಅಣುಕೋಶಗಳ ಈ 'ವಸಾಹತು 'ಪರಸ್ಪರಂಭಾವಯಂತಃ'ರಾಗಿ ಒಂದು ಸಾಮಾಜಿಕ ಸಂಘಟನೆಯಂತೆ ದುಡಿಯುವ ಅನ್ಯೋನ್ಯ ಸಹಕಾರಿಗಳಾಗಿ ಪರಸ್ಪರಾವಲಂಬಿಗಳಾಗಿ ಕೆಲಸ ಮಾಡುವ ಅಂಗಗಳ ಸಂಘವಾಗುತ್ತದೆ.

ಆದರೆ ಇವು ಕೆಲವೊಮ್ಮೆ ಕಂಡುಬರುವ ಸೋಜಿಗಗಳು. ಸಾಮಾನ್ಯವಾಗಿ ಅಣುಕೋಶವು ಇಬ್ಭಾಗವಾಗಿಯೇ ಬೇರೆಬೇರೆ ಮರಿಕೋಶಗಳು ಬೆಳೆಯುತ್ತವೆ. ಈ ಕೋಶದ ಪೃಥಕ್ಕರಣವೇ ಸಾರ್ವತ್ರಿಕವಾಗಿ ಕಂಡುಬರುವ ಜೀವವಿಕಾಸದ ಕ್ರಮವು. ಹೀಗಿದ್ದರೂ ಇದೊಂದೇ ಕ್ರಮ ಸಾಲದು. ಹಲವು ಪೀಳಿಗೆಗಳು ಆದಮೇಲೆ ಭಾಗವಾಗಿ ಬೇರೆಯಾಗಿ ಬೆಳೆಯುವ ಈ ಬಗೆಯು ಮತ್ತೆ ಮತ್ತೆ ಹಲವು ಸಲ ಒದಗಿಬಂದಮೇಲೇ ಈ ಭಾಗ–ವಿಭಾಗ–ಉಪಭಾಗಗಳಾಗುತ್ತ ನಡೆದ ಜೀವಕೋಶದ ಅಂಶೋಪಅಂಶಗಳಲ್ಲಿ ಮುಂದೆ ಹೊಸ ಕೋಶವನ್ನು ಕಟ್ಟಲು ಕಸುವೇ ಕುಗ್ಗುವುದು ಕಾಣುತ್ತದೆ. ಮತ್ತೆ ತಾನೆ ಒಡೆದು ಬಿಡಿಯಾಗಿ ಇಡಿಯಾಗಿ ಎರಡು ಅಣುಕೋಶಗಳಾಗಿ ಬದುಕಲು ಬೇಕಾಗುವ ಬಲವೇ ಅವುಗಳಲ್ಲಿ ಉಳಿದಿರುವದಿಲ್ಲ.

ಆ ಮಟ್ಟಕ್ಕೆ ಇಳಿದಾಗ ಹೊಸದೊಂದು ಮಾರ್ಪಾಟು ಆಗುವದು ಕಂಡು ಬರುತ್ತದೆ. ಜೀವವಿಕಾಸಕ್ರಮದ ಒಂದು ಘಟ್ಟವು ಇಲ್ಲಿಂದ ಆರಂಭವಾಗುತ್ತದೆ. ಎರಡು ದುರ್ಬಲ ಅಣುಕೋಶಗಳು (ಏಕ ಪೇಶಿಯ ಜೀವಿಗಳು) ಕೂಡುತ್ತವೆ. ಎರಡೂ ತಮ್ಮ ಒಳಕೇಂದ್ರದಿಂದ ಸಜೀವ ದ್ರವ್ಯದ ಒಂದು ದ್ರವದ ಎರಕವನ್ನು ಹೊರಗೆ ಹೊಯ್ಯುತ್ತವೆ! ಈ ಹೊರಚೆಲ್ಲಿದ ಜೀವಾಂಶದ ದ್ರವವು ಒಂದರದು ಇನ್ನೊಂದರೊಳಗೆ ಅದಲು ಬದಲಾಗಿ ಸೇರುತ್ತದೆ. ಆಮೇಲೆ ಅವು – ಅವೆರಡು ಕೂಡಬಂದ ಅಣುಕೋಶಗಳು – ದೂರ ಸರಿಯುತ್ತವೆ. ಸೋಜಿಗವೆಂದರೆ ಈ ಸಾಮಿಪ್ಯದ ಸಂಯೋಗದಿಂದ ಈ ಹತ್ತಿರದ ಹೊಂದಿಕೆಯಿಂದ ಈ ಜೀವ ದ್ರವ್ಯವುಳ್ಳ ದ್ರವದ ವಿನಿಮಯದಿಂದ ಆ ಎರಡೂ ದುರ್ಬಲ ಅಣುಕೋಶಗಳು ವಿಚಿತ್ರವಾಗಿ ನವಬಲವನ್ನು ಪಡೆಯುತ್ತವೆ. ಎರಡು ಕಸುವಿಲ್ಲದ ಕೋಶಗಳ ಕೂಡವಿಕೆಯು ಇಬ್ಬರಿಗೂ ಕಸುವು ಕೊಡುವ 'ಕಾಯಕಲ್ಪ' ದಂತಾಗುತ್ತದೆ! ಈ ಹೊಸ ಕಸುವಿನ ಕುರುಹು ಏನು? ಅವು ಮತ್ತೆ ಪ್ರಾಥಮಿಕ ಅಣುಕೋಶದಂತೆಯೇ ಪೃಥಕ್ಕರಣ ಹೊಂದಿ ಭಾಗವಾಗಿ ಬೇರೆಯಾಗಿ ಬೆಳೆಯಲು ಭರದಿಂದ ತೊಡಗುತ್ತವೆ. ಈ ಭಾಗಾಕಾರದಿಂದ ಗುಣಾಕಾರ ಬೆಳೆಯುವ ಸೋಜಿಗದ 'ಬೀಜ' ಗಣಿತವು ಮತ್ತೆ ಕೆಲವು ಪೀಳಿಗೆಗಳತನಕವೂ ಸಾಗುತ್ತದೆ!

'ವರ್ಣಸಂಕರ'ವು ನರಕದ ದಾರಿಯೆಂದು ಅರ್ಜುನನು ಹೆದರಿ ಹೌಹಾರಿರಬಹುದು. ಆದರೆ ಪ್ರಾಣಿಶಾಸ್ತ್ರದ ತೀರ್ಮಾನ ಹಾಗಿಲ್ಲ. ಇದಕ್ಕೆ ಮೇಲೆ

ಹೇಳಿದ ಈ ಎರಡು ಭಿನ್ನ ಜೀವಾಣುಕೋಶಗಳ ಅನ್ಯೋನ್ಯ ಸುಯೋಗದ ಈ 'ಕಾಯಕಲ್ಪ'ವೇ ಸಾಕ್ಷಿ. ಕಸುವಿಲ್ಲದ ಎರಡು ಜೀವಕೋಶಗಳು ತಮ್ಮ ತಮ್ಮ ಜೀವರಸವನ್ನು ಅದಲುಬದಲಾಗಿ ಹೀರಿಕೊಂಡು ಹೊಸ ಸತ್ವ ಹೊಸ ಶಕ್ತಿಯನ್ನು ಪಡೆದು ಮತ್ತೆ ಪಟ್ಟುಪಟ್ಟಾಗಿ ಪುಟಿದು ಬೆಳೆಯುತ್ತವೆ. ನಮ್ಮ ಮನುಷ್ಯ ಸಮೂಹಗಳಲ್ಲಿ ಹೇಗೋ ಜೀವಾಣುಕೋಶಗಳಲ್ಲಿಯೂ ಹಾಗೆಯೇ, ಮದುವೆಯಿಂದ ಮನುಷ್ಯನು ಹೆಚ್ಚು ಬಲಿಷ್ಠನಾಗುತ್ತಾನೆ. ಹರೆಯೊಂದಿಗೆ ಹಿರಿತನವೂ ಹುಚ್ಚು ಹುಡುಗಾಟಿಕೆಯ ಬದಲು ಹೊಸ ಹುಮ್ಮಸದ ಹಟವೂ ಹೆಮ್ಮೆಯೂ ಮನುಷ್ಯನಲ್ಲಿ ಬಂದು ಹೊಣೆಯ ಹೊರಗೆ ಹೆಗಲನ್ನು ಹಚ್ಚಲು ಅಣಿಯಾಗುತ್ತಾನೆ. ಮದುವೆ ಮದುವಣಿಗರನ್ನು ಮದು 'ಮಗ' ಮತ್ತು 'ಮಗಳನ್ನು' ಮನುಷ್ಯರನ್ನಾಗಿ ಮಾರ್ಪಡಿಸುವದು. ಎರಡು ಬೇರೆಬೇರೆ ಜೀವಿಗಳ ಸಂಯೋಗ (ದಾಂಪತ್ಯ) ಒಂದು ಸಮರ್ಥ ಸಂಸ್ಥೆಯನ್ನು ಕಟ್ಟುವದು. ಹಾಗೆಯೇ ಎರಡು ವಂಶಗಳು ಕಲೆಬೆರೆತರೆ ಭಿನ್ನನಾಡಿಯ ಭಿನ್ನನೆತ್ತರದ ಜನ ಕೂಡಿ ಬೆರೆತು ಬಾಳಿದರೆ ಅವರಿಂದ ಉಂಟಾದ ಮಿಶ್ರವಂಶವು ಹೊಸ ಸತ್ವವನ್ನು ಪಡೆದು ಬೆಳೆಯುತ್ತದೆ, ಇರಲಿ.

ನಾವು ಪ್ರೀತಿಯ ಮೂಲವನ್ನು ಹುಡುಕಿಕೊಂಡು ಹೊರಟಿದ್ದೆವಲ್ಲವೇ ? ಜೀವಾಣು ಕೋಶದ ಸಂತತಿಯುತ್ಪಾದನೆಯಲ್ಲಿ ಪ್ರೀತಿಯ ಮರ್ಮವಾದ ರತಿಯ ಅಥವಾ ಕಾಮದ ಕಾಯಕವು ಕಂಡುಬರುವಂತಿಲ್ಲವೆಂಬುದನ್ನು ನೋಡಿ ಆಯಿತು. ನಡು ನಡುವೆ ಒಂದೇ ಅಣುಕೋಶ ಒಡೆದು ಎರಡಾಗುವುದರ ಕ್ರಮದಲ್ಲಿ ವ್ಯತ್ಯಾಸವಾಗಿ ಎರಡು ಕೋಶಗಳು ಅನ್ಯೋನ್ಯವಾಗಿ ಜೀವರಸದ ವಿನಿಮಯವನ್ನು ಮಾಡುವವು. ಅನಂತರ ಭರದಿಂದ ಒಡೆದು ಪೀಳಿಗೆಯಾಗಿ ಬೆಳೆಯುವವು. ಹಾಗೆಯೇ 'ವಸಾಹತು'ಗಳ ರೂಪದಲ್ಲಿ ಜೀವಾಣುಪುಂಜಗಳು ಒಂದು ಒಟ್ಟು ಜೀವವಾಗಿ ಬದುಕುವ ಉದಾಹರಣೆಗಳೂ ಇರುವವು. ಅಂಥಲ್ಲಿ ಹೊರಸುತ್ತಿನ ಕೋಶಗಳು ಅನ್ನಪೋಷಣೆಯನ್ನೂ ಒಳಸುತ್ತಿನವು ಸಂತತಿಯುತ್ಪಾದನೆಯನ್ನೂ ತಮ್ಮ ಕಾರ್ಯವಾಗಿ ಕಂಡುಬರುವ ಶ್ರಮವಿಭಾಗವು ಅಥವಾ ಕಾರ್ಯದ ವರ್ಗೀಕರಣವು ಜೀವಾಣುಪುಂಜದಲ್ಲಿ ಕಂಡುಬರದ ಈ ಶ್ರಮವಿಭಾಗವು ಅಥವಾ ಕಾರ್ಯದ ವರ್ಗೀಕರಣವು ಜೀವಾಣುಪುಂಜದಲ್ಲಿ ಕಂಡುಬರುವದು.

ಎಂಡೊರಿನಾ ಮತ್ತು ಪೆಂಡೊರಿನಾ

ಇಷ್ಟೆಲ್ಲ ಇದ್ದರೂ ಇನ್ನೂ ಈ ಅವಸ್ಥೆಯಲ್ಲಿ ವಿಜಾತೀಯವಾದ ವ್ಯಕ್ತಿಗಳ ಅಥವಾ ಜೀವಿಗಳ ಮೈಥುನವನ್ನು ಹೋಲುವಂಥ ಯಾವ ವ್ಯಾಪಾರವೂ ಇರುವದಿಲ್ಲ. ಭಿನ್ನ ಜಾತಿಯ (ಅಂದರೆ ಲಿಂಗದ) ಈ ಸಂಯೋಗವೇ ಪ್ರೀತಿಯ ಮೂಲವೂ ಪುಷ್ಪವೂ ಫಲವೂ ಆಗಿದೆ. ಈ ಬಗೆಯ ವಿಷಮ ವ್ಯಕ್ತಿಸಮಾಗಮದ ಕ್ರಿಯೆಯು ಮೇಲೆ ವಿವರಿಸಿದ ಅಣುಕೋಶಗಳ ಸಂತತಿ ಕ್ರಮದಲ್ಲಿ ಬರುವದಿಲ್ಲ. ಆದರೂ ಮೇಲೆ ಜೀವಾಣು 'ಪುಂಜಗಳ' ಮಾತು ಬಂದಿದೆಯಲ್ಲವೆ? ಆ ಪುಂಜಗಳಲ್ಲಿ ಹಲವು ಪ್ರಕಾರಗಳಿರುವವು. ಅವುಗಳಲ್ಲಿ ಪೆಂಡೊರಿನಾ ಅಥವಾ ಎಂಡೊರಿನಾ ಎಂಬ ಒಂದು ಪ್ರಕಾರವಿದೆ. ಈ ಪುಂಜಗಳು ಅತ್ಯಂತ ಕೆಳಮಾದರಿಯ 'ಸೇಂದ್ರಿಯ ಸಜೀವ ಸಂಸ್ಥೆ'ಗಳು (ಇವುಗಳಿಗೆ 'ಪ್ರಾಣಿ' ಎನ್ನುವದೂ ಸರಿಯಲ್ಲ; ಕೇವಲ 'ಸಜೀವ ಸಂಸ್ಥೆ' ಅನ್ನುವುದೇ ಲೇಸು!) ಈ ಪುಂಜ ಜೀವಿಗಳಲ್ಲಿ ಮೈಥುನ ಅಥವಾ ಅಸಮ ಜೀವಿಗಳ ಸಂಯೋಗಕ್ಕೆ ಹೋಲಬಹುದಾದ ಸಂಗತಿಯು ಜರುಗುವದು ಕಂಡು ಬರುತ್ತದೆ. ಅದೇನು ನೋಡೋಣ.

ಪೆಂಡೊರಿನಾ ಪುಂಜ ಜೀವಿಯಲ್ಲಿ ಪ್ರತಿಯೊಂದು ಅಣುಕೋಶವೂ ಎರಡು ಬಿಡಿಯಾದ ಇಡಿಯಾದ ಮರಿಕೋಶಗಳಾಗಿ ಒಡೆಯುವ ಬದಲು, ಹಲವು 'ಲಘುತಮ ಭಾಜ್ಯಗಳಾಗಿ' ತೀರಸಣ್ಣ ತುಣುಕುಗಳಾಗಿ ನುಚ್ಚು ನೂರಾಗುತ್ತವೆ. (ಅಣುಕೋಶವೇ ಬರಿಗಣ್ಣಿಗೆ ಕಾಣದಷ್ಟು ಸಣ್ಣ ವಸ್ತು; ಅದರ ಈ ನುಚ್ಚು ನೂರಾದ ತುಣುಕುಗಳು ಇನ್ನೆಷ್ಟು ಸಣ್ಣವಿರಬಹುದು? ಓದುಗರ ಊಹೆಗೇ ಇದನ್ನು ಬಿಟ್ಟಿದ್ದೇನೆ!) ಈ ಅನೇಕ ಚಿಕ್ಕ ತುಣುಕುಗಳು ಮೊದಲು ಎಲ್ಲ ಒಂದೇ ಮಾದರಿಯಾಗಿರುತ್ತವೆ. ಈ ತುಣುಕುಗಳಲ್ಲಿ ಎರಡು ಒಂದಾಗಿ ಬೆರೆತ ಹೊರತು ಹೊಸ ಅಣುಕೋಶ ಉಂಟಾಗುವದೇ ಇಲ್ಲ! ಎರಡೆರಡು ತುಂಡುಗಳು ಕೂಡಿ ಒಂದು ಕೋಶವು ಮಾರ್ಪಡುತ್ತದೆ. ಇದಕ್ಕೆ ಏನು ಸಜಾತೀಯ ಸಂಯೋಗವೆನ್ನೋಣವೇ ಹೊಸಮಟ್ಟಿಗೆ ಎರಡು ಅಣು-ತುಣುಕುಗಳು ಬೇಕು, ಆದರೆ ಎರಡೂ ಒಂದೇ ಬಗೆಯವೆಂದೂ ತೋರುತ್ತದೆ!

ಇನ್ನು ಎಂಡೊರಿನಾದ ಕುಲಕತೆ? ಇಲ್ಲಿಯೂ ಪ್ರತಿ ಕೋಶವು ಒಡೆಯಬಹುದು. ಅನೇಕ ಭಾಗಗಳಾಗಿ ಒಡೆಯುವುದು. ಆದರೆ ಈ ಭಾಗಗಳೆಲ್ಲ

ವಿಷಮ ಪ್ರಕಾರದವು : ಕೆಲವು ದೊಡ್ಡವು ಮತ್ತು ತೆಪ್ಪಗೆ ಬಿದ್ದಿರುವಂಥವು; ಆದರೆ ಬೇರೆ ಕೆಲವು ಸಣ್ಣವು ಮತ್ತು ಸ್ವಚ್ಛಂದ ಚಟುವಟಿಕೆಯುಳ್ಳಂಥವು! ತುಣುಕುಗಳೆಲ್ಲ ಕೆಲವು ಹಾಗೆ ಕೆಲವು ಹೀಗೆ. ಇನ್ನು ಮುಂದಿನ ಸೋಜಿಗವೆಂದರೆ, ಈ ಕುಲದಲ್ಲಿ ಯಾವದೇ ಎರಡು ತುಣುಕುಗಳು ಕೂಡುವಂತಿಲ್ಲ. ಒಂದು ದೊಡ್ಡ ಮತ್ತು ಒಂದು ಸಣ್ಣ ತುಣುಕುಗಳು ಬೆರೆಯವವು. ಚಟುವಟಿಕೆಯುಳ್ಳ ಸಣ್ಣ ಅಂಶವು ಮಂದವಾದ ದೊಡ್ಡ ಅಂಶದಲ್ಲಿ 'ವಿಲೀನೀಕರಣ' ಹೊಂದುವದು. ಆಗಲೇ ಹೊಸ ಅಣು ಕೋಶವು ಉಂಟಾಗುವದು! ಈ ವಿಶಮಾಂಶ ಸಂಯೋಗಕ್ಕೆ ಮೈಥುನವೆನ್ನೋಣವೇ? ವಿಜಾತೀಯ ಅಂದರೆ ವಿರುದ್ಧ ರೂಪ ಗುಣಗಳಿದ್ದ ಎರಡು ಅಂಶಗಳು ಕೂಡಿ ಒಂದಾಗಿ ಹೊಸಹುಟ್ಟು ಮುಂದಾಗುವದು. ಇಲ್ಲಿ ಮಿಥುನವಿದೆ; ಅಂದರೆ ಇದೂ ಮೈಥುನವೇ?

ಅಹುದು. ಪೆಂಡೊರಿನಾದಲ್ಲಿ ಮೊದಲು ಮಾಡಿದ ಪ್ರಯೋಗವು ಇಲ್ಲಿ ಸಫಲವಾಯಿತೆನ್ನಬಹುದು, ಎಂಡೊರಿನಾದಲ್ಲಿಯೇ ನಿಸರ್ಗವು ಮೊತ್ತ-ಮೊದಲು ಲಿಂಗ ಭೇದವನ್ನು ಶೋಧಿಸಿಕೊಂಡಿತು. ವಿಶ್ವದ ಆದಿಯಲ್ಲಿ ಕೂಟಸ್ಥನೂ ಸ್ಥಾಣುವೂ ಆದ ಪುರುಷ; ಅವನ ಇದುರು ಚಂಚಲವೂ ತ್ರಿಗುಣಾತ್ಮಕವೂ ಆದ ಪ್ರಕೃತಿ, ಹೀಗೆ ನಿತ್ಯ ಮಿಥುನ ಒಂದು ಬ್ರಹ್ಮಾಂಡ ನಿರ್ಮಾಣಕ್ಕೆ ಕಾರಣವಾಯಿತೆನ್ನುವರು ನಮ್ಮ ವೇದಾಂತಿಗಳು. ಆ ಮಾತು ಸಟೆಯೋ ದಿಟವೋ. ಪ್ರಕೃತಿ-ಪುರುಷರ ಏಕಾಂತದಲ್ಲಿ ಇಣಿಕಿ ನೋಡಲು ಎದೆಪಟ್ಟ ವೇದಾಂತಿಗಳೇ ಅದನ್ನು ಬಲ್ಲರು! ಆದರೆ ವಿಜ್ಞಾನಿಗಳು ನಿಸರ್ಗದ ಏಕಾಂತವನ್ನು ಭಂಗಮಾಡಿ ಲಿಂಗಭೇದದ ಮೂಲ ಮಟ್ಟವನ್ನು ಕಂಡುಕೊಂಡಿದ್ದಾರೆ. ಎಂಡೊರಿನಾ ಜೀವಾಣುಪುಂಜದ ಸಂತತಿಯುತ್ಪಾದನೆಯು ಎಲ್ಲ ಪ್ರಾಣಿಪ್ರಪಂಚದ ದಾಂಪತ್ಯ ಪರಂಪರೆಯ ಆದಿಯ 'ಪ್ರಕೃತಿ ಪುರುಷ' ಸಂಯೋಗ! ವೇದಾಂತಿಗಳು ಬಣ್ಣಿಸುವ 'ಪುರುಷ' ಲಕ್ಷಣವೆಲ್ಲ ದೊಡ್ಡ-ಮಂದ-ನಿಷ್ಕ್ರೀಯ ಅಣು-ವಂಶಕ್ಕೆ ಇದೆ. ಹೀಗೆ ಲಿಂಗಭೇದದ ಉಗಮವನ್ನು, ದಾಂಪತ್ಯದ ಆದಿಯನ್ನು, ಮೈಥುನದ ಮೂಲವನ್ನು ನಿಸರ್ಗವು ನಿರ್ಮಿಸಿಕೊಂಡದ್ದು ಎಂಡೊರಿನಾ ಜೀವಾಣುಪುಂಜದಲ್ಲಿ!

ಮೊದಲೇ ಇದ್ದ ಅಂಶದೊಳಗೆ ಮೊದಲೇ ಇದ್ದ ಇನ್ನೊಂದು ಅಂಶವು ಸೇರಿ ಒಂದಾದ ಹೊರತು ಹೊಸದೊಂದು ಅಣುವು ಉಂಟಾಗುವದಿಲ್ಲ. ಅಣುವಿನ ಈ ನಡತೆ ಘನವಾದ ಪಾಠವನ್ನೇ ಕಲಿಸುವದಿಲ್ಲವೇ? ಹೊಸತು ಹೊಸತು

ಎಂಬುವದು ಆಕಾಶದಿಂದ ಆಕಾರತಾಳಿಬರುವದೇ? ಶೂನ್ಯ ಸಂಪಾದನೆಯೇ? ಅಲ್ಲ, ಹಳೆಯದನ್ನು ಒಳಸೇರಿ ಹಳೆಯದರಲ್ಲಿ ತಳವೂರಿ ಹಳೆಯದರ ಸತ್ವ ಹೀರಿಯೇ ಹೊಸತು ಹೊಸತಾಗುತ್ತದೆ. ಹಳೆಯ ಹತ್ತಿಯ ಹಳೆಯ ನೂಲನ್ನೇ ಹಾಸು-ಹೊಕ್ಕಾಗಿ ಹೊಸೆದು ಹೊಸತು ಬಟ್ಟೆಹುಟ್ಟುವದಿಲ್ಲವೇ? ಹಾಗೆಯೇ ಹಳೆಯದರ ಹೊಟ್ಟೆಯಿಂದ ಹಳೆಯದರ ಹುರುಳನ್ನುಂಡು ಹೊಸತು ಹೊರಡುತ್ತದೆ. ಆದರೆ ಹಳೆ-ಹೊಸತಿನ ಈ ಜುರುಳಿನ ಹೊಂದಿಕೆಯ ಪಾಠವನ್ನು ತರುಣರು ತಿಳಿಯುವದು ತಾರುಣ್ಯವು ತೀರಿದಾಗಲೇ !ಇರಲಿ.

ಜೀವಾಣುಪುಂಜಗಳಲ್ಲಿ ಪ್ರತಿಯೊಂದು ಅಣು-ಕೋಸವು ಈ ಸೂಕ್ಷ್ಮ ಅಂಶಗಳನ್ನುಂಟು ಮಾಡುತ್ತದೆ. ಆದರೆ ಜೀವ ವಿಕಾಸದ ಮೇಲಿನ ಮೆಟ್ಟಿಲುಗಳನ್ನು ಏರಿದಂತೆ ಹೆಚ್ಚು ಹೆಚ್ಚು ಸಂಕೀರ್ಣವಾದ ಸೇಂದ್ರಿಯ ಜೀವಿಗಳಲ್ಲಿ ಅವುಗಳ ದೇಹದ ಕೆಲವೊಂದು ಭಾಗಗಳೇ ಈ ಸೂಕ್ಷ್ಮ ಜೀವಾಣು ಅಂಶಗಳನ್ನು ಉಂಟು ಮಾಡಲು ಮೀಸಲಾಗಿ ದುಡಿಯುತ್ತವೆ. ಅಂಥ ಜೀವಾಣು-ಅಂಶಗಳು ಹೆಚ್ಚಿನ ವಿಶೇಷಗಳುಳ್ಳವಾಗಿರುತ್ತವೆ. ಎರಡು ಪ್ರಕಾರದ ಜೀವಾಣು-ಅಂಶಗಳು ಹೆಚ್ಚು ಒಂದರಿಂದೊಂದು ವಿಭಿನ್ನವಾಗಿಯೂ ತೀರ ವಿಶಿಷ್ಟ ಗುಣಧರ್ಮಗಳುಳ್ಳವಾಗಿಯೂ ಮಾರ್ಪಡುತ್ತವೆ. ಈ ಅಣು ಅಂಶಗಳೇ ಮುಂದಿನ ಮೇಲ್ಮಟ್ಟದ ಪ್ರಾಣಿಗಳಲ್ಲಿ ಮತ್ತು 'ರೇತಸ್ಸು'ಗಳ ರೂಪವನ್ನು ಪಡೆಯುತ್ತವೆ. ರಜಸ್ಸು ಮತ್ತು ರೇತಸ್ಸು ಎರಡೂ ಪರಸ್ಪರ ವಿರುದ್ಧ ವಿಶೇಷಗಳುಳ್ಳ ಅಣು ಅಂಶಗಳು. ಆದರೆ ಈ ವಿಷಮ ವಿರುದ್ಧ ದ್ರವ್ಯಗಳು ಇನ್ನೂ ಹಲವು ಜಾತಿಯ ಪ್ರಾಣಿಗಳಲ್ಲಿಯೇ ಒಂದೆ ಶರೀರದಲ್ಲಿಯೇ ಉಂಟಾಗುತ್ತವೆ. ಅದೂ ಒಂದೇ ಜನಕಜೀವಿಯಿಂದ ಉಂಟಾಗುತ್ತವೆ. ಮಣ್ಣು-ಹುಳ, ಓಯ್‌ಸ್ಟರ ಜಾತಿಯ ಮೀನು, ಹೆರಿಂಗ ಜಾತಿಯ ಮೀನು. ಇವೆಲ್ಲ ಈ ಬಗೆಯವು. ಇವುಗಳಲ್ಲಿ ಗಂಡು ಹೆಣ್ಣು ಎಂಬ ಎರಡು ಬಗೆಯ ದೇಹಗಳಿಲ್ಲ ಒಂದೇ ದೇಹವು ಎರಡೂ ಪ್ರಕಾರದ ಜೀವಾಣು ಅಂಶಗಳನ್ನು ರಜಸ್ಸು ಮತ್ತು ರೇತಸ್ಸುಗಳಂದದ ದ್ರವ್ಯಗಳನ್ನು ಉಂಟು ಮಾಡುತ್ತದೆ.

ನಿಸರ್ಗವು ಒಮ್ಮೆಲೇ ಗಂಡು-ಹೆಣ್ಣು ಬೇರೆಬೇರೆ ಮಾಡಲಿಲ್ಲ. ಎರಡೂ ಬಗೆಯ ಜೀವಾಣು ಅಂಶಗಳನ್ನುಂಟುಮಾಡುವ ಕಲೆಯನ್ನು ಸಾಧಿಸಿದರೂ ಅವುಗಳಿಗಾಗಿ ಎರಡು ಬೇರೆಯಾದ ಲಿಂಗಭೇದದ ಶರೀರಗಳನ್ನು ನಿರ್ಮಿಸುವ ಮೊದಲು ನಿಸರ್ಗವು ಅನುಮಾನಿಸಿದಂತೆ ತೋರುತ್ತದೆ.

ಲಿಂಗಭೇದವೆಲ್ಲಿಂದ?

ಹಾಗಾದರೆ ಲಿಂಗಭೇದದ –ಭಿನ್ನಲಿಂಗದ ದೇಹಗಳ ಅತ್ಯಂತ ಮೊದಲಿನ ಮಟ್ಟ ಎಲ್ಲಿ ಕಂಡು ಬರುತ್ತದೆ? ಸಿನ್‌ಗೇಮ್ ಎಂಬ ಒಂದು ಜಾತಿಯ ಜಂತು–ಇದು ಸ್ವತಂತ್ರವಾಗಿ ಬಾಳಿಬದುಕುವ ಜೀವಿಯಲ್ಲ. ಹಕ್ಕಿಗಳ ಒಳಮೈಯಲ್ಲಿ ಅವುಗಳ ಜೀವದಮೇಲೆ ಜೀವಿಸುವ ಒಂದು ಜಂತು. ಈ ಜಂತುವಿನಲ್ಲಿ ಕಂಡುಬರುವ ಸೋಜಿಗವೇನು? ಈ ಜಾತಿಯಲ್ಲಿ ದೊಡ್ಡದೊಂದು ದೇಹ ಹೆಣ್ಣಿನದು. ಹೆಣ್ಣೆನ್ನುವದೇಕೆಂದರೆ, ಅದು 'ಅಂಡ'ಗಳನ್ನು (ರಜಸ್ಸನ್ನು) ಉಂಟುಮಾಡುತ್ತದೆ. ಹೆಣ್ಣಿಗಿಂತ ಚಿಕ್ಕದಾದ ಇನ್ನೊಂದು ದೇಹ; ಇದು ಗಂಡಿನದು. ಈ ಚಿಕ್ಕದೇಹವು ದೊಡ್ಡ ದೇಹದ ಮಗ್ಗಲಲ್ಲಿ ಶಾಶ್ವತವಾಗಿ ಅಂಟಿಕೊಂಡಿರುತ್ತದೆ! ಈ ಪುಟ್ಟ ದೇಹವು ಆ ದೊಡ್ಡ ದೇಹದ 'ಯಜಮಾನ'ರೆಂತ ಯಾರೂ ಹೇಳಲಾರರು! ಮುಂದೆ ಮಾನವಕೋಟಿಯಲ್ಲಿ ಅಷ್ಟೊಂದು ಜಂಭದ ಹುಂಜದಂತೆ ಸಡಗರದಿಂದ ಮೆರೆಯುವ ಗಂಡಿನ ಆದಿಯ ಅವತಾರವು ಇಷ್ಟೊಂದು ಅಲ್ಪವೆಂಬುದು ಯಾರಿಗೂ ಗೊತ್ತಾಗದು. ಈ ವಾಮನಾವತಾರದಲ್ಲಿ ಗಂಡು ದೇಹವು ಹೆಣ್ಣು ದೇಹಕ್ಕೆ ಹೊಂದಿದ್ದರೆ ರೇತಸ್ಸನ್ನು (ಬೀಜವನ್ನು) ಉಂಟುಮಾಡುವ ಒಂದು ಅವಯವವೆಂಬಂತೆ ತೋರುವದು. (ಊರಿಗೆಲ್ಲ ನರಸಿಂಹಾವತಾರಿಯಾಗಿ ಉರಿಯುವ ಗಂಡ, ಹೆಂಡತಿಗೆ ಹೆದರುವ ವಾಮನಾವತಾರಿಯಾಗಿ ಆಕೆಯ 'ಗಂಡು–ಮೆಟ್ಟಿ'ಗೆ ತಾನೇ 'ಬಲಿ' ಯಾಗಿ ಪಾತಾಳ ಸೇರುವದು ಮಾನವ ಕೋಟಿಯಲ್ಲಿಯೂ ಕಡಿಮೆ ಕಂಡು ಬರುವದಿಲ್ಲ. ಇಂಥ ಪತ್ನೀವ್ರತ ಪತಿಗಳೆಲ್ಲ ಈ ಆದಿ ಅವಸ್ಥೆಯ ಸಿನಗೇಮ ಗಂಡಿನ ಬಿರುದನ್ನೆ ಮುಂದುವರಿಸುವರೆನ್ನಬೇಕು.)

ಕ್ರಿಮಿಕೀಟಗಳಲ್ಲಿ ಎಲ್ಲ ಹೀಗೆಯೇ, ಹೆಣ್ಣೇ, ಪ್ರಶಸ್ತ, ಪ್ರಚಂಡ ಮತ್ತು ಪ್ರತಾಪವತಿ. ಉದಾಹರಣೆಗೆ, ಬೊನೆಲ್ಲಿಯಾದಂಥ ಕಡಲು–ಹುಳಗಳಲ್ಲಿ ಹೆಣ್ಣು ದೇಹ ನಾಲ್ಕು ಅಂಗುಲ ಉದ್ದವಿರುತ್ತದೆ. ಹಾಗೆಯೇ ಗಾತ್ರದಲ್ಲಿಯೂ ಒಳ್ಳೇ ಪ್ರಶಸ್ತವಿರುತ್ತದೆ. ಗಂಡು ತೀರ ಕಂಗೆಟ್ಟ ಕಸ. ಹೆಣ್ಣಿಗಿಂತಲೂ ನೂರು ಪಾಲು ಚಿಕ್ಕ ದೇಹದ ಜೀವಿ. ಹಾಗಾದರೆ ಈ ದಂಪತಿಯ ಸಮಾಗಮವು ಎಂತು? ಅದೂ ಒಂದು ಅಪೂರ್ವ ಸಂಗತಿ! ಈ ಪುಟ್ಟ ಪ್ರಾಣಿಗಳಾದ ಗಂಡುಗಳು ಹೆಣ್ಣು ದೇಹದ ಪಚನನಲಿಕೆಯನ್ನು ಒಳಸೇರುತ್ತವೆ. ಅದರೊಳಗಿಂದ ಸರಾಗವಾಗಿ ಹೆಣ್ಣಿನ ದೇಹದೊಳವನ್ನು ಹೊಕ್ಕುತ್ತವೆ; ಮತ್ತು ಅಲ್ಲಿರುವ ಅಂಡಗಳಲ್ಲಿ (ರಜಸ್ಸಿನ

ಕಣಗಳಲ್ಲಿ) ತಮ್ಮ ಬೀಜಾಣುಗಳನ್ನು ಬಿಟ್ಟು ಕೃತಾರ್ಥರಾಗುತ್ತವೆ! ಗಂಡಿನ ಹೃದಯದಲ್ಲಿ ಹೆಣ್ಣಿಗೆ ಎಂದು ಸ್ಥಾನವು ದೊರೆಯುವದೋ ಅಂದೇ ಆಕೆಯು ಅವನ ಹೆಂಡತಿ ಯಾಗುವಳೆಂದು ನಮ್ಮ ಸಾಹಿತಿಗಳು ಸಾರುವರು. ಈ 'ಸ್ಥಾನಿಕ' ಮಹತ್ವ ಮನುಷ್ಯರಲ್ಲಿ ಮೇಲೆ ಬಣ್ಣಿಸಿದ ಕ್ರಿಮಿಗಳಲ್ಲಿ ಗಂಡಿಗೆ ಹೆಣ್ಣಿನ ಉದರದಲ್ಲಿ ಉದಾರಾಶ್ರಯ ದೊರೆತಾಗಲೇ ಗೃಹಸ್ಥಾಶ್ರಮದ ಶ್ರಮವು ಆರಂಭವಾಗುತ್ತದೆ.

ಕೀಟಗಳಲಿಯೂ ಹೀಗೆಯೇ, ಹೆಣ್ಣು ಕೀಟವು (ನೊಣವು) ಯಾವಾಗಲೂ ಗಂಡಿಗಿಂತ ಗಟ್ಟಿಯೂ ಗಾತ್ರದಲ್ಲಿ ದೊಡ್ಡದೂ ಆಗಿರುತ್ತದೆ. ಪಾತರಗಿತ್ತಿಯು ತನ್ನ ಸಂಗಾಡಿ (ಪಾತರಗಾರ?) ಗಿಂತ ಹತ್ತು ಪಟ್ಟು ಭಾರವೂ ಹದಿನೈದು ಪಟ್ಟು ದೀರ್ಘವೂ ಇರುತ್ತದೆ.

ಹಾಗಾದರೆ ಹೆಣ್ಣು 'ಅಬಲೆ'ಯಾದದ್ದು ಎಂದಿನಿಂದ? ಪಕ್ಷಿಗಳ ಮತ್ತು ಪಶುಗಳ ಪ್ರಪಂಚವು ಪ್ರಾರಂಭವಾದಂದಿನಿಂದ ಪಕ್ಷಿಪಶುಗಳಲ್ಲಿ ಮಾತ್ರ ಗಂಡು ಶ್ರೇಷ್ಠ. ಈ ಶ್ರೇಷ್ಠತ್ವವು ಗಂಡಿಗೆ ಬಂದ ಕಾರಣವೇನು? ಸಂತತಿಯುತ್ಪಾದನೆಯ ಕಾರ್ಯದಲ್ಲಿ ಇನ್ನು ಹೆಣ್ಣೇ ಬಹುಭಾಗದ ಹೊರೆಯನ್ನೂ, ಹೊಣೆಯನ್ನೂ, ಹೊರುವುದು ಕಂಡು ಬರುತ್ತದೆ. ಈ ಹೊರುವ ಹೆರುವ ಹೋರೆಯ ಮೂಲಕ ಹೆಣ್ಣಿನ ಮೈಕೆ ಕಟ್ಟಿದಂತಾಗುತ್ತದೆ. ಬದುಕಿನ ಕಣದಲ್ಲಿ ಬಾಳಿನಲ್ಲಿ ಬಹುಕಾಲ ಪುನಃ ಪುನಃ ಹೆಣ್ಣು ಅಸಹಾಯಳೂ ಅಶಕ್ತಳೂ ಆಗಿ ಉಳಿಯುತ್ತಾಳೆ. ಪಾಲನೆ ಪೋಷಣೆ ಮತ್ತು ಸ್ವಸಂರಕ್ಷಣೆಗಳನ್ನು ಕೂಡ ಹೆಣ್ಣು ತನ್ನಷ್ಟಕ್ಕೆ ತೂಗಿಸಿಕೊಂಡು ಹೋಗದಂತಾಗುತ್ತದೆ. ಆದರೆ ಕೇವಲ 'ಪುಟ್ಟಿಸುವ ಸ್ವಾಮಿ ತಾ'ನಾದ ಗಂಡು ಸ್ವತಂತ್ರನೂ ಸ್ವಚ್ಛಂದನೂ ಆಗಿ ಉಳಿಯುತ್ತಾನೆ. ರಘುವಂಶದ ರಾಜರ ಪ್ರಜೆಗಳಂತೆ ಗಂಡು 'ಕೇವಲ ಜನ್ಮ ಹೇತು'ವಾಗಿ ಉಳಿಯುತ್ತಾನೆ. ಆದ್ದರಿಂದ ಪ್ರೀತಿಯ ವ್ಯೂಹದಲ್ಲಿಯೂ, 'ಸ್ಮರ'ನ ಸಮರ ರಂಗದಲ್ಲಿಯೂ, ಗಂಡಿನದೇ ಮೇಲುಗೈ ಆಗುತ್ತದೆ. ಬೇಟದ ಬೇಟೆಯಲ್ಲಿ ಅವನೇ ಅಬಲೆಗಾಗಿ ಬಲೆಯೊಡ್ಡುತ್ತಾನೆ. ಪ್ರಣಯದೇವತೆಯನ್ನು ಪ್ರಸನ್ನಪಡಿಸುವದಕ್ಕಾಗಿ ಯಾವ ಸಾಹಸಕ್ಕೂ ಎರಗುತ್ತಾನೆ. ಅವನ ಯುದ್ಧದ ಪತಾಕೆಗಾಗಿ ಅವನ ನಂಬಿಕೆಯ ಧ್ರುವಚಿಕ್ಕೆಯಾಗಿ, ಅವನ ಯಜ್ಞದ ಅಖಂಡ ಶಿಖೆಯಾಗಿ ಹೆಣ್ಣು ನಿಂತಿರುವಾಗ ಗಂಡು ಅವಳ ರಕ್ಷೆಗಾಗಿ ಎದೆಯ ಕೋಟೆಕಟ್ಟಿ ಸಾವಿನ ಕದಂಕವನ್ನು ದಾಟಿ ಬಾಳಿನ ಬಯಲಲ್ಲಿ ನಿರಂತರದ ಹೋರಾಟ ಹೂಡಿ ಸತ್ತೆಯನ್ನು ಯಶಸ್ಸನ್ನು ಕೀರ್ತಿಯನ್ನು

ಕೊನೆಗೆ ತಿಂಗಳ ಸಂಬಳವನ್ನಾದರೂ ತಂದು ಅವಳ ಅಡಿಯಲ್ಲಿಯೋ ಉಡಿಯಲ್ಲಿಯೋ ಇಡುತ್ತಾನೆ.

ಹೀಗೆ ಗಂಡಿಗೆ ಪ್ರಾಧಾನ್ಯ ಮತ್ತು ಪ್ರಾಬಲ್ಯ ಬಂದದ್ದು ಇತ್ತೀಚೆಗೆ: ಅಂದರೆ ನಿಸರ್ಗವು ಪಶು ಪಕ್ಷಿ ಜೀವನದ ಮಟ್ಟಕ್ಕೆ ಪ್ರಾಣಿಯ ವಿಕಾಸವನ್ನು ತಂದು ಮುಟ್ಟಿಸಿದ ಮೇಲೆ. ಆ ಮೊದಲಿನ ಕ್ರಮದಲ್ಲಿನ ಹೆಣ್ಣೇ ಪ್ರಬಲೆ ಎಂಬುದನ್ನು ನಾವು ನೋಡಿದೆವು. ಗಂಡಿಗೆ ಕೇವಲ ಪುಟ್ಟಿಸುವ ಹೊಣೆಯನ್ನು ಮಾತ್ರ ಬಿಟ್ಟು ಸ್ವಾಮಿತ್ವವನ್ನು ಕೊಡದಂತೆ ಹೆಣ್ಣು ಉಗ್ರವಾಗಿ ಜಾಗ್ರತೆವಹಿಸುವ ಉದಾಹರಣೆಗಳು ನಿಸರ್ಗದಲ್ಲಿ ಕಡಿಮೆ ಇಲ್ಲ. ಹಲವು ಪ್ರಾಣಿ ಜಾತಿಗಳಲ್ಲಿ ಮೈಥುನ ಅಥವಾ ರಜೋ ರೇತಃ ಸಂಯೋಗದ ಕ್ರಿಯೆಯಲ್ಲಿಯೇ ಗಂಡಿಗೆ ಗಂಡಾಂತರ ಒದಗುವುದುಂಟು! ಬೀಜಾಣುಗಳನ್ನು ಅಂಡಾಣುಗಳಲ್ಲಿ ಬಿಟ್ಟೊಡನೆ ಗಂಡು ಮಡಿಯುವುದುಂಟು. ಅದಕ್ಕೆ (ಹೆಣ್ಣು 'ಮಡದಿ'ಯೆಂದೆನಿಸಿಕೊಂಡಳೇ)? ಸಂಯೋಗವು ಮುಗಿದೊಡನೆಯೇ ಹೆಣ್ಣು ಪ್ರಾಣಿ ಗಂಡು ಪ್ರಾಣಿಯನ್ನು ಬಿಡುವುದುಂಟು.! (ನಿಜವಾಗಿಯೂ ಇಂಥಲ್ಲಿ ಹೆಣ್ಣು ಗಂಡಿನ ಪ್ರಾಣ ಪ್ರಿಯಳಾಗುವಳು!) ಇಂಥ ಉದಾಹರಣೆಗಳನ್ನು ಕೊಡುತ್ತ ಹೋಗುವದು ಇಲ್ಲಿ ಸಲ್ಲದು. ಇದು ಕೇವಲ ಪ್ರಾಣಿಶಾಸ್ತ್ರದ ಗ್ರಂಥವಲ್ಲ. ಪ್ರೀತಿಯ ಮೂಲ ಶೀಲಗಳನ್ನು ಅರಿತುಕೊಳ್ಳುವ ಮಟ್ಟಿಗೆ ಮೈಥುನ ಲಿಂಗಭೇದಗಳ ವಿಕಾಸದ ಮಟ್ಟುಗಳನ್ನು ಇಲ್ಲಿ ಓಟದ ನೋಟದಲ್ಲಿ ಅವಲೋಕಿಸುವದಿದೆ.

'ಪೃಥಾ–ಪ್ರಸವ' ಮತ್ತು ನಿಸರ್ಗದ ನಿಷೇಧ

ತೀರ ಕೆಳಮಟ್ಟದ ಕೆಳಮಾದರಿಯ ಜೀವಿಗಳಲ್ಲಿ ಹೀಗೆ. ಗಂಡಿನ ಭೂಮಿಕೆ ಹೆಣ್ಣಿಗೆ ವಿಧೇಯವಾಗಿ ಇರುವುದನ್ನು ನೋಡಿದರೆ ಒಂದೆರಡು ಪ್ರಶ್ನೆಗಳು ಉಂಟಾಗುತ್ತವೆ. ಗಂಡು ಎನ್ನುವದೇ ನಿಸರ್ಗವು ಇತ್ತೀಚೆಗೆ ಬೆಳಸಿಕೊಂಡ ಒಂದು ಪ್ರತ್ಯೇಕ ವೈಶಿಷ್ಟ್ಯದ ಮಾದರಿಯೇ? ಮಣ್ಣು–ಹುಳದಂಥ ಜೀವಿಗಳಲ್ಲಿ ಒಂದೇ ದೇಹದಲ್ಲಿ ಎರಡೂ ಲಿಂಗಗಳ ಜೀವಾಣುಗಳನ್ನು ಸಾಗುಗೊಳಿಸಿದ ನಿಸರ್ಗವು ಹೀಗೆ ಅವುಗಳಿಗಾಗಿ ಪ್ರತ್ಯೇಕ ಸ್ವತಂತ್ರ ಶರೀರ ಸಂಸ್ಥೆಗಳನ್ನು ಬೆಳೆಸಿಕೊಂಡದ್ದು ಏತಕ್ಕೆ? ಉಭಯ ಲಿಂಗಿ ಪ್ರಾಣಿಗಳ ಜಾತಿಯಿಂದ ಏಕಲಿಂಗ ಜೀವಾಣುಗಳನ್ನುಂಟು ಮಾಡುವ ಹೊಸ ಶೋಧದ ಪ್ರಯೋಜನವೇನಿರಬಹುದು? ಜೀವವನ್ನು ಹೆಣ್ಣು ಗಂಡೆಂಬ ಎರಡು ಬಗೆಯಾಗಿ ಬೇರ್ಪಡಿಸುವದರ ಉಪಯೋಗವೇನು ? ಇನ್ನು

ಗಂಡಿನ ಈ ಹೊಸ ಹುಟ್ಟು ಹೆಣ್ಣಿನ ಬದುಕಿಗೆ ಅಪರಿಹಾರ್ಯವಾಗಿ ಅವಶ್ಯವಿತ್ತೇ? ಹಾಗೇನೂ ಕಂಡುಬರುವದಿಲ್ಲ. ನಿಸರ್ಗವೂ ಪ್ರಯೋಗಶಾಲೆಯೂ ಅದನ್ನು ಅಲ್ಲಗಳೆದಿವೆ. ಕೆಲವು ಪ್ರಾಣಿಜಾತಿಗಳಲ್ಲಿ ಗಂಡುಹೆಣ್ಣೆಂಬ ಭೇದವು ಪೂರ್ತಿಯಾಗಿ ವಿಕಾಸಗೊಂಡಿದ್ದರೂ, ಗಂಡಿನ ಯಾವ ನೆರವೂ ಇಲ್ಲದೆ, ಹೆಣ್ಣು ಸಂತತಿಯನ್ನುಂಟು ಮಾಡುವದು ಕಾಣುತ್ತದೆ. ಪ್ರಯೋಗಶಾಲೆಗಳಲ್ಲಿ ಈ ಬಗೆಯ ಪ್ರಯತ್ನಗಳು ಯಶಸ್ವಿಯಾಗಿವೆ. ಗಂಡಿನ ಪ್ರತ್ಯಕ್ಷ ಅವಶ್ಯಕತೆಯನ್ನೇ ಇಲ್ಲದಂತೆ ಮಾಡುವ ಪ್ರಯೋಗಗಳು ಸಫಲವಾಗಿವೆ. ಈ ವಿಧದ ರತಿರಹಿತ ಜನ್ಮಕ್ಕೆ 'ಪಾರ್ಥಿನೊ ಜನಿಸಸ್' ಎಂತ ಹೆಸರು. ಇದನ್ನು 'ಪಾರ್ಥ ಜನನ'ವೆನ್ನಬಹುದು. ಕುಂತಿಗೆ ಕರ್ಣ ಹುಟ್ಟಿದ್ದು ಗೊತ್ತಿಲ್ಲವೆ? ಕೌಮಾರ್ಯವನ್ನು ಕಳೆದುಕೊಳ್ಳದೇ ಕುಂತಿಯು ಕರ್ಣನನ್ನು ಪಡೆದಳು. ಕುಂತಿಯು ಪೃಥೆ. ಆಕೆಯಲ್ಲಿ ಈ ಜನನ 'ಪಾರ್ಥ ಜನನ' ಈ ಪ್ರಯೋಗದಿಂದ, ರಜೋ-ಬೀಜ ಸಂಯೋಗಕ್ಕಾಗಿಯೇ ಗಂಡು ಉಂಟಾಗಿಲ್ಲವೆಂಬ ಮಾತು ಸ್ಪಷ್ಟವಾಗುತ್ತದೆ. ಹಾಗಾದರೆ ಗಂಡು ಹುಟ್ಟಿ ಬಂದದ್ದು ಏಕೆ?

ರಜೋಬೀಜಸಂಯೋಗ ಒಂದೇ ಗಂಡಿನ ಕಾರ್ಯವಿರಲಾರದು. ಆ ಸಂಯೋಗದಲ್ಲಿ ಎರಡು ವಿಷಮ ಜೀವಾಣುಗಳ ವಿಭಿನ್ನ ಗುಣಧರ್ಮಗಳು ಕೂಡಿಯೇ ಕಲೆಬೆರೆತು ಹೊಸ ಹುಟ್ಟಿಗೆ ಸತ್ವಸಂಪನ್ನತೆಯನ್ನು ಕೊಡುವುದಕ್ಕೆ ಗಂಡು ಹೆಣ್ಣು ಹೀಗೆ ಬೇರೆಯಾಗಿ ಬೆಳೆಯುವದಿರಬಹುದು. ಒಂದೇ ದೇಹದಲ್ಲಿ ಗಂಡು ಹೆಣ್ಣು ಎರಡು ಬಗೆಯ ಜೀವಾಣು ಅಂಶಗಳು ಬೆಳೆಯುವದರ ಬದಲು ಎರಡು ಬೇರೆ ಬೇರೆ ದೇಹಗಳಲ್ಲಿ ಅವು ಪ್ರತ್ಯೇಕವಾಗಿ ಬೆಳೆದು ಬಂದರೆ ಅವುಗಳ ಸತ್ವವೂ ಗುಣಧರ್ಮಗಳೂ ಒಳ್ಳೆ ಬಲಿಯುವವು. ಹೆಣ್ಣು ಗಂಡುಗಳ ಪೀಳಿಗೆಗಳು ನಡೆದು ಬಂದಂತೆ ಅವುಗಳಲ್ಲಿ ಆನುವಂಶಿಕ ಸಂಸ್ಕಾರಗಳ ಪುಟವು ಬೆಳೆದು ಅವುಗಳ ಶಕ್ತಿಸಾಮರ್ಥ್ಯಗಳು ಪುಷ್ಟಗೊಳ್ಳುವವು. ಇಂಥ ಆನುವಂಶಿಕ ಸಂಸ್ಕಾರಗಳಿಂದ ಪರಿಪುಷ್ಟವಾದ ರಜೋಬೀಜಗಳು ಸಂತತಿಯಲ್ಲಿ ಒಂದಾದರೆ ಆ ಸಂತತಿಯಲ್ಲಿ ಇಮ್ಮಡಿ ಸಂಸ್ಕಾರಗಳು ಇಳಿದು ಬರುವವು. ಇದರಿಂದ ಸಂತತಿಯ ಸತ್ಯ ಸಂಪನ್ನತೆಯು ಹೆಚ್ಚುವದು ಶಕ್ಯವಾಗುವದು. ಹೀಗೆ ವಿಷಮ ಜೀವಾಣುಗಳು ಒಂದೇ ದೇಹದಲ್ಲಿ ಹುಟ್ಟಿ ಒಂದೆಡೆಗೆ ಕೂಡಿ ಕಟ್ಟಿದ ಹೊಸ ಅಣುಕೋಶಕ್ಕಿಂತ ಬೇರೆ ಬೇರೆ ದೇಹಗಳಲ್ಲಿ ಹುಟ್ಟಿಬಂದು ಕೂಡಿ ಕಟ್ಟಿದ ಕೋಶದ ಸತ್ಯ ಹೆಚ್ಚಾಗುವದು. ಜೀವನಕ್ರಮದಲ್ಲಿ ಅದು ಹೆಚ್ಚು ಬದುಕಲು ತಕ್ಕದ್ದಾಗುವದು. ತನ್ನಲ್ಲಿ ರಜಸ್ಸಿನಲ್ಲಿಯೇ ತನ್ನಲ್ಲಿಯ ಬೀಜವನ್ನು ಕೂಡಿಸುವ ರೀತಿಯು ಹಿತಕರವಲ್ಲ.

ಇದನ್ನು ಕಂಡುಕೊಂಡ ನಿಸರ್ಗವು ರಜಸ್ಸಿಯಾಗಿ ಬೇರೆ, ರೇತಸ್ಸಿಗಾಗಿ (ಬೀಜಕ್ಕಾಗಿ) ಬೇರೆ ಹೀಗೆ ಲಿಂಗಭೇದವನ್ನು ಏಕೆ ಕಲ್ಪಿಸಿಕೊಂಡಿರಬಾರದು? ಅಹುದು, ಲಿಂಗಭೇದದ ಕಲ್ಪನೆಯೇ ಅದಕ್ಕಾಗಿ ಆಗಿದೆ.

ಸಜಾತೀಯ–ಸ್ವಜಾತೀಯ–ಸಂಯೋಗವು ನಿಸರ್ಗಕ್ಕೆ ಮಾನ್ಯವಿಲ್ಲ. ಜೀವದ ಹುಟ್ಟಿನ ಬಗೆಯ ವಿಕಾಸವೇ ಈ ಬಗೆಯ ಸ್ವಯಂ–ಸಂಯೋಗಕ್ಕೆ ಹೆಚ್ಚು ಹೆಚ್ಚು ಪ್ರತಿಕೂಲವಾಗುವಂತೆ ನಡೆದು ಬಂದಿದೆ. ರಜಸ್ಸು ಮತ್ತು ರೇತಸ್ಸು ಆದಷ್ಟು ಭಿನ್ನ ಹುಟ್ಟಿನ (ಜಾತಿಯ)ದಿರಬೇಕು ಒಂದೇ ಕುಲದ್ದಿರಬಾರದು–ಎಂಬ ಕಟ್ಟು ನಿಟ್ಟು ನಿಸರ್ಗವೇ ರಕ್ತಗತವಾಗಿ ಜೀವಿಗೆ ಕಲಿಸಿದ ಪಾಠವಾಯಿತು. ಇದೇ ಮುಂದೆ ನಮ್ಮ ಮಾನವ ಕುಲದಲ್ಲಿ ಸಾಮಾಜಿಕ ಸಂಪ್ರದಾಯಗಳ ಮೂಲಕವೂ ಮಾನಸಿಕ ಸಂಸ್ಕಾರಗಳ ಮೂಲಕವೂ, ಸೋದರ ಸಪಿಂಡರ ಅಥವಾ ಸಗೋತ್ರರ ವಿವಾದದ ವಿರುದ್ಧ ಉಗ್ರ ನಿಷೇಧವಾಗಿ ನೆಲೆಗೊಂಡಿತು. ಬಂಧು–ಭಗಿನಿಯರ, ಬಂಧು ಬಳಗದವರ ಒಂದು ಬಣದವರ ಸಂಯೋಗವು ನಿಷಿದ್ಧವೆನಿಸಿಕೊಂಡಿತು.

ಯಾವ ತತ್ವದಿಂದ ಗಂಡು–ಹೆಣ್ಣು ರಜಸ್ಸು–ರೇತಸ್ಸುಗಳು ಪ್ರತ್ಯೇಕವಾಗಿ ಹುಟ್ಟಿ ಬೆಳೆದು ಬೆರೆಯುವಂತಾಯಿತೋ ಅದೇ ಸ್ವಯಂಸಯೋಗ ವಿರೋಧದ ತತ್ವವೇ ಮಾನವಸಮಾಜದಲ್ಲಿಯ ವಿವಾಹದ ವಿಧಿನಿಷೇಧಗಳ ರೂಪದಲ್ಲಿ ತನ್ನ ಸಮುನ್ನತವಾದ ವಿಕಾಸವನ್ನು ಪಡೆದುಕೊಂಡಿತು.

ಲಿಂಗಭೇದವು ಉಂಟಾಯಿತು. ಸೇಂದ್ರಿಯ ಸೃಷ್ಟಿಯು ಗಂಡು ಹೆಣ್ಣಾಗಿ ಎರಡು ರೂಪವಾಯಿತು. ಇದಕ್ಕೂ ಮುಂದಿನ ಪ್ರಶ್ನೆ ಈ ಬೇರೆಯಾದ ಎರಡು ಜೀವನಾಂಗಗಳನ್ನು ಬೆರೆಯುವಂತೆ ಮಾಡುವುದು ಹೇಗೆ? ರಜಸ್ಸು ರೇತಸ್ಸುಗಳ ಉತ್ತಮತೆಯ ವಿಕಾಸಕ್ಕಾಗಿ ಎರಡು ಭಿನ್ನ ಜಾತಿಗಳು ಉಂಟಾದವೇನೋ ನಿಜ. ಆದರೆ ಈ ದ್ವೈತದಿಂದಲೇ ಹೊಸ ಹುಟ್ಟಿನ ಅದ್ವೈತ ಸಾಧಿಸಿದ ಹೊರತು ಆ ರಜೋರೇತಸ್ಸುಗಳ ಸಂಯೋಗ ಸಾಧ್ಯವಾಗುವಂತಿಲ್ಲ; ಹೊಸ ಜೀವ ಸಂಭವಿಸುವಂತಿಲ್ಲ. ಆದ್ದರಿಂದ ಲಿಂಗಭೇದದಿಂದ ಬೇರೆಯಾದ ಸತ್ವಗಳನ್ನು ಜನನೇಂದ್ರಿಯಗಳ ಸಂಯೋಗದಿಂದ ಒಂದುಗೂಡಿಸುವ ಪ್ರೇರಣೆಯು ಅವಶ್ಯವಾಯಿತು. ಈ ಸಂಯೋಗವು ಹೇಗೋ ಯೋಗಾಯೋಗದಿಂದ ಕೂಡಿ ಬಂದರೆ ನಡೆಯುವಂತಿದ್ದಿಲ್ಲ. ಅದು ಬರೇ ರಾಮಾಯಣದಲ್ಲಿ ಹೇಳಿದ ಕಾವ್ಯ–ಕಾಷ್ಠಗಳ ಕೂಡುವಿಕೆಯ ಬಗೆಯ 'ಭೂತಸಮಾಗಮ'ವಾದರೆ

ಉಪಯೋಗವಿದ್ದಿಲ್ಲ. ಈ ಸಮಾಗಮವು ಇಷ್ಟವಾಗಬೇಕು. ಅದಕ್ಕಾಗಿ ಸ್ವಾದಿಷ್ಟವೂ ಆಗಬೇಕು. ಅದು ಕಲೆಕಾಲ ಒಂದು ನಿಷ್ಠೆಯಾಗಿ ತಾಳಬೇಕು. ಅಂದರೆ ಮಾತ್ರ ಉತ್ಕ್ರಾಂತಿಯ ಉದ್ದಿಷ್ಟವು ಸಿದ್ಧವಾಗುವುದು. ಆದ್ದರಿಂದ ಗಂಡು-ಹೆಣ್ಣುಗಳ ಸಹಕಾರವೂ, ಸಂತತಿಕರವಾದ ಸಮಾಗಮವೂ, ಸುರಕ್ಷಿತವಾಗಿ ಕೂಡಿಬರುವಂತೆ ಹೇಗೆ ಮಾಡಬೇಕೆಂಬುವದೇ ನಿಸರ್ಗದ ಮುಂದಿನ ಪ್ರಶ್ನೆಯಾಯಿತು.

ಈ ಪ್ರಶ್ನೆಯ ಬಗೆಹರಿಕೆಗೆ ಎರಡು ಸಂಗತಿಗಳ ಪೂರೈಕೆ ಅವಶ್ಯವಿತ್ತು. ಯಾವ ಸಂದರ್ಭದಲ್ಲಿ ಸಂಯೋಗ ಒದಗಿಬಂದರೂ, ಯಾವ ಬಗೆಯ ಸಂಯೋಗಕ್ಕೂ ಸಂದರ್ಭ ಒದಗಿ ಬಂದರೂ ರಜೋ-ಬೀಜಗಳು ಕೂಡಿ ಬೆರೆಯಲು ಧಾರಾಳವಾದ ಅನುಕೂಲತೆಯನ್ನು ಒದಗಿಸುವದು ಮೊದಲನೆಯ ಸಂಗತಿಯು. ಈ ವಿಷಯದಲ್ಲಿ ನಿಸರ್ಗದ ದುಂದುಗಾರಿಕೆಗೆ ಇತಿ ಇಲ್ಲ; ಮಿತಿ ಇಲ್ಲ. ರಜಸ್ಸು ರೇತಸ್ಸುಗಳ ರೂಪದಲ್ಲಿ ನಿಸರ್ಗವು ಜೀವದ್ರವ್ಯದ ಅತಿವ್ಯಯ ಅಪವ್ಯಯವನ್ನು ಮಾಡುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಹೂ ಬಿಡುವ 'ಹಂಗಾಮಿ'ನಲ್ಲಿ ಪ್ರಮಾಣವಿಲ್ಲದಷ್ಟು ಪರಾಗವು ಚೆಲ್ಲಿ ಹಲವುಕಾಯಿಗಳಿಂದ ಕೆಲವು ಹಣ್ಣುಗಳುಂಟಾಗಿ ಹೊಸ ವನಸ್ಪತಿಯ ಸಂತತಿಗೆ ಅನುವಾಗುತ್ತದೆ.

ನಿಸರ್ಗಕ್ಕೆ ವ್ಯಕ್ತಿಯ ಪರಿವೆ ಇಲ್ಲ. ವಂಶವನ್ನು ಕಾಯ್ದುಕೊಳ್ಳುವದೊಂದೇ ಅದಕ್ಕೆ ಗೊತ್ತು. ಅದಕ್ಕಾಗಿ ಜೀವದ್ರವ್ಯದ ದುಂದು ಅಮಿತವಾಗಿ ಸಾಗುತ್ತದೆ. ಮನುಷ್ಯ ಜಾತಿಯಲ್ಲಿ ಕೂಡ ಈ ದುಂದು ಗಮನಕ್ಕೆ ಬರದಿದ್ದರೂ ಗಣಿತಕ್ಕೆ ನಿಲುಕದಷ್ಟು ವಿಪುಲವಾಗಿ ಸಾಗುತ್ತದೆ. ಸಾಧಾರಣ ಒಂದು ಹೆಣ್ಣು 72000 ರಜಃಕೋಶಗಳನ್ನು (ಅಂಡಾಣುಗಳನ್ನು) ಉಂಟುಮಾಡುತ್ತಾಳೆ. ಸಾಧಾರಣ ಗಂಡು ಲಕ್ಷಗಟ್ಲೆ ರೇತುಕೋಶಗಳನ್ನು (ಬೀಜಾಣುಗಳನ್ನೂ) ಉಂಟುಮಾಡುತ್ತಾನೆ. ಸಾಯುವಷ್ಟು ಸತ್ತರೂ ಉಳಿದವು ವಂಶವನ್ನು ವಿಸ್ತರಿಸಲೆಂದು ಈ ಕುರುಡು ಸಂತತಿಯ ಗಾಂಧಾರಿಯ ವರ! ಮುಂದುವರಿದ ದೇಶಗಳಲ್ಲಿ ಸಿರಿವಂತ ಮನೆ ತನಗಳಲ್ಲಿ ವಾತ್ಸಲ್ಯದ ವ್ಯವಹಾರಕ್ಕೆ ತಕ್ಕ ವಾತಾವರಣವಿದ್ದಲ್ಲಿ ಕೆಲವೇ ಹುಟ್ಟಿದರೂ ಅವು ಬಾಳಬಲ್ಲವು. ಬೆಳೆಯಬಲ್ಲವು. ಆದ್ದರಿಂದ ಕೆಲವೇ ಹುಟ್ಟುವವು.

ಪ್ರೀತಿಯ ಸೋಪಾನವು

ಇರಲಿ, ಹೀಗೆ ಕುಲ-ಕುಟುಂಬವೆಂಬುವದು ಮೆಲ್ಲಗೆ ಬೆಳೆದುನಿಂತು ಸಂತತಿಗೆ ಒಂದು ಹೊರಗಿನ ಗರ್ಭಕೋಶದಂತೆ ಪೋಷಕವಾಗುತ್ತದೆ. ಕುಟುಂಬದ

ಕಕ್ಷೆಯಲ್ಲಿ ವಾತ್ಸಲ್ಯದ ಅಕ್ಷಯ ಕವಚದಲ್ಲಿ ಶಿಶುವಿನ ಸಂಗೋಪನವು ಇನ್ನೂ ಹೆಚ್ಚು ಕಾಲ ಸಾಗುತ್ತದೆ. ಗಂಡು ಹೆಣ್ಣಿನ ಪ್ರೀತಿ ಪಾಡಿಗೆ ಬಂದು, ತಂದೆ ತಾಯಿಯ ಅಕ್ಕರೆಯಾಗಿ, ಬಂದುಬಳಗವನ್ನೆಲ್ಲ ತೇಲಿಸಿಕೊಂಡು ಸಾಗುವ ಮಮತೆಯ ಮಧುರಸವಾಗಿ ಬೆಳೆಯುತ್ತಾನೆ. ವಾತ್ಸಲ್ಯವು ನಿಸರ್ಗದ ದುಂದುಗಾರಿಕೆಯ ಹಾನಿಯಲ್ಲಿ ತುಂಬಿಕೊಡುತ್ತದೆ.

ಮಿಕ್ಕಪಶುಗಳಿಗಿಂತ ಮಾನವನಲ್ಲಿ ಕಿಶೋರಾವಸ್ಥೆಯು ಹೆಚ್ಚು ದೀರ್ಘ ಅವಧಿಯದಾಗಿದೆ. ಈ ಅವಧಿಯೆಲ್ಲ ಶಿಕ್ಷಣದ್ದೆ ಆಗಿದೆ. ಮಾನವರಲ್ಲಿಯೂ ಹಳ್ಳಿಗಿಂತ ಪಟ್ಟಣದಲ್ಲಿಯೂ, ಹಿಂದುಳಿದವರಿಗಿಂತ ಮುಂದರಿದ ಮಂದಿಯಲ್ಲಿಯೂ ಅಶಿಕ್ಷಿತರಿಗಿಂತ ಸುಶಿಕ್ಷಿತರಲ್ಲಿಯೂ, ಶ್ರಮಜೀವಿಗಳಿಗಿಂತ ಬುದ್ಧಿಜೀವಿಗಳಲ್ಲಿಯೂ ಈ ಕಿಶೋರಾವಸ್ಥೆಯ ಅವಧಿ ಇನ್ನೂ ಹೆಚ್ಚು, ಮನೆಯಲ್ಲಿ, ಶಾಲೆಯಲ್ಲಿ ಹಾಯ್‌ಸ್ಕೂಲಿನಲ್ಲಿ ಕಾಲೇಜಿನಲ್ಲಿ ವಿದೇಶದಲ್ಲಿ ವಿಶೇಷ ವಿದ್ಯಾಭ್ಯಾಸದಲ್ಲಿ ಸಂಶೋಧನೆ– ಅನುಭವಸಾಧನೆಯಲ್ಲಿ ಹೀಗೆ ಹಲವು ರೀತಿಗಳಲ್ಲಿ ಮಕ್ಕಳ ಶಿಕ್ಷಣ ಸಂಸ್ಕಾರದ ಅವಧಿ ದೀರ್ಘವಾಗಿ ಬೆಳೆಯುತ್ತದೆ. ತಂದೆ ತಾಯಿಗಳ ಅಕ್ಕರೆ ಆರೈಕೆಗಳೇ ಈ ಅವಸ್ಥೆಯ ಸ್ವಾಸ್ಥ್ಯಕ್ಕೆ ಆಧಾರ. ನಾಗರಿಕತೆಯೇ ಈ ಶಿಕ್ಷಣ ಸಂಸ್ಕಾರದ ಮಟ್ಟವನ್ನು ಅವಲಂಬಿಸಿ ಇರುತ್ತದೆ. ಆದ್ದರಿಂದ ಕಿಶೋರಾವಸ್ಥೆಯ ಮುಂದುವರಿದಷ್ಟು ನಾಗರಿಕತೆಯು ಎಂದಿಗಿಂತಲೂ ಹೆಚ್ಚು ಉನ್ನತಿಯನ್ನು ಹೊಂದಲು ಅನುಕೂಲವಾಗುತ್ತದೆ.

ಲಿಂಗಭೇಧ, ಮೈಥುನ, ಶಿಶುಸಂಗೋಪನೆ, ವಾತ್ಸಲ್ಯ, ಶಿಕ್ಷಣ, ಸಂಸ್ಕೃತಿ ಈ ಸೋಪಾನ ಪಂಕ್ತಿಯಲ್ಲಿ ಪ್ರೀತಿಯ ಮೆಟ್ಟಲು ಯಾವದು? ಪ್ರಾಣಿಜೀವನದ ವಿಕಾಸಕ್ರಮದ ಮೇಲಿಂದ ಒಮ್ಮೆಲೇ ಬೀಸಾಗಿ ನೋಟವನ್ನು ಹಾಯಿಸಿದ್ದಾಯಿತು. ಈ ನೋಟದಲ್ಲಿ ಪ್ರೀತಿಯ ಸ್ಥಾನವನ್ನು ಏನೆಂದು ಕಂಡುಕೊಂಡಂತಾಯಿತು? ಪೂರ್ಣದ ಬಯಕೆ ಮತ್ತು ಬೆನ್ನಟ್ಟುವಿಕೆಗೇ ಪ್ರೀತಿಯೆಂದು ಕರೆಯುತ್ತಾರೆ.' ಎಂದು ಪ್ಲೇಟೋನ ಸಂವಾದಗಳಲ್ಲಿ ಈಗ ಸಾವಿರ ವರ್ಷಗಳ ಹಿಂದೆಯೇ ಎರಿಸ್ಟೋ ಫೇನಿಸ್ ಎಂಬುವನು ಉದ್ಗರಿಸಿದ್ದುಂಟು. ಎರಡು ದೇಹಗಳು–ನಿಸರ್ಗದಿಂದಲೇ ವಿಂಗಡಿಸಲ್ಪಟ್ಟವಂಥವು–ಮತ್ತೆ ಸಂಯೋಗಕ್ಕಾಗಿ ಸಂಪೂರ್ಣತೆಗಾಗಿ ರಹಸ್ಯ ಮಯವೆನಿಸುವದು. ಆದರೂ ಬಹಳೇ ಉದಾತ್ತವಾದ ವ್ಯಾಖ್ಯೆಯಾಗಿದೆ.

ಪ್ರೀತಿಯೆಂದರೇನು? ಮೊಟ್ಟಮೊದಲು ಗಂಡಿನ ಕಾರ್ಯವು ಒಂದು ಪ್ರತ್ಯೇಕ ದೇಹದಲ್ಲಿ ವಿಶಿಷ್ಟತೆಯನ್ನು ಪಡೆದಾಗ, ಅಂಥ ಆದಿಕಾಲದ ಬುನಾದಿಯ ಗಂಡುಗಳಲ್ಲಿ ತಮಗೆ ತಕ್ಕವರಾದ 'ಅರ್ಧಾಂಗಿ'ಗಳನ್ನು ಹುಡುಕಿಕೊಂಡು ಹೊಂದಿಕೊಂಡವರು ಕಡಿಮೆಯೇ. ಹೀಗೆ ಹವ್ಯಾಸಪಟ್ಟು ತನ್ನ ಉಳಿದ 'ಅರ್ಧಅಂಗವನ್ನು' ಹುಡುಕಿ ಹೊಂದಿಕೊಂಡವರೇ ಹೊಸ ಪೀಳಿಗೆಯ ಪಿತರಾದರು. 'ಹೊಸಹುಟ್ಟು' ಬರುವದಿದೆ ಇನ್ನು ಮುಂದೆ; ಆಗೋಣ ಆ ಜಗದ ತಾಯಿತಂದೆ' ಎಂದು ತನಗಾಗಿ ಸಹಚಾರಿ ಹೆಣ್ಣನ್ನು ಹೇತುಪೂರ್ವಕವಾಗಿ ಪಡೆದುಕೊಳ್ಳುವ ಹಟ ಅಂದುಹುಟ್ಟಿಯೇ ಇದ್ದಿಲ್ಲ. ಹಾಗೆ ಹೇತು-ಹಟಗಳನ್ನು ಇಟ್ಟುಕೊಂಡವರೇ ವಂಶಭಿವೃದ್ಧಿಗೆ ಕಾರಣರಾದರು. ಆದ್ದರಿಂದ ಪ್ರತಿಯೊಂದು ಪೀಳಿಗೆಗೂ ಇಂಥ ತಮಗೆ ಸರಿಸಮವೂ ವಿರುದ್ಧವೂ ಆದ ಲಿಂಗಿಗಳೊಡನೆ, ಅರ್ಧಾಂಗಿಗಳೊಡನೆ ಬೆರೆತು ಪೂರ್ಣತೆಯನ್ನು ಸಾಧಿಸಿದ ವ್ಯಕ್ತಿಗಳೇ ನಲ್ಲ-ನಲ್ಲೆಯರಾದರು. ಇಂಥ ನಲ್ಲ ನಲ್ಲೆಯರೇ ಬಾಳಿನ ಸೆಲೆಯಲ್ಲಿ ಸಂಯೋಗದ ಉನ್ಮಾದಕ ಬಯಕೆಯನ್ನು ಪ್ರತಿ ಪೀಳಿಗೆಯಲ್ಲಿಯೂ ಬೆರೆಸುತ್ತ ಬಂದರು. ಹೀಗೆ ಪ್ರತಿ ಪೀಳಿಗೆಗೂ ಈ ಹೆಬ್ಬಯಕೆಯು, ಬೇಟದ ಹಸಿವು. ಪ್ರೀತಿಯ ಕಾಮನೆಯು, ಬೆಳೆಯುತ್ತ ಸಂಸ್ಕಾರವಶದಿಂದ ಬಲಿಯುತ್ತ ಬಂದಿತು! ಮೂಲದ ಮೂಕಮಾನವನ ಮುಗ್ಧ ಅವಸ್ಥೆಯಲ್ಲಿ ಗಂಡು ಹೆಣ್ಣು ಕೂಡುವಂತೆ ಮಾಡಿದ ಯೋಗಾಯೋಗವು, ಮುಂದೆ ಅಂಥ ಪ್ರಯೋಗಗಳಿಗೆ ಉತ್ತೇಜನೆಯಾಗಿ ಅಂಥ ಸಂಯೋಗಗಳು ತಲೆತಲಾಂತರಗಳಿಂದಲೂ ಕಾಮದ ಭೋಗವಾಗಿ ತಲೆದೋರಿ ಪ್ರೇಮದ ಯೋಗವಾಗಿ ಬಂದು ಆ ಪ್ರವೃತ್ತಿಯು ಬಾಳನ್ನೇ ಆಳುವ ಸಾವನ್ನೂ ಮೀರಿ ತಾಳುವ ಬಲಿಷ್ಠ ಭಾವಾವೇಶವಾಗಿ ನಿಂತಿತು!

ಪ್ರೀತಿಯ ಮೂಲವು ಹೀಗಿರಬಹುದು: ಸತ್ವ ಸಂಪನ್ನ ಸಂತತಿಯಾಗಿ ಪರಿಪಕ್ವವಾದ ರಜೋಬೀಜಗಳು; ಅವುಗಳ ಪ್ರತ್ಯೇಕ ಪರಿಪಾಕಕ್ಕಾಗಿ ಲಿಂಗಭೇದ; ಅವುಗಳ ಅವಶ್ಯ ಸಂಯೋಗಕ್ಕಾಗಿ ಮೈಥುನ; ಮೈಥುನದ ಅನಿವಾರ್ಯತೆಗಾಗಿ ಕಾಮ; ಕಾಮ-ಸಂತತಿಯ ಲಾಲನೆ ಪಾಲನೆಗಳಿಗೆ ಪ್ರೇರಣೆಯಾಗಿ ಪ್ರೀತಿ ಹೀಗೆ ನಡೆದುಬಂದಿರಬಹುದು. ಪ್ರೀತಿಯ ಹಾದಿ ಇದು. 'ಬಹುದು ಗಿಹುದಿನ ಶಂಕೆ' ಯೆನಿಸಿದರೂ ಅಹುದೆನ್ನಲು ಯಾವ ಆತಂಕವೂ ಕಾಣುವದಿಲ್ಲ.

೩

ಪ್ರೀತಿಯ ಶೀಲ

ಜೀವಾಣುವಿನಿಂದ ಮನುಷ್ಯ ಜಾತಿಯತನಕವೂ ಪ್ರೀತಿ ಹೆಜ್ಜೆಯಿಟ್ಟು ಬಂದ ಹಾದಿಯಲ್ಲಿ ಓಡಿಬಂದದ್ದಾಯಿತು. ಪೆಂಡೋರಿನಾ, ಎಂಡೋರಿನಾ, ಸಿನ್‌ಗೇಮ್, ಬೊನೆಲ್ಲಾ, ಇವೆಲ್ಲ 'ಮೈಲುಗಲ್ಲುಗಳೊಡನೆ ಮಾತುಕತೆ'ಗಳನ್ನೂ ಆಡಿ ಮುಂದುವರಿದಾಯಿತು. ಇನ್ನು ಮನುಷ್ಯಜಾತಿಯಲ್ಲಿ ಪ್ರೀತಿಯ ವಿಕಾಸ–ವಿಲಾಸಗಳು ಹೇಗೆ ಒದಗಿರುವವೆಂಬುದನ್ನು ನೋಡೋಣವೇ?

ವ್ಯಕ್ತಿಯಲ್ಲಿ ಪ್ರೀತಿಯು ಬೆಳೆಯುವ ಬಗೆಯನ್ನು ಕಾಣುವಾ. 'ಬಾಲಃತಾವತ್ ಕ್ರೀಡಾಸಕ್ತಃ ತರುಣಃತಾವತ್ ತರುಣೀ ರಕ್ತಃ ವೃದ್ಧಃತಾವತ್ ಚಿಂತಾಮಗ್ನಃ....' ಎಂದು ಆದ್ಯ ಶಂಕರಾಚಾರ್ಯರೇನೋ ವರ್ಗೀಕರಣ ಮಾಡಿದ್ದಾರೆ–ವ್ಯಕ್ತಿಯ ವಿಕಾಸ ಕ್ರಮದಲ್ಲಿ. ಮೇಲೆ ಮತ್ತೆ ಪರೇಬ್ರಹ್ಮಣಿ ಕೋಪಿ ನ ಲಗ್ನಃ!' ಎಂದೂ ನೊಂದುಕೊಂಡಿದ್ದಾರೆ. ! ಆದರೆ ಈ ವರ್ಗೀಕರಣವನ್ನು ಇಷ್ಟು ಕಟ್ಟು–ನಿಟ್ಟಾಗಿ ನಿಸರ್ಗವು ಕಾಯ್ದುಕೊಂಡಿಲ್ಲ, ಪರಬ್ರಹ್ಮನ ವಿಚಾರವೇನೂ ಇರಲಿ. ವೃದ್ಧರು ತರುಣರಂತೇ ತರುಣೀರಕ್ತರಾಗಿರುವದುಂಟು. ಲಗ್ನದ ಕುರಿತೇ ಚಿಂತಾಮಗ್ನರಾಗಿರುವದುಂಟು. ಬಾಲರ ಕ್ರೀಡೆಯೂ ತರುಣೀ ರಕ್ತವಿದ್ದಂತೆ ತೋರುವದೂ ಉಂಟು. ಚಿಕ್ಕಮಕ್ಕಳು ತಮ್ಮ ವಿರುದ್ಧ ಲಿಂಗದವರ ಕುರಿತು ಅರಿವನ್ನು ತೋರುತ್ತಾರೆ. ತಮ್ಮ ಪ್ರತಿಲಿಂಗಿಗಳ ಅಂಗಾಂಗಳ ವಿಷಯವಾಗಿ ಕೆಲವೊಂದು ಶಾರೀರಿಕ ಕುತೂಹಲವು ಮಕ್ಕಳಲ್ಲಿ ಕಾಣುತ್ತದೆ. ಹಿಂದುಳಿದ, ಬಡತನದಲ್ಲಿ ಬೆಳೆದ, ಬಟ್ಟೆಗೂ ಗತಿ ಇಲ್ಲದ ಮಕ್ಕಳಿಗಿಂತ ಮೇಲ್ವರ್ಗದ ಮಕ್ಕಳು ವಾತ್ಸಾಯನ ಸೂತ್ರಗಳ ಆರಂಭದ ಸಂಗತಿಯಾದ ಲಿಂಗ ಜಿಜ್ಞಾಸೆಯನ್ನು ಹೆಚ್ಚು ವ್ಯಕ್ತಪಡಿಸುತ್ತಾರೆ. ಉಡಿಗೆ–ತೊಡಿಗೆಗಳ ಮೂಲಕವೂ, ಶಿಷ್ಟಾಚಾರದ ಮೂಲಕವೂ, ಜನನೇಂದ್ರಿಯ'ಗಳು 'ಗುಹ್ಯೇಂದ್ರಿಯ'ಗಳಾಗುತ್ತವೆ. ಅವುಗಳ ಈ ಗುಪ್ತತೆಯು ರಹಸ್ಯಮಯವೆನಿಸುತ್ತದೆ. ಆ ಕುರಿತು ಪ್ರಶ್ನೆಗಳನ್ನು ಕೇಳಲಾಗುತ್ತದೆ. ತಂದೆ ತಾಯಿಗಳು ಅಂಥ ಪ್ರಶ್ನೆಗಳನ್ನು ಗದ್ದರಿಸಿಯೋ ಗಹಗಹಿಸಿ ನಕ್ಕೋ ಹಾರಿಸಿ ಬಿಡುತ್ತಾರೆ. ಆಗ ಆ ಕುರಿತು ಕುತೂಹಲ ಇನ್ನಿಷ್ಟು ಹುರಿಗೊಳ್ಳುತ್ತದೆ. ಕದ್ದುಮುಚ್ಚಿ ತಿಳಿಗೇಡಿ ಸಂಗಾಡಿಗಳಿಂದ ಮಕ್ಕಳು ಮುಂದೆ ಈ 'ಗುಪ್ತ' ಇಂದ್ರಿಯಗಳ ವಿಷಯವಾಗಿ ವಿಕೃತವಾದ ವಿಚಿತ್ರವಾದ ಜ್ಞಾನವನ್ನು ಪಡೆಯತೊಡಗುತ್ತಾರೆ.

ಹೇಗೂ ಅವರ ಜಿಜ್ಞಾಸೆ ಕುಗ್ಗುವ ಬದಲು ಕೆರಳಿಸುತ್ತಲೇ ಹೋಗುವದು ಹೆಚ್ಚು. ಇದರಿಂದ ಆಗುವದೇನೆಂದರೆ, ವಿರುದ್ಧ ಲಿಂಗಿಗಳ ಕುರಿತು ಒಂದು ಗಾಢವಾದ ಗೂಢತೆಯ–ಕೆಲಮಟ್ಟಿಗೆ ಮೂಢತೆಯದೂ ಅಹುದು–ಪ್ರತಿಕ್ರಿಯೆಯು ರೂಢಿಗೊಳ್ಳುತ್ತದೆ. ಈ ಪ್ರತಿಕ್ರಿಯೆ ಒಂದು ಮಿಶ್ರ ಪ್ರವೃತ್ತಿ: ಲಜ್ಜೆ ಮತ್ತು ಆಕರ್ಷಣೆ ಇವೆರಡೂ ಕೂಡಿದ ವೃತ್ತಿ ಆರಂಭದಲ್ಲಿ 'ಪೋರಿ–ಪೋರ'ರಲ್ಲಿ ಇದಕ್ಕೂ ಹೆಚ್ಚಿನದೇನೂ ಇರುವದಿಲ್ಲ. ಇಲ್ಲಿ 'ಪೋರಿ–ಪೋರ'ರೆಂದರೆ ಪ್ರಾಯಕ್ಕೆ ಬರುವ ಮೊದಲಿನ ವಯಸ್ಸಿನ ಮಕ್ಕಳೆಂದು ಎಣಿಸಿದೆ. ಹರೆಯಕ್ಕೆ ಹತ್ತಿರದ ಹುಡುಗರ ಹುಡುಗಿಯರಲ್ಲಿ ಪ್ರೀತಿಯೆಂಬುವದು ನಾವು ನೀವು ತಿಳಿದಂಥದ್ದಲ್ಲ. ಕೇವಲ ಒಂದು ಅಸ್ಪಷ್ಟ ಆಕರ್ಷಣೆ; ಹತ್ತಿರವಿರಬೇಕೆಂಬ ಅನಿಸಿಕೆ ಮತ್ತು ಅದಕ್ಕೂ ಸ್ಪಷ್ಟವಾದ ಲಜ್ಜೆ: ಹತ್ತಿರ ಹೋದೊಡನೆ ದೂರ ಸರಿಯಬೇಕೆಂಬ ಅನಿಸಿಕೆ! ಇವು ಒಳಗೊಂಡ ಒಂದು ಕೋಮಲವೂ ಚಂಚಲವೂ ಆದ ಭಾವನೆಯೊಂದೇ ಆಗಿನ ಅವಸ್ಥೆಯಲ್ಲಿ ತಲೆದೋರುತ್ತದೆ. ಇದಕ್ಕೂ ಬಲವಾದ ಪ್ರೀತಿ ಇದ್ದರೆ ಹರೆಯಕ್ಕೆ ಹಾಯದ ಹುಡುಗ ಹುಡುಗಿಯರಲ್ಲಿ ಪ್ರೀತಿಯು ಉದಯವಾಗಿದ್ದರೆ ಅದು ಭಕ್ತಿಯ ರೂಪದಲ್ಲಿ ಇರುತ್ತದೆ. ಭಕ್ತಿ ದೇವರದಲ್ಲ, ಹುಡುಗಿಗೆ ತಂದೆಯ ಕುರಿತೂ ಹುಡುಗನಿಗೆ ತಾಯಿಯ ಕುರಿತೂ ಬಲವಾದ ಪ್ರೀತಿಯು ನೆಲೆಗೊಂಡಿದ್ದು ಕಂಡುಬರುತ್ತದೆ.

ಇಡಿಪಸ್‌ನ ಇಡಾಪೀಡೆ?

ಇಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸಬೇಕಾಗಿದೆ. ಆಧುನಿಕ ಮನೋವಿಜ್ಞಾನದಲ್ಲಿ 'ಇಡಿಪಸ್ ಕಾಂಪ್ಲೆಕ್ಸ್' ಎಂಬುದೊಂದು ಮನೋಗಂಡದ ತತ್ವಕ್ಕೆ ಅವಾಂತರ ಮಹತ್ವ ತಂದುಕೊಡಲಾಗಿದೆ. ಅವಾಂತರ ಮಹತ್ವವೆನ್ನುವದೇಕೆ ಎಂದರೆ ಈ ತತ್ವದ ಸ್ವೀಕಾರವು ಬಹಳೇ ತಿರಸ್ಕಾರ ಧಿಃಕಾರಗಳ ಕೋಲಾಹಲಕ್ಕೆ ಕಾರಣವಾಗಿದೆ. ಈ ಕಾಂಪ್ಲೆಕ್ಸಿನ ತತ್ವವೇನೆಂದರೆ, ಪ್ರತಿಯೊಂದು ಹುಡುಗನಲ್ಲಿ ತಂದೆಯ ಕುರಿತೂ ಪ್ರತಿಯೊಂದು ಹುಡುಗಿಯಲ್ಲಿ ತಾಯಿಯ ಕುರಿತೂ ಒಂದು ಬಗೆಯ ತಿರಸ್ಕಾರವು ಒಳೊಳಗೇ ಬೆಳೆದಿರುತ್ತದೆ. ಇಷ್ಟೇ ಅಲ್ಲ; ಹುಡುಗನು 'ಮಾತೃಗಾಮಿ' ಮತ್ತು ಹುಡುಗಿಯು 'ಪಿತೃಗಾಮಿ' ಪ್ರವೃತ್ತಿಯನ್ನು ಅರಿವಿನ ಆಳದಲ್ಲಿ ಒಳಮನಸ್ಸಿನ ತಳದಲ್ಲಿ ಹುದುಗಿಕೊಂಡಿರುತ್ತಾರೆ. ಅವರಿಗೆ ಗೊತ್ತಿಲ್ಲದೆ ಈ ಪ್ರವೃತ್ತಿ ಕೆಲಸ ಮಾಡುತ್ತಿರುತ್ತದೆ ಎಂದು ಮುಂತಾದಾಗಿ ಈ ತತ್ವದ ವ್ಯಾಖ್ಯಾನವಿದೆ. ಇದರ ವಿಶೇಷ ವಿಸ್ತಾರವು ಈ ಹೊತ್ತಿಗೆಯ ಹದ್ದಿನ ಹೊರಗೆ ಹೋಗುವಂತಿದೆ.

ಆದರೆ ಈ ತತ್ವಕ್ಕೆ ಅವಾಸ್ತವ ಮಹತ್ವ ಕೊಡುವುದರಲ್ಲಿ ಹುರಳಿಲ್ಲ. ಗ್ರೀಕ ಪುರಾಣದಲ್ಲಿ ಇಡಿಪಸ್‌ನ ಕಥೆಯು ಏನೇ ಇರಲಿ. ಪ್ರತಿಯೊಬ್ಬ ಹುಡುಗನು ತಂದೆಯನ್ನು ಕೊಂದು ತಾಯಿಯೊಡನೆ ಕಾಮ ಸಂಬಂಧವನ್ನು ಸ್ಥಾಪಿಸಬೇಕೆಂದು ಹವಣಿಸುವನು; ಅದೂ ಅವನಿಗೆ ಗೊತ್ತಿಲ್ಲದೇ ಹವಣಿಸುವನು–ಎಂಬ ಮಾತು ಹಾಸ್ಯಾಸ್ಪದವೆನಿಸುವದು–ಶಂಕಾಸ್ಪದವಂತೂ ಅನಿಸದೇ ಇರುವದಿಲ್ಲ.

ಏಕೆಂದರೆ ಈ ಪ್ರವೃತ್ತಿಯು ಅಂತಹ 'ಗಂಡ'ವೆನಿಸಿಕೊಳ್ಳುವಂಥ ವಿಕಾರವೇನೂ ಅಲ್ಲ. 'ಗಂಡ'ದ ಲಕ್ಷಣವೇನು? ಅದು ಅರಿವಿನ ಆಳದಲ್ಲಿ ಅಡಗಿರುತ್ತದೆ. ರೋಗಿಗೆ ಅಂದರೆ ವಿಕಾರಗೆದ್ದ ವ್ಯಕ್ತಿಗೆ–ಅದು ಗೊತ್ತೇ ಇರುವದಿಲ್ಲ. ಅವನ ಅಜಾಗೃತ ಒಳಮನಸ್ಸಿನಲ್ಲಿ ಅದು– ಆ ವಿಕೃತಿಯು ಕೆಲಸ ಮಾಡುತ್ತಿರುತ್ತದೆ. ಇದು ಒಂದು ಮುಖ್ಯ ಲಕ್ಷಣ. ಹಾಗೆಯೇ 'ಗಂಡು' ಅಸಾಮಾನ್ಯವಿರುತ್ತದೆ. ಅದು ಪ್ರಕೃತಿಗೆ ಅಸಾಧಾರಣವಲ್ಲ. ಸಮುಸ್ಥಿತಿಗೆ ಮೀರಿದ್ದು; ಸಮತೂಕ ತಪ್ಪಿದ್ದು; ಆದ್ದರಿಂದ ಒಂದು ಅಪವಾದ ಸ್ವರೂಪವಾಗಿರುತ್ತದೆ. ವಿಲಕ್ಷಣವಾಗಿರುತ್ತದೆ. ಆದರೆ ನಾವು ಹೇಳಲು ಹೊರಟ ಸಂಗತಿಯು ಇವೆರಡೂ ಲಕ್ಷಣ(ವೈಲಕ್ಷಣ್ಯ)ಗಳಿಂದ ಹೊರತಾದದ್ದು.

ಹರೆಯದ ಈಚೆಯ ಹುಡುಗ ತಾಯಿಯಲ್ಲಿಯೂ ಹುಡುಗಿ ತಂದೆಯಲ್ಲಿಯೂ ವಿಶೇಷ ಪ್ರೀತಿಯನ್ನು ಇಡುವದು ಅಜಾಗೃತ ವ್ಯಾಪಾರವಲ್ಲ. ಅಂತರಂಗದ ಆ ಹುಡುಗ ಹುಡುಗಿಯರಿಗೆ ಅರಿವೇ ಇಲ್ಲದ–ವ್ಯವಹಾರವಲ್ಲ. ತಾಯಿಗಿಂತ ತಂದೆಯು, ತಂದೆಗಿಂತ ತಾಯಿಯೂ ತನಗೆ ಅದೇಕೋ ಹೆಚ್ಚು ಮೆಚ್ಚಿಗೆಯೆಂಬುದನ್ನು ಹುಡುಗಿ–ಹುಡುಗರು ಸಾಮಾನ್ಯವಾಗಿ ಬಲ್ಲರು. ಹಾಗೆಯೇ ಈ ಮೆಚ್ಚಿಗೆಮಹತ್ವದ ತತ್ವ ಸಾಮಾನ್ಯವಾಗಿ ಎಲ್ಲ ಮಕ್ಕಳಲ್ಲಿಯೂ ವ್ಯಕ್ತವಾಗುವದೆಂಬುದನ್ನೂ ಬಲ್ಲವರೆಲ್ಲ ಬಲ್ಲರು. ಆದ್ದರಿಂದ ಇದೊಂದು ವಿಲಕ್ಷಣ ವಿಕೃತಿಯೆಂದು ನೊಂದು ನಾಚಬೇಕಾದುದೇನೂ ಇಲ್ಲ.

ಇದಕ್ಕೆ ವಿರುದ್ಧವಾಗಿದ್ದರೇನೇ ಅದು ವಿಕೃತಿಯೆಂದು ಹೇಳಬಹುದು. ತಂದೆಯ ಕುರಿತು ಮಗನ ಮಿತಿಮೀರಿದ ಮೆಚ್ಚಿಗೆ. ತಾಯಿಯ ಕುರಿತು ಮಗಳ ಮಿಗಿಲಾದ ಮಮತೆ ಇದೇ ಗಾಬರಿಗೆ ಕಾರಣವಾಗಬೇಕಾದ ಸಂಗತಿಗಳು. 'ಇಡಿಪಸ್'ನ ಕತೆಗೇ ಮದ್ದಾಗುವಂಥ ಇನ್ನೊಂದು ಕತೆ ನಮ್ಮ ಪುರಾಣಗಳಲ್ಲಿ ಬಂದಿದೆ. ಅದು ಅದನ್ನು ಮೀರಿದ ವಿಕೃತ ಪಿತೃಭಕ್ತಿಯ ಕಥೆ. ಭಾರ್ಗವ ರಾಮನು

'ಗಂಡು ಗೊಡಲಿಯ(?)' ತಾಯಿಯ ತಲೆಯನ್ನು ತುಂಡರಿಸಿದ ಗಂಡುಸತನಕ್ಕೆ ಕಲಂಕ ತಂದ ಕಥೆಯು. ಭಾರ್ಗವ ರಾಮನನ್ನು ಅಂಥ ಆಜ್ಞಾಧಾರಕತೆಯ ಉಗ್ರ ಉದಾಹರಣೆಯೆಂದು ನಮ್ಮ ಕವಿಕುಲಗುರುವೂ ಕವಿಕುಲದ ಇತರ ಭಾವಿಕರೂ ಹೊಗಳಿರಬಹುದು. ಆದರೆ ನಮ್ಮ ಸಾಮಾನ್ಯ ಜನ ಅವನನ್ನು ತಲೆತಿರುಕನೆಂತಲೇ ಭಾವಿಸುತ್ತ ಬಂದಿದೆ, ಇರಲಿ.

ಪ್ರೀತಿಯ ದಾರಿಗೆ ಕೈ ದೀಪ

ಮಗಳು ತಂದೆಯನ್ನೂ ಮಗನು ತಾಯಿಯನ್ನೂ ಹೆಚ್ಚಿನ ಮಮತೆಯಿಂದ ನೋಡುವದು ಸ್ವಾಭಾವಿಕವು. ಇದರಲ್ಲಿ ನಿಸರ್ಗದ ಆಳವಾದ ಉದ್ದೇಶವು ಇರಬಹುದು. ಮಕ್ಕಳನ್ನು ಮುಂದೆ ಉಚಿತ ಸಮಯಕ್ಕೆ ಗಂಡನ್ನೊ ಹೆಣ್ಣನ್ನೋ ಪ್ರೀತ್ಯಾದರದಿಂದ ನೋಡುವಂತೆ ಬಾಲ್ಯದಿಂದಲೇ ಸಂಸ್ಕಾರಕೊಟ್ಟು ಅಣಿಗೊಳಿಸಲಿಕ್ಕೆಂದೇ ಈ ಬಗೆಯ ತಂದೆತಾಯಿಗಳ ಕುರಿತು ವಿರುದ್ಧ ಆಕರ್ಷಣವು ಮಕ್ಕಳಲ್ಲಿ ಮೂಡಿ ಬಂದಿರಬಹುದು. ಜೀವನದ ವಿಕಾಸದಲ್ಲಿ ಈ ವಿರುದ್ಧ ಆಕರ್ಷಣವೇ ಜೀವಾಳದ ಮಹತ್ವದ್ದು. ಹೊಸ ಹರೆಯಲ್ಲಿ ಹೊಸದೊಂದು ಹೆಣ್ಣನ್ನು ಒಮ್ಮೆಲೇ ತಬ್ಬಿಬ್ಬಾಗಿ ನೋಡಿ ನೆಚ್ಚಿ ತಿಳಿವಳಿಕೆಯ ತೂಕತಪ್ಪಿ ತೊಳಲಾಡುವುದಕ್ಕಿಂತ ಆ ಮೊದಲು ಹುಡುಗನು ತಾಯಿಯನ್ನು ಕಂಡುಕೊಂಡ ಮಮತೆಯಿಂದಲೇ ಮುಂದೆ ತನಗೆ ತಕ್ಕುದಾದ ಹೆಣ್ಣನ್ನು ಆಯ್ದುಕೊಳ್ಳಲು ಕಾಯ್ದುಕೊಳ್ಳಲು ಕಲಿಯುವನು. ಎಷ್ಟೋ ಹುಡುಗರು ತಮ್ಮ ತಾಯಿಯಿಂದಲೇ ಹೆಣ್ಣಿನ ಮಾದರಿಯನ್ನು ಕಲ್ಪಿಸಿಕೊಳ್ಳುವದುಂಟು. ಹೆಣ್ಣಿನ-ಹೆಂಡತಿಯ-ಆಯ್ಕೆಗೆ ಈ ತಾಯಿಯಿಂದ ಪಡೆದ ಪ್ರೀತಿಯ ಬೆಳಕು ಒಂದು ಕೈದೀಪವಾಗುವದುಂಟು.

ಇದಕ್ಕೆ ಇನ್ನೊಂದು ಸಂಗತಿಯ ಪುಷ್ಟಿದೊರೆಯುವಂತಿದೆ. ನಮ್ಮ ಪೂರ್ವಿಕರು ಪುರಾಣಾಂತರದಲ್ಲಿ ಮಕ್ಕಳನ್ನು ಕರೆಯುವ ರೀತಿಯಲ್ಲಿ ಈ ಪುಷ್ಟಿ ದೊರೆಯುವಂತಿದೆ. ಸಾಮಾನ್ಯವಾಗಿ-ಅಂಕಿತನಾಮಗಳ ಹೊರತಾಗಿ ಇತರ ಇಟ್ಟ ಹೆಸರುಗಳನ್ನು ಉಳಿದು-ಗಂಡುಮಕ್ಕಳನ್ನು ಇಂಥ ತಾಯಿಯ ಮಗುವೆಂದೂ ಹೆಣ್ಣು ಮಕ್ಕಳನ್ನು ಇಂಥ ತಂದೆಯಮಗಳೆಂದೂ ಕರೆಯುವದನ್ನು ಕಾಣುತ್ತೇವೆ. ಕೌಂತೇಯ, ರಾಧೇಯ, ಆಂಜನೇಯ, ಪಾರ್ಥ, ಕೌಸಲ್ಯಾನಂದಾವರ್ಧನ (ರಾಮ), ಸೌಮಿತ್ರಿ, ಜಾಬಾಲಿ ಎಂದು ಮುಂತಾಗಿಯೂ, ಜಾನಕಿ, ದ್ರೌಪದೀ, ಪಾರ್ವತಿ ಎಂದು ಮುಂತಾಗಿಯೂ ಗಂಡು ಮತ್ತು ಹೆಣ್ಣು ಹೆಸರುಗಳು ಬರುತ್ತವೆ.

ಇಂಥ ತಾಯಿಯ ಮಗನೆಂದೆನಿಸಿಕೊಳ್ಳುವದೇ ಹುಡುಗನಿಗೆ ಹೆಮ್ಮೆ! ಇಂಥ ತಂದೆಯ ಮಗಳೆಂದೆನಿಸಿಕೊಳ್ಳುವದೇ ಹುಡುಗಿಗೆ ಹಿಗ್ಗು –ಎಂದು ಅಂದಿನ ಮರ್ಮಜ್ಞರಾದ ಕವಿಗಳು ತಿಳಿದಿರಬಹುದೇ? ತಂದೆಯ ಶುಶ್ರೂಷೆಗಾಗಿ ಮಗಳು ಆಜನ್ಮ ಅವಿವಾಹಿತಳಾಗಿ ಹತ್ತಿರವೇ ಉಳಿದದ್ದು ಇಂದು–ಹಿಂದಿನ ಇತಿಹಾಸದಲ್ಲಿ ವ್ಯಕ್ತವಿದೆ. ರೂಪವತಿಯಾದ ಜಹಾನಾರಾ ಶಾಹಜಹಾನನ ಸೇವೆಗಾಗಿಯೇ ಬಾಳಿದಳು. ಮಣಿಬೇನ್‌ಳು ಸರದಾರ ಪಟೇಲರ ಪರಿಚರ್ಯದಲ್ಲಿಯೇ ಪರಾಯಣಳಾಗಿರುವಳು. ಇಂಥ ಬಿಡಿಯಾದ ಉದಾಹರಣೆಗಳಿಂದಲೇ ಒಂದು ಸಿದ್ಧಾಂತ ಕಟ್ಟುವಂತಿಲ್ಲ; ನಿಜ ಈ ಬಗೆಯ ಉದಾಹರಣೆಗಳಿಗೆ ಹಲವು ಆಗಂತುಕ ನಿಮಿತ್ತಗಳು ಇರಬಹುದುಃ ಅದೂ ನಿಜ. ಆದರೆ ತಂದೆಗಳಿಗಾಗಿ ತ್ಯಾಗಮಾಡಲು ಸಿದ್ಧರಾಗುವಷ್ಟು ಹುಡುಗಿಯರು ಪಿತೃಭಕ್ತಿಯುಳ್ಳವರಿರುತ್ತಾರೆಂಬ ಸಿದ್ಧಾಂತಕ್ಕೆ ಈ ಬಿಡಿ ಉದಾಹರಣೆಗಳು ನಿದರ್ಶನಗಳು. ಹುಲ್ಲು ಕಡ್ಡಿಗಳೇ ಗಾಳಿಯನ್ನು ಉಂಟು ಮಾಡುವುದಿಲ್ಲ. ಆದರೆ ಗಾಳಿ ಯಾವ ನಿಟ್ಟಿಗೆ ಬೀಸುವದೆಂಬುದನ್ನು ಸೂಚಿಸಲು ಹುಲ್ಲು ಕಡ್ಡಿಗಳೂ ಸಾಕು.

ಇನ್ನು ಹುಡುಗರು ತಂದೆಯರಿಗಾಗಿ ತ್ಯಾಗಮಾಡುವದಿಲ್ಲವೆಂತಲೂ ಅಲ್ಲ. ಅಂಥ ಅದ್ಭುತ ತ್ಯಾಗಮಾಡಿ ಅಮರರಾದ ಪಿತೃಭಕ್ತ ಪುತ್ರರು ಪುರಾಣೇತಿಹಾಸಗಳಲ್ಲಿ ಇದ್ದಾರೆ. ಭೀಷ್ಮ–ರಾಮರು ಅಂಥವರು. ಆದರೆ ಇಲ್ಲಿ ಮರೆಯಲಾರದ ಮಾತೆಂದರೆ ಇದರ ತ್ಯಾಗವು ಅದ್ಭುತವೇ ಅನಿಸಿತು! ಭೀಷ್ಮವೇ ಅನಿಸಿತು! ಈ ಉದಾಹರಣೆಗಳು ಸಾಮಾನ್ಯ ನಿಯಮವನ್ನೇ ಸಿದ್ಧ ಮಾಡುವ ಅಪವಾದಗಳಂತಿವೆ. ಅಂಥ ತ್ಯಾಗ ಸಹಜವಲ್ಲದುದರಿಂಲೇ ಅದು ಆಶ್ಚರ್ಯವೆನಿಸಿತು; ಅಲೌಕಿಕವಾಯಿತು. ಅಂದರೆ ಇಂಥ ಕೆಲವು ಉಜ್ವಲ ಉದಾಹರಣೆಗಳಿಂದ ನಮ್ಮ ಮುಖ್ಯ ಸಿದ್ಧಾಂತಕ್ಕೆ ಬಾಧೆ ಬರುವದಿಲ್ಲ. ಗಂಡುಮಕ್ಕಳು ತಾಯಿಯಲ್ಲಿಯೂ ಹೆಣ್ಣು ಮಕ್ಕಳು ತಂದೆಯಲ್ಲಿಯೂ ಹೆಚ್ಚು ನೆಚ್ಚು–ಮೆಚ್ಚನ್ನು ಇಡುವರೆಂಬುದೇ ಆ ಸಿದ್ಧಾಂತವು. ಮುಂದೆ ತಾರುಣ್ಯದಲ್ಲಿ ಉದಯಿಸುವ ಪ್ರಶಸ್ತರಾದ ಸ್ವಾಸ್ಥ್ಯ ನಿಷ್ಕಲ್ಮಷವಾದ ಸ್ತ್ರೀ–ಪುರುಷ ಪ್ರೀತಿಯ ಒಂದು ನಿರುಪದ್ರವಿಯಾದ ಮತ್ತು ನಿಷ್ಕಲ್ಮಷವಾದ ಸಿದ್ಧತೆಯೆಂದು ಪೂರ್ವ ಸಂಸ್ಕಾರವೆಂದು, ಈ ಮಾತೃಭಕ್ತಿ ಮತ್ತು ಪಿತೃಭಕ್ತಿಗಳು ಬಾಲ್ಯದಲ್ಲಿ ಬೆಳೆದು ಬರುತ್ತವೆ. ಪ್ರೀತಿಯೆಂಬ ಪರಮೇಶ್ವರನೂ ಪಿತೃಭಕ್ತಿಯ ರಾಮಾವತಾರವನ್ನು ಮೊದಲು ತಾಳಿ ಪ್ರಣಯ ಶೃಂಗಾರದ ಕೃಷ್ಣಾವತಾರವನ್ನು ಆನಂತರ ತಳೆಯುವನು! ಇರಲಿ. 'ಗಂಡ'ದ 'ಗುಂಡಿ'ಯಲ್ಲಿ ನಾವು ಬಹಳ ಹೊತ್ತು ಈಜಿದಂತಾಯಿತು. ಇನ್ನು ವಿಷಯದ ಆ ದಂಡೆಗೆ ಹತ್ತೋಣ!

ಪ್ರಾಯದ ಪ್ರಾರಂಭ; ಲೈಂಗಿಕ ಲಕ್ಷಣಗಳು

ಪ್ರೀತಿಯ ಸ್ಪಷ್ಟವೂ ಪರಿಪುಷ್ಟವೂ ಆದ ರೂಪವು ವ್ಯಕ್ತವಾಗುವದು ಎಂದು? ಋತುವಿನಿಂದ. ಋತುವೆಂದರೆ ಯೌವನದ ಆರಂಭ. ಆ ಆರಂಭದೊಡನೆ ಪ್ರೀತಿಯು ಮುಕ್ತಕಂಠದಿಂದ ಹಾಡಲು ಆರಂಭಿಸುತ್ತದೆ. 'ಋತು'ಎಂಬ ಶಬ್ದವು ನಮ್ಮ ಪರಿಭಾಷೆಯಲ್ಲಿ ವಿಶೇಷವಾಗಿ ಸ್ತ್ರೀಯರ ಶರೀರವಿಕಾಸದ ಧರ್ಮವೆನೆಸಿದೆ. 'ಸೀತೆ ಋತುಮತಿ'ಯಾದಳೆಂದು ಇಡೀ ಅಧ್ಯಾಯತುಂಬ ಹೇಸಿಗೆ ಹುಟ್ಟಿಸುವಷ್ಟು ವಿವರಗಳಿಂದ ವರ್ಣನೆ ಸಾಗಿಸಿದ ಲಕ್ಷ್ಮೀಶನು ರಾಮನು 'ಋತುಮಂತ'ನಾದನೆಂದು ಅನ್ನುವದಿಲ್ಲ. ಸ್ತ್ರೀಯ ಶರೀರದ ವಿಕಾಸವು ಒಂದು ಮಟ್ಟಕ್ಕೆ ಬಂದೊಡನೆ, ಮಾಸಿಕ ಸ್ರಾವವು–ಆರಂಭವಾಗಿ ಅದು ವಿಶಿಷ್ಟ ವಯೋಮಾನಕ್ಕೆ ತಡೆಯುವದರಿಂದ ಈ ಸ್ರಾವದ ಅವಧಿಯೇ ಋತುವೆನೆಸಿಕೊಂಡು ಅದನ್ನು ಪಡೆದ ಸ್ತ್ರೀಯು 'ಋತುಮತಿ' ಯೆನಿಸಿಕೊಳ್ಳುವಳು. ಆದರೆ ಇದೇ ವಿಧವಾದ ಋತು ಪುರುಷನಲ್ಲಿಯೂ ಆರಂಭವಾಗುವದು. ಸ್ತ್ರೀಯಲ್ಲಿ ರಜಸ್ಸಿನ ಉತ್ಪತ್ತಿಯು ಹೇಗೋ ಪುರುಷನಲ್ಲಿ ರೇತಸ್ಸಿನ ಉತ್ಪತ್ತಿಯು ಆರಂಭವಾದಂದಿನಿಂದ 'ಋತು'ವಿಗೆ ಮೊದಲಾಗುವದೆನ್ನಬಹುದು. ಈ ರಜಸ್ಸು–ರೇತಸ್ಸುಗಳ ಉತ್ಪಾದನೆಯ ಮೂಲಕವೇ ಸ್ತ್ರೀತ್ವವೂ ಪುರುಷತ್ವವೂ ಪ್ರಾರಂಭವಾಗುತ್ತದೆ. ಪುರುಷರಲ್ಲಿಯೂ ಈ ರೇತಸ್ಸಿನ ಸಂಗ್ರಹದಲ್ಲಿ, ಸ್ತ್ರೀಯರ ಮಾಸಿಕ ಋತುವಿನಂತೆ, ಒಂದು ವಿಧವಾದ ಕ್ರಮಬದ್ಧತೆಯು ಕಂಡು ಬರುತ್ತದೆಂದು ಹೇವ್ಲಲೊಕ್‌ಎಲಿಸ್ ಎಂಬ ವಿಶ್ವವಿಖ್ಯಾತ ಲಿಂಗಶಾಸ್ತ್ರಜ್ಞನು ಸಾರಿದ್ದಾನೆ. ಅಂದರೆ ಪುರುಷನು 'ಋತುಮಂತ'ನಾಗುವನೆಂದು ಹೇಳಿದರೆ ನಗಬೇಕಾಗಿಲ್ಲ.

ಈ ಋತುಕಾಲದ ಹೊಸದಾಗಿ ಉದಿಸಿದ ರತಿ ಕಾಲದ– ಲಕ್ಷಣಗಳೇನು? ಈ ಕಾಲಕ್ಕೆ ಪ್ರಾಯದ ಪ್ರಾರಂಭಕ್ಕೆ ಇಂಗ್ಲಿಷ ಪರಿಭಾಷೆ 'ಪ್ಯುಬರ್ಟಿ'ಎಂದು. ಈ ಶಬ್ದದ ಅಕ್ಷರಶಃ ಅರ್ಥ ರೋಮಗಳಕಾಲವೆಂತ. ಈ ಕಾಲದಲ್ಲಿ ಒಮ್ಮೆಲೇ ಶರೀರದ ಬೇರೆ ಬೇರೆ ಭಾಗಗಳಲ್ಲಿ–ಎದೆಯ ಮೇಲೆ, ಕಂಕುಳದಲ್ಲಿ ಜನನೇಂದ್ರಿಯಗಳ ಸುತ್ತಲೂ–ಎಳೆಗೂದಲುಗಳು ಬೆಳೆದು ಬರುತ್ತವೆ. ಇದರೊಂದಿಗೆ ಪುರುಷರಲ್ಲಿ ಧ್ವನಿಯು ಗಂಭೀರವಾಗುತ್ತದೆ. ಹೆಣ್ಣಿನಲ್ಲಿ ಈ ಹೊಸ ಹರೆಯವು,–'ಏರುಂಜವ್ವನ'ದ ಏರಿಕೆಯು–ಸೌಕುಮಾರ್ಯವನ್ನೂ, ಮಾಧುರ್ಯವನ್ನೂ ತುಂಬಿತರುತ್ತದೆ. ದೇಹದ ಅಂಗಾಂಗಗಳಲ್ಲಿ ತುಂಬಿದ ಕಳೆಯು ತುಳಕತೊಡಗುತ್ತದೆ. 'ತನ್ವಿ'ಯು 'ನಿತಂಬಿನಿ'ಯೂ 'ಕರಭೋರು'ವೂ 'ಸುಸ್ತನಿ'ಯೂ ಆಗಿ ರೂಪುಗೊಳ್ಳುತ್ತಾಳೆ.

ದೇಹದ ಬಾಹ್ಯ ರೇಷೆಗಳು ಮೃದುವಾಗಿ ಪರಿಪುಷ್ಟವಾಗಿ ಗಂಡು ಕಣ್ಣಿಗೆ ಆಕರ್ಷಕವಾಗುತ್ತವೆ. ನಿತಂಬವು ಆಯತವಾಗುತ್ತದೆ. ಮುಂದೆ ತಾಯ್ತನಕ್ಕೆ –ಗರ್ಭಧಾರಣೆಗೆ ಇದು ಅನುಕೂಲವಾಗುವದು. ಎದೆಯ ಗ್ರಂಥಿಗಳು ಪುಷ್ಟವಾಗಿ ಬೆಳೆದು ತುಂಬಿ ಬರುವವು. ಇದು ಮುಂದೆ ಮಕ್ಕಳಿಗೆ ಹಾಲುಣಿಸಲೆಂದಾಗಿತ್ತು, ಹಿಂದಕ್ಕೆ–ನಮ್ಮ ನವ ನಾಗರಿಕತೆಯು ಸಂತತಿ ನಿಯಮನದ ಸಾಧನಗಳನ್ನೂ, ಸ್ತ್ರೀ–ಪುರುಷರ ಸಮಾಗಮ ಸ್ವಾತಂತ್ರ್ಯವನ್ನೂ, ಸೌಂದರ್ಯ ಪ್ರಸಾಧನೆಯ ಹದಗೆಟ್ಟ ಹವ್ಯಾಸವನ್ನೂ, ಘಟಸ್ಫೋಟವನ್ನೂ ತುರುವುದಕ್ಕೂ ಮುಂಚೆ– ಎದೆಯ ಗ್ರಂಥಿಗಳ ಉಪಯೋಗ ಆ ರೀತಿ ಇತ್ತು, ಮೊಲೆಗಳು ಮಕ್ಕಳ ಪೋಷಣೆಯ ಕೋಶಗಳಾಗಿದ್ದವು.! ಇರಲಿ.

ಇವೆಲ್ಲ ಲಕ್ಷಣಗಳಿಗೆ 'ಗೌಣ ಲೈಂಗಿಕ ಲಕ್ಷಣ'ಗಳೆಂದನ್ನುವರು. ಈ ಲಕ್ಷಣಗಳಿಗೆ ಕಾರಣವಾಗುವ ಶಾರೀರಿಕ ಗುಣವು ಯಾವುದು? ಯಾವುದೆಂಬುವದು ನಿರ್ಧಾರವಾಗಿ ಗೊತ್ತಿಲ್ಲ. ಆದರೆ ಪ್ರೊ. ಸ್ಟಾರ್ಲಿಂಗರ ಮತಕ್ಕೆ ಈ ವಿಷಯದಲ್ಲಿ ಹೆಚ್ಚು ಸಮ್ಮತಿ ದೊರೆತಿದೆ. ಆ ಮತವೆಂದರೆ, ಪ್ರಾಯವು ಪ್ರಾರಂಭವಾದಾಗ, ಜನನೇಂದ್ರಿಯಕ್ಕೆ ಸಂಬಂಧಪಟ್ಟ ಪ್ರಜೋತ್ಪಾದಕ ಗ್ರಂಥಿಗಳು ಕೇವಲ ರಜಸ್ಸು–ರೇತಸ್ಸುಗಳನ್ನಷ್ಟೇ ಉಂಟುಮಾಡುವದಿಲ್ಲ. ಕೆಲವು ರಸಗಳನ್ನು ಹುಟ್ಟಿಸುವವು. ಇವುಗಳಿಗೆ 'ಹಾರ್ಮೋನು'ಗಳೆಂಬ ಹೆಸರು ಇಡಲಾಗಿದೆ. (ಗ್ರಂಥಿಗಳಿಂದಲ್ಲ ಗ್ರಂಥಕಾರರಿಂದ !) ಈ ಹಾರ್ಮೋನಗಳು ರಕ್ತದಲ್ಲಿ ಸೇರಿ ನರನಾಡಿಗಳನ್ನೆಲ್ಲ ವ್ಯಾಪಿಸಿ ದೇಹದ ಅಣು ಕೋಶ ಕೋಟಿಗಳಿಗೆಲ್ಲ ಹೊಸ ಬಗೆಯ ಸತ್ವವನ್ನು ತಂದುಕೊಟ್ಟು ಶಾರೀರಿಕ ಮತ್ತು ಮಾನಸಿಕ ಮಾರ್ಪಾಟುಗಳನ್ನು ಜರುಗಿಸುತ್ತವೆ. ವನದಲ್ಲಿ ವಸಂತವೂ, ವಸಂತದಲ್ಲಿ ಹೂವೂ, ಹೂವಿನಲ್ಲಿ ಪರಾಗವೂ, ಪರಾಗದಲ್ಲಿ ತುಂಬಿಯೂ, ತುಂಬಿಯಲ್ಲಿ ಮಧುಮತ್ತ ಗುಂಜಾರವವೂ ಸೇರಿ ಏರಿಬರುವಂತೆ, ಶರೀರದಲ್ಲಿ ಹಾರ್ಮೋನುಗಳ ಸಂಚಾರವೂ, ಅದರಿಂದ ತರುಣ ಹೃದಯದಲ್ಲಿ ಅರುಣ ಪ್ರಣಯವು ಸಂಭವಿಸುತ್ತದೆ.

ಪ್ರಾಯದ ಪ್ರಾರಂಭದಿಂದ ದೇಹವು ಮಾತ್ರ ಹೊಸ ಶಕ್ತಿ–ಸತ್ವಗಳಿಂದ ತುಂಬಿ ತುಳುಕುವದೆಂತಲ್ಲ, ಮನಸ್ಸು ಮತ್ತು ಸ್ವಭಾವಗಳೇ ಸಾವಿರ ವಿಧವಾಗಿ ಪರಿಣಾಮ ಹೊಂದುತ್ತವೆ. ಹೊಸ ಹರೆಯ ಹುಮ್ಮಸ, ಹೆಮ್ಮೆ ಹಿಗ್ಗು, ಹೆದರಿಕೆಯನ್ನು ಹಿಮ್ಮೆಟ್ಟುವ ಹಠ, ಇವೆಲ್ಲ ಈ ಅವಸ್ಥೆಯ ಪರಿಪಾಕ. ಶಿವಾಜಿಯ ಪುಂಡಾಟಿಕೆ,

ಶಂಕರಾಚಾರ್ಯರ ಹೃದಯ ಜಾಗೃತಿ ಇದೇ ನವತಾರುಣ್ಯದ ಅವತಾರ ಕಾರ್ಯ. ಮುಗಿಲಲ್ಲಿ ಒಂದು ಹೊಸ ನೀಲಿ, ಹಗಲಲ್ಲಿ ಒಂದು ಹೊಸಬೆಳಕು, ಭೂಮಿಯಲ್ಲಿ ಒಂದು ಹೊಸ ಬೆಡಗು, ಬಾಳಿನಲ್ಲಿ ಒಂದುಹೊಸ ಬೆರಗು ಕಂಗೊಳಿಸುತ್ತದೆ. ತಾರುಣ್ಯದ ಉನ್ಮಾದದಲ್ಲಿ ಜಗತ್ತೆಲ್ಲ 'ಸುಂದರಕಾಂಡ'ವೆನಿಸುತ್ತದೆ. ಜೀವನವೆಲ್ಲ 'ಉದ್ಯೋಗಪರ್ವ'ವೆನಿಸುತ್ತದೆ. ಪ್ರತಿಯೋರ್ವ ಗಾರ್ದಭನೂ ಗಂಧರ್ವ ನಾಗುತ್ತಾನೆ; ಅಪಸ್ಮಾರಿಯೂ ಅಪ್ಸರೆಯೆನಿಸುತ್ತಾಳೆ. ಒಬ್ಬರಿಗೊಬ್ಬರು ಹೇಗೋ ತಮಗೆ ತಾವೂ ಕೂಡ ಹಾಗೆಯೇ ಅಂದುಕೊಳ್ಳುತ್ತಾರೆ.

ಹೊಸ ಭಾವಗಳು ಶರೀರಕ್ಕೂ ಆತ್ಮಕ್ಕೂ ನೆರೆಹಾವಳಿಯಂತೆ ಉಕ್ಕಿ ಬರುತ್ತವೆ. ತೀಕ್ಷ್ಣವಾದ ಕುತೂಹಲವು ಮನಸ್ಸನ್ನು ಮುನ್ನುಗ್ಗಿಸುತ್ತದೆ. ಅಷ್ಟೇ ತೀವ್ರವಾದ ಲಜ್ಜೆಯು ಮನುಷ್ಯನನ್ನು ಹಿಂದೆ ಜಗ್ಗುತ್ತದೆ. ತರುಣ ತರುಣಿಯರು ಇದೀಗ ಒಬ್ಬರಿಗೊಬ್ಬರು ಎದುರಾದಾಗ ಪರಸ್ಪರರ ಕುರಿತು ಗುಪ್ತವಾದ ಎಚ್ಚರವನ್ನು ಸುಪ್ತವಾದ ಅಚ್ಚರಿಯನ್ನು ಒಡಮೂಡಿಸಹತ್ತುವರು. ತರುಣನು ಹುಚ್ಚು ನಗೆಯನ್ನು ತರುಣಿಯು ಹುಚ್ಚು ಹಿಡಿಸುವ ನಾಚಿಕೆಯ ನಟನೆಯನ್ನು ತನ್ನಾರೆ ಕಲಿತುಕೊಳ್ಳುತ್ತಾರೆ. 'ನಾಚಿಕೆ' ಶಬ್ದ ಒಳ್ಳೇ ಸ್ವಾರಸ್ಯವಾಗಿದೆ. 'ನಾಣ್' ಎಂಬ ಧಾತು ಹೊಸ ಹರೆಯ ಆರಂಭವನ್ನು 'ನೆರೆ'ಯುವದನ್ನೂ ಸೂಚಿಸುವ ಶಬ್ದವು. ಅದರಿಂದಲೇ ಒಡಮೂಡಿದ ಸುಕುಮಾರ ಭಾವವು 'ನಾಚಿಕೆ'. ನೆರೆದ ಸ್ತ್ರೀಗೆ ನಾಚಿಕೆಯೂ ಹರೆಯ ಪುರುಷನಿಗೆ ಪುರುಷ-ಪುರುಷಾರ್ಥಗಳೂ ಸಹಜವಾಗಿ ಬರುತ್ತವೆ. ಹಿಂದೆ ಗುಲಾಮರ ವಿಕ್ರಯವಾಗುತ್ತಿರುವ ಕಾಲದಲ್ಲಿ ಹೆಣ್ಣುಗಳ ಮಾರಾಟದಲ್ಲಿ ಯಾರು ಎಷ್ಟು ನಾಚುವರೋ ಅವರಿಗೆ ಅಷ್ಟು ಬೆಲೆ ಹೆಚ್ಚು ಬರತ್ತಿತ್ತು ಎಂದು ಇತಿಹಾಸ ಬಲ್ಲವರು ಬರೆಯುತ್ತಾರೆ. ಇದರ ಇಂಗಿತವೂ ಇದೇ. ಲಜ್ಜೆ ಲಾವಣ್ಯದ್ದೇ ಒಂದು ಪಾಂಗು.

ಮನೋರಂಗದಲ್ಲಿ ಮಹತ್ಕ್ರಾಂತಿ

'ಗೌಣ' ಲೈಂಗಿಕ ಲಕ್ಷಣಗಳಿಂದ ಮೂಡುವದು ಲಜ್ಜೆಯೊಂದೇ ಅಲ್ಲ, ಬುದ್ಧಿವಿಕಾಸದಲ್ಲಿಯೂ ವ್ಯತ್ಯಾಸವಾಗುತ್ತದೆ; ವರ್ತನೆಯಲ್ಲಿಯೂ ವಿಪರ್ಯಾಸವಾಗುತ್ತದೆ. ಪ್ರಾಯದ ಪ್ರಾರಂಭದ ಪೂರ್ವದಲ್ಲಿ ದಡ್ಡರೆನಿಸಿಕೊಂಡ ಮಕ್ಕಳು ಹರೆಯ ಹೊಸ್ತಿಲನ್ನು ದಾಟಿದೊಡನೆ ತಿಳುವಳಿಕೆಯನ್ನು ಕಾಣಿಸುವರು. ಅಧ್ಯಾಪಕರಿಗೆ ವಿಶೇಷವಾಗಿ ಈ ವ್ಯತ್ಯಾಸವು ಗಮನಕ್ಕೆ ಬರುವದುಂಟು.

ಕೆಳತರಗತಿಯಲ್ಲಿ 'ಫೇಲು' ಆಗುತ್ತ ಪೋಲಿಯೆನಿಸಿಕೊಂಡ ಟೋಣಪನು ಮೇಲ್ತರಗತಿಯಲ್ಲಿ ಮುಂದೆ ಬರುವದನ್ನು ನೋಡಬಹುದು. ತಮ್ಮ ಶಿಕ್ಷಣಕ್ಕೆ ತಾವೇ ಧನ್ಯರೆಂದು ಭಾವಿಸಿದ ಅಧ್ಯಾಪಕರು ಮಕ್ಕಳ ಬುದ್ಧಿಯ ಈ ಒಳ್ಳೆಯ ಪಲ್ಲಟಣೆ, ತನ್ನ ಬೆತ್ತದ ಬಲದಿಂದಲೇ ಪಾಠದ ಫಲವೆಂತಲೇ ಒದಗಿ ಬಂದಿತೆಂದು ತಿಳಿಯುವದೂ ಉಂಟು. ಆದರೆ ಕಪಿಯು ಕವಿಯಾಗುವ ಕಾಯಾಕಲ್ಪವು 'ಹಾರ್ಮೋನುಗಳ' ಕಾಯಕ.

ಹಾಗೆಯೇ ಹರೆಯ ಬರುವತನಕ ಒಳ್ಳೇ ಆಜ್ಞಾಧಾರಕರೆನಿಸಿಕೊಂಡ ಮಕ್ಕಳು ಹೊಸ ಹರೆಯಿಂದ ಉದ್ಧತಟವನ್ನು ವಿವೇಕವಿಲ್ಲದ ವಿಚಿತ್ರ ವೃತ್ತಿಯನ್ನು ತಮ್ಮ ವರ್ತನದಲ್ಲಿ ವ್ಯಕ್ತಮಾಡಬಹುದು. ಈ ಉದ್ಧಟ ಪಟದ ಬಿರುಸು ತಮ್ಮ 'ಒಳ್ಳೇ ಮಕ್ಕಳಲ್ಲಿ' ಒಮ್ಮೇಲೇ ಹೇಗೆ ಬೆಳೆದು ಬಂತೆಂದು ಹಿರಿಯರು ಬೆರಗಾಗುವುದುಂಟು. ಇಂಥ ಹರೆಯ ಹುಡುಗರ ಹೊಸ ಹಟದ ಪರಿಚಯವಿದ್ದ ಜಾಣರೇ ನಮ್ಮಲ್ಲಿ ಹಿಂದೆ 'ಪ್ರಾಪ್ತೇತು ಷೋಡಶೇ ವರ್ಷೇ ಪುತ್ರೇ ಮಿತ್ರವತ್ ಚರೇತ್' ಎಂಬ ಸೂಕ್ತ ಸಲಹೆಯನ್ನು ಕೊಟ್ಟಿರುವರು. ಪ್ರಾಯ ಪ್ರಾಪ್ತವಾದೊಡನೆ ಪುತ್ರನನ್ನು ಮಿತ್ರನನ್ನಾಗಿ ಕಾಣಬೇಕು. ಅಂದರೆ ಅವನ ಹೊಸದಾಗಿ ಜಾಗೃತವಾದ ಆತ್ಮ ಸಂಭಾವನೆಗೆ ತಕ್ಕ ಮನ್ನಣೆ ಕೊಡಬೇಕು. ತನ್ನಲ್ಲಿ ಬಲಿತು ಉಕ್ಕಿಬರುತ್ತಿರುವ ಹೊಸ ಪ್ರೌಢತೆಯ ಆತ್ಮವಿಶ್ವಾಸದ ಶಕ್ತಿಯನ್ನು ಮತ್ತೆ ಮತ್ತೆ ಪರೀಕ್ಷಿಸಿ ನೋಡಬೇಕಂತಲೆ ಪ್ರಾಯದಲ್ಲಿ ಮಕ್ಕಳು ಉದ್ದಟರಾಗುವರು. ಇದಕ್ಕೆ ವಿಪರೀತವಾಗಿ ಮೊದಲೆಲ್ಲ ತುಂಟರೂ ಜಗಳಗಂಟರೂ ಆಗಿ ಕೇರಿಗೆಲ್ಲ ಕಂಟಕರಾದ ಹುಡುಗರು ಪ್ರಾಯ ಬಂದೊಡನೆ ಮಿದುವಾಗಿ ವಿನಯ ವಿಧೇಯತೆಯ ಮೂರ್ತಿಯಾಗಿ ಮಾರ್ಪಡುವದೂ ಉಂಟು. ಅವರಲ್ಲಿ ಹೊಸದಾಗಿ ತೀವ್ರವಾಗಿ ತಲೆದೋರಿದ ಪ್ರಬುದ್ಧತನವು ತನ್ನನ್ನೇ ತಾನು ವಿಮರ್ಶಿಸುವಂತೆ ಮಾಡುತ್ತದೆ. ನಡತೆಗೆ ನಾಚುವಂತೆ ಮಾಡುತ್ತದೆ. ಆಗ ಹಟದ ಹುಚ್ಚು ಕರಗಿ ಹೊಣೆಯನ್ನರಿಯುವ ಹಂಬಲ ಬಲವಾಗುತ್ತದೆ.

ಆತ್ಮವಿಮರ್ಶೆಯೊಡನೆ ಆಗಾಗ್ಗೆ ಹಲವರಲ್ಲಿ ತೀವ್ರವಾದ ಭಾವನೆಯ ಉದ್ರೇಕ ಉಂಟಾಗುವದುಂಟು. ಅದರ ಭರದಲ್ಲಿ ಹೊಸ ಹರೆಯದ ಹುಡುಗ ಹುಡುಗಿಯರು ಯಾವ ಹುಚ್ಚಿಗೂ ದುಡುಕುವದುಂಟು. ತ್ಯಾಗ, ಬಲಿದಾನ, ಘೋರಪ್ರತಿಜ್ಞೆ, ಆಜನ್ಮವ್ರತ, ಆತ್ಯಂತಿಕನಿಷ್ಠೆ, ತೀವ್ರ ಉದಾಸೀನತೆ ಇವುಗಳ

ಸುಗ್ಗಿಯ ಕುಣಿತವು ನವತಾರುಣ್ಯದಲ್ಲೇ ಸರಿ. ನವತಾರುಣ್ಯದ ಕಾವ್ಯದಲ್ಲಿ ಅತಿಶಯೋಕ್ತಿಯೇ ಅಲಂಕಾರ; ಅತಿರೇಕವೇ ರಸ; ಅವಿವೇಕವೇ ಸ್ಥಾಯೀ ಭಾವ. ಚಿಕ್ಕಪುಟ್ಟ ಕಾರಣಗಳಿಂದ ತೀವ್ರ ಮನಸ್ತಾಪವುಂಟಾಗುವದು; ಸಣ್ಣ ಮಾತುಗಳೂ ಮರ್ಮಕ್ಕೆ ತಟ್ಟುವವು. ಅಲ್ಪ ನಿರಾಶೆಯೂ ಆತ್ಮಹತ್ಯೆಗೆ ಪ್ರೇರಣೆಯಾಗುವದು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ 'ಫೇಲು' ಆದನೆಂದು ಎಷ್ಟು ತರುಣರು ಜೀವತೆಗೆದುಕೊಂಡಿಲ್ಲ! ಮನೆಯವರೊಡನೆ ಆದ ಕಿರುಕುಳಗಳಿಗಾಗಿ ಉಟ್ಟ ಬಟ್ಟೆಯೊಂದಿಗೆ ಊರನ್ನೇ ಬಿಟ್ಟು ಎಷ್ಟು ಯುವಕರು 'ಫರಾರಿ' ಆಗಿಲ್ಲ! ದಿನಪತ್ರಿಕೆಗಳಲ್ಲಿ ಇಂಥ ದುರ್ದೈವಿಗಳ ಹಿರಿಯರು 'ಮಗನೇ ತಿರುಗಿ ಬಾ. ನಮ್ಮನ್ನು ಕ್ಷಮಿಸು' ಎಂದು ಮುಂತಾಗಿ ಕರುಳಿನ ಕಳವಳವನ್ನು ತೋಡಿಕೊಂಡದ್ದನ್ನು ಎಷ್ಟು ಮಂದಿ ಓದಿಲ್ಲ!

ಹೀಗೆ ಪ್ರಾಯದ ಪ್ರಾರಂಭ ಅಂತರ್ಮುಖಿ ವ್ಯಕ್ತಿಯ ಕಾಲ. ತಾಸುಗಟ್ಟಲೆ ದಿನಗಟ್ಟಲೆ ನವಯುವಕರು ಉದಾಸೀನರೂ, ಅನ್ಯಮನಸ್ಕರೂ ಆಗಿ ಗುತ್ತತಪ್ಪಿದ ಪಿಶಾಚಿಗಳಂತೆ ಅಲೆದಾಡುವುದುಂಟು. ಏನನ್ನೋ ಹಂಬಲಿಸಿ ಹಗಲುಗನಸುಗಳನ್ನು ಕಾಣುತ್ತ ಕುಳಿತುಕೊಳ್ಳುವದುಂಟು. 'ಮೂಕನನ್ನು ವಾಚಾಳಿಯಾಗಿಯೂ ಪಂಗುವನ್ನು ಪರ್ವತವನ್ನು ದಾಟುವವನಾಗಿಯೂ' ಮಾಡುವ ದೇವರ ಕೃಪೆಯಂತೆಯೇ ಈ ಹೊಸ ಹರೆಯದ ಹುಮ್ಮಸವಿರುತ್ತದೆ! ಕಲ್ಪನೆಯು ಕೆರಳಿ ಅರಳಿ ಚೆಲ್ಲುವರಿಯುತ್ತದೆ. ಯೌವನದ ವಸಂತಾಗಮನದೊಂದಿಗೇ ಕವನದ ಕೋಗಿಲೇ ಕುಕಿಲ ತೊಡಗುತ್ತದೆ. ಹೊಸ ಹರೆಯಲ್ಲಿ ಕವಿತೆ ಕಟ್ಟದವರೇ ವಿರಳ; ಹೆರವರ ಕವಿತೆಗಳಾನ್ನಾದರೂ ಓದಿ, ಕೇಳಿ, 'ತಮ್ಮದೇ ಆದ ಒಂದು ಶೈಲಿ'ಯಲ್ಲಿ ಹಾಡಹತ್ತಿದ್ದವರು ಇನ್ನೂ ವಿರಳ. ಈ ವಯಸ್ಸಿಗೆ ಪ್ರಪಂಚದ ಸ್ವತಂತ್ರ ಜನರೆಲ್ಲರೂ ಲೇಖಕರಾಗುತ್ತಾರೆ. ಅಮರ ಸಾಹಿತ್ಯವನ್ನು ಅಕ್ಷರ ವಾಙ್ಮಯವನ್ನು ಹುಟ್ಟಿಸುವ ದಿವ್ಯ ಕನಸನ್ನು ಕಾಣುತ್ತಾರೆ. ತಮ್ಮ ಕತೆ ಕವಿತೆಗಳನ್ನು ಪ್ರಕಟಿಸುವಷ್ಟು ಬುದ್ಧಿ ಹಿರಿಯ ಸಂಪಾದಕರಿಗೆ ಇಲ್ಲವಾದರೆ ತಾವೇ ತಮ್ಮ ತಮ್ಮ ಹೊಸ ಪತ್ರಿಕೆಗಳನ್ನು ಅಚ್ಚು ಹಾಕಿಸುತ್ತಾರೆ. ಕೈ ಬರಹದ ಪುಸ್ತಕಗಳನ್ನು ಪ್ರಕಟಿಸುತ್ತಾರೆ. ಕೊನೆಗೆ ತಮ್ಮ ತಮ್ಮೊಳಗೇ ತಮ್ಮ ಸಾಹಿತ್ಯವನ್ನು ಓದಿ ಹೇಳಿ ಒಬ್ಬರಿಗೊಬ್ಬರು ಬೇಸರ ತರುತ್ತಾರೆ.

ಆಗ ಯಶಸ್ಸಿನ ಪ್ರತಿಯೊಂದು ಶಕ್ತಿಯೂ ತೀವ್ರವಾಗುತ್ತದೆ. ಜಗತ್ತಿನ ಕುರಿತು ಜೀವನದ ಕುರಿತು, ವಿಶ್ವದ ವೈಚಿತ್ರ್ಯ ವೈಭವದ ಕುರಿತು.

ದೆವ್ವ-ದೈವ-ದೇವರುಗಳ ಕುರಿತು, ಯೌವನಾರಂಭದ ಉದ್ದೀಪಿತವಾದ ಬುದ್ಧಿಯ ವ್ಯಾಪಾರವು ಪ್ರಶ್ನೆಗಳ ಲಕ್ಷ ಬಾಣಗಳನ್ನು ಪ್ರಯೋಗಿಸುತ್ತದೆ. ಈ ಬುದ್ಧಿಯ ವ್ಯಾಪಾರವು ಕುತೂಹಲದ ವಿಚಿಕಿತ್ಸೆಯು ಹಾಗೆಯೆ ಮುಂದುವರಿದರೆ ಆ ವ್ಯಕ್ತಿಯೋ ವಿಜ್ಞಾನಿಯೋ, ವೇದಾಂತಿಯೂ ಆಗುವದರಲ್ಲಿ ಸಂದೇಹವಿಲ್ಲ. ಆದರೆ ಬಹುತೇಕ ಹಾಗೆ ಆಗುವದಿಲ್ಲ. ಪ್ರಜ್ಞೆಯು ಪ್ರತಿಭೆಯಾಗುವಷ್ಟು ಬೆಳೆಯುವದಿಲ್ಲ. ಕುತೂಹಲಕ್ಕೆ ಉಪಯೋಗದ ಕಟ್ಟು ಬೀಳುತ್ತದೆ. ಸಂಶೋಧನೆಯು ಸಂಕ್ಷೇಪಗೊಳ್ಳುತ್ತದೆ. ಶುದ್ಧ ಬುದ್ಧಿಯ ವಿಚಿಕಿತ್ಸೆ ವ್ಯಾವಹಾರಿಕ ವಿನಿಯೋಗದ ವಲಯದಲ್ಲಿಯೇ ಕೆಲಸ ಮಾಡಲು ಕಲಿಯುತ್ತದೆ. ಸಂಶಯಾತ್ಮವಾಗಿ ಉಳಿದರೆ ವಿನಾಶವೆಂದು ಬದುಕು ಸಫಲವಾಗಲಿಕ್ಕಿಲೆಂದು ಮನಗಂಡು ವ್ಯಕ್ತಿಯು ಪ್ರಯೋಜನದ ಉದ್ದೇಶವನ್ನು ಇಟ್ಟುಕೊಂಡೇ ವಿಚಾರ ಧಾರೆಯನ್ನೂ ಹರಿಯ ಬಿಡುತ್ತಾನೆ. ಇದರಿಂದ ವಿಚಾರದ ಕ್ಷೇತ್ರದಲ್ಲಿ ಶ್ರೇಯಸ್ಸು ಹೊಂದುವ ಬದಲು ವ್ಯವಹಾರದ ಕ್ಷೇತ್ರದಲ್ಲಿ ಯಶಸ್ಸನ್ನು ಗಳಿಸುತ್ತಾನೆ. ಕಚೇರಿಯಲ್ಲಿ ಹೆಚ್ಚು ಹೆಚ್ಚು ಖುರ್ಚಿಯನ್ನು ಆಕ್ರಮಿಸುತ್ತಾನೆ. ಹೆಚ್ಚು ಹೆಚ್ಚು ಸಂಬಳದ ಪಾಕೀಟನ್ನು ಹೆಂಡತಿಯ ಕೈಗೆ ತಂದು ಕೊಟ್ಟು 'ಕೃತಾರ್ಥ'ನಾಗುತ್ತಾನೆ!

ವ್ಯಕ್ತಿಯ ಇತಿಹಾಸದ ಆಶ್ಚರ್ಯಯುಗ

ಪ್ರೀತಿಯ ಮಳೆಬಿಲ್ಲು ಕೂಡ ಇದೇ ಯೌನಾರಂಭದ ಮುಂಗಾರಿಯ ಕಣ್ಸನ್ನೆಯಾಗಿ ಸಿಂಗಾರಾಗಿ ಮೂಡಿಬರುತ್ತದೆ. ಅಂತಃಸ್ರಾವ ಕ್ರಿಯೆಯಿಂದ ಶರೀರದಲ್ಲೆಲ್ಲ ಸಂಚರಿಸುವ 'ಹಾರ್ಮೋನು' ದ್ರವ್ಯಗಳ ಪರಿಣಾಮವಾಗಿ ಕಾಮನ ಮೋಡಗಳು ಹೃದಯವನ್ನು ಕವಿದು ಪ್ರೀತಿಯ ಮಿಂಚು ಚಂಚಲವಾಗಿ ಹೊಳೆಯಹತ್ತುತ್ತದೆ. ಈ ಪ್ರೀತಿಯ ಉದ್ರಿಕ್ತವಾದ ಆವೇಶವು-ಅತಿರಿಕ್ತವಾದ ಅಂಶವು-ಎಲ್ಲ ಕಲೆಗಳ ಬೇರುಗಳಿಗೂ ಸಾಮಾಜಿಕ ಚಟುವಟಿಕೆಗಳ ನೇಮನಿಷ್ಠೆಗಳ ಬೀಜಗಳಿಗೂ ನೀರೆರೆಯುತ್ತದೆ. ಪ್ರೇಮಭಂಗದಿಂದ ಭಣಗುಡುವ ಹೃದಯವನ್ನು ಸತ್ಯಾಗ್ರಹದ ರಣಕೋಲಾಹಲದಲ್ಲಿ ಮುಳುಗಿಸುವ ರಾಷ್ಟ್ರಕಾರ್ಯದ ಸೇವಕರ ಕತೆಗಳನ್ನು ನಾವು ಓದಿದ್ದೇವೆ. ಪ್ರೇಮಸಂಗದ ತಳಮಳವನ್ನು ಪ್ರಭಾತ ಫೇರಿಗಳಲ್ಲಿ ಪೂರೈಸಿಕೊಳ್ಳುವದಕ್ಕಾಗಿ ದೇಶ ಸೇವಿಕೆಯರ ಸಂಘಟನೆಗಾಗಿ ತನು-ಮನ-ಧನದಿಂದ ದುಡಿಯುವ ವೀರರನ್ನು ನಾವು ನೋಡಿದ್ದೇವೆ. ಆದರೆ ಇವೆರಡೂ ತೀರ ಸ್ಥೂಲ ಉದಾಹರಣೆಗಳು. ಮೇಲೆ ಹೇಳಿದ ಪ್ರೇಮದ ಅತಿರಿಕ್ತ ಉದ್ರಿಕ್ತ ಅಂಶ ಆವೇಶಗಳೆಂಬುವದು ಹೆಚ್ಚು ಸೂಕ್ಷ್ಮವಾದ ಅರ್ಥದಲ್ಲಿ, ಹೊಸ ಹರೆಯಲ್ಲಿ

ಹೃದಯಹೃದಯದಲ್ಲಿಯ ಅಸ್ಪಷ್ಟವಾದ ಅಮೂರ್ತವಾದ ಯಾವದೇ ಮೂರ್ತಿಯನ್ನು ತನ್ನದಾಗಿ ಮಾಡಿಕೊಂಡು ಅದರ ಆರಾಧನೆಯಲ್ಲಿ ತೃಪ್ತಿ ಹೊಂದದ ಪ್ರೇಮದ ಕಾವನ್ನೂ ಪಡೆದ ಬಣ್ಣವನ್ನು ತಳೆದ ಭಾವಾವೇಶವು ಬಹಳಷ್ಟು ಉಕ್ಕಿ ಬುಗ್ಗೆ ಬುಗ್ಗೆಯಾಗಿ ಪುಟಿಯುತ್ತಿರುತ್ತದೆ. ಅದರ ಆವೇಗದಲ್ಲಿ ಕೊಚ್ಚಿಹೋದ ತರುಣ ತರುಣಿಯರೇ ಕಲೆಯ ಉಪಾಸನೆಗೂ ಸಾರ್ವಜನಿಕ ಸೇವಾಕಾರ್ಯದ ಸಾಧನೆಗೂ ಬದ್ಧ ಕಂಕಣರಾಗುತ್ತಾರೆ.

ಪ್ರೀತಿಯು ಸೌಂದರ್ಯವನ್ನು ಕಲ್ಪಿಸುತ್ತದೆ. ಸೌಂದರ್ಯವನ್ನು ಹುಡುಕಿಕೊಂಡು ಹೋಗುತ್ತದೆ. ಸೌಂದರ್ಯವನ್ನು ಹುಟ್ಟಿಸಲೂ ಬಹುದು. ಕಾಮದಿಂದ ಕಾಂತಿ, ಕಮನೀಯತೆ. ರಮಿಸುವದೇ ರತಿ, ಆದರಿಂದ ರಮಣೀಯತೆ. ಚೆಲುವನ್ನು ಕಾಣುವ ಕಣ್ಮನಗಳ ಬಗೆಯೇ ಒಲವು. ಒಲವನ್ನುಂಟು ಮಾಡುವಂಥ ತನ್ಮಯಗೊಳಿಸುವ ಬಗೆಯೇ ಚೆಲುವು. ಹೀಗೆ ಒಲವು–ಪ್ರೀತಿಯು–ಸೌಂದರ್ಯವನ್ನು ಊಹಿಸುತ್ತದೆ. ಉಂಟು ಮಾಡುತ್ತದೆ. ಹಾಗೆಯೇ ಅದು ಶಿವವನ್ನೂ ಶುಭವನ್ನೂ ಒಳಿತನ್ನೂ ಕಲ್ಪಿಸುತ್ತದೆ. ಹುಡುಕಿಕೊಂಡು ಹೋಗುತ್ತದೆ. ಹುಟ್ಟಿಸಲು ಹೆಣಗುತ್ತದೆ. (ನಮ್ಮ ಸಂಸ್ಕೃತ ಭಾಷೆಯಲ್ಲಿ ಈ ಕುರಿತು ಒಳ್ಳೇ ಶಬ್ದಾರ್ಥದ ಸ್ವಾರಸ್ಯವು ಕಂಡುಬರುತ್ತದೆ. ನಮ್ಮಲ್ಲಿ ಸೌಂದರ್ಯ ಮತ್ತು ಮಾಂಗಲ್ಯ ಇವೆರಡನ್ನೂ ಸೂಚಿಸುವ ಶಬ್ದವು ಒಂದೇ ಶ್ರೀ–ಶೋಭೆ–ಶೋಭನ. ಹಾಗೆಯೇ ನಮ್ಮ ಕನ್ನಡವು ಒಳಿತು ಮತ್ತು ಚೆಲುವನ್ನು ಕೂಡಿಯೇ ಸೂಚಿಸುವ 'ಚೆನ್ನು' ಸೊಗಸಾದ ಶಬ್ದವನ್ನು ಕಂಡುಕೊಂಡಿದೆ!)

ಭಾವೋದ್ರೇಕದ ಈ ಯೌವನಾರಂಭದ ಆವಸ್ಥೆ ಒಳ್ಳೇ ವಿಚಿತ್ರವಿರುತ್ತದೆ. ವಿಸಂಗತವೂ ಎನಿಸುತ್ತದೆ. ಧರ್ಮದ ಉದಾಹರಣೆಯನ್ನೇ ನೋಡಿರಿ. ಧರ್ಮವು ಕರ್ಮಕಾಂಡದ ರೂಪದಲ್ಲಿ ದೇವ ದೇವತೆಗಳ ಪೂಜಾ ವಿಧಾನದ ರೂಪದಲ್ಲಿ ಕರ್ಮಠ ವಿಧಿನಿಷೇಧಗಳ ರೂಪದಲ್ಲಿ ಇದಿರಾದರೆ, ಈ ನವ ಯುವಕರಲ್ಲಿ ವಾದ–ವಿವಾದಗಳ ಆದೇಶವನ್ನೂ ಅದನ್ನು ವಿಧ್ವಂಸಮಾಡಬೇಕೆಂಬ ತ್ವೇಷವನ್ನೂ ಕೆರಳಿಸುತ್ತದೆ. ಆದರೆ ಧರ್ಮವು ಒಳಿತಿಗೆ ಸಾಧಕವೆನ್ನುವಂತೆ ಒಬ್ಬ ಮಹಾತ್ಮನ ಒಂದು ಮಹಾ ತತ್ವದ ನಿಷ್ಠೆಯ ರೂಪದಲ್ಲಿ ಇದುರಿಗೆ ಬಂದರೆ ನವಯೌವನದ ಚಂಚಲವಾದ ಆತ್ಮಕ್ಕೆ ಅದೊಂದು ಅದ್ಭುತರಮ್ಯ ಆದರ್ಶ ಸಾಧನೆಯಾಗಿ ಕಾಣುತ್ತದೆ ಮತ್ತು ತ್ಯಾಗ ತನ್ಮಯತೆಗಳನ್ನು ಉದ್ರೇಕಗೊಳಿಸುತ್ತದೆ. ನವಯುವಕನ

ಭರದಿಂದ ಬೆಳೆಯುವ ವ್ಯಕ್ತಿತ್ವದ ಅಪರಿಹಾರ್ಯ ಅಂಶವಾಗಿ ಆ ಶ್ರದ್ಧೆಯು ನಿಲ್ಲುತ್ತದೆ. ನಾಸ್ತಿಕನೂ ಪಾಖಂಡಿಯೂ ಕಠೋರ ಬುದ್ಧಿವಾದಿಯೂ ಎನಿಸಿಕೊಳ್ಳುವ ಈ ಯುವಕನು ಕಮ್ಯುನಿಸ್ಟ ತತ್ವದಲ್ಲಿ ಅತ್ಯಂತ ಕರ್ಮಠವಾದ ಶ್ರದ್ಧೆಯನ್ನೂ ಲೆನಿನ್-ಸ್ಟಾಲಿನ್ನರಲ್ಲಿ ರಾಮ-ಕೃಷ್ಣರಿಗೂ ಮೀರಿದ ಅಚಲವಾದ ಭಕ್ತಿಯನ್ನೂ ಮಾರ್ಕ್ಸನ ಗ್ರಂಥಗಳಲ್ಲಿ ವೇದತುಲ್ಯ ಪ್ರಮಾಣ ಬುದ್ಧಿಯನ್ನೂ ಇಡುತ್ತಾನೆ. ಹೊಸ 'ವಾದ'ಗಳನ್ನು ಪ್ರತಿಪಾದಿಸುವಾಗ, ಹಳೇ ಧರ್ಮವೀರರ ಅಂಥ ಆವೇಶವನ್ನೂ ಹೊಸ ಧರ್ಮಾಂತರಪಟ್ಟವರ ತೀವ್ರ ಅಸಹನೆಯ ದ್ವೇಷ-ತ್ವೇಷಗಳನ್ನೂ ಈ ಭಾವನಾಮಯ ಯುವಕರು ತಮ್ಮ ನಡೆನುಡಿಗಳಲ್ಲಿ ಒಡಮೂಡಿಸುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ ಈ ಪ್ರಾಯಪ್ರಾಪ್ತಿಯು ಸುಂದುಗಟ್ಟು . ಈ ಯೌವನಾರಂಭದ ಅವಧಿಯು, 'ಋತು' ಕಾಲವು ವ್ಯಕ್ತಿಯ ಇತಿಹಾಸದಲ್ಲಿಯ ಆಶ್ಚರ್ಯದ ಯುಗವು. ಅದು ವಿಮರ್ಶೆ ವಿಚಿಕಿತ್ಸೆಗಳ ಬುದ್ಧಿ ಯುಗವೂ ಅಹುದು; ಜತೆಗೆ ಶ್ರದ್ಧಾ ಭಕ್ತಿ ಮತ್ತು ವಿಭೂತಿ ಪೂಜೆಗಳ ಭಾವನಾಮಯ ಮನ್ವಂತರವೂ ಆಗಿದೆ. ಅಂತೆಯೇ ಆಶ್ಚರ್ಯದ ಯುಗವೆನ್ನುವದು. ನವಯೌವನದ ಕಣ್ಣಿನ 'ಯಕ್ಷಕಿರಣ' ಬಿದ್ದಲ್ಲಿ ಜಗತ್ತು ಎಷ್ಟು ವಿಚಿತ್ರವೆನಿಸುವದೋ ಅಷ್ಟೇ ಸುಂದರವೂ ಅನಿಸುವದು-ಎಷ್ಟು ಅಪ್ರಾಪ್ಯವೆಂದು ತೆಕ್ಕೆಯ ಆಚೆಯದೆಂದು ತೋರುವದೋ ಅಷ್ಟೇ ಆಕ್ರಮಣೀಯವೆಂದು ಗೆಲ್ಲಲು ಗಳಿಸಿಕೊಳ್ಳಲು ತಕ್ಕುದೆಂದೂ ತೋರುವದು. ಎಷ್ಟು ಪ್ರೇಕ್ಷಣೀಯವೋ ಅಷ್ಟೇ ಅಪೇಕ್ಷಣೀಯವೂ ಆಗಿ ಕಾಣುವದು. ಈ 'ಏರುಂ ಜವ್ವನದ' ಏರಿಕೆಯ ವರ್ಷಗಳಲ್ಲಿ ಪ್ರತಿಯೊಂದು ಅನುಭವವೂ ಒಂದು ವಿಜಯಯಾತ್ರೆ: ಪ್ರತಿಯೊಂದು ದಿನವೂ ಒಂದು ಸೀಮೋಲ್ಲಂಘನ; ಪ್ರತಿಯೊಂದು ನಿಶ್ಚಯವೂ ಒಂದು ಭೀಷ್ಮಪ್ರತಿಜ್ಞೆ. ಪ್ರತಿಯೊಂದು ಗೆಲುವೂ ಒಂದು ಧನ್ಯತೆ, ಪ್ರತಿಯೊಂದು ಸೋಲು ಒಂದು ಆತ್ಮಾಹುತಿ. ಈ ರೀತಿ ಅತಿರಂಜಿತ ವರ್ಣವೈವಿಧ್ಯದಲ್ಲಿಯೇ ಬದುಕಿನ ಚಿತ್ರಪಟ ಓಡುವದು. ಹೊಸ ಹರೆಯ ಈ ಅವಧಿಯನ್ನು ಆಯುಷ್ಯದ ಮುಂದಿನ ಪ್ರತಿಯೊಂದು ಅವಸ್ಥೆಯೂ ಕಳೆಯಿತೆಂಬ ಕೊರಗಿನಿಂದ ತಿರುಗಿ ಬರಲಾರದೆಂಬ ಮರುಕದಿಂದ, ಮತ್ತೆ ಮತ್ತೆ ನೋಡಿ ಮುಂದಡಿ ಇಡುತ್ತದೆ. ನಮ್ಮ ಪುರಾಣಗಳಲ್ಲಿ ಬರುವ ಯಯಾತಿಯ ಕಥೆಯು ಈ ಕೊರಗಿನ ಈ ಮರುಕದ ಕಲ್ಪನಾಪೂರ್ತಿಯ ಚಿತ್ರ. ತನ್ನ ಕಳೆದು ಹೋದ ಯೌವನವನ್ನು ಮತ್ತೆ ಬಯಸಿ ಆ ವಿಷಯ ಲಂಪಟ ಯಯಾತಿಯು ಮಗನ ತಾರುಣ್ಯವನ್ನು ಬೇಡಿಕೊಂಡನು! ಪ್ರತಿಮಾನವನೂ ಎದೆಯ ಆಳದಲ್ಲಿ ಇಂಥ

ಯಯಾತಿಯೆ ಆಗಿರುತ್ತಾನೆ. ತನ್ನ ಮಕ್ಕಳಂತೆ ತಾನೂ ಮತ್ತೆ ತರುಣನಾಗಬೇಕೆಂದು ಅನಿಸಿದರೂ ಅದು ಶಕ್ಯವಿಲ್ಲದೆ ಮಕ್ಕಳ ಒಡನಾಟದ ಆನಂದದಲ್ಲಿಯಾದರು ತನ್ನ ಹಳೆಯ ಹರೆಯ ಹರುಷವನ್ನು ಕೆಲಮಟ್ಟಿಗೆ ಮತ್ತೆ ಹಂಬಲಿಸಿಕೊಳ್ಳುತ್ತಾನೆ.

ಪ್ರೀತಿಯ ಅವತಾರವೆಂದು?

ಆದರೆ, ಈ ನಡುವೆ ಹುಡುಗನನ್ನು ಹುಡಿಗಿಯ ಹತ್ತಿರ ಒಯ್ಯುವ ಮತ್ತು ಹುಡುಗಿಯನ್ನು ಹುಡುಗನಿಂದ ದೂರ ಸರಿಯುವಂತೆ ಮಾಡುವ ಶಕ್ತಿಯು ಯಾವುದು? ಹುಡುಗನು ಹುಡುಗಿಯ ಹತ್ತಿರಕ್ಕೆಂದು ಸುಳಿದು ಸುತ್ತಾಡಿ ಸೂಜಿಗಲ್ಲಿನಿದಿರಿಗೆ ಸೂಜಿಯು ನಡುಗುತ್ತ ಸರಿಯುವಂತೆ ಅಂಜುತ್ತ ಅಳಕುತ್ತ ಗೆಲುವು ಗೊಂದಲಗಳ ದರ್ಪ ದಿಗಿಲುಗಳ ಸಂಮಿಶ್ರ ಸಂಭ್ರಮದಲ್ಲಿ ಮೆಲ್ಲಗೆ ಮುಂದರಿಯುತ್ತಾನೆ. ಹುಡುಗಿಯು ನಗೆಯೊಂದಿಗೆ ಮೌನವನ್ನು, ನಾಚಿಕೆಯೊಂದಿಗೆ ನಿಮಂತ್ರಣವನ್ನು, ಆಕರ್ಷಣೆಯೊಂದಿಗೆ ಅಸಮ್ಮತಿಯನ್ನು ಕೂಡಿಯೇ ಛಾಯೆಗಾಣಿಸಿ ಅವನ ಕಣ್ಣನ್ನು ಅರಳಿಸಿ ತಲೆಯನ್ನು ಕೆರಳಿಸಿ ಆಸೆಯನ್ನು ಉರುಳಿಸಿ ತನ್ನ ಬೆನ್ನು ಹೊರಳಿಸಿ ಬಯಕೆಯನ್ನು ಬೀರುತ್ತಲೇ ಹಿಂಜರಿಯುತ್ತಾಳೆ. ಈ ಮುಂದರಿಕೆ ಹಿಂಜರಿಕೆಗಳಿಗೆ ಪೋರಿ ಪೋರರ ಈ ಗೊಂಬೆಯಾಟಕ್ಕೆ ಕಾರಣವಾಗುವ ಸೂತ್ರವು ಯಾವದು?

ಪ್ರಾಯದ ಪ್ರಾರಂಭವು ಎಲ್ಲ ಶಕ್ತಿಗಳ ಸುಗ್ಗಿಯ ಕಾಲವು. ಎಲ್ಲ ಬೆಳವಣಿಗೆಗಳ ಬಿತ್ತುವ ಕಾಲವು. ಎಲ್ಲ ಉದಾತ್ತ ಭಾವನೆಗಳೂ ಈ ಕಾಲದಲ್ಲಿ ಪೋಷಣೆಯನ್ನು ಪಡೆಯುತ್ತವೆ. ಇದು ಜೀವನದ ಪುನರುಜ್ಜೀವನದ ಪರ್ವಣಿಯು. ಅಂದಮೇಲೆ ತರುಣ ತರುಣಿಯರನ್ನು ಪ್ರಣಯ ಸೂತ್ರದಲ್ಲಿ ಸೆರೆಹಿಡಿದು ಕುಣಿದಾಡಿಸುವ ಶಕ್ತಿಯ ಬೀಜವೂ ಇದೇ ಕಾಲದಲ್ಲಿ ಬೆಳವಣಿಗೆಯನ್ನು ಪಡೆದು ಉಜ್ವಲವಾಗಿ ಉಜ್ಜೀವಿತವಾಗುತ್ತದೆಯೋ?

ಅಹುದು. ಧರ್ಮಕ್ಕೆ ಹೇಗೋ ಪ್ರೇಮಕ್ಕೂ ಶರೀರವೇ ಸಾಧನವು, ಸಾಧಕವು. ಶರೀರದ ಬೀಜಕೋಶಗಳೆಲ್ಲ ಎಂದೂ ಇಲ್ಲದ ಚೈತನ್ಯ ನಾವಿನ್ಯಗಳಿಂದ ಪುಟಿದು ಬಲಿಯುತ್ತವೆ. ಅವುಗಳ ಸತ್ವದ ವೈಫಲ್ಯವನ್ನು ತಡೆಯುವ ಯಾವ ಯತ್ನವನ್ನೂ ಲೆಕ್ಕಿಸದಂತೆ ಅವು ಹಿಗ್ಗುತ್ತವೆ. ಈ ಹಿಗ್ಗಿನ ಸುಗ್ಗಿಯಲ್ಲಿಯೇ ಪ್ರೀತಿಯ ಕೋಗಿಲೆಯು ಬಗ್ಗಿಸುತ್ತದೆ. ವಂಶದ ಶುದ್ಧಿ ನಿಸರ್ಗದ ಲಕ್ಷ್ಯ. ಅದಕ್ಕಾಗಿ ನೈಸರ್ಗಿಕವಾಗಿ ಜತೆಗೂಡುವ ಜೀವಿಗಳ ಆಯ್ಕೆ ಆಗಬೇಕಾಗುತ್ತದೆ.

ಜತೆಗೂಡಬೇಕೆಂಬ ಸರಿಸಮಾನವಾದ ವಿರುದ್ಧ ಜೀವಿಗಳ (ಲಿಂಗಗಳ) ಸಮಾಗಮವಾಗಬೇಕೆಂಬ ಪ್ರಕೃತಿಯ ಪ್ರವೃತ್ತಿಯೂ ಈ ಜತೆಗೂಟಕ್ಕೆ ಒಡನಾಟದ ಬೇಟಕ್ಕೆ ಒಮ್ಮೇಲೆ ಕುರುಡು ಕೆರಳಿಕೆಯಿಂದ ನುಗ್ಗದೇ ಯೋಗ್ಯ ಜತೆಗಾರರ ಆಯ್ಕೆಯು ಮೊದಲು ಆಗಬೇಕೆಂಬ ನಿಸರ್ಗದ ನಿಯಮವೂ ಕೂಡಿಯೇ ಪ್ರೀತಿಯ ಮೂಲವಾಗಿವೆ. ಬೇಟದ ಬಯಕೆಗೆ ಕಾರಣವಾಗುವ ಒತ್ತಾಯವು ಪ್ರತಿ ವ್ಯಕ್ತಿಯಲ್ಲಿಯೂ ಉಕ್ಕುವ ಬೀಜಕೋಶಗಳ ಚೈತನ್ಯದ ದ್ರವ್ಯವು–ರಜಸ್ಸು ರೇತಸ್ಸುಗಳ ಒಟ್ಟಿನ ಸಂಚಯವು; 'ಹಾರ್ಮೋನು' ರಸಾಯನಗಳ ಒತ್ತರದ ಸಂಚಾರವು. ಪ್ರೀತಿಯು ಹೀಗೆ ಪ್ರಾಣಿಶಾಸ್ತ್ರದಲ್ಲಿದೆ; ಶರೀರ ಧರ್ಮದಲ್ಲಿದೆ. ಇಡೀ ಶರೀರವೇ ಬೆಳವಣಿಗೆಯು ತಡೆದಂತೆ ಒಂದು ಕೆರಳಿಕೆಯ ಉದ್ರೇಕವನ್ನು ಅನುಭವಿಸುತ್ತದೆ. ಜೀವನವು ಒಮ್ಮೇಲೇ ವಿಶಾಲವಾಗಬೇಕು. ಬೇರೊಂದು ಜೀವನದೊಡನೆ ಬೆರೆತಾದರೂ ವಿಶಾಲವಾಗಬೇಕು–ಎಂಬ ಚಂಚಲವಾದ ಉತ್ಸುಕತೆಯು ಅನಿವಾರ್ಯವಾಗಿ ಅನಿಸುತ್ತದೆ. ಈ ಉದ್ರೇಕ ಉತ್ಸುಕತೆಗಳ ಫಲವಾಗಿ ವ್ಯಕ್ತಿಯ ಹೃದಯವು ಮಧುರವಾಗಿಯೂ ಬಧಿರಗೊಳಿಸುವ, ಕೋಮಲವಾಗಿಯೂ ಭಾರವೆನಿಸುವ ಒಂದು ಭಿನ್ನತೆಯ ತಳಮಳದಿಂದ ತುಂಬಿಕೊಳ್ಳುತ್ತದೆ. 'ಏಕಾಕೀ ನ ರಮತೇ' ಎಂಬ ಶ್ರುತಿವಾಣಿಯು ಹೊಸಹರಯದ ಹಂತದಲ್ಲಿ ನಿಂತ ವ್ಯಕ್ತಿಗೂ ಅನ್ವಯಿಸುತ್ತದೆ. 'ತಾನು ಒಂಟಿ ಅಪೂರ್ಣ; ತನಗೆ ಪೂರಕವಾದ–ಜೀವನದ ಪೂರ್ಣತೆಗೆ ಪ್ರೇರಕವಾದ–ಜೀವ ಅಥವಾ ವ್ಯಕ್ತಿಯೊಂದು 'ಇದೆ' ಎಂಬ ಅರೆತನದ ಅರಿವು ವ್ಯಕ್ತಿಯ ಹೃದಯಕ್ಕೆ ತನ್ನಾರೆ ಆಗುತ್ತದೆ. ಅದು ಸಂಯೋಗ, ಪೂರ್ಣತೆಗಾಗಿ ತಲ್ಲಣಿಸುತ್ತದೆ. ಈ ಪೂರ್ಣತೆಯ ಪ್ರೇರಣೆಯೇ ಪ್ರೀತಿಯು.

ಅಪೂರ್ತಿಯ ಅತೃಪ್ತಿಯಲ್ಲಿ ಉದ್ರೇಕವಾದ ಚಂಚಲ ಅವಸ್ಥೆಯಲ್ಲಿ ನವಯುವಕ ಯುವತಿಯರು ಅತ್ಯಂತ ಕಳವಳದರಾಗುತ್ತಾರೆ; ತೀವ್ರ ಸಂವೇದನಾ ಶಕ್ತಿಯುಳ್ಳವರಾಗುತ್ತಾರೆ. ಮೊದಲು ಗಮನವನ್ನು ಸೆಳೆಯದ, ಕಂಡೂ ಕಾಣದೇ ಹಾದು ಹೋದ, ಸಾವಿರ ಪ್ರಚೋದನೆಗಳು ಈಗ ತೀವ್ರ ಸಂವೇದನೆಗಳನ್ನು ಪ್ರೇರಿಸುತ್ತದೆ. ಅನಿಸಿಕೆ ನೆನಸಿಕೆಗಳು ತೀರ ಎಚ್ಚರದಿಂದ ಕೆಲಸ ಮಾಡುತ್ತವೆ. ನೆತ್ತರವೇ ಒತ್ತರದಿಂದ ಸಂಚರಿಸುವಂತಾಗಿ ಎಲ್ಲ ಇಂದ್ರಿಯಗಳ ಕಾರ್ಯವು ತೀವ್ರವಾಗುತ್ತದೆ. ಕೆಲವೊಂದು ಧ್ವನಿಗಳು, ಕೆಲವೊಂದು ಗಂಧಗಳು, ಕೆಲವೊಂದು ಚಲನವಲನಗಳು ಎಲ್ಲಕ್ಕೂ ಮಿಗಿಲಾಗಿ ಕೆಲವೊಂದು ದೃಶ್ಯಗಳು ಈ ನವ

ಯೌವನಕ್ಕೆ ವಿಶೇಷವಾಗಿ ಆಕರ್ಷಕವಾಗುವವು. 'ರಾಗರತಿಯ ನಂಜು' ಏರಿದ್ದರಿಂದಲೋ ಏನೋ, ವಿಶ್ವವೆಲ್ಲ ಸಪ್ತವರ್ಣಗಳಲ್ಲಿ ಅದ್ದಿ ಎದ್ದಂತೆ, ಲೋಲಕದಲ್ಲಿ ಕಂಡ ಲೋಕದಂತೆ ಉಜ್ವಲವೆನಿಸುವದು. ಪ್ರೀತಿಯ ಋತುವಿನಲ್ಲಿ ಬಣ್ಣಗಳೆಲ್ಲ ಕಿಕ್ಕಿರಿದು ಅರಳುವವು. ಕೆಂಪು ಕಾಮ-ವಿಕಾರಕ್ಕೆ ಕಾಳಗದ ಕರೆಯಂತೆ ಅನಿಸುವದು. ಅಶೋಕಸ್ತಬಕಗಳು ಪ್ರಣಯಿಗೆ-ಪ್ರಣಯಕ್ಕಾಗಿ ಹಾತೊರೆಯುವ ವಿರಹಾತುರನಿಗೆ ಮೂದಲಿಸುವಂತೆ ತೋರುವದು, ಕಮಲದ ಕೆಂಪು, ಕುಂಕುಮದ ಕೆಂಪು, ರಕ್ತದ ಕೆಂಪು, ಲಜ್ಜೆಯ ಕೆಂಪು, ಉನ್ಮಾದ ಕೆಂಪು, ಚೆಂದುಟಿಗಳ ಕೆಂಪು-ಪ್ರೀತಿಯ ಕೆಂದಳಿರನ್ನೇ ಚಿಗುರಿಸುತ್ತವೆ! ಋತುಕಾಲದಲ್ಲಿ ರತಿದಾನಕ್ಕಾಗಿ, ಯೌವನವು ಸಿಂಗಾರವಾಗುತ್ತದೆ. ನವಿಲಿಗೆ ಹೊಸ ಸೋಗೆ, ಹಕ್ಕಿಗಳಿಗೆ ಬಣ್ಣ ಬಣ್ಣದ ಪುಚ್ಛಗಳು, ಹುಂಜಗಳಿಗೆ ಕೆಂಪು ತುರಾಯಿಗಳು ಇವೆಲ್ಲ ಬೆಡಗಿನ ವಿಚಿತ್ರಗಳು ಕಣ್ಣು ಕುಕ್ಕುವಂತೆ ಬಣ್ಣ ತಳೆಯುತ್ತವೆ. ಕಾದಾಡಿ ಜನರು ಮೈಕೈಗಳನ್ನು ಚುಚ್ಚಿಕೊಳ್ಳುವರು., ಬರೆಯೆಳೆದು ಕೊಳ್ಳುವರು. ಗಾಯಮಾಡಿಕೊಂಡು ಗಿಡಗಳ ರಸ ಹಚ್ಚಿಕೊಂಡು ಚಿತ್ರ ವಿಚಿತ್ರ ಕಲೆಗಳನ್ನು ಅಂಗಾಂಗಗಳ ಮೇಲೆ ಮೂಡಿಸಿಕೊಳ್ಳುವರು. ಈ 'ಚಿತ್ರ' ಹಿಂಸೆಯ ಉದ್ದೇಶವೂ ಇದೆ; ವಿರುದ್ಧ ಲಿಂಗಿಗಳ ಕಣ್ಣು ಸೆಳೆದು ಮನಸ್ಸು ಕೆರಳಿಸುವಂತೆ ಮಾಡುವದು; ಪಶು ಪಕ್ಷಿಗಳು ನಿಸರ್ಗದಿಂದಲೇ ನಿರ್ಮಿಸಿಕೊಳ್ಳುವ ಒನಪು-ಒಡಪುಗಳ ಅಭಾವವನ್ನು ಇಂಥ ಗಾಯದ ಬರೆಗಳಿಂದಲೂ ಮಾಯದ ಕಲೆಗಳಿಂದಲೂ ಗರಿ, ತೊಗಲು, ಎಲುಬು, ಬಣ್ಣಗ್ಗಳ ವೇಷ ಭೂಷೆಗಳಿಂದಲೂ ತುಂಬಿಕೊಳ್ಳುವರು.

ಇದೇ ಪ್ರೇರಣೆಯ ಮೂಲಕ ಋತು ಕಾಲದೊಡನೆ, ನಾಗರಿಕ ಯುವಕನು ಯೌವನಾರಂಭದಿಂದಲೂ ತನ್ನ ಉಡಿಗೆ ತೊಡಿಗೆಗಳಲ್ಲಿ ವಿಶೇಷ ಅಚ್ಚುಕಟ್ಟು ಓರಣದ ಧೋರಣವಿಟ್ಟುಕೊಳ್ಳಲು ಆರಂಭಿಸುತ್ತಾನೆ. ಅಂಗ ಪ್ರಚ್ಛಾದನೆಯು ಅಂಗಪ್ರಸಾಧನವೂ ಅನಂಗ ಪ್ರಕಟಣೆಯೂ ಆಗುತ್ತದೆ. ಚಳಿಗಾಳಿ ಮಳೆಬಿಸಿಲಿನಿಂದ ಶರೀರವನ್ನು ರಕ್ಷಿಸಿಕೊಳ್ಳುವದೇ ಉಡಿಗೆ ತೊಡಿಗೆಗಳ ಮೂಲ ಉಪಯೋಗವಾಗಿತ್ತು. ಆದರೂ ಮುಂದೆ ಸ್ತ್ರೀ ಪುರುಷರು ತಮ್ಮ ಲಿಂಗದವರ ಈರ್ಷೆಯನ್ನು ಪರಲಿಂಗದವರಿಗೆ ಆಕರ್ಷಣೆಯನ್ನುಂಟು ಮಾಡುವಂತೆ ಬಟ್ಟೆಗಳನ್ನು ಬೆಡಗಿನ ಬಗೆಯಾಗಿ ಒನಪಿನ ಒಡವೆಗಳಾಗಿ ಮಾರ್ಪಡಿಸಿದರು. ನವಯೌವನದಲ್ಲಿ ವಸ್ತ್ರಗಳು ಆಕರ್ಷಣೆಯ ಅಸ್ತ್ರಗಳಾಗುವವು. ರೂಪವುಳ್ಳ ಶರೀರಗಳಿಗೆ ಸೌಂದರ್ಯವೂ ಇಲ್ಲದ ಶರೀರಗಳ ವಿರೂಪವನ್ನು ಮಾಟವಾಗಿ ಮುಚ್ಚಿಕೊಳ್ಳುವ

ಚಾತುರ್ಯವೂ ಉಡಿಗೆ ತೊಡಿಗೆಗಳ ಮರ್ಮವಾಗುವದು. ಮೈ ಬಣ್ಣಕ್ಕೆ ಕಳೆಕೊಡುವಂಥ ಬಟ್ಟೆಯ ಬಣ್ಣ; ಮೈ ಕಟ್ಟಿಗೆ ಎದ್ದು ಕಾಣುವಂಥ ಸದ್ದು ಮುದ್ದಾಗಿ ಕಾಣಿಸುವಂಥ ಬಟ್ಟೆಯ ಬಗ್ಗೆ ಲಾವಣ್ಯವನ್ನು ಸೂಚಿಸುವ, ಲಾಲಸೆಯನ್ನು ಉದ್ರೇಕಿಸುವ ಶೈಲಿಯಲ್ಲಿ ವೇಷದ ಸನ್ನಿವೇಶ–ಇದು ವಸ್ತ್ರಾಸ್ತ್ರ ಪ್ರಯೋಗದ ಸೂಕ್ಷ್ಮ ಶಾಸ್ತ್ರವೇ ಆಗಿರುವದು. ಆಧುನಿಕ ಮನ್ಮಥನು ಹೂವಿನ ಬಾಣಗಳನ್ನು ಮಾತ್ರ ಎಸೆಯುವದಿಲ್ಲ. ಹೂವಿನಿಂದ ಹೂವಿಗೆ ಕಂಪಿನ ಕರೆಗೆ ಬಣ್ಣದ ಬಿನ್ನಹಕ್ಕೆ ಸೋತು ಹಾರಾಡುವ ಭೃಂಗಗಳಂತೆ ಯುವ–ಯುವತಿಯರನ್ನು ರಂಗುರಂಗಾಗಿ ಎಸೆಯುವಂತೆ ಮಾಡಿ ತನ್ನ ಗುರಿಯನ್ನು ಸಾಧಿಸಿಕೊಳ್ಳುತ್ತಾನೆ! ಆದರೆ ಇಲ್ಲಿ ಒಂದು ಸೂಕ್ಷ್ಮವಿದೆ. ಮಿಕ್ಕ ಪ್ರಾಣಿಗಳಲ್ಲಿ ಹೆಣ್ಣಿಗಿಂತ ಗಂಡಿನ ಬೆಡಗು–ಸೊಬಗು ಹೆಚ್ಚು; ಶಾರ್ದೂಲಕ್ಕಿಂತ ಸಿಂಹದ ಭವ್ಯತೆ ಹೆಚ್ಚು; ಹೆಣ್ಣು ನವಿಲಿಗಿಂತ ಗಂಡು ನವಿಲು ಹೆಚ್ಚು ಪ್ರೇಕ್ಷಣೀಯ, ಶೋಭಾಯಮಾನ; ಹೇಂಟೆಗಿಂತ ಹುಂಜದ ಸಡಗರ ಹೆಚ್ಚು. ಆದರೆ ಮಾನವರಲ್ಲಿ ಈ ಕ್ರಮವಿಪರೀತ. ಗಂಡಿಗಿಂತ ಹೆಣ್ಣಿನ ಒಯ್ಯಾರ ಒನಪು, ಗಂಡನಿಗಿಂತ ಹೆಂಡತಿಯ ಓರಣ ಹೆಚ್ಚು ಕಂಡುಬರುತ್ತದೆ. ಆಕೆ ವಿಲಾಸಿನಿ. ಸುವಾಸಿನಿ, ಏಕವಸ್ತ್ರೀಯಾಗಿರುವದೂ ನಿರಾಭಣೆಯಾಗಿರುವದೂ ಆಕೆಗೆ ಅಮಂಗಲ, ಶೋಕಸೂಚಕ. ಆಕೆಯೇ ಶೃಂಗಾರ ಲಕ್ಷ್ಮಿ. ವಸ್ತ್ರ–ಒಡವೆಗಳ ಆಸೆ, ಸೀರೆ–ಶಾಲುಗಳ ಲಾಲಸೆ ಹೆಣ್ಣಿನ ಕೊನೆಯ ದೌರ್ಬಲ್ಯ. ರಾಜ್ಯವನ್ನು ಬಿಟ್ಟುಬಂದ ಸೀತೆಗೂ ಕಾಂಚನ ಮೃಗದ ಚರ್ಮದ ಕಂಚುಕದಾಶೆ ಬಿಡಲಿಲ್ಲ. ನಾರುಬಟ್ಟೆಯಲ್ಲಿ ಅಡವಿ ಅಡವಿ ಅಲೆದಾಡುವ ದ್ರೌಪದಿಗೆ ಕೂಡ ಸೌಗಂಧಿಕ ಕಮಲದ ಹವ್ಯಾಸ ಬಿಡಲಿಲ್ಲ. ಗಂಡಸು ಬದುಕುವದು ಹೊಟ್ಟೆಗಾಗಿ; ಹೆಂಗಸು ಸಾಯುವದು ಬಟ್ಟೆಗಾಗಿ–ಎನ್ನುವದು ದಿಟ್ಟತನವೆಂದು ತೋರಿದರೂ ದಿಟವೇ ಸರಿ. ಪಾಂಡವರಿಗೆ ಅಕ್ಷಯಪಾತ್ರೆ ಅಗತ್ಯವಾದರೆ ಪಾಂಚಾಲಿಗೆ ಅಕ್ಷಯಾಂಬರವೇ ಅಗತ್ಯ! ಗಂಡಸೂ ಬಟ್ಟೆಗಳ ಬೆಡಗನ್ನು ಮೆರೆಯಿಸುವದುಂಟು. ಆದರೆ ಗಂಡಸರಲ್ಲಿ ವೇಷ–ಭೂಷೆಯ ವಿಪರೀತ ವ್ಯಾಮೋಹ ಒಂದು ಬಗೆಯ ಹೆಣ್ಣು ವೃತ್ತಿಯನ್ನೇ ಕಾಣಿಸುತ್ತದೆ. ಗಂಡಸಿನ ಈ ವ್ಯಾಮೋಹ ಹೆಂಗಸಿಗೂ ಸೇರುವದಿಲ್ಲ. ಆದರೆ ಹೆಂಗಸು ಮಾತ್ರ ವೇಷ–ಭೂಷೆಗಳ ಎಲ್ಲ ತಂತ್ರಗಳಿಂದಲೂ ತನ್ನ ಸೌಂದರ್ಯ ನಿದರ್ಶನಕ್ಕಾಗಿ ಅಂಗಾಂಗಳ ಉತ್ತೇಜಕ ಪ್ರದರ್ಶನಕ್ಕಾಗಿ ಎಂದೆಂದಿಗೂ ಸುಸಜ್ಜಿತಳಾಗಿರುತ್ತಾಳೆ. ಹಾಗೆಯೇ ಅಂಗ ಪ್ರಸಾಧನೆಯ ಇತರ ಪ್ರಕಾರಗಳಲ್ಲಿಯೂ ಪದಾರ್ಥಗಳಲ್ಲಿಯೂ ಆಕೆಯು ಅಶಿಕ್ಷಿತ ಪಟುವಾಗಿರುತ್ತಾಳೆ. ದುಃಖಿಸುವಾಗಲೂ ಕಾರುಣ್ಯದ ಚಿತ್ರವಾಗಿ ಕಾಣಲು ದಕ್ಷಳಾಗಿರುತ್ತಾಳೆ! ಗಂಡಸೂ ಹೊಸ ಹರೆಯದಲ್ಲಿ ಉಡಿಗೆತೊಡಿಗೆಯ

ಅಸಕ್ತಿ ಸಾಕಷ್ಟು ತೋರಿಸುತ್ತಾನೆ. 'ಜೀರ್ಣಾನಿ ವಸ್ತ್ರಾಣಿ' ಎಂಬ ಗೀತೆಯೊಳಗಿನ ಉಪಮಾನವು ನವಯುವಕ'ದೇಹಿ'ಗೆ ಅನ್ವಯಿಸುವದಿಲ್ಲ. ವಸ್ತ್ರಗಳು ಜೀರ್ಣವಾಗುವತನಕ ಅವನು ತಡೆಯುವದೇ ಇಲ್ಲ. ಹೊಸ ಮಾಟ ಹೊಸ-ಭಂಗಿ ಹೊರಟ ಕೂಡಲೇ ಹಳೆ ಚಣ್ಣ ಹಳೇ ಅಂಗಿ ತೆಗೆದಿಡುತ್ತಾನೆ! ಇರಲಿ.

ನವಯುವಕರ ಶೌರ್ಯಸಾಹಸಗಳೂ ಆಟಪಾಟಗಳ ಪ್ರಾವಿಣ್ಯಗಳೂ ಶರೀರ ಸಾಮರ್ಥ್ಯದ ಉದಾಹರಣೆಗಳು ನವಯುವತಿಯರ ಮೃದು ಹೃದಯಗಳನ್ನು ಮಧುರವಾಗಿ ಅಧೀರವಾಗಿ ಹಾರಾಡುವಂತೆ ಮಾಡುತ್ತವೆ. ಮತ್ತು ಇವರ ಅಂಗಾಂಗಗಳ ಮೃದುವಾದ ಮುದ್ದಾದ ರೂಪರೇಖೆಗಳು ನವಯುವಕರ ಅಭಿಲಾಷೆಯನ್ನು ಉರಿದೇಳುವಂತೆ ಮಾಡುತ್ತವೆ. ಈ ನವೋನವ ಅನುಭವಗಳು, – ಸುಗಂಧ, ಸಂಗೀತ, ನರ್ತನ, ವಿಭ್ರಮವೇ ಮುಂತಾದ ಪ್ರದರ್ಶನ ಪ್ರಿಯತೆಯ ವಿವಿಧ ವಿಧಾನಗಳು,–ಯೌವನದ ದಿನಗಳನ್ನು ಮನಗಳನ್ನು ವ್ಯಾಪಿಸುತ್ತವೆ; ಮತ್ತು ಪ್ರೀತಿಯ ಅಚಿಂತ್ಯವಾದ ಪ್ರಚೋದನೆಗಳಾಗುತ್ತವೆ. ರಕ್ತಗತವಾದ ಉತ್ತೇಜನೆ ಅಪೇಕ್ಷಾಕೃತವಾದ ಉದ್ದೀಪನೆ ಇವೆರಡು ರೆಕ್ಕೆಗಳ ಬಲದಿಂದ ಪ್ರೀತಿಯ ಪಾರಿವಾಳವು ಹೃದಯ ಪಂಜರಗಳಲ್ಲಿ ಹಾರಾಡಹತ್ತುತ್ತದೆ.

ಒಮ್ಮೇಲೆ ಎಲ್ಲ ಪ್ರೇರಣೆಗಳು ಒಂದಾಗುತ್ತವೆ. ಎಲ್ಲ ಅನುಕೂಲತೆಗಳು ಒಟ್ಟಾಗುತ್ತವೆ. ದೇಹದ ಹಸಿವೆಯೊಳಗಿನಿಂದ ಆತ್ಮದ ಕೊರಗಿನೊಳಗಿಂದ ಮಾನವವಂಶದ ಸಂತತಿಯ ಸಂದೇಹವು ವಿವಶವಾಗಿ ಮೊಳಗುತ್ತದೆ. ಪ್ರೀತಿಯು ಹುಟ್ಟುತ್ತದೆ. ಉದಯದ ಆಕಾಶದಲ್ಲಿ ಮುಂಬೆಳಕು ಏರಿ ಬರುವಂತೆ ಈ ಪ್ರೀತಿಯು ಹೃದಯವನ್ನು ವ್ಯಾಪಿಸುತ್ತದೆ. ತನ್ನ ಕಾವಿನಿಂದಲೂ ಕಳೆಯಿಂದಲೂ ಅಂತರಂಗದ ಅಂತರಿಕ್ಷವು ತುಂಬಿ ತುಳುಕುವಂತೆ ಮಾಡುತ್ತದೆ.

೪

ಪ್ರೀತಿಯ ಶೀಲ

ಕಾಮದಿಂದ ಪ್ರೇಮ,-ಬಿಸಿಲಿಗೆ ಒಣಗುವ ಕೆಸರಿನಿಂದ ಸೂರ್ಯ ಕಿರಣಗಳಿಗೆ ನಿಮಿರಿ ಅರಳುವ ಕಮಲವೆದ್ದು ಬಂದಂತೆ; ಜಡದಿಂದ ಜೀವ, ವಾನರದಿಂದ ನರನು ಉಂಟಾದಂತೆ. ಇದೊಂದು ಕ್ರಾಂತಿಮಯ ಉತ್ಕ್ರಾಂತಿ. ಜೀವವು ಸಂತತಿಯನ್ನು ಬಯಸುತ್ತದೆ. ತನ್ನ ಪೀಳಿಗೆಯನ್ನು ಮುಂದರಿಸಬೇಕೆಂಬ ಆವೇಶದ ವಿಕಾರವು ಜೀವಜೀವದ ಜೀವಾಳದ ಪ್ರೇರಣೆ. ಜೀವದ ಈ ವಿಕಾರಮಯ ಆವೇಶದಿಂದಲೇ ಸಹಚರ ಸಹಚರಿಯರ ಅನನ್ಯ ಅನ್ಯೋನ್ಯ ನಿಷ್ಠೆಯು ವಿಕಾಸಗೊಂಡು ಬರುತ್ತದೆ. ದೇಹದ ಹಸಿವೆಯಿಂದ, ರಕ್ತಮಾಂಸಗಳ ರಭಸದ ತೃಷ್ಣೆಯಿಂದ ಆತ್ಮವು ಆತ್ಮವನ್ನು ಸೆಳೆದು ಸೇರುವ ಪೂಜಿಸಿ ಪೂರ್ಣತೆಯನ್ನು ಪಡೆಯುವ ಸರ್ವಾಂಗ ಸುಂದರವಾದ ಭಕ್ತಿಯು ಬೆಳೆದು ಬರುತ್ತದೆ. ಗವಿಯ ಕತ್ತಲೆಯಲ್ಲಿ ಬತ್ತಲೆಯಾಗಿ ಬೇಟೆಯಾಡುವ ಕಾದಾಟಿ ಮಾನವನ ಕುರುಡು ಲಾಲಸೆಯಿಂದ. ಕೊನೆಗೆ 'ಮಮತಾಜಳನು ಹುಗಿದು ತಾಜಮಹಲನು ಕಟ್ಟಿ ನಿಜ ದುಃಖವನ್ನು ಮರೆಸುವ' ಕವಿಯು ಕಂಡು ಕೊಂಡಾಡುವ ಮಧುರ ಪ್ರೇಮವು ಕೊನರಿ ಬರುತ್ತದೆ. ಮಾನವನ ಹೃದಯದ ವಾದ್ಯದಲ್ಲಿ ಕಾಮದ ರಾಗವು ಮಂದ್ರದಿಂದ ತಾರಕದತನಕ, ಸಪ್ತಪದಿಯ ಸಪ್ತ ಸ್ವರಗಳಲ್ಲಿ ಸಪ್ತ ಸ್ವರ್ಗಗಳನ್ನು ವಿನ್ಯಾಸವಾಗಿ ವಿಸ್ತರಿಸುತ್ತದೆ.

ಈ ವಿನ್ಯಾಸ ವಿಸ್ತಾರಗಳ ರಹಸ್ಯವೇನು? ಕಾಮದ ನರಕದಿಂದ ಪ್ರೇಮದ ಸ್ವರ್ಗದ ತನಕ ಏರುವ ಈ ಸಪ್ತ ಪದಗಳು (ಹೆಜ್ಜೆಗಳು) ಹೇಗೆ ನಡೆದುಬಂದವು? ಈ ಪ್ರಶ್ನೆಗೆ ಆಧುನಿಕ ರಶಿಯಾದ ಭಾಗ್ಯವಿಧಾತನಾದ ಲೆನಿನ್ನನು ಸೂತ್ರರೂಪದಲ್ಲಿ ಉತ್ತರವಿತ್ತಿದ್ದಾನೆ. 'ಲವ್ಹ ಈಜ ಬಾಯೊಲೋಜಿ ಪ್ಲಸ್ ಕಲ್ಚರ' ಎಂದನು ಅವನು. ಪ್ರೀತಿ=ಪ್ರಾಣಿಧರ್ಮ + ಸಂಸ್ಕೃತಿ ಎಂಬುದೇ ಈ ಪ್ರೇಮದ ಪೂರ್ಣಾಂಕದ ಗಣಿತ. ಅಂಕಕ್ಕೆ ಅಂಕ ಸೇರಿಸಿದರೆ ಸಂಖ್ಯೆ ಬೆಳೆಯುತ್ತದೆ. ಈ ಮಾತು ಗಣಿತದಲ್ಲಿ ಹೇಗೊ ಪ್ರಾಣಿಧರ್ಮದಲ್ಲಿಯೂ ಹಾಗೆ ಸಂಪೂರ್ಣ ಸತ್ಯವೆಂಬುದು ಕೊಂಚ ತಲೆ ಕೆದರಿಕೊಂಡರೆ ತಿಳಿದುಬರುತ್ತದೆ. ಆದರೆ ಈ ಸಂಖ್ಯಾವೃದ್ಧಿಯ 'ಅಂಕ'ಗಣಿತದ ಪ್ರಾಣಿಧರ್ಮವಷ್ಟೇ ಪ್ರೀತಿಯಲ್ಲ. ಇದು ಬರೇ ರತೀ; ಕಾಮ. ಪ್ರೀತಿಯಲ್ಲಿ ರತಿಯೊಡನೆ ರೀತಿಯೂ ಅಡಕವಾಗಿದೆ. ಈ ರೀತಿ ಸಂಸ್ಕೃತಿಯ ಪರಿಣತಿ. ಮಾತು

ಅರ್ಥವಾಗಲಿಲ್ಲವೇ? ಸರಿ! ಸೂತ್ರದ ವಿವರಣೆಯಲ್ಲಿ ಇನ್ನೂ 'ದೀರ್ಘ ಸೂತ್ರ'ವಾಯಿತು. ಒಮ್ಮೆಲೇ ತಿಳಿಯಾಗಿ ಬರೆಯೋಣವೇ?

ಪ್ರಾಥಮಿಕ ಮನುಷ್ಯರಲ್ಲಿ ಪ್ರೀತಿ, ನಾವು ತಿಳಿದ ಅರ್ಥದಲ್ಲಿಯ 'ಪ್ರಣಯ'ವು ಗೊತ್ತೇ ಇರುವುದಿಲ್ಲವೆಂದರೂ ಅಡ್ಡಿ ಇಲ್ಲ. ಪ್ರೀತಿಯೆಂಬ ಅರ್ಥದ ಶಬ್ದವೇ ಈ ಪ್ರಾಥಮಿಕ ಮನುಷ್ಯರಲ್ಲಿ ಆದಿಮಾನವರ ಕಾಡು ಸಮಾಜಗಳಲ್ಲಿ ದೊರಕುವದಿಲ್ಲ. ಅನುನಯ, ಪ್ರಣಯ, ಪರಿಣಯ ಇವೆಲ್ಲ ಪ್ರೀತಿಯ ಛಾಯೆಗಳನ್ನು ಒಡಮೂಡಿಸುವ ಶಬ್ದಗಳೆಲ್ಲ ಮೂಲದಲ್ಲಿ 'ನಯ' 'ಒಯ್ಯು' ಎಂಬ ಅರ್ಥವನ್ನು ಮಾತ್ರ ವ್ಯಕ್ತಪಡಿಸುತ್ತವೆ. ಕನ್ನಡದ 'ಒಲವು' ಈ ಒಯ್ಯುವಿಕೆಯ ಬಗೆಬಗೆಗಳಿಗಿಂತ ಹೆಚ್ಚು ಹುರುಳುಳ್ಳ ಸೊಗಸನ್ನು ಸೂಚಿಸುವದಾದರೂ ಅದು ಕೂಡ ಬಾಗುವಿಕೆಯನ್ನು ಒತ್ತಾಯಕ್ಕೋ ಸೆಳೆತಕ್ಕೋ ಒಗ್ಗುವುದನ್ನು ಧ್ವನಿತಮಾಡುತ್ತದೆ. ಇಷ್ಟು ಹಳೆಗನ್ನಡದ 'ಕೂರ್ಮೆ'ಯ ಮೂಲವೆಲ್ಲಿ? 'ಕೂರ್' ಇದಕ್ಕೆ 'ತೀಕ್ಷ್ಣ' 'ಕ್ರೂರ' ಎಂಬುದೊಂದು ಅರ್ಥವಿದೆ. ಪ್ರೀತಿಯನ್ನು ಮೂಡಿಸುವ ಮಾತು ಅಂಥ ಕಟುವಾದ ಧ್ವನಿಯಿಂದ ಹೊರಟಿರಲಾರದು. ಆದರೆ ಮನಸೋತು ಬಂದ ಭಾವವನ್ನು ಕಾಣಿಸುವ 'ಓವು' ಎಂಬ ಶಬ್ದ ನಿಜವಾಗಿಯೂ ಒಳ್ಳೇ ಸ್ವಾರಸ್ಯವಾಗಿದೆ. 'ಓಂ' ಕಾರದ ಅರ್ಥವನ್ನು ಶ್ರೀ ದಯಾನಂದ ಸರಸ್ವತಿಯವರು ತಮ್ಮ 'ಸತ್ಯಾರ್ಥ ಪ್ರಕಾಶ'ದಲ್ಲಿ 'ಆವತಿ-ಇತಿ 'ಓಂ' ಅಂದರೆ ಕಾಯುವದು ಕಾವತತ್ವ ಎಂದು ಪ್ರತಿಪಾದಿಸಿದ್ದಾರೆ. ಹಾಗಿದ್ದರೆ ಅಚ್ಚಗನ್ನಡದ ಓವು ಒಲವು ಇವುಗಳಿಂದಲೇ ಆರ್ಷ ಮಂತ್ರಗಳ 'ಏಕಾಕ್ಷರ ಬೀಜ'ವಾದ ಓಂಕಾರವು ಹೊರಟಿರಬಹುದೇ? ಈ ಶಬ್ದಬ್ರಹ್ಮನ ಭಾಷ್ಯವನ್ನು ಭಾಷಾತಜ್ಞರಿಗೆ ಬಿಡೋಣ. ನಾವು ಹೇಳಲು ಹೊರಟ ಸಂಗತಿ ಇಷ್ಟು; ಆದಿಮಾನವ ಸಮಾಜದಲ್ಲಿ ಪ್ರೀತಿಯೆಂಬುವದು ಕಂಡು ಬರುವದಿಲ್ಲ. ಇದಕ್ಕೆ ಸಾಕ್ಷಿ ಅವರಲ್ಲಿ ಪ್ರೀತಿಸೂಚಕ ಶಬ್ದವೇ ಇಲ್ಲ. ಪದಕ್ಕೆ ಅರ್ಥವಾಗಬಲ್ಲ ಸಂಗತಿಯೇ ಪದಾರ್ಥ. ಆ ಪದವೇ ಇಲ್ಲದಾಗ ಅರ್ಥವೆಲ್ಲಿ ? ಅದರ ನಿರ್ದೇಶವಾದ ಪದಾರ್ಥವು ಯಾವದು?

ಅಂದು ಕಾಮವಾಸನೆಯು ನೇರವಾಗಿ ತೃಪ್ತಿಗೇ ಹಾಯುತ್ತಿತ್ತು. ಸ್ತ್ರೀ ಪುರುಷರ ಕಾಮಾಚಾರ ವಾಮಾಚಾರವೆನಿಸುತ್ತಿರಲಿಲ್ಲ. ಅಥವಾ ಏನಾದರೂ ಅಡತಡೆಗಳಿದ್ದರೂ ಅವು ಕಾದಾಡಿ ನರನ ಸಾಹಸವನ್ನೇ ಕೆರಳಿಸುವಂತಿದ್ದವು. ಅವನ್ನೆಲ್ಲ ಮೀರಿ ಮುರಿದು ನರ-ನಾರಿಯರು ಕೂಡುತ್ತಿದ್ದರು. ಪಶುಗಳಲ್ಲಿ

ಕಾಮವಿದೆ; ಪ್ರೇಮವಿಲ್ಲ. ಪಶುಕೋಟಿಯಿಂದ ಅದಾಗಲೇ ಎದ್ದುನಿಂತ ಮಾನವನೂ ಕಾಮಮೋಹಿತನೇ ಆಗಿದ್ದ. ಲಾಲಸೆ ಮತ್ತು ಲಾಭ, ವಾಸನೆ ಮತ್ತು ಅದರ ಪೂರ್ತಿ, ಇವೆರಡರ ನಡುವಿನ ದಾರಿ ಅಡ್ಡತಿಡ್ಡವಿದ್ದರೂ ದೂರವಿದ್ದಿಲ್ಲ.

ಹಾಗಿದ್ದರೆ ಪ್ರೀತಿಯು ಉಂಟಾದದ್ದು ಹೇಗೆ? ಕಾಮವು 'ಮನ್ಮಥ'ವಾದಾಗಲೇ ಮನಸ್ಸನ್ನು ಮಥಿಸುವಂತೆ ಆದಾಗಲೇ ಪ್ರೀತಿಯ ಬೆಣ್ಣೆಯು ಹೊರಟಿತು, ಸ್ನೇಹದ ಎಣ್ಣೆಯು ಹರಿಯಿತು. ಕಾಯಜವಾದ, – ಕೇವಲ ಆಂಗಿಕವಾದ ವಾಸನೆಯು 'ಅನಂಗವಾದ' ಅಂಗವನ್ನು ಮೀರಿ, ಅಂಗವು ಇದುರಿಗೆ ಇಲ್ಲವಾದರೂ ಗುಂಗಿನಲ್ಲಿ ಇರಿಸುವಂಥ ಭಾವನೆಯಾಯಿತು. ಕಾಮನು 'ಅನಿರುದ್ಧ'ನು. ಅದಕ್ಕೆ ನಿರೋಧವಿಲ್ಲ. ನೇರವಾದ ಭೋಗವದು, ಅದು 'ಸ್ಮರ'ವಾದಾಗಲೇ ಸ್ಮರದಲ್ಲಿಯೇ ಸುತ್ತಾಡುತ್ತಿರುವಾಗಲೇ ಅದು 'ಪ್ರದ್ಯುಮ್ನ'ವಾಗುವದು, ದ್ಯುತಿಯನ್ನು ಹೊಳಪನ್ನು ಪ್ರಕರ್ಷವಾಗಿ ಪಡೆಯುವದು! (ಮತ್ತೆ ನಮ್ಮ ಭಾಷ್ಯ ಭಾಷಾ ತಜ್ಞರ ಕಡೆಗೆ 'ಒಲಿಯಿತು.'!) ಕಾಮ ಮತ್ತು ಅದರ ಕಾರ್ಯತೃಪ್ತಿ ಇವೆರಡರ ನಡುವೆ ಅಂತರವೂ ಅವಕಾಶವೂ ಬೆಳೆದಂತೆ ಪ್ರೇಮವು ಪರಿಪಾಕಗೊಂಡಿತು 'ವಿಷಯಗಳನ್ನು ಧ್ಯಾನಿಸುತ್ತಿರುವವನಲ್ಲಿ ಕಾಮವು ಉಂಟಾಗುತ್ತದೆ!' ಎಂದು ಗೀತಾಕಾರದ ಅಭಿಪ್ರಾಯ. ಆದರೆ ಪ್ರೀತಿಯ ಮಟ್ಟಿಗೆ ಈ ಕ್ರಮವು ವ್ಯಸ್ತವಾಗಿದೆ. ಕಾಮದ ವಿಷಯವನ್ನು ಧ್ಯಾನಿಸುತ್ತಿರುವವನಲ್ಲಿಯೇ ಪ್ರೇಮವು ಉತ್ಪನ್ನವಾಗುತ್ತದೆ. ಕಾಮಕ್ಕೆ ಕಲ್ಪನೆಯು ಕೂಡಿದಾಗ ಪ್ರೇಮವು ರೂಪಕೊಳ್ಳುತ್ತದೆ. ಈ ಕಲ್ಪನೆಗೆ ಅನುಕೂಲವು ಸಂಸ್ಕೃತಿಯು.

ಸಂಸ್ಕೃತಿ ನಾಗರಿಕತೆಯು ಬೆಳೆದಂತೆ ಕುಲ, ಗೋತ್ರ, ಜಾತಿ, ಸಂಪ್ರದಾಯ, ಶಿಷ್ಟಾಚಾರ, ವಿಧಿ–ನಿಷೇಧ, ಸ್ವಾತಂತ್ರ್ಯ, ಶಿಕ್ಷಣ, ಕಾನೂನು, ಅಭಿರುಚಿ ಮುಂತಾದ ಬಂಧ ಪ್ರತಿಬಂಧಗಳು ಕಾಮದ ಕಾಲಿಗೆ ತೊಡಕಾದಂತೆ, ಕಾಮವು ಸಾವಧವಾಗಹತ್ತಿತ್ತು.; ಸಂಯಮವನ್ನು ಕಲಿಯಹತ್ತಿತ್ತು. ಒಳಮುಖವಾಗ ತೊಡಗಿತು. ಕಾಮದ ಕಾರಣವನ್ನೂ ಕೇಂದ್ರವನ್ನೂ ಕನಸು–ನನಸುಗಳಲ್ಲಿ ಕಂಡು ತನ್ಮಯವಾಗಹತ್ತಿತ್ತು. ಸ್ಥೂಲವಾದ ಪ್ರಚೋದನೆಯು ಸೂಕ್ಷ್ಮವಾದ ಪ್ರೇರಣೆ ಯಾಯಿತು. ಕೇವಲ ಜನನೇಂದ್ರಿಯಗಳ ತಾತ್ಕಾಲಿಕ ತಾತ್ಪೂರ್ತಿಕ ಸ್ಥಾನಿಕವಾದ ಉದ್ರೇಕ ವಿಕಾರವಾಗಿ ಉಳಿಯದೆ ಮಿದುಳನ್ನು ಸೇರಿ ಧ್ಯಾನದಲ್ಲಿ ಸುಳಿದಾಡಿ ಪ್ರಭಾವವಾಗಿ ಬಾಳಿ ಭಾವನೆಯಾಗಿ ಬಲಿತು ಪ್ರೀತಿಯೆಂಬ ಸ್ಥಾಯೀ ಭಾವ ಅಥವಾ

ರಸಶಕ್ತಿಯಾಗಿ ಮಾರ್ಪಟ್ಟಿತು. ಮಾತು ವಕ್ರವಾಗಿ ಅಲಂಕಾರವಾಗುವಂತೆ. ಕಾಮವು ವಕ್ರವಾಗಿ ಉನ್ನತವಾಗಿ ಪ್ರೀತಿಯಾಯಿತು.

ಕಾಮದ ಕೆಸರಿನಿಂದ ಕಾವ್ಯದ ಕಮಲ

ಧರ್ಮವು ಶಾರೀರಿಕ ಶುದ್ಧತೆಯನ್ನು ಎತ್ತಿ ಒತ್ತಿ ಹೊಗಳಲಾರಂಭಿಸಿತು. ಇದರಿಂದ ಹೆಣ್ಣಿನ ಸುತ್ತಲೂ ಒಂದು ನಿಲುಕಲಾಗದ ಮೋಹಕತೆಯ ಅಗಮ್ಯ ರಮ್ಯತೆಯ ಮಾಯವು ಉಂಟಾಯಿತು. ಇದು ಕಾಮವನ್ನು ಕಾವ್ಯವನ್ನಾಗಿ ಕೊನರಿಸಲಿಕ್ಕೆ ಪ್ರೀತಿಯನ್ನು ಪಕ್ವಗೊಳಿಸಲಿಕ್ಕೆ ನೆರವಾಯಿತು. ಪ್ರಚೋದನೆ ಮತ್ತು ಪ್ರತಿಕ್ರಿಯೆ ಇವುಗಳ ನಡುವಿನ ಅಂತರವೂ ಅವಧಿಯೂ ಹೆಚ್ಚಾದಂತೆ ಹಿಡಿತಡೆ ಪಡೆದಂತೆ ಒಂದು ಉದ್ರಿಕ್ತ ಸ್ಥಿತಿಯು ಉನ್ಮಾನದ ಅವಸ್ಥೆಯು ಮಿದುಳನ್ನೂ ಮನಸ್ಸನ್ನೂ ಆವರಿಸುವದು. ಗೀತೆಯ ಮಾತನ್ನು ಬಳಸಿ ಬಣ್ಣಿಸುವದಾದರೆ ವಿಷಯದ ಧ್ಯಾನದಲ್ಲಿಯೇ ತೊಡಗಿರುವದರಿಂದ ಆ ವಿಷಯದ ಕುರಿತು ಸಂಗವು ಉಂಟಾಗುವದು. ಸಂಗದಿಂದ ಕಾಮವಾಗುವದೆಂಬ ಮಾತನ್ನು ಈ ಕಾಮ –ಪ್ರೇಮ ಮಿಮಾಂಸೆಯ ಮಟ್ಟಿಗೆ ಪಲ್ಲಟಿಸಿ ಬರೆಯಬೇಕಾಗುವದು. ಕಾಮಕ್ಕೆ ಕಾರಣವಾದ ವಿಷಯವನ್ನು ಧ್ಯಾನಿಸುವದರಿಂದ–ಧ್ಯಾನಿಸಲೇ ಬೇಕಾಗುವದರಿಂದ –ಕಲ್ಪನೆಯು ಕೆರಳಿ ಭಾವ ಲೋಕವೇ ಉದ್ದೀಪಿತವಾಗಿ ಒಂದು ರಸಪರಿಪೋಷಕವು ಆರಂಭವಾಗುವದು. ಈ ಕಲ್ಪನಾರಮ್ಯ ರಸಚರ್ವಣೆಯ ರೂಪಕ್ಕೆ 'ಬಾಷ್ಪೀಭವನ'ವನ್ನು ಹೊಂದಿದ ಕಾಮವೇ ಪ್ರೀತಿಯು. ಸಂಸ್ಕೃತಿಯ ಪಾಕಕ್ಕೆ ಇಳಿದು ಪ್ರೀತಿಯಾಗುತ್ತದೆ. ಲೇನಿನ್‌ನು ಸಾರಿದ ಸೂತ್ರದ ಸಾರಾಂಶವು ಇದೇ ಸರಿ.

ಹೀಗೆ ಕಾಮವು ಪ್ರೀತಿಯ ಕಮಲವಾಗಿ ಅರಳುವಾಗ ಅದರಲ್ಲಿ ಕಾವ್ಯಮಯ ಕಲ್ಪನಾರಮ್ಯತೆಯೂ, ಆಧ್ಯಾತ್ಮಿಕತೆಯೂ ಬಂದು ಸೇರುತ್ತದೆ. ದೇಹದ ಹಸಿವೆಯು ದಯೆಯ ಹದಕ್ಕೆ ಬಳಿದು ಸಾತ್ವಿಕತೆಯಾಗಿ ಹರಿಯುತ್ತದೆ. ಶಾರೀರಿಕ ಕ್ಷೋಭವು ಆತ್ಮದ ಕೋಮಲತೆಯಾಗಿ ಮಾರ್ಪಡುತ್ತದೆ. ವೈಯುಕ್ತಿಕ ಸಂಸ್ಕೃತಿಗೂ ಮೊದಲು ಸಾಮಾಜಿಕ ನಾಗರಿಕತೆಯೇ ಈ ಮಾರ್ಪಾಟಕ್ಕೆ ಕಾರಣವಾಗುತ್ತದೆ. ನಾಗರಿಕತೆಯು ಬೆಳೆದಂತೆ, ಮೈಥುನದ ವಯೋಮಾನವನ್ನು ಮುಂದೆ ದೂಡುತ್ತದೆ; ದಾಂಪತ್ಯದ ಶೀಘ್ರತೆಯನ್ನು ಹೆಚ್ಚು ಹೆಚ್ಚು ಅಶಕ್ಯಗೊಳಿಸುತ್ತದೆ. ವೈಯುಕ್ತಿಕ ಶಿಕ್ಷಣ ಕ್ರಮ, ಆರ್ಥಿಕ ಪರಿಸ್ಥಿತಿಯ ತೊಡಕು–ತಾಕಲಾಟ, ವ್ಯಕ್ತಿಸ್ವಾತಂತ್ರ್ಯದ ಅಹಂಕಾರಿ ಪ್ರವೃತ್ತಿ ಇವೆಲ್ಲವೂ ಕೂಡಿಯೇ ಯುವಕ ಯುವತಿಯರು ಹೊಸ ಹರೆಯದಲ್ಲಿಯೇ

ಕೂಡಿ ಬೇಟವಾಡದಂತೆ ಒಳಸಂಚು ಮಾಡುತ್ತವೆ. ಇದರಿಂದ ಅತೃಪ್ತವಾದ ಆಕಾಂಕ್ಷೆಯು, ಅಪೂರ್ಣವಾದ ಅಪೇಕ್ಷೆಯು ಅವರ ನರನಾಡಿಗಳಲ್ಲಿ ಉರಿದಾಡುತ್ತ ಹರಿದಾಡುತ್ತ ಉಳಿಯುತ್ತದೆ. ಈ ಆಕಾಂಕ್ಷೆ–ಅಪೇಕ್ಷೆಗಳ ಆತ್ಯಂತಿಕವಾದ ಕಳವಳವೇ ಒಳಮುಖವಾಗಿ ಬೆಳೆದು ಕಲ್ಪನಾ ಜಾಲದಲ್ಲಿ ಹೆಣೆದು ನಿಲ್ಲುತ್ತದೆ. ತನ್ನ 'ಕನಸಿನ ಕೆಳದಿ'ಯನ್ನು 'ಉಷಾ ಸ್ವಪ್ನದ ವಲ್ಲಭ'ನನ್ನು ಅಪ್ರಾಪ್ಯ ಕಾಮನೆಯಿಂದ ಕಳೆಗೊಂಡ ಆದರ್ಶ ವರ್ಣ ವೈಭವದಲ್ಲಿ ಹೊದ್ದಿ ಹೊಳೆಯುವಂತೆ ಮಾಡುತ್ತದೆ.

ಅಪ್ರೇವು ದಿವ್ಯವೆನಿಸುವಂತೆ ಅಪ್ರಾಪ್ಯವು, ರಮ್ಯವೆನಿಸುವದು. ಆದರ್ಶದ ಆಕರ್ಷಣವು ಅದರ ಅಸಾಧ್ಯತೆಯಲ್ಲಿಯೇ. ಸಾಧ್ಯವಾದದ್ದು ಆದರ್ಶವಾಗಿ ಉಳಿಯುವದಿಲ್ಲ. ನಾವು ಅರಸಿಯೂ ದೊರೆಯದಿದ್ದ ಸಂಗತಿಯು ನಮ್ಮ ಅರಸುವಿಕೆಯ ಕಷ್ಟದಿಂದಲೇ ಕಳೆಯನ್ನು ತಾಳುತ್ತದೆ; ದೊರೆಯಲಿಲ್ಲವಾದ್ದರಿಂದಲೇ ಬೆಲೆಯನ್ನು ತಳೆಯುತ್ತದೆ. ಕಾಮನೆಯಿಂದಲೇ ಕಾಂತಿ–ಕಮನೀಯತೆ. ವಸ್ತುವಿನ ಚೆಲುವು ಅದರ ಕುರಿತ ಬಯಕೆಯ ಬಲುಮೆಯಲ್ಲಿಯೇ ಇರುತ್ತದೆ; ಮತ್ತು ಪೂರೈಕೆ ಸಂತೈಕೆಗಳಿಂದ ದುರ್ಬಲವಾಗುವ ಬಯಕೆಯ ವಸ್ತುವಿನ ದುರ್ಲಭತೆಯಿಂದ ಬಯಕೆಯ ಅಲ್ಲಗಳೆಯುವಿಕೆಯಿಂದ ಎಂದಿಗಿಂತಲೂ ಹೆಚ್ಚು, ಸಂಪನ್ನವಾಗುತ್ತದೆ.

ಈ ತತ್ವವು ಪ್ರೀತಿಯ ವಿಕಾಸಕ್ಕೂ ಅನ್ವಯಿಸುತ್ತದೆ. ಉಪಭೋಗವು ದೂರ ಬಿದ್ದಂತೆ ಉಪಾಸನೆಯು ಉಂಟಾಗುತ್ತದೆ; ಉತ್ಕಟವಾಗುತ್ತದೆ. ಪ್ರೀತಿಯು ಆಧ್ಯಾತ್ಮಿಕವಾಗಲಿಕ್ಕೆ ಕಾಮನೆಯು ನಿರ್ಭರವಿರಬೇಕು. ಇನ್ನೊಂದಡೆಗೆ ನಿಯಮದ ನಿರ್ಬಂಧವಿರಬೇಕು. ಅಂದರೆ ಹೃದಯವು ಉತ್ಸಾಹ ಉಲ್ಲಾಸಗಳಿಂದ ತುಳುಕುತ್ತಿರಬೇಕು; ಆದರೆ ಪರಿಸ್ಥಿತಿಯು ಸ್ಥೈರ್ಯ ಗಾಂಭೀರ್ಯಗಳಿಂದ ತುಂಬಿರಬೇಕು. ಲೌಕಿಕ ಮಾತಿನಲ್ಲಿ ಹೇಳುವುದಾದರೆ ವ್ಯಕ್ತಿಯ ಯೌವನದಲ್ಲಿಯೂ ನಾಗರಿಕತೆಯ ವೃದ್ಧಾಪ್ಯದಲ್ಲಿಯೂ ಪ್ರೀತಿಯು ಅತ್ಯಂತ ಆತ್ಮಿಕತೆಯನ್ನು ಹೊಂದುತ್ತದೆ. ಕುಲಾಚಾರ ಕಾಯಿದೆ ಕಟ್ಟಳೆ ನೀತಿನಿಯಮುಗಳು ದೃಢವಾಗಿ ರೂಢವಾಗಿ ನಿಂತು ನಾಗರಿಕತೆಯ ಹಣ್ಣಿಗೆ ಬಂದ ಸಮಾಜದಲ್ಲಿ ವ್ಯಕ್ತಿಯ ಅದಮ್ಯವಾದ ಮೋಹವು ಎಷ್ಟು ಉತ್ಕಟವೋ ಅಷ್ಟು ಅದಕ್ಕೆ ಬರುವ ಅಡೆ ತಡೆಗಳು ಹೆಚ್ಚು. ಹೀಗೆ ಸಮಾಜದ ವಿಚಾರದಿಂದ ವೈಯುಕ್ತಿಕ ವಿಕಾರವನ್ನು ಹತ್ತಿಕ್ಕುವದು ಎಲ್ಲಿ ಹೆಚ್ಚೋ ಅಲ್ಲಿಯೇ ಪ್ರಣಯದ ಉತ್ಕಟತೆ, ಉತ್ಕಂಠೆ ಪ್ರೀತಿಯ ಕಳಕಳಿ ಕಳವಳ ಇವೆಲ್ಲ ಹೆಚ್ಚು. ಶೃಂಗಾರರಸದಲ್ಲಿಯೂ ಸಂಭೋಗಕ್ಕಿಂತ

ವಿಪ್ರಲಂಭದಲ್ಲಿ ನಾಯಕ ನಾಯಿಕೆಯರ ಮಿಲನಸಂಯೋಗಗಳಿಗಿಂತ ವಿರಹ ವಿಯೋಗಗಳಲ್ಲಿ ಪ್ರೀತಿಯ ರಸಪರಿಪೋಷವು ಹೆಚ್ಚಿನದೆಂದು ನಮ್ಮಲ್ಲಿಯ ಕಾವ್ಯ ಮೀಮಾಂಸಕರು ಅನ್ನುವುದರ ಇಂಗಿತವೂ ಇದೇ ಇರಬೇಕು.

ಇನ್ನು ಈ ಪ್ರೀತಿಯ ಒಂದು ಮನೋಧರ್ಮವಾಗಿ ಹೇಗೆ ವಿಕಾಸಗೊಳ್ಳುತ್ತದೆ ಎಂಬುದನ್ನು ನೋಡೋಣವೆ?

ಪ್ರೀತಿಯ 'ಮತ್ಸ್ಯಾವತಾರ'

ಪ್ರೀತಿಯ ಆರಂಭವು ನದಿಯ ಮೂಲದಂತೆಯೇ ಎಲ್ಲಿಯೋ ಮೆಲ್ಲನೆ ಗೊತ್ತಾಗದ ಗತ್ತಿನಲ್ಲಿ ಒದಗಿಬರುತ್ತದೆ, ಪ್ರೀತಿಯ 'ಮತ್ಸ್ಯಾವತಾರವು' ಒಂದು ಪರಿಯಿಂದ ವಾತ್ಸಲ್ಯದ ರೂಪವಾಗಿ ಪರಿಣಮಿಸುತ್ತದೆ. ಹುಡುಗಿಯು ತಂದೆಯ ಕುರಿತೂ, ಹುಡುಗನು ತಾಯಿಯ ಕುರಿತೂ ಒಂದು ವಿಶೇಷವಾದ ಕೋಮಲಭಾವವನ್ನು ಬೆಳೆಸಿಕೊಳ್ಳುವದು ಕಂಡುಬರುತ್ತದೆ. ಇದು ಪ್ರೀತಿಯ ಆರಂಭಿಕ ರೂಪ. ಅನಂತರದ ರೂಪವೆಂದರೆ, ಹುಡುಗ ಹುಡುಗಿಯರು ತಮ್ಮ ವಯಸ್ಸಿಗೆ ಹೆಚ್ಚು ಹತ್ತಿರದ ವ್ಯಕ್ತಿಯ ಕುರಿತು ತೋರ್ಪಡಿಸುವ ವಾತ್ಸಲ್ಯಕ್ಕಿಂತಲೂ ಹೆಚ್ಚು ಭಾವಾವೇಶದ ಭಕ್ತಿಯು, ಸಾಮಾನ್ಯವಾಗಿ ಇಂದಿನ ಸಮಾಜದಲ್ಲಿ ಈ ವ್ಯಕ್ತಿಯು ಅಂಥ ಮಕ್ಕಳ ಶಿಕ್ಷಕ ಶಿಕ್ಷಕಿಯರಲ್ಲಿ ಒಬ್ಬರಾಗಿರುತ್ತಾರೆ. ಪ್ರತಿಯೊಂದು ಶಾಲಾ ಇಯತ್ತೆಯ ವಿದ್ಯಾರ್ಥಿ ವರ್ಗದಲ್ಲಿಯೂ ತಮಗೆ ವಿರುದ್ಧ ಲಿಂಗಿಯಾದ ಶಿಕ್ಷಕನ ಇಲ್ಲವೇ ಶಿಕ್ಷಕಿಯ ಕುರಿತು ಮಧುರ ಆದರ ಭಾವವನ್ನು ಉತ್ಕಟವಾಗಿ ತಾಳುವ ಅಥವಾ ತೋರಿಸುವ ಮಕ್ಕಳು ಇದ್ದೇ ಇರುತ್ತಾರೆ. (ನಮ್ಮ ದೇಶದಲ್ಲಿ ಗಂಡು ಮಕ್ಕಳ ಶಾಲೆಗಳಲ್ಲಿ ಶಿಕ್ಷಕಿಯರ ಸಂಖ್ಯೆಯು ವಿಶೇಷವಿರುವ ವಾಡಿಕೆ ಇಲ್ಲ. ಆದ್ದರಿಂದ ಬೆಳೆಯುವ ಹುಡುಗರು ಶಿಕ್ಷಕಿಯ ಆರಾಧನೆಯಲ್ಲಿ ತೊಡಗಿದ ಉದಾಹರಣೆಗಳೂ ದೊರಯುವ ವಾಡಿಕೆ ಇಲ್ಲ.) ಹೆಣ್ಣು ಮಕ್ಕಳು ಕೆಲವೊಮ್ಮೆ ತಮ್ಮ ಯಾವನೊಬ್ಬ ಶಿಕ್ಷಕನನ್ನು ಮನವಾರೆ–ಮನದಲ್ಲಿಯೇ –ಆರಾಧಿಸುವದು ಕಂಡು ಬರುವಂತೆ, ಹಲವೊಮ್ಮೆ ಗಂಡು ಮಕ್ಕಳೂ (ವಿಶೇಷವಾಗಿ ಅಳ್ಳೆದೆಯ ಹೆಂಗಳೆಯತನದ 'ಸುಕುಮಾರ' ಕುಮಾರರು!) ಹಾಗೆ ಶಿಕ್ಷಕನನ್ನು ಆರಾಧಿಸುವದೂ ವಾಡಿಕೆ ಇದೆ. ಮತ್ತು ದುರ್ದೈವವೇನೆಂದರೆ, ಇಂಥ ಮುಗ್ಧ ಆರಾಧನೆಯ ಅಥವಾ ಮೂಕ ಭಕ್ತಿಯ ಅನುಚಿತ ಲಾಭವನ್ನು ಪಡೆಯ ಹೋಗಿ ಆ ಮಕ್ಕಳ ಆಯುಷ್ಯಕ್ಕೂ ತಮ್ಮ ಭವಿಷ್ಯಕ್ಕೂ ತೊಡಕಾಗುವ ತಿಳಿಗೇಡಿ ಶಿಕ್ಷಕರೂ ಕಂಡು ಬರುತ್ತಾರೆ. ಅಂಥ

ಮೆಚ್ಚಿದ ಮೆಚ್ಚಿಗೆಯ ಮಕ್ಕಳನ್ನು ಪ್ರಕಟವಾಗಿ ಮುದ್ದಾಡುತ್ತ ಅವರ ಕುರಿತು ಪಕ್ಷಪಾತದ ಅಯೋಗ್ಯ ಆತ್ಮೀಯತೆಯ ವರ್ತನೆಯನ್ನು ಅವರ ವರ್ಗದವರೆದುರಿಗೇ ನಡೆಯಿಸುತ್ತ ಅನ್ಯಾಯ ಅಪಹಾಸ್ಯಗಳಿಗೆ ಗುರಿಯಾಗುವ ಗುರುಗಳು ಕಡಿಮೆ ಇರುವದಿಲ್ಲ. ಇರಲಿ. ಈ ಗುರು-ಶಿಷ್ಯ ಸಂಬಂಧದ ಸೂಕ್ಷ್ಮ ಚರ್ಚೆಯು ನಮ್ಮ ವಿಷಯವಲ್ಲ.

ನಮ್ಮ ಹೇಳಿಕೆಯ ಹುರುಳು ಇಷ್ಟೇ: ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಅವರ ವಯಸ್ಸಿನ ಮತ್ತು ಮನಸ್ಸಿನ ಆ ಅವಸ್ಥೆಯಲ್ಲಿ ತಮ್ಮ ವಿರುದ್ಧ ಲಿಂಗದ ಅಧ್ಯಾಪಕ-ಅಧ್ಯಾಪಿಕೆಯರಲ್ಲಿ ಆಳವಾದ ಆಸಕ್ತಿಯು ಬೆಳೆಯುವ ಸಂಭವವು ವಿಶೇಷವಾಗಿ ಕಂಡು ಬರುತ್ತದೆ. ಈ ಆಸಕ್ತಿಯಲ್ಲಿ ಅನೈಸರ್ಗಿಕವಾದದ್ದೂ ಅನೈತಿಕವಾದದ್ದೂ ಏನೂ ಇರುವದಿಲ್ಲ. ಅದಕ್ಕೆ, ಒಂದು ತಾತ್ಕಾಲಿಕ ಲಕ್ಷಣವೆಂದೇ ತಿಳಿದು ಅಂಥ ಅಧ್ಯಾಪಕ ಅಧ್ಯಾಪಿಕೆಯರು ಹದಗೆಟ್ಟ ಮಹತ್ವವನ್ನೂ ಉತ್ತೇಜನೆ ಉದ್ದೀಪನೆಗಳನ್ನೂ ಕೊಡದಿದ್ದರೆ ಯಾವ ಅನರ್ಥವೂ ಒದಗುವದಿಲ್ಲ. ಪ್ರೀತಿ ಭಾವನೆಯೂ ಸ್ಥಿರವಾಗಿ ರೂಪಗೊಳ್ಳುವ ನಿಟ್ಟಿನಲ್ಲಿ ಇದೊಂದು ಮಟ್ಟ, -ಪ್ರೀತಿಯ 'ವಾಮನಾವತಾರ'ವೆನ್ನಿರಿ! ಕಲ್ಪನಾರಮ್ಯತೆಯ ಅಂಶವು ಇಂಥ ಆಸಕ್ತಿಯಲ್ಲಿ ಆದಾಗಲೇ ಅತ್ಯಂತವಾಗಿರುತ್ತದೆ. ಆಸಕ್ತಿಯನ್ನು ತೋರಿಸುವ ಮಕ್ಕಳ ಭಾವನೆಯು ತೀವ್ರವಿದ್ದರೆ ಅಂಥ ಅನುರಾಗವನ್ನು ನಡೆ-ನುಡಿಗಳಲ್ಲಿ ಒಡಮೂಡಿಸುವದರಲ್ಲಿ ಕಾವ್ಯಮಯತೆಯೂ ಪ್ರಕಟವಾಗುವದು. ಆದರೆ ಇದೆಲ್ಲ ಭಾವನೆಯು ಮುಗ್ಧವಾಗಿಯೇ ಇರುತ್ತದೆ. ಅದರಲ್ಲಿ ಶಾರೀರಿಕ ಅಂಶವು ಸೇರಿರುವದಿಲ್ಲ. ಮಕ್ಕಳ ದೃಷ್ಟಿಯಲ್ಲಿಯಾದರೂ ಸೇರಿರುವದಿಲ್ಲ. ಬುದ್ಧಿಪೂರ್ವಕವಾಗಿ ಮಕ್ಕಳು ಅಧ್ಯಾಪಕರಿಂದ ಆಂಗಿಕ ಚೇಷ್ಟೆಗಳ ತೃಪ್ತಿಯನ್ನು ಬಯಸುವದಿಲ್ಲ. (ತಮ್ಮ ಪ್ರೀತಿಯ ಅಧ್ಯಾಪಕರು ತಮ್ಮನ್ನು ಅಪ್ಪಿಕೊಳ್ಳಬೇಕು ಮುದ್ದಾಡಬೇಕು-ಎಂದು ಆ ಎಳೆಯ ಕೆಳೆಯರೂ ಕೆಳದಿಯರೂ ಅಪೇಕ್ಷಿಸುವದಿಲ್ಲ). ಗಂಟುಬಿದ್ದ ಅಧ್ಯಾಪಕರು ಧೂರ್ತರಿದ್ದರೆ ಮಾತ್ರ ಮಕ್ಕಳಿಗೂ ಅವರಿಗೂ 'ಅಂಟಿದ ನಂಟಿನ ಕೊನೆ ಬಲ್ಲವರಾರು' ಎಂದು ಯಾವ 'ಕಾಮಾಕ್ಷಿಯೂ' ಹೇಳಲಾರಳು! ಅಧ್ಯಾಪಕರು ಸಂಯಮದಿಂದ- ಸಮದೃಷ್ಟಿಯಿಂದ-ನಡೆದರೆ, ನೋಡಿಕೊಂಡರೆ, ಮಕ್ಕಳ ಈ ಮೋಹವು ವ್ಯಾಮೋಹವಾಗುವದಿಲ್ಲ.

ಪ್ರೀತಿಯ ವಾಮನಾವತಾರ

ಇದರ ನಂತರದ ಅವಸ್ಥೆಯೇ 'ಪೌಗಂಡ ಪ್ರಣಯದ' ಅವಸ್ಥೆ. ಪೋರಿ–ಪೋರರ ಪ್ರೇಮಲೀಲೆ, ಇದಕ್ಕೆ 'ಹಸುವಿನ' ಪ್ರೀತಿಯೆಂದು ಕರೆಯುವ ವಾಡಿಕೆ. ತಮ್ಮ ವರ್ಗದಲ್ಲಿಯ, ಓಣಿಯಲ್ಲಿಯ, ಓರಿಗೆಯ, ಇಲ್ಲವೇ ಒಡನಾಟದ ಹುಡುಗನನ್ನೋ ಹುಡುಗಿಯನ್ನೋ ಕೆಳೆಯ ಚಿನ್ನಾಟವಾಡುವ ರೀತಿಯಿದು. ಇಂಥ ಪ್ರೀತಿಯು ಸಾಮಾನ್ಯವಾಗಿ ಗುಪ್ತವಿರುತ್ತದೆ. ಕೆಲವೊಮ್ಮೆ ತಮ್ಮ ಪ್ರಿಯ ವ್ಯಕ್ತಿಯ ಇದುರಿಗೇ ಒಪ್ಪಿಕೊಂಡದ್ದಿರುವದಿಲ್ಲ. ಆಡಿಕಾಣಿಸಿದ್ದಿರುವದಿಲ್ಲ! ಹಲವೊಮ್ಮೆ ತನ್ನ ಪ್ರಿಯರಿಗೆ ಈ ಗುಪ್ತ ಪ್ರೀತಿಯು ಅರ್ಪಿಸುವ (ಕಳುಹಿಸುವ) ಕಾಣಿಕೆಯು ಕೂಡ ಅನಾಮಿಕವಾಗಿರುತ್ತದೆ. 'ಕನಸಿನ ಕೆಳದಿ'ಗಾಗಿ ಚಿತ್ರಪಟ ಸೃಷ್ಟಿಯ ತಾರಕೆಯರಿಗಾಗಿ ಕಳವಳಿಸಿ ಕರಗುವ ಕಾವಿನ ಕಾಲವಿದು! ಕೋಣೆತುಂಬ ತಮ್ಮ ಮೆಚ್ಚಿಗೆಯ ಸಿನೇಮಾ ಸುಂದರಿಯ ವಿವಿಧ ವಿಲಾಸ –ವಿಭ್ರಮಗಳ ಚಿತ್ರಗಳನ್ನು ತೂಗಬಿಟ್ಟ ತದೇಕಧ್ಯಾನರಾಗಿ ಕೊನೆಗೂ ತಲೆದಿಂಬನ್ನೇ ಎದೆಗವಚಿಕೊಂಡು ನಿದ್ದೆಹೋಗಿ ಅನಿರುದ್ಧವಾಗಿ ಉಷಾಸ್ವಪ್ನಗಳನ್ನು ಕಾಣುವ ಕಾಲವಿದು! 'ಓ ನನ್ನ ನಲ್ಲೆ! ನಿನಗಾಗಿ ನೂರು ನರಕಗಳನ್ನೂ ಈಜಬಲ್ಲೆ!' ಎಂಬ ಆಶ್ವಾಸನವನ್ನು ಬರೆದು ಕಳಿಸಿಯೂ ಕೊನೆಗೆ ಕೊಂಚ ನೆಗಡಿಯಾಯಿತೆಂದು ಮನೆಯಲ್ಲಿಯೇ ಬಿದ್ದಕೊಂಡು, ನಲ್ಲೆಯ ಕೆನ್ನೆಗಳ ಕುರಿತು ಸೀಸ ಪದ್ಯಗಳನ್ನು ಕಟ್ಟಿ ಅವುಗಳ ಪ್ರಕಟನೆಗಾಗಿ ಕೈ ಬರಹದ ಪತ್ರಿಕೆಯನ್ನೊಂದು ಹೊರಡಿಸುವ ಹಂಚಿಕೆಯಲ್ಲಿಯೇ ಹಗಲಾಗುವತನಕ ಹಾಸಿಗೆಯಲ್ಲಿ ಹೊರಳಾಡಿ ಹೊತ್ತು ಕಳೆಯಬಲ್ಲ ಕಾವ್ಯದ ಕಾಲವಿದು! ಈ 'ಪೌಗಂಡ ಪ್ರಣಯ'ದ ಒಂದು ಚೆಂದವಾದ ಚಿತ್ರವು ಇತ್ತೀಚೆಗೆ ಪ್ರಕಟವಾದ 'ಆಲದ ಹೂ' ಎಂಬ ಕಾದಂಬರಿಯಲ್ಲಿ ಬಂದಿದೆ.

ಈ ಅವಸ್ಥೆಯಲ್ಲಿ ಹುಡುಗರು ಮುಗ್ಧ; ಹುಡುಗಿಯರೇ ಮುಖರ–ಗಂಡಿಗಿಂತ ಹೆಣ್ಣು ಹೆಚ್ಚು ದಿಟ್ಟವಿರುತ್ತದೆ. ಆರಂಭದ ವರ್ಷಗಳಲ್ಲಿ ಹೆಚ್ಚು ಹೆಚ್ಚು ಬುದ್ಧಿ ಬಲಿತಂತೆ ಈ ಮೂಲದ ಧಾಷ್ಟ್ರ್ಯವು ಕಡಿಮೆಯಾಗುತ್ತ ಹೋಗುತ್ತದೆ; ಆದರೂ ಪ್ರಳಯದ ಕಲೆಗಳಲ್ಲಿ ಹೆಣ್ಣು ಕೊನೆಯವರೆಗೂ ಒಂದು ಉನ್ನತವಾದ, ಅಂದರೆ ಗಂಡಿನ ನಡತೆಯಲ್ಲಿ ಕಾಣುವದಕ್ಕಿಂತಲೂ ಉನ್ನತವಾದ ಒಂದು ತಂತ್ರ–ತಜ್ಞತೆಯನ್ನು ತೋರಿಸುವಳು. ಪ್ರಣಯ ವ್ಯವಹಾರದಲ್ಲಿ ಶೃಂಗಾರ ಸಂಭೋಗ ವಿಪ್ರಲಂಭಗಳ ಭಾವ–ಭಂಗಿಗಳಲ್ಲಿ ಗಂಡಿಗಿಂತಲೂ ಹಿರಿದಾದ ಚಾತುರ್ಯವನ್ನು ಒಡಮೂಡಿಸುವಳು. ಹುಡುಗನು ಕುರಿಯಂತೆ ಕಾಣುವನು;

ಹುಡುಗಿಯು ತನ್ನನ್ನು ತಾನು ಆಳುತ್ತ ತೂಕದಿಂದ ನಡೆಯುವಳು. ಬೆಂಕಿಯೊಡನೆ ಆಡಿಯೂ ಬೆರಳು ಸುಟ್ಟುಕೊಳ್ಳದಂತೆ ಆಕೆ ನೋಡಿಕೊಳ್ಳಬಲ್ಲಳು. ಪರಿಸ್ಥಿತಿಯು ಹದಗೆಡದಿರುವಂತೆ, ಪ್ರಸಂಗವು ದುರ್ಘಟನೆಗೆ ಜಾರದಂತೆ, ಹುಡುಗನನ್ನು ಕೆಣಕಿಯೂ ಕೆರಳಿಕೆಯನ್ನು ತಪ್ಪಿಸಿಕೊಳ್ಳುವಂತೆ, ಆದಷ್ಟು ಹತ್ತಿರ ಸೆಳೆಯುವ ಬಿನ್ನಾಣದಲ್ಲಿಯೇ ಸಾಕಷ್ಟು ದೂರವಿಡುವ ಬಿಂಕವನ್ನು ಮೆರೆಯಿಸಲು ಮರೆಯದೆ, ಸನಿಯವಿದ್ದೂ ಸಲಿಗೆ ತೋರದೆ, ಸಲಿಗೆಯಿದ್ದೂ ಸಲೀಸಳಾಗದೆ, ಒಂದು ಬಗೆಯ 'ಸ್ಥಿತಪ್ರಜ್ಞತೆ'ಯನ್ನು ಅವ್ಯಕ್ತವಾಗಿ ವ್ಯಕ್ತಮಾಡಬಲ್ಲಳು. ಆದರಿಂದ ತನ್ನ ವ್ಯಕ್ತಿತ್ವದ ಕಳೆಯನ್ನು ಹೆಚ್ಚಿಸಬಲ್ಲಳು. ಈ ಪಟುತ್ವದ ಫಲವೇನೆಂದರೆ, ಎಷ್ಟೋ ಸಲ ಕಟ್ಟೆಯು ಕಟು ಟೀಕೆಯಲ್ಲಿಯೂ ಪೇಟೆಯಪಾಂಡಿತ್ಯದಲ್ಲಿಯೂ ಇಂಥ ಒಬ್ಬ ಹುಡುಗಿಯ ಕುರಿತು ಆತ್ಮಸಂಭಾವಿತರೂ ಸ್ವಯಂಭೂ ಸಮಾಜಸುಧಾರಕರೂ ಕಟ್ಟಿದ ಅನುಮಾನಗಳೂ ಪಟ್ಟ ಅಭಿಪ್ರಾಯಗಳೂ ಸುದೈವದಿಂದ ಸಂಪೂರ್ಣ ಸುಳ್ಳಾಗವವು. ಹಲವು ಹುಡುಗರನ್ನು ತನ್ನ ಸುತ್ತಲೂ ಸುಳಿದಾಡಲು ಹಚ್ಚಿ ಪ್ರಣಯದ ಚಿನ್ನಾಟವಾಡುವ ಇಂಥ ಚೆನ್ನಿಯೇ ಮುಂದೆ ಚೆನ್ನಾಗಿ ಕುಟುಂಬ ವತ್ಸಲಳಾಗಿ ಸಂಸಾರವನ್ನು ಸಾಗಿಸಿಕೊಂಡು ಹೋಗುವದು ಕಂಡುಬರುವದುಂಟು; ಅತ್ತ ಪರಮ ಸಾಧ್ವಿಗಳಾಗಿ 'ಪಂಚಕನ್ಯೆ'ಯರ ಮಾಲಿಕೆಯ ಹೊಸ ಆವೃತ್ತಿಯಲ್ಲಿ ತಮ್ಮ ಹೆಸರುಗಳೂ ಸೇರಲು ತಕ್ಕವಾಗಿವೆಯೆಂಬ 'ಸಾತ್ವಿಕ' ದರ್ಪದಲ್ಲಿ ಹೊಗರಾಡುವ ಮಡಿವಂತ ಹುಡುಗಿಯರಲ್ಲಿಯೇ ಕೊನೆಗೆ ಒಬ್ಬಾಕೆಯು ಕದ್ದಕಾಮದ ಮುಸುಕಿನ ಮೋಸಕ್ಕೆ ಬಲಿಯಾಗಿ ಕುಲಟೆಯೆನಿಸಿಕೊಳ್ಳುವ ದುರ್ದೈವವೂ ಕಂಡು ಬರುವದುಂಟು! ಹೀಗೆ ಸಾಮಾನ್ಯವಾಗಿ ಹೊಸ ಹರೆಯದ ಈ ಅಭಿಸಾರವೆಲ್ಲ ವ್ಯಭಿಚಾರದ ಪ್ರಸ್ತಾಪನೆಯಲ್ಲ. ಇಂಥ ವ್ಯವಹಾರದಲ್ಲಿ ಮೋಹದ ಕೇಂದ್ರವಾದ ಹೆಣ್ಣೇ ಗಂಡಿಗಿಂತ ಹೆಚ್ಚು ಎಚ್ಚರಿಕೆಯುಳ್ಳವಳಿರುತ್ತಾಳೆ. 'ಸವಿಯೇ ಚೆಲುವಿನ ಜೇನು' ಹೂ ಕೀಳಬೇಕೆನು? ನೋಟ ಕೂಟವು ಸಾಕು ಮಾಗುತ್ತಿರು!' ಎಂದು ಕವಿ ಬೇಂದ್ರೆಯವರು ಹೂವಿಗೆ ಸಾರಿದ ಸಂದೇಶವನ್ನೇ ಪೌಗಂಡ ಪ್ರಣಯದಲ್ಲಿ ಹುಡು-ಹುಡುಗಿಯರು ತಾವೇ ಒಬ್ಬರೊಬ್ಬರಿಗೆ ಕೊಡುವಂತಿದೆ!

ಏಕೆಂದರೆ ಹುಡುಗರೂ ಹಾಗೆಯೇ ವಿಚಿತ್ರವಾಗಿ ವರ್ತಿಸುವರು. ತಾನು ಮೆಚ್ಚಿದ ಹುಡುಗಿಯನ್ನು ತನ್ನವಳಾಗಬೇಕೆಂದು, ಮನವಾರೆ ಬಯಸಿದ ಹುಡುಗಿಯನ್ನು ತಪ್ಪಿಸಿಕೊಂಡು, ಆಕೆಯೊಂದಿಗೆ ಭೇಟಿ-ಭಾಷಣಗಳನ್ನೇ

ತಪ್ಪಿಸಿಕೊಳ್ಳಲಿಕ್ಕೆ ಸುಮ್ಮನೆ ತನ್ನ ದಾರಿಯನ್ನೇ ಬಿಟ್ಟು ಹರದಾರಿ ದೂರ ಸುತ್ತಾಡಿ ಪೇಚಾಡುವದುಂಟು. ಕತ್ತಲೆಯಲ್ಲಿ ಏಕಾಕಿಯಾಗಿ ಅಲೆದಾಡುವದುಂಟು; ಏಕಾಂತದಲ್ಲಿ ಮೈಮರೆತು ಮೈಗಳ್ಳನಂತೆ ಕೂಡ್ರುವದುಂಟು. ಹಗಲಲ್ಲಿ ಹಾದಿಗೆಟ್ಟ ಒಂಟಿಯಂತೆ ಒಂಟಿಗನಾಗಿ ಮೋರೆಯಲ್ಲಿ ಮಬ್ಬು ಗಂಟಿಕ್ಕಿ ಎಲ್ಲಿಂದೆಲ್ಲಿಗೋ ಅಡ್ಡಾಡುವದುಂಟು- ಎಲ್ಲಾದರೂ ಅಡ್ಡಾಗುವದೂ ಉಂಟು. ಗೀತೆಯಲ್ಲಿ ಬಣ್ಣಿಸಿದ ಸಂಯಮಿ-ಮುನಿಯಂತೆ ನಿದ್ದೆ ಮಾಡುವಾಗೆಲ್ಲ ಎಚ್ಚರವಿರುವದುಂಟು; ಎಚ್ಚರವಿರಬೇಕಾದಾಗಲೆಲ್ಲ ನಿದ್ದೆಯಲ್ಲಿ ನಡೆಯುವಂತೆ ಕನಸು ಕಾಣುವದುಂಟು. ಉದಾಸೀನ ಚಿಂತೆಯಲ್ಲಿ ಕಾಲವನ್ನು ಕಳೆಯುವದರಿಂದ ತನ್ನ ಒಡನಾಡಿಗಳ ಜತೆಯಲ್ಲಿ ಕೂಡಿ ನಡೆಯುವ ಹದವೇ ತಪ್ಪಿದಂತಾಗಿ ಮಾತುಗಳಲ್ಲಿಯೂ ಕೃತಿಗಳಲ್ಲಿಯೂ ಅಸಡ್ಡಾಳತನವನ್ನು ಅಡಿಗಡಿಗೂ ಹೊರಗೆಡಹುವದುಂಟು.

ವಿಕೃತಿ-ಪ್ರಕೃತಿ

ಈ ಬಗೆಯ ದಮನದ ದಾರಿಯನ್ನು ಹಿಡಿದ ಪೌಗಂಡ ಪ್ರಣಯದಿಂದ ಕೆಲವೊಮ್ಮೆ ವಿಪರೀತ ಪರಿಣಾಮಗಳು ಒದಗಿಬರುತ್ತವೆ. ಕೆಲವು ಹೊಸ ಹರೆಯದ ಹುಡುಗರಲ್ಲಿ ತಾಯಿಯ ಕುರಿತು ತೀವ್ರವಾದ ಭಕ್ತಿಯು ಹುದುಗಿರುತ್ತದೆ. ತಾಯಿಯಿಂದ ತೀರ ಸಲಿಗೆಯ ಸಂಗೋಪನೆಯನ್ನು ಪಡೆಯುತ್ತಿರುತ್ತಾರೆ. ತಾಯಿಯಲ್ಲಿಯು ತೀರ ಕಕ್ಕುಲಾತಿಯ ಅಕ್ಕರವನ್ನು ನೆಲಸಿಕೊಂಡು ಬೆಳೆದಿರುತ್ತಾರೆ. ಇಂಥವರು ಎಲ್ಲ ಹೆಣ್ಣಿನಲ್ಲಿಯೂ ತಾಯಿಯ ಮಾದರಿಯನ್ನೇ ಅವ್ಯಕ್ತವಾಗಿ ಕಾಣಹತ್ತುವರು. ತಾಯಿಯಂಥ ಹೆಣ್ಣೇ ಉತ್ತಮ ಹೆಣ್ಣು, ಆದರೆ ತಾಯಿಯಂತೆ ಅಂದಮೇಲೆ ಜೀವದ ಜತೆಗಾರ್ತಿ ಆಗಲು ತೀರ ನಿಷಿದ್ಧವಿದ್ದ ಪೂಜ್ಯವು ತ್ಯಾಜ್ಯವೂ ಅನಿಸುವ ಹೆಣ್ಣು- ಈ ಉಭಯ ಸಂಕಟದ ತೊಳಲಾಟದಿಂದ ಪಾರಾಗಲು ಇಂಥ ತರುಣರು ತಮ್ಮ ಮುಗ್ಧ ಪ್ರೀತಿಗೆ ವ್ಯಕ್ತಪ್ರಣಯದ ರೂಪವನ್ನು ಕೊಡಲಾರದೇ ಅವರ ಮನವು ಮುಖಪಡೆಯದೆ ಆಧ್ಯಾತ್ಮಿಕ ಪ್ರೇಮದ ಆರಾಧನೆ(?)ಯಲ್ಲಿ ಅಥವಾ ವಿಶ್ವಮಾತೆಯೆಂಬ ಯಾವಳೋರ್ವ ಮಹಾ ವಿಭೂತಿಯ, ಇಲ್ಲವೆ ದೈವತದ ಪ್ರೀತ್ಯಾದರದ ಉತ್ಕಟ ಆವೇಶದಲ್ಲಿ ಅಥವಾ ನಾಡದೇವಿಯ ಸೇವಾ ವ್ರತದಲ್ಲಿ ಕರ್ತವ್ಯದ ಕಂಕಣ ಕಟ್ಟಿಕೊಂಡು, ತಮ್ಮ ಶೂನ್ಯ ಹೃದಯವನ್ನೇ ನಿರಾಕಾರ ನಿರುತ್ತರ ಪ್ರೇಮದ ಗೋರಿಯನ್ನಾಗಿ ಮಾಡಿ, ಆಮರಣ ಅವಿವಾಹಿತರಾಗಿ ಬದುಕಬಹುದು. ಏಕೆಂದರೆ ಇಂಥ ತೀವ್ರ ಭಾವುಕ-ವೇದನಾಮಯ ಹೃದಯಕ್ಕೆ ಹೆಣ್ಣಿನ ಒಲವೇ ಅತ್ಯಾಚಾರವೆನಿಸುತ್ತದೆ. ತನ್ನ

ಅಂತರಾಳದ ಭಾವನೆಯ ಆವೇಶವನ್ನು ತನಗೆ ತಾನೇ ಒಪ್ಪಿಕೊಳ್ಳಲು ಕೂಡ ಅಸಹ್ಯವೆನಿಸುತ್ತದೆ. ಇದರಿಂದ ಇಂಥ ಭಾವನಾಮಯ ತರುಣನು ಒಮ್ಮೆಲೇ ನೈಷ್ಠಿಕ ಬ್ರಹ್ಮಚಾರಿಯಾಗುವ ನಿರ್ಧಾರಕ್ಕೆ ಮುಟ್ಟುತ್ತಾನೆ.

ಆದರೆ ಇಂಥ ಯಾವುದೇ ಒಳತೊಡಕು ಇಲ್ಲದ ಇತರ ಹುಡುಗರು ಹೊರ ಹಾದಿಯನ್ನು ಹಿಡಿಯುತ್ತಾರೆ. 'ಕಾಂತಾನಿವಹದ ನಿಬ್ಬರದ ನುಡಿಗಳನ್ನು' ಸ್ವಾಗತಿಸಿಯೇ ನಟ್ಟವಿಗನಂತೆ ಅರ್ಜುನನು ಮತ್ಸ್ಯ ಭೇದಕ್ಕೆ ಮುಂದೆಬಂದಂತೆ, ಮೀನಾಕ್ಷಿಗಳ ಹೃದಯವನ್ನು ತಮ್ಮ 'ಪೌರುಷ'ದಿಂದ ಭೇದಿಸಲೆಂದೇ ಇಂಥ ಹೊಸ ಹುಮ್ಮಸ್ಸಿನ ಹರೆಯದ ಹುಡುಗರು ಹಟತೊಟ್ಟಂತೆ ಹಾರಾಡುತ್ತಾರೆ. ಹೋರಾಡುತ್ತಾರೆ. ಪೌಗಂಡಾವಸ್ಥೆಯಲ್ಲಿ ಈ ಹುಡುಗರು ಪ್ರದರ್ಶನ ಪ್ರಿಯರಾಗುತ್ತಾರೆ.; ಮನೋಗತಳಾದ ಪ್ರಿಯೆಯ ದರ್ಶನ ಪ್ರೇಮವೇ ಈ ಪ್ರದರ್ಶನ ಪ್ರಿಯತೆಗೆ ಸ್ಫುರಣವಾಗುತ್ತದೆ. ಕೇಶಭೂಷೆ, ವೇಷಭೂಷೆ, ಎಂದೂ ಇಲ್ಲದ ಅಚ್ಚು ಕಟ್ಟು ನವಿಲಿನ ಸೋಗೆಗಳಂತೆ, ಹುಂಜದ ಪುಚ್ಛದಂತೆ ಕಾಣಿಸಿಕೊಳ್ಳುವವು. ಶಾಲೆಯ ಕ್ರೀಡಾಂಗಣದಲ್ಲಿ ಇಂಥ ತರುಣರು ಕಾಳಗದ ಹೆಚ್ಚು ರೊಚ್ಚುಗಳಿಂದ ಭಾಗವಹಿಸುತ್ತಾರೆ. ಪಶುಪ್ರಪಂಚದಲ್ಲಿ ಹೆಣ್ಣಿಗಾಗಿ ಗಂಡು ಪಶುಗಳು ಹುಚ್ಚು ರಭಸದಿಂದ ಹೂಡುವ ಮೇಲಾಟದ ಹೋರಾಟಗಳನ್ನೇ ಹಚ್ಚ ಹರೆಯದ ನರಪಶವು ಆಟದ ಬಯಲಿನಲ್ಲಿ ಮತ್ತೆ ಹೋರಾಡಿ ತೋರಿಸುತ್ತಾನೆ! ಇಷ್ಟೇ ಅಲ್ಲ, ಮುಂದೆ ಪ್ರೌಢ ಜೀವನದಲ್ಲಿ ತನ್ನ ಅರ್ಧಾಂಗಿಯ ಮುಖದ ನಗೆಮುಗುಳು ಬಾಡದಂತೆ ನೋಡಿಕೊಳ್ಳಲು, ಹೊರ ಪ್ರಪಂಚದಲ್ಲಿ ಹೂಡಿ ಗೆಲ್ಲಬೇಕಾದ ಹಣಕಾಸಿನ ಹೆಣಗಾಟಗಳ ಸಲುವಾಗಿ ಹುರಿದುಂಬಿಕೊಳ್ಳಲು ಈ ಆಟದ ಬಯಲಿನ ಅಂಗಸಾಧನೆಗಳ ವಿರಾಟ ಇದಿರಾಳಿತನಗಳು ಒಂದು 'ತಾಲೀಮು'ದಂತಾಗುವವು. ಹೀಗೆ ಪ್ರೀತಿಯ ಪ್ರಪಂಚದ ಮುಂದೋಟ ಮುನ್ನೋಟಗಳಿಗೆ ಗತಿಕೊಡುವ ಶಕ್ತಿಯಾಗುವದು. ಮನೋರಥದ ಗಾಲಿಗಳು ಭವಿಷ್ಯದ ಭಾಗ್ಯಪಥದಲ್ಲಿ ಉರುಳುವಂತೆ ಮಾಡುವ ಪ್ರೇರಣೆಯಾಗುವದು.

ಹೀಗೆ ವಿವಿಧ ಅವಸ್ಥೆಗಳೊಳಗಿಂದ ಪ್ರೀತಿಯು ಮುಂದೆ ಸಾಗುವದು. ಅಲ್ಲಿ ಗುಪ್ತಗಾಮಿನಿಯಾಗಿ, ಇಲ್ಲಿ ಪ್ರಕಟ ಪ್ರವಾಹವಾಗಿ ಒಂದೆಡೆಗೆ ಅಡೆ–ತಡೆಗಳಲ್ಲಿ ಸಿಲುಕಿ ಸುಳಿಯಾಗಿ ಸುತ್ತಾಡಿ, ಇನ್ನೊಂದೆಡೆಗೆ ಜೀವನಾಧಾರವಾದ ವಿಶಾಲ ಸಂಚಯವಾಗಿ, ಸೆಲೆಯಾಗಿ, ಅಲೆಯಾಗಿ, ಸೆಳವಾಗಿ ಹುಚ್ಚು ಹೊಳೆಯಾಗಿ

ವಿಕಾರಗೆಟ್ಟರೆ ಮನೆ ಮಾರುಗಳನ್ನೇ ಕೊಚ್ಚಿಕೊಂಡು ಹೋಗುವರ್ಥೊಚ್ಚಿನ ನೆರೆಹಾವಳಿಯೂ ಆಗಿ, ಸಂಸಾರ ಸಾಗರವನ್ನು ಬಹುಮುಖವಾಗಿ ಸೇರಿ, ಜೀವನದ ಪರಿಸರಣಕ್ಕೆ ಕಾರಣವಾಗಲು, ಪ್ರಕೃತಿಯ ಕಾಡು ಗವಿಗಳಿಂದ ಪುಟಿದು ಬುಗ್ಗೆಯಾಗಿ ಬೆಳೆದು ಬಂದು, ಬಾಳಿನ ಬಯಲಲ್ಲಿ ನದಿಯಂತೆ ಹರಿಯುವದು; ಸುಖ ಸ್ವಾಸ್ಥ್ಯಗಳ ಪೈರನ್ನು ಬೆಳಿಸುವದು; ಹೃದಯಗಳಿಗೆ ಉದ್ದೀಪನವಾಗಿ, ಮನೆ ಮನಗಳನ್ನು ಬೆಳಗಿಸುವ ಕಣ್ಣಿನ ಕಾಂತಿ ಜೀವದ ಜ್ಯೋತಿಯಾಗಿ ನರನಾಡಿಗಳಲ್ಲಿಯೂ ಮಿಂಚಿನಂತೆ ಹರಿದಾಡುವದು. ಉರಿದಾಡುವದು!

ತಂದೆ ತಾಯಿಗಳ ಕುರಿತು ಆದರದ ಆಸಕ್ತಿಯಿರಲಿ, ಅಧ್ಯಾಪಕರ ಕುರಿತು ಅತಿಯಾದ ಭಕ್ತಿಯಿರಲಿ, ಹಸುವಿನ ಪ್ರಣಯವೆಂಬ ಪೌಗಂಡದೆಸೆಯ ಹೆಣ್ಣು–ಗಂಡಿನ ಉದ್ರಿಕ್ತ ಅನುರಕ್ತಿ ಇರಲಿ ಪ್ರತಿಯೊಂದು ಅವಸ್ಥೆಯೂ ಸಹಜವೇ. ಆದರೆ ಇಲ್ಲಿ ಒಂದು ಲಕ್ಷಣವನ್ನು ಮರೆಯಕೂಡದು. ಈ ಅವಸ್ಥೆಗಳು, ಆ ಆ ಅವಧಿಯ ಮಟ್ಟಿಗೆ ತಡೆದರೆ ಸ್ವಾಭಾವಿಕ ಸ್ಥಿತಿಗಳು ಸಮವೃತ್ತಿಯ ಅವಸ್ಥೆಗಳು, ಆದರೆ ಇವು ಅಂಥ ಅವಧಿಗಳನ್ನು ಮೀರಿ ಬಹುಕಾಲ ಅಥವಾ ಜೀವಮಾನವೆಲ್ಲ ತಾಳಿದರೆ ಅಸ್ವಭಾವಿಕ ಅನವಸ್ಥೆಗಳು, ಪ್ರಕೃತಿಯನ್ನೇ ಕೆಡಿಸಿದ ವಿಕೃತಿಗಳು, ವಿಷಮ ವೈಚಿತ್ರ್ಯಗಳು ಎಂದೇ ಭಾವಿಸಬೇಕು. 'ವಿಕೃತಿ' ಎಂದರೇನು? ಈ ಮನೋವಿಕೃತಿಗಳಿಗೆ 'ಎಟವಿಝುಮ್' ಎಂದೆನ್ನುವರು. ಅದಕ್ಕೆ 'ಆದಿಮಾವೃತಿ' ಎಂದು ಕನ್ನಡ(?)ದಲ್ಲಿ ಕರೆಯೋಣ. ಆದರೂ ಹೆಸರಿಗೆ ಹೆಸರು ಕೊಟ್ಟ ಕ್ಷಣಕ್ಕೆ ಹುರುಳು ಹೇಳಿದಂತಾಗಲಿಲ್ಲ! ಆದಿ ಕಾಲದಲ್ಲಿಯ ಒಂದು ನಡೆತೆ, ವರ್ತನದ ಒಂದು ಮಾದರಿ ಸಾಮಾನ್ಯವಾಗಿ ಹಿಂದೆಬಿದ್ದು, ಬೆಳವಣಿಗೆಯಲ್ಲಿ ಮಾರ್ಪಟ್ಟು ಬೇರ್ಪಟ್ಟು ಇತರ ಸಾಮಾನ್ಯ ವೃತ್ತಿಯವರಲ್ಲಿ ಉಚಿತ ನಡತೆಯಾಗಿ ರೂಪಾಂತರವನ್ನು ಹೊಂದಿದ್ದರೂ ವಿಕೃತ ವೃತ್ತಿಯವರಲ್ಲಿ ಆದಿ ಪೂರ್ವಜರ ಕಾಲದ, ಅಥವಾ ಮೂಲ ಬಾಲ್ಯಾವಸ್ಥೆಯ ಕಾಲದ ಆ ಹಿಂದೆಬಿದ್ದ (ಬಿದ್ದಿರಬೇಕಾದ) ನಡತೆಯ ಮಾದರಿಯೇ ಅಚ್ಚಳಿಯದೇ ಉಳಿಯುವದು, ಇಲ್ಲವೇ ಭಾವವಿಕಾಸವು ಹದಗೆಟ್ಟೊಡನೆ ಒಮ್ಮೆಲೇ ಪ್ರಕಟವಾಗುವದು. ಇದೇ ಆದಿಮ ಆವೃತಿ ಅಥವಾ ಎಟವಿಝುಮ್. (ಎಟವಸ್ ಅಂದರೆ ಪೂರ್ವಜ–ಪೂರ್ವಜರನ್ನು ಹೋಲುವದು ಹೊರತು ತನ್ನ ಸರಿಕರನ್ನಾಗಲೀ, ಸಮಕಾಲೀನರನ್ನಾಗಲಿ, ಹತ್ತಿರದ ತಾಯ್ತಂದೆಗಳನ್ನಾಗಲಿ ಹೋಲುವ ನಡೆತೆಯಲ್ಲವೆಂಬ ಅರ್ಥ.)

ಆದ್ದರಿಂದ ಮೇಲೆ ಬಣ್ಣಿಸಿದ ಅವಸ್ಥೆಗಳೊಳಗಿಂದ ಪ್ರೀತಿಯು ವಿಕಾಸವನ್ನು ಹೊಂದುತ್ತಿರುವಾಗ ಕಳವಳದಿಂದ ಕಂಗೆಡದೆ, ಆ ಆ ಅವಸ್ಥೆಯು ವಯೋಧರ್ಮದ ಆ ಆ ಅವಧಿಯ ಮಟ್ಟಿಗೇ ಮೂಡಿ ಮುಗಿಯುವಂತೆ ಮಾತ್ರ ನೋಡಿಕೊಳ್ಳುವದು ಗುರುಹಿರಿಯರ ಕರ್ತವ್ಯವು. ಭಾವವಿಕಾಸವು ಹೃದಯದ ಪರಿಪಾಕವು ತಡೆದು ಮರುಡಿ ಹದಗೆಟ್ಟು 'ಆದಿಮಾವೃತಿಯ' ವಿಕೃತಿಯಾಗಿ ಮುಂದೆ ಆಯುಷ್ಯಕ್ಕೊಂದು ಆದಿ ಆಗಬಾರದು.

ಪ್ರೀತಿಯ ಕೃಷ್ಣಾವತಾರ

ಪ್ರೀತಿಯ ಇನ್ನು ಮುಂದಿನ ಅವತಾರ ಕೃಷ್ಣಾವತಾರ. ಮಿಕ್ಕವೆಲ್ಲ ಹಿಂದಿನವೆಲ್ಲ ಅಂಶಾವತಾರಗಳಾಗಿದ್ದರೆ ಇದು ಪೂರ್ಣವತಾರ. ಪ್ರೌಢಾವಸ್ಥೆಯ ಪ್ರಣಯ. ಪ್ರಿಯತಮ ಪ್ರಿಯತಮೆಯರ ಅನ್ಯೋನ್ಯ ಆರಾಧನೆಯ ಕಾಲ. ರಸರಾಜ-ರತಿರಾಜರು ಕೂಡಿ ಉದಯಿಸುವ ಋತುರಾಜನ ಶಕ. ಪಾಶ್ಚಾತ್ಯರಲ್ಲಿಯಂತೆ ಈ ಪ್ರಿಯಾರಾಧನೆಯು ಮದುವೆಯ ಮೊದಲೇ ಬರಬಹುದು. ಪೌರ್ವಾತ್ಯರಲ್ಲಿಯಂತೆ ಮದುವೆಯಾದೊಡನೆ ನವ ದಾಂಪತ್ಯದ ಪರಸ್ಪರ ಪೂಜನದ ರೂಪದಲ್ಲಿಯೂ ಬರಬಹುದು. ಆದರೆ ಈ ಪ್ರಿಯಾರಾಧನೆಯ ಅವಧಿಯು ಮಾನವೀಭಾಗ್ಯದ ಮಧುರತಮ ಅಂಶವು. ವಲ್ಲಭ ವಲ್ಲಭೆಯರು ಪರಸ್ಪರರ ಕಣ್ಣುಗಳಲ್ಲಿ ಗಂಧರ್ವಲೋಕಗಳನ್ನೇ ಕಂಡು ತನ್ಮಯಗೊಂಡು, ಒಬ್ಬರಿಗೊಬ್ಬರ ತೋಳುತೆಕ್ಕೆಯಲ್ಲಿ ಸ್ವರ್ಗವನ್ನೇ ಸೆರೆ ಹಿಡಿದಿರುವೆವೆಂಬಂತೆ, ಉಭಯರೂ ಅಭಯ ಹಸ್ತದಿಂದ ವಿಶ್ವವನ್ನೇ ಹರಸಲು, ವಿಶ್ವದಿಂದ ದೂರ ಕಾಮನ ಬಿಲ್ಲನ್ನೇ ಏರಿನಿಂತಂತೆ, ಅನ್ಯೋನ್ಯರ ಹೃದಯದಲ್ಲಿ ತಮ್ಮ ತಮ್ಮ ವಿಶ್ವವನ್ನೇ ಹೊಸದಾಗಿ ಕಂಡು ಕೊಂಡಂತೆ, ತಮ್ಮ ಪ್ರಣಯದ ಪ್ರಭಾವಲಯದ ಆಚೆಗೆ ಇದ್ದವರನ್ನೆಲ್ಲ ಕೊಂಚಕನಿಕರದಿಂದಲೇ ನೋಡುತ್ತ ಆನಂದದೊಂದಿಗೆ ಅಭಿಮಾನವನ್ನು, ಅನ್ಯಮನಸ್ಕತೆಯೊಂದಿಗೆ ವಿನಯವನ್ನೂ ಹುಚ್ಚು ಮೈ ಮರವಿನೊಂದಿಗೆ ಹುಡುಗಾಟದ ಮುಗ್ಧತೆಯನ್ನೂ ಕೂಡಿಯೇ ಮೂಡಿಸುತ್ತ ದೈವವನ್ನೇ ಮೂದಲಿಸುತ್ತ ತಾವೇ ನಿಜವಾಗಿ ಬಾಳಿನಲ್ಲಿ ಧನ್ಯರೆಂಬಂತೆ ವರ್ತಿಸುವ ಈ ಪ್ರೀತಿಯ ಮಧುಮಾಸವು ಸಂಸ್ಕೃತಿಯ ಒಂದು ದಿವ್ಯವಿಲಾಸವೇ ಸರಿ.

ಅಂದರೆ ಪ್ರಿಯಾರಾಧನೆಯ ಈ ಪ್ರಕಾರವು ಒಮ್ಮೆಲೇ ಪ್ರಾರಂಭವಾಯಿತೆಂದು ಅಲ್ಲ; ಪ್ರಾಯಕ್ಕೆ ಬಂದೊಡನೆಯೇ ಸ್ತ್ರೀ-ಪುರುಷರು

ಇದೊಂದು ಹಚ್ಚಹೊಸ ಮಾದರಿಯ ಪ್ರಣಯವನ್ನು ಕಂಡುಕೊಳ್ಳುತ್ತಾರೆ; ಈ ಪರಿಯ ಪ್ರೀತಿಯು ಅವರ ಪ್ರಾಯ ಪ್ರಾಪ್ತಿಗಾಗಿ ದಾರಿಕಾಯುತ್ತಿರುತ್ತದೆ. ಎನ್ನುವುದು ನಮ್ಮ ತಾತ್ಪರ್ಯವಲ್ಲ. ನಮ್ಮ ಚಿಕ್ಕಂದಿನ ಅರೆವಾಸಿ ಆಟಪಾಟಗಳು ಪ್ರೇಮ ಲೀಲೆಯ ಆಟಗಳೇ ಸರಿ. ಐದಾರು ವರ್ಷವಯಸ್ಸಿನ ಮಕ್ಕಳನ್ನು ನೋಡಿ-ಗಂಡು ಹೆಣ್ಣೆಂಬ ಎಚ್ಚರದ ಅನಿಸಿಕೆ ಆಗ ಅಷ್ಟೊಂದು ಇರುವದಿಲ್ಲ. ಆದಾಗ್ಯೂ ದೂರನಿಂತು ನೋಡಿದರೆ ಆ ಎಳೆವಯಸ್ಸಿನ ಮಕ್ಕಳನ್ನು ನೋಡಿ ಆ ಎಳೆವಯಸ್ಸಿನಲ್ಲಿಯೂ ಹುಡುಗಿಯರು ಹುಡುಗರ ಕಣ್ಣು ಮನಸ್ಸುಗಳನ್ನು ಸೆಳೆಯಲು ಎಷ್ಟೊಂದು ಚಕ್ಕಂದದ ಚಿನ್ನಾಟವಾಡುವದು ವ್ಯಕ್ತವಾಗುವದು. ಸಹೇತುಕವಾದ ವಿಭ್ರಮವು ಕಣ್ಣು ಹುಬ್ಬು, ತುಟಿ, ದನಿ, ಮೈ ಕೈಗಳ ಮಣಿತ, ಕುಣಿತ, ಹಾಸ್ಯ-ಲಾಸ್ಯಗಳ ಹಾವಭಾವ. ಒಯ್ಯಾರ ಓರಣ, ಮಾತಿನ ಮುದ್ದು ಮಾಟ-ಒಂದಲ್ಲ ಎರಡಲ್ಲ ಪ್ರಾಯದಲ್ಲಿ ಪ್ರಣಯಾರಾಧನೆಯಲ್ಲಿ ಪ್ರಯೋಗಿಸಲಾಗುವ ಎಲ್ಲ ಪ್ರಭಾವ ತಂತ್ರಗಳನ್ನು ಚಿಕ್ಕಂದಿನಲ್ಲಿಯೇ ಚಕ್ಕಂದದಲ್ಲಿಯೇ ಅಷ್ಟೊಂದು ಚಾತುರ್ಯದಿಂದ ತಕ್ಕಮಟ್ಟಿಗೆ ಹೂಡಲು, ಹುಡುಗರಲ್ಲಿ ತಮ್ಮ ಮೂಲಕ ಹೆಮ್ಮೆ ಹೊಟ್ಟೆಯುರಿ, ಹಿಗ್ಗು, ಹುರುಪು ಹೋರಾಟದ ಹುರಿಯಾಳುತನವೇ ಮುಂತಾದ ಭಾವಸಂಭ್ರಮವನ್ನು ಆ ಚೆನ್ನಿಗೆಯಾದ ಕನ್ನಿಕೆಯು ಹುಟ್ಟಿಸಬಲ್ಲಳು. ಆದರೆ ಅಂದಿನ ಇದೆಲ್ಲ ವಿಭ್ರಮದಲ್ಲಿ ಮುಗ್ಧತೆಯ ಶುಭ್ರತೆಯು ಹೃದಯದ ನಿರಭದ್ರತೆಯು ಇರುತ್ತದೆ. ಮುಂದೆ ತಾರುಣ್ಯವು ತಲೆಯೆತ್ತಿದಾಗ ಲೈಂಗಿಕ ಜಾಗೃತಿಯ ಏರುಂಜವ್ವನದಲ್ಲಿ ಹಿಂದಿನ ಸರಳತೆಯು ಉಳಿಯುವದಿಲ್ಲ. ಆ ಮಾತು ಬೇರೆ. ಒಟ್ಟಿನಲ್ಲಿ ಪ್ರಿಯಾರಾಧನೆಯ ಪ್ರವೃತ್ತಿ ಒಮ್ಮೆಲೇ ತರುಣರಲ್ಲಿ ಗಡ್ಡ ಮೀಸೆಗಳೊಂದಿಗೆ ಮೂಡಿ ಬರುವ ಲಕ್ಷಣವಲ್ಲ! ಇನ್ನು ಈ ಪ್ರಿಯಾರಾಧನೆಯ ಮರ್ಮವೇನು? ಪ್ರಣಯಿ ಜನಗಳ ಅನ್ಯೋನ್ಯ ಅನುನಯದ ಇಂಗಿತವೇನು?

ಪ್ರಿಯಾರಾಧನೆಯು ಜೀವಾಳದ ಪ್ರಯೋಜನಗಳನ್ನು ಸಾಧಿಸುತ್ತದೆ. ಸ್ತ್ರೀಯು ಪುರುಷನನ್ನು ಸಲಿಗೆ ತೋರಿಯೂ ತನ್ನ ಸುತ್ತಲೂ ಸುಳಿದಾಡುತ್ತಿರುವಂತೆ ಮಾಡಿ ಅವನ ಚಿತ್ತವೃತ್ತಿಗಳೊಡನೆ ಚಿನ್ನಾಟವಾಡುವದರಿಂದ ಪ್ರೀತಿಗೆ ಹೆಚ್ಚಿನ ಪೂರ್ಣತೆಯನ್ನು, ಹಿರಿದಾದ ಪಕ್ವತೆಯನ್ನು, ಸಾಧಿಸಲು ಅವಕಾಶವೂ ಉತ್ತೇಜನವೂ ದೊರೆಯುವಂತಾಗುತ್ತದೆ. ತನ್ನ ಪ್ರಣಯ ದೇವತೆಗಾಗಿ ಪ್ರಣಯಿಯು ಪೌರುಷವನ್ನು ಕುದುರಿಸಿಕೊಳ್ಳುತ್ತಾನೆ. ಅವನ ಚಾರಿತ್ರ್ಯಕ್ಕೆ ಒಂದು

ಹದ. ಚಾತುರ್ಯಕ್ಕೆ ಒಂದು ಹರಿತ, ವ್ಯಕ್ತಿತ್ವಕ್ಕೆ ಒಂದು ಹೊಸಕಳೆ ಏರಿಬರಲು ಅನುವಾಗುತ್ತದೆ. ಪ್ರಿಯೆಯನ್ನು ಪ್ರಸನ್ನಗೊಳಿಸುವ ಸಾಧನೆಯಲ್ಲಿ ನಡುವೆಯೇ ತಾಳ್ಮೆಗಟ್ಟು, ತಣ್ಣಗಾಗುವ ಪ್ರೀತಿಯು ದೂರ ಕಾಮನ ಬಿಲ್ಲನ್ನೇ ಏರಿನಿಂತಂತೆ, ಅನ್ಯೋನನ್ಯರ ಹೃದಯದಲ್ಲಿ ತಮ್ಮ ವಿಶ್ವವನ್ನೇ ಹೊಸದಾಗಿ ಕಂಡು ಕೊಂಡಂತೆ, ತಮ್ಮ ಪ್ರಣಯದ ಪ್ರಭಾವಲಯದ ಆಚೆಗೆ ಇದ್ದವರನ್ನೆಲ್ಲ ಕೊಂಚಕನಿಕರದಿಂದಲೇ ನೋಡುತ್ತ ಆನಂದದೊಂದಿಗೆ ಅಭಿಮಾನವನ್ನು, ಅನ್ಯಮನಸ್ಕತೆಯೊಂದಿಗೆ ವಿನಯವನ್ನೂ ಹುಚ್ಚು ಮೈ ಮರವಿನೊಂದಿಗೆ ಹುಡುಗಾಟದ ಮುಗ್ಧತೆಯನ್ನೂ ಕೂಡಿಯೇ ಮೂಡಿಸುತ್ತ ದೈವವನ್ನೇ ಮೂದಲಿಸುತ್ತ ತಾವೇ ನಿಜವಾಗಿ ಬಾಳಿನಲ್ಲಿ ಧನ್ಯರೆಂಬಂತೆ ವರ್ತಿಸುವ ಪ್ರೀತಿಯ ಮಧುಮಾಸವು ಸಂಸ್ಕೃತಿಯ ಒಂದು ದಿವ್ಯವಿಲಾಸವೇ ಸರಿ.

ಪ್ರಿಯಾರಾಧನೆಯು ಜೀವಾಳದ ಪ್ರಯೋಜನಗಳನ್ನು ಸಾಧಿಸುತ್ತದೆ. ಸ್ತ್ರೀಯು ಪುರುಷನನ್ನು ಸಲಿಗೆ ತೋರಿಯೂ ತನ್ನ ಸುತ್ತಲೂ ಸುಳಿದಾಡುತ್ತಿರುವಂತೆ ಮಾಡಿ ಅವನ ಚಿತ್ತವೃತ್ತಿಗಳೊಡನೆ ಚಿನ್ನಾಟವಾಡುವದರಿಂದ ಪ್ರೀತಿಗೆ ಹೆಚ್ಚಿನ ಪೂರ್ಣತೆಯನ್ನು, ಹಿರಿದಾದ ಪಕ್ವತೆಯನ್ನು, ಸಾಧಿಸಲು ಅವಕಾಶವೂ ಉತ್ತೇಜನವೂ ದೊರೆಯುವಂತಾಗುತ್ತದೆ. ತನ್ನ ಪ್ರಣಯ ದೇವತೆಗಾಗಿ ಪ್ರಣಯಿಯು ಪೌರುಷನನ್ನು ಕುದುರಿಸಿಕೊಳ್ಳುತ್ತಾನೆ. ಪರಾಕ್ರಮವನ್ನು ಪುಟಗೊಳಿಸಿಕೊಳ್ಳುತ್ತಾನೆ. ಅವನ ಚಾರಿತ್ರ್ಯಕ್ಕೆ ಒಂದು ಹದ, ಚಾತುರ್ಯಕ್ಕೆ ಒಂದು ಹರಿತ, ವ್ಯಕ್ತಿತ್ವಕ್ಕೆ ಒಂದು ಹೊಸಕಳೆ ಏರಿಬರಲು ಅನುವಾಗುತ್ತದೆ. ಪ್ರಿಯೆಯನ್ನು ಪ್ರಸನ್ನಗೊಳಿಸುವ ಸಾಧನೆಯಲ್ಲಿ ನಡುವೆಯೇ ತಾಳ್ಮೆಗಟ್ಟು. ತಣ್ಣಗಾಗುವ ಪ್ರೀತಿಯು ಯಾವ ತೂಕದ್ದೂ ಅಲ್ಲ. ಸಾಹಸಕ್ಕೆ ಒಲಿಯುವಾಕೆಯೇ ಶ್ರೀಯು; ಉದ್ಯೋಗಕ್ಕೆ ವಶವಾಗುವಾಕೆಯೇ ಲಕ್ಷ್ಮೀಯು. ವಸಂತಸೇನೆಯನ್ನು ಬಯಸುವವನು ಶೂಲವನ್ನೇರಲು ಅಣಿಯಾಗಬೇಕು. ಅಂದರೆ ಶೂಲವೂ ತಪ್ಪಿ, ವಸಂತ ಸೇನೆಯೂ ಲಭಿಸುವಳು. ಅಳ್ಳೆದೆಯ ಗಂಡಿಗೆ ಒಲಿದು ಬರುವ ಹೆಣ್ಣಾದರೂ ಯಾವಳು? ಬಂದರೆ ಅವಳನ್ನೂ ಅವಳ ಒಲವನ್ನೂ ಕಾಪಾಡಿಕೊಂಡು ಬಾಳುವ ಎದೆಗಾರಿಕೆಯಾದರೂ ಅವನಿಗೆ ಎಲ್ಲಿಯದು? ಆದ್ದರಿಂದ ಪ್ರಿಯಾರಾಧನೆಯಲ್ಲಿ ಪ್ರಣಯಿಗಳ ಸತ್ವ ಪರೀಕ್ಷೆಯಾಗುತ್ತದೆ.

ಇದರಿಂದ ಮುಂದೆ ಕೂಡಿಬಾಳಲು ತೀರ ತಕ್ಕವನಾದವನನ್ನೇ

(ಆದವಳನ್ನೇ) ಉತ್ತಮರನ್ನೇ ಆಯ್ದುಕೊಳ್ಳಲು ಪ್ರೇಮಿಗಳಿಗೆ ಸಾಕಷ್ಟು ಅವಕಾಶವು ದೊರೆಯತ್ತದೆ. ಅನುರೂಪವೆಂದರೆ ಬರೇ ರೂಪದ ಮಟ್ಟಿಗೇ ಅಲ್ಲದೆ, ಅನೇಕ ದೃಷ್ಟಿಯಿಂದಲೂ ಗುಣ, ಶೀಲ, ರುಚಿ, ಬುದ್ಧಿ-ವಿದ್ಯೆ, ವೃತ್ತಿಗಳ ಸಮಕಟ್ಟನ್ನು ಅರಿತುಕೊಂಡು ಅರಸಿಕೊಂಡು ಜತೆಗೂಡುವಂತೆ ಯೋಗ್ಯ ವರನು ಉಪವರ ವಧುವಿಗೆ ಸಿಗುವಂತೆ ಪ್ರಿಯಾರಾಧನೆಯು ಅನುಕೂಲವಾಗುತ್ತದೆ. ಹೀಗೆ ಪ್ರಿಯಾರಾಧನೆಯ ವಿವಾಹಕ್ಕೆ ಮೊದಲೇ ಬರಬೇಕಾದ ವ್ಯಾಪಾರವು. ಆಗ ಅದಕ್ಕೆ ವಂಶದೃಷ್ಟಿಯಿಂದ ಜೀವಾಳದ ಕಾರ್ಯವನ್ನು ಮಾಡುತ್ತದೆ. ಉತ್ತಮನಲ್ಲ ನಲ್ಲೆಯರನ್ನೇ ಆಯ್ದುಕೊಳ್ಳಲು ಅವಕಾಶವು ದೊರೆತು, ಮುಂದೆ, ಬರಲಿರುವ ಬಾಳಿನ ಗುಣವೇ ಸಂತತಿ ಸತ್ವವೇ, ಉತ್ತರೋತ್ತರ ಇಂಥ ಆಯ್ಕೆಯಿಂದ ಉನ್ನತವಾಗಲು ಪ್ರಿಯಾರಾಧನೆಯು ಒಂದು ಸಹಜ ಅನುಕೂಲವನ್ನು ಒದಗಿಸಿ ಕೊಡುವದು.

ಪ್ರಿಯಾರಾಧನೆಯ ಈ ವಿಧ-ವಿಧಾನದಲ್ಲಿ ಯಾವ ಗತ್ತುಗಾರಿಕೆಯು ನಡೆಯುತ್ತದೆ? ಪುರುಷನು ಗಳಿಸಿಕೊಳ್ಳುವ ಆಕ್ರಮಣ ವೃತ್ತಿಯಿಂದ ಮುಂದುವರಿಯುವನು; ಸ್ತ್ರೀಯು ಮೋಹಿಸುವ ಮರ್ಯಾದೆಯಿಂದ ಹಿಂದೆ ಸರಿಯುವಳು. ಸ್ತ್ರೀಯರ ಈ ಹಿಂಜರಿಕೆಯು ಬ್ರಿಟಿಶ ಸೈನ್ಯದ ಶಿಸ್ತಿನ ಹಿನ್ನಡೆಯಂತೆಯೇ ಬರೇ ಕೊನೆಯ ಗೆಲುವಿನ ಹೊಂಚುಗಾರಿಕೆಯು, ಕಾಳಗಗಳಲ್ಲಿ ಕಾಲ್ದೆಗೆದಂತೆ ಕಾಣಿಸಿ, ಹಗೆಗಳನ್ನು ಕುಣಿದಾಡಿಸಿ, ಯುದ್ಧವನ್ನು ಗೆಲ್ಲುವ ಗತ್ತುಗಾರಿಕೆಯು ! ಸಾಮಾನ್ಯವಾಗಿ ಪುರುಷನು ನಿಶ್ಚಯದ ಮತ್ತು ಆಕ್ರಮಣದ ಭೂಮಿಕೆಯನ್ನು ವಹಿಸುತ್ತಾನೆ. ಆದರೆ ಇಂಥ ಆಕ್ರಮಣದ ನಿಶ್ಚಯವನ್ನು ಹುರಿಗೊಳಿಸಲಿಕ್ಕೆ ಸ್ತ್ರೀಯು ಮೊದಲು ತೋರಿಸುವ 'ಸವಿನಯ-ಪ್ರತಿಕಾರ'ದ ಹಿಂಜರಿಕೆಯ ಮಾಟಗಾರಿಕೆಯೇ ಕಾರಣವಾಗುತ್ತದೆ. ಸ್ತ್ರೀಯ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಉತ್ತೇಜನ ಇಲ್ಲದೇ ಯಾವ ಪುರುಷನೂ ದುಡುಕವದಿಲ್ಲ; ಆದರೆ ಅಂಥ ಮೂಕ ಉತ್ತೇಜನೆಯೂ, ನಮ್ರ ಪ್ರೇರಣೆಯೂ ದೊರೆಯಿತೆಂದರೆ ಮುಂದೆ ದುಡುಕುವ ಹೆಜ್ಜೆ ಪುರುಷನದೇ! ಗಂಡೇ ಬೇಟೆ, ಹೆಣ್ಣೇ ಬೆನ್ನಟ್ಟುವ ಬೇಟೆಗಾರ-ಎಂದು ಚಮತ್ಕಾರದ ಮಾತನ್ನು ಬರ್ನಾರ್ಡ ಷಾ ಅವರು ಮಂಡಿಸಿರಬಹುದು. ಆದರೆ ತಾನೇ ಬೇಟೆಯಾಗಿ ಗಂಡು ತನ್ನನ್ನು ಬೆನ್ನಟ್ಟುವಂತೆ ಮಾಡುವ ಉತ್ತೇಜನೆ ಹೆಣ್ಣಿನದೆಂಬ ಅರ್ಥದಲ್ಲಿ ಹೆಣ್ಣು ಬೇಟೆಗಾರಳೆನಿಸಿಕೊಳ್ಳಬಹುದು. ಆದರೆ ಪ್ರತ್ಯಕ್ಷ ಪ್ರಣಯ ಪ್ರಪಂಚದಲ್ಲಿ

ಆಕ್ರಮಣವು ಗಂಡಿನದೇ ಸರಿ. ಎಲ್ಲ ಪ್ರಿಯಾರಾಧನೆಯೂ ಒಂದು ದ್ವಂದ್ವ ಯುದ್ಧವೇ ಸರಿ. ಕೆಳೆಯಲ್ಲಿ ಕಾಳಗವೇ ಸರಿ; ಸಂಭೋಗವು ಸ್ವಾಮಿತ್ವವೇ ಸರಿ. ಪ್ರಣಯದಲ್ಲಿ ಪುರುಷನು ಪ್ರಭುವು-ಗೆದ್ದು ಸೋಲುವ ಪ್ರಭುವು! ಸ್ತ್ರೀಯು ಸೋತು ಗೆಲ್ಲುವ ಪ್ರಭಾವಿಯು! ಒಬ್ಬರಿಗೊಬ್ಬರು ಸೋಲುವದರಲ್ಲಿಯೇ ಒಬ್ಬರನೊಬ್ಬರು ಗೆಲ್ಲುವರು! ಈ ಸ್ವಾಮಿತ್ವದ ಯುದ್ಧದಲ್ಲಿ ಹಿಂದೆ ಕಾಡು ಪುರುಷನು ಹಲ್ಲು ಉಗುರಗಳಿಂದಲೂ ಮುಂದೆ ಖಡ್ಗ ಬಾಣಗಳಿಂದಲೂ ಪ್ರಣಯಕ್ಕಾಗಿ ಹೋರಾಡುತ್ತಿದ್ದನು. ಆದರೆ ಇಂದು ಪುರುಷರು ಬ್ಯಾಂಕಿನಲ್ಲಿಯ ಠೇವುಗಳ ಲೆಕ್ಕದ ಪಟ್ಟಿಗಳಿಂದ ಹೋರಾಡುತ್ತಾರೆ! ವ್ಯಾಪಾರ ವ್ಯವಹಾರ ಭತ್ತೆ ಬಡತಿಗಳಿಗಾಗಿ ಹೆಣಗಾಟ ಇವೆಲ್ಲ ಹವ್ಯಾಸಗಳ ಹಿಂದೆ ಇಂದಿನ ಪುರುಷರ ನಖ ಪಂಜರಗಳು ಅಡಗಿವೆ!

ರಾಗರತಿಯ ನಂಜು

ಪ್ರಿಯಾರಾಧನೆಯಲ್ಲಿ ಸ್ತ್ರೀಯು ಚತುರಳಿದ್ದರೆ, ಪಲಾಯನವನ್ನು ನಟಿಸಿಯೇ ಪ್ರಣಯದ ಪಾನಿಪತ್ತನ್ನು ಗೆಲ್ಲುತ್ತಾಳೆ. ಈ ಪಲಾಯನವು ನಾಚಿಕೆಯ-ಲಜ್ಜೆಯ-ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿ ನಾಚಿಕೆಯ ವಿಚಾರವಾಗಿ ಒಂದೆರಡು ಮಾತುಗಳು ಅಪ್ರಸ್ತುತವಾಗಲಿಕ್ಕಿಲ್ಲ.

ನಾಚಿಕೆಯ ಉಗಮವೆಲ್ಲಿ? ಅದರ ವಿಕಾಸಕ್ಕೆ ಕಾರಣವು ಯಾವದು? ನಾಚಿಕೆಯು ಹುಟ್ಟುವದು ಭಯ ಮತ್ತು ಸ್ವಚ್ಛತೆಯ ಭಾವ ಇವೆರಡು ಪ್ರವೃತ್ತಿಗಳಲ್ಲಿ. ಹೆದರಿಕೆ ಮತ್ತು ಒಂದು ಬಗೆಯ ಮಡಿವಂತಿಕೆಗಳು ಕೂಡಿ ಈ ಭಾವನೆಯನ್ನು ಉಂಟು ಮಾಡುವವು. ಇದು ವಿಕಾಸಹೊಂದುವದು ಸೌಮ್ಯತನ ಮತ್ತು ಸೂಕ್ಷ್ಮಬುದ್ಧಿ (ಚಾತುರ್ಯ)ಗಳಿಂದ. ನಾಚಿಕೆಯು ಕೇವಲ ಮಾನವನ ಪ್ರಾಣಿಗೇ ಬೆಳೆದು ಬಂದ ಲಕ್ಷಣವಲ್ಲ. ಪಶುವರ್ಗಗಳಲ್ಲಿಯೂ ಇಂಥ ಭಾವನೆಯ ಹೋಲಿಕೆಯು ಕಂಡುಬರುತ್ತದೆ. ಅಲ್ಲಿ ಪಶುಗಳಲ್ಲಿಯ ಈ ನೈಸರ್ಗಿಕ ನಿಷೇಧದಲ್ಲಿಯೇ ನಾಚಿಕೆಯ ಮೂಲವು ಇರುತ್ತದೆ. ಹೆಣ್ಣು ಪಶುಗಳು ತಮ್ಮ ಋತುಕಾಲದ ಅವಧಿಯ ಹೊರಗೆ ರತಿಕಾರ್ಯಕ್ಕೆ ಒಡಂಬಡುವದಿಲ್ಲ. ಈ ಉದಾಸೀನತೆಯೇ, ಅಸಮ್ಮತಿಯೇ ಮುಂದೆ ನಾರಿಯಲ್ಲಿ ನಾಚಿಕೆಯಾಗಿ ಮಾರ್ಪಟ್ಟಿದೆ. ಆದರೆ ನರವೆಂಬ ಪಶುವು ಯಾವ ನೈಸರ್ಗಿಕ ನಿಷೇಧವನ್ನೂ ಮನ್ನಿಸುವವನಲ್ಲ! ಅವನ ರುಚಿಗೆ ರೀತಿಯೇ ಬೇಕಾಗಿಲ್ಲ; ರತಿಗೆ ಋತುವೇ

ಬೇಕಾಗಿಲ್ಲ. ಆಸರು ಇಲ್ಲದಾಗ್ಯೂ ಅವನು ಕುಡಿಯಬಲ್ಲನು; ಯಾವ ಋತುವಿನಲ್ಲಿಯೂ ಪ್ರಣಯ ಚೇಷ್ಟೆಗೆ ಅಣಿಯಾಗಬಲ್ಲನು. ಪಶುಗಳಿಂದ ನರನನ್ನು ವಿಂಗಡಿಸುವದು ಇದೇ 'ಅಧಿಕೋವಿಶೇಷಃ'!

ಲಜ್ಜೆಯೇ ಪುರುಷನನ್ನು ಯೋಗ್ಯ ಅಂತರಕ್ಕೆ ಇಡುವ, ಇಟ್ಟು ಅಳೆದು ತಿಳಿದು ನೋಡುವ ಮರ್ಯಾದೆ. ಪುರುಷ ಪ್ರಕೃತಿಯಿಂದಲೂ ಪುರುಷ ಮರ್ಯಾದೆ ಮೀರಿ ದುಡುಕುವ ಬಲಭೀಮ! ಆದರೆ ಲಜ್ಜೆಯೇ ಸ್ತ್ರೀಯ ಲಾವಣ್ಯದ ಲಾಲಿತ್ಯ ಲಕ್ಷಣ. ಸಂಸ್ಕೃತದಲ್ಲಿ 'ವಿನಯ' ಶಬ್ದಕ್ಕೆ ಸುಶಿಕ್ಷಿತನ ಮತ್ತು ನಮ್ರತೆ ಹೀಗೆ ಎರಡೂ ಅರ್ಥಗಳು ಇರುವದರ ಸ್ವಾರಸ್ಯವಾದರೂ ಇದೇ. ಸಂಸ್ಕೃತಿಯ ಪರಿಪಾಕದಲ್ಲಿ ಈ ಲಜ್ಜಾ-ವಿನಯವು ಅತ್ಯಂತ ಸುಂದರವಾದ ಒಂದು ಮನೋಧರ್ಮವಾಗಿ ಅರಳುತ್ತದೆ. ಲಜ್ಜಾ-ವಿನಯಗಳ ಮರ್ಯಾದೆಗಳು ಯಾವ ಸಮಾಜದಲ್ಲಿ ಬಿಗಿಯಾಗಿವೆಯೋ ಬಲವಾಗಿಯೋ ಅಂಥಲ್ಲಿ ಕಾವ್ಯವೂ, ಕಾವ್ಯದಲ್ಲಿ ಶೃಂಗಾರರಸವೂ, ಶೃಂಗಾರದಲ್ಲಿ ವಿರಹಿಗಳ ವ್ಯಥೆಯೂ ಒಂದು ದಿವ್ಯವಾದ ಸ್ವರೂಪ ಸೌಂದರ್ಯವನ್ನು ತಾಳಿದ್ದು ಕಂಡು ಬರುತ್ತದೆ. ಆಂಗ್ಲರ ಕಾವ್ಯ ಪ್ರತಿಭೆಯೇ ಇದಕ್ಕೆ ಸಾಕ್ಷಿ. ಫ್ರೆಂಚ ಜನಾಂಗದಲ್ಲಿ ಪ್ರಣಯಕ್ಕೆ ಅಷ್ಟು ಪ್ರತಿಬಂಧವಿಲ್ಲ. ಅಲ್ಲಿಯ ಆಚಾರದ ಆವರಣ ಸ್ವೈರಾಚಾರಕ್ಕೆ ಅಷ್ಟು ವಿರೋಧಿ ಆಗಿ ಬೆಳೆದುಬಂದಿಲ್ಲ.

ಕಲಿತು ಬಂದು ಕ್ರಮೇಣ ಅದು ಹೆಣ್ಣಿಗೆ ಹುಟ್ಟುಗುಣವಾಗಿರಬೇಕೆಂದು ಅವನ ಅಂಬೋಣ.

ಅತಿಪರಿಚಯದಂತೆ ಅತಿ ಔದಾರ್ಯವೂ ಅವಜ್ಞೆಗೆ ಕಾರಣವಾಗುತ್ತದೆ. ವಿಪುಲವಾಗಿ ನಿರಂತರವಾಗಿ ದೊರೆಯುವ ವಸ್ತುವಿನ ಕುರಿತು ನಮಗೆ ಅಷ್ಟೊಂದು ಆದರ ಉಳಿಯುವುದಿಲ್ಲ. ಇದೇ ಪಾಠವನ್ನೂ ತನ್ನ ಸಹವಾಸ ಸುಖದ ಮಟ್ಟಿಗೆ ಹೆಣ್ಣು ಕಲೆತಳು. ಅದನ್ನೇ ತನ್ನ ಹುಡುಗಿಯರಿಗೆ ಕಲಿಸುತ್ತ ಬಂದಳು 'ನಾಣ್ಚು' ವದು ಮೈನೆರೆದ ಹೆಣ್ಣಿಗೆ ಸಹಜವಾದ ಮೈಚಳಿ. ನಾಚಿಕೆಯ ಮೂಲಧಾತುವಾದ ಈ 'ನಾಣ್ಚು'ವದು ಇದೇ 'ಋತು'ವಿನ ಅರ್ಥವನ್ನೇ ಸೂಚಿಸುತ್ತದೆ. 'ರಾಗತಿಯ ನಂಜು' ಏರಲು ಆರಂಭವಾದೊಡನೆಯೆ ಮೋರೆಗೆ ಲಜ್ಜೆಯ ಸಂಜೆಗೆಂಪು ತುಂಬುತ್ತದೆ. ಪ್ರೀತಿಯ ಬಣ್ಣ ಕೆಂಪು ; ಹೃದಯದಲ್ಲಿ ಪ್ರೀತಿಯ ಜ್ಯೋತಿಯು ಜಾಗೃತವಾದೊಡನೆಯೇ ಮುಖದಲ್ಲಿ ಲಜ್ಜೆಯ ರಕ್ತವು ಚಿಮ್ಮುತ್ತದೆ. ಪುರುಷರ ಅಭಿಲಾಷೆಯನ್ನು ಕೆರಳಿಸುವ ಕೇಂದ್ರ ಇದೆಯೆಂದು ಸೂಚಿಸುವ ಕೆಂಪು ದೀಪವದು! ಇದು ಒಂದು ಮಗ್ಗಲು. ಲಜ್ಜಾ ಭಾವನೆಗೆ ಇನ್ನೊಂದು ಮಗ್ಗಲೂ ಇದೆ. ಪುರುಷರ ಅಸೂಯಾಕುಟಿಲವಾದ ಕಣ್ಣಿನ ಕೋಪದ ಕಿಡಿಯಿಂದಲೇ ಅವರ ಕೈವಶದಲ್ಲಿದ್ದ ಸ್ತ್ರೀಯ ಕಪೋಲಗಳ ಮೇಲೆ ಮೂಡಿದ ಕೆಂಪೇ ಲಜ್ಜೆಯೆಂದು ಅಲಂಕಾರಿಕವಾಗಿ ಬಣ್ಣಿಸಬಹುದು. ಅಂದರೆ ಒಂದೆಡೆಗೆ ತಮ್ಮ ಆಕರ್ಷಣೆ ಹೆಚ್ಚಿಸಿಕೊಳ್ಳಲು ಗಂಡಸಿನ ಗಡುಸುತನವನ್ನು ಆಯ್ಕೆಗೆ ಹಚ್ಚಲು ಲಜ್ಜೆಯನ್ನು ಬೆಳೆಸಿಕೊಂಡಂತೆಯೇ ಇನ್ನೊಂದೆಡೆಗೆ ಗಂಡಸು ಹೆಂಗಸನ್ನು ತನ್ನ ಒಡೆತನದ ಒಡವೆಯೆಂದು ಭಾವಿಸಿ ಬಂದುದರ ಪರಿಣಾಮವಾಗಿ ಆ ಭಾವನೆಯ ಪೋಷಣೆಗಾಗಿ ತನ್ನ ಹೆಣ್ಣಿನ ಈ ನಾಚಿಕೆಯ ಗುಣಕ್ಕೆ ಉತ್ತೇಜನೆಯನ್ನೇ ಕೊಡುತ್ತ ಬಂದಿದ್ದಾನೆ. ಆದಿಯಲ್ಲಿ ಮಾನವ ಸಮಾಜದಲ್ಲಿ ಹೆಣ್ಣು ಗಂಡಿನ ಹೆಚ್ಚಿನ ಪ್ರಾಧಾನ್ಯವಿದ್ದಾಗ ತಾಯಿಯಿಂದಲೇ ಪೀಳಿಗೆಯನ್ನು ಗುರುತಿಸುತ್ತಿರುವಾಗ ಲಜ್ಜಾವತಿಯರು ಅಪರೂಪವೇ ಆಗಿರಬೇಕು. ಹೆಣ್ಣು ಆಗ ಧೂರ್ತಳೂ ಧಿಟ್ಟಳೂ ಆಗಿದ್ದಳು. ಆಗ ನಾಚಿಕೆ ಆಕೆಯ ಮುಖ್ಯಗುಣವಿದ್ದಿಲ್ಲ. ಆದರೆ ಮುಂದೆ ಮಾನವನ ಅಂಥ ಸಾಮೂಹಿಕ ಜೀವನ ನಷ್ಟವಾಯಿತು. ವ್ಯಕ್ತಿಯ ಸೊತ್ತು ಮೊದಲಾಯಿತು, ಖಾಸಗಿ ಒಡೆತನ ಸ್ಥಾಪಿತವಾಯಿತು. ತಂದೆಯಿಂದ ಸಂತತಿಯ ಹೆಸರು ಮುಂದಾಯಿತು. ತನ್ನ ಸೊತ್ತಿಗಾಗಿ ತನ್ನದೇ ಎಂಬ ಸಂತತಿ ಗಂಡಸಿಗೆ ಅವಶ್ಯವೆನಿಸಿತು. ಆಗ ಹೆಂಗಸು ಹೆಂಡತಿ ಆದಳು. ಆಕೆಯ ಮೇಲೆ ಗಂಡನ ಒಡೆತನ ಕೂತಿತು. ಪರಪುರುಷರಿಂದ

ತನ್ನ ಹೆಣ್ಣನ್ನು ದೂರವಿಡುವದು ಗಂಡನಾದ ಗಂಡಸಿಗೆ ಅಗತ್ಯವೆನಿಸಿತು. ಇದರಿಂದ ಲಜ್ಜೆಗೆ ಲಗ್ನದ ಪೇಟೆಯಲ್ಲಿ ಬೆಲೆ ಬಂದಿತು. ಲಜ್ಜೆಯು ಶೀಲದ ಶೋಭೆ ಅನಿಸಿತು. ಚರಿತ್ರ ಕೆಡದ ಹೆಣ್ಣುಗಳಿಗೆ ಸಮಾಜದಲ್ಲಿ ಮಿಗಿಲಾದ ಮನ್ನಣೆ ದೊರೆಯತೊಡಗಿತು. ಆದ್ದರಿಂದ ಲಜ್ಜೆಯು ಸ್ತ್ರೀಯ ಸಹಜ ಧರ್ಮವಿದ್ದದ್ದು ಸಾಧ್ವಿಯ ಪರಮಗುಣವಾಯಿತು. ಪುರುಷರು ಲಜ್ಜೆಯನ್ನು ಒಂದು ಸದ್ಗುಣವೆಂದು ಪ್ರೋತ್ಸಾಹಿಸಹತ್ತಿದವರು. ಕಾಮಾತುರರೇ ಲಜ್ಜೆಯನ್ನು ಭಯವನ್ನು ಬಿಡುವವರೆಂಬ ಮಾತು ರೂಢವಾಯಿತು.

ಈ ರೀತಿ ವಿವಿಧ ಮೂಲಗಳಿಂದ ಲಜ್ಜೆಯು ಹೆಣ್ಣಿನ ಅತ್ಯಂತ ಸೂಕ್ಷ್ಮವಾದ ಸಂಮೋಹನ ಶಕ್ತಿ ಆಗಿ ರೂಪಗೊಂಡಿತು. ನಿರ್ಲಜ್ಜ ಹೆಂಗಸರ ಆಕರ್ಷಣವಿಲ್ಲದಂತಾಯಿತು. ಪ್ರೀತಿಯು ಒಂದು ದ್ವಂದ್ವಯುದ್ಧ. ಪಟ್ಟಿನಲ್ಲಿ ಹಿಡಿತವೂ ಪೆಟ್ಟಿನಲ್ಲಿ ಹವಣವೂ ಅಲ್ಲಿಯಂತೆ ಇಲ್ಲಿಯೂ ಸಲ್ಲಬೇಕು. ತಮ್ಮ ಅಂದಚೆಂದಗಳ ಬೆಡಗು ಬಿನ್ನಾಣಗಳ ಮೋಹ ಮಾಟಗಳ ಪ್ರದರ್ಶನದಲ್ಲಿ ಒಂದು ಸಂಗ್ರಹದ ನಿಗ್ರಹವೂ, ತಮ್ಮ ಪ್ರೇಮದಾನದ ಒಪ್ಪು ಕಾಣಿಕೆಗಳಲ್ಲಿ ಒಂದು ಸಂಯಮ ನಿಯಮವೂ ಇಲ್ಲವಾದರೆ ಪ್ರೀತಿಯಲ್ಲಿ ಹಿತ-ಮಿತ ಉಳಿಯದೇ ಪ್ರೇಮಿಗಳಿಗೆ ಕಾಮಿಗಳಂತೆ ಇತಿಮಿತಿ ಬಿದ್ದೀತು! ಈ ಹಿತ ಮಿತದಹದಕ್ಕೆ ನಾಚಿಕೆಯೇ ನೆಲೆ, ಹೆಣ್ಣಿನಲ್ಲಿ ಹುದುಗಿದ್ದ ನಾಚಿಕೆಯೂ ಆಕೆಯ ಒಸಗೆಗಳಲ್ಲಿ ಒಂದು ಮಿತವನ್ನು ಇಡುತ್ತದೆ. ನಾಚಿಕೆಯ ನಾರಿನ ಮೇಲೆ ನಾರಿಯ ಹಿಂಜರಿಕೆಯ ಹಿಡಿತವಿರುವದರಿಂದ ನರನ ಪ್ರೀತಿಯ ಪತಂಗವು ಇನ್ನೂ ಎತ್ತರಕ್ಕೆ ಹಾರಾಡುವದು. ನಾಚುವ ಮೋರೆಯಲ್ಲಿ ನಗೆಮುಗುಳನ್ನು ಅರಳಿಸುವದಕ್ಕಾಗಿ ಗಂಡಸು ಯಾವ ಸಾಹಸಕ್ಕೂ ಅಣಿಯಾಗುವನು.

ಗಂಡಸಿನ ಗುಪ್ತಗುಣಗಳಿಗೆ ಸುಪ್ತಶಕ್ತಿಗಳಿಗೆ ಹೆಣ್ಣಿನ ಲಜ್ಜೆಯು ಒಂದು ನಿರಂತರವಾದ ಉತ್ತೇಜನೆ, – ಎಂದೂ ತಪ್ಪದ ಆಹ್ವಾನ. ಗಂಡಿನ ವ್ಯಾವಹಾರಿಕ ಬಾಳು ಸಪ್ಪಗಿನದು. ಸರ್ವಸಾಧಾರತೆಯದು. ಆದರೆ ತಾನು ಮೆಚ್ಚಿದ ಹೆಣ್ಣಿನ ನಾಚಿಕೆಯ ಆವರಣವನ್ನು ತೆರೆದು ತನ್ನ ಭಾಗ್ಯವನ್ನು ತೆರೆಯಲಿಕ್ಕೆ ಆತನು ಕಾಮ ಸುಖವನ್ನು ಮರೆತು ಒಮ್ಮೆಯಾದರೂ ಕಲಿಯಾಗುವನು-ಕೊನೆಗೆ ಕವಿಯಾದರೂ ಆಗುವನು! ಕೆನ್ನೆಯಕೆಂಪು ಕಣ್ಣಿನ ಕಿರಣದಲ್ಲಿ ಕೂಡಿದಾಗಲೇ ಪ್ರೀತಿಯ ಹೂ ಬಿಸಿಲು ಅರಳುವದು. ಅದಕ್ಕೆ ಮಣಿಯದ, ಅದಕ್ಕಾಗಿ ದಣಿಯದ ಗಂಡಸು

ಷಂಡನೇ ಸರಿ!

ಪ್ರೀತಿಯ ಪೂರ್ಣತೆ

ಆದ್ದರಿಂದ ಲಜ್ಜೆಯ ಆಹ್ವಾನ, ಮೋಹದಮಾಟ ತನ್ನ ಕೆಲಸವನ್ನು ಸಾಗಿಸಲು ತಾರುಣ್ಯದ ವಸಂತದಲ್ಲಿ ಪ್ರೀತಿಯ ಕೋಕಿಲೆ ಬಗ್ಗಿಸಲಿ. ದಾಂಪತ್ಯದ ಸುಗ್ಗಿಯನ್ನು ಹಿಗ್ಗಿಸಲಿ. ಆದರೆ ಈ ಸುಗ್ಗಿಯು ಹೂತು ಕಾತು ಮಾಗಿಯೂ ಬರಲಿ. ಪ್ರಣಯವು ಪರಿಣಯದಲ್ಲಿ ಪೂರ್ತಿಗೊಂಡಂತೆ, ಪ್ರೀತಿಯು ಪಿತೃತ್ವದಿಂದ ಪರಿಪೂರ್ಣವಾಗಲಿ. ಕಾಮಕ್ಕೆ ಹೋಳಾಗಿ ಕೂಡಿದ ಬಾಳು ಪ್ರೇಮದ ಕಾಳಾಗಿ ತುಂಬಿ ಬೆಳೆಯಲಿ. ನಿಸರ್ಗವು ತನ್ನ ಗುರಿಯನ್ನು ನೇರವಾಗಿ ಸಾಧಿಸುವದಿಲ್ಲ. ಜೀವದ ಸಂತತ ಪರಂಪರೆಯನ್ನು ಸಂತತಿಯ ಪ್ರಾಪ್ತಿಯಲ್ಲಿ ಸಾಧಿಸುವ ನಿಸರ್ಗದ ನಿಯಮವು ವ್ಯಕ್ತಿಯ ಸುಖದೊಡನೆಯೇ ವಂಶದ ಹಿತವನ್ನು ಕೂಡಿಸಿ ಕೈಗೂಡಿಸುತ್ತದೆ. ಮಾನವ ವಂಶವು ತನ್ನ ಅತ್ಯಂತ ಹಿರಿದಾದ ಸುಖದ ಉಪಹುಟ್ಟುವಳಿಯಾಗಿದೆ. ಅಂದರೆ ಮಾನವನ ಪ್ರೇಮ ಸುಖದ ಪರಮಾವಧಿಯ ಪೂರ್ತಿಯಲ್ಲಿಯೇ ಪರ್ಯಾಯವಾಗಿ ಸಂತಾನದ ಸಂಭವವೂ ಒದಗುವಂತಾಗಿದೆ. 'ಗಂಡು ಹೆಣ್ಣು ಕೂಡುವಲ್ಲಿಯೇ' 'ತಾಯಿ ಕೂಸ ನೋಡು'ವಂತಾಗಿದೆ. ಪ್ರೇಮಿಗಳ ತನುಮನದ ಮಿಲನ ಒಂದು ಮಿಗಿಲಾದ ಸುಖ. ಅದಕ್ಕೆ ಬೇರೆ ನೆವ ಬೇಕಿಲ್ಲ; ಬೇರೊಂದು ಉದ್ದೇಶಪೂರ್ವಕವಾದ ಪ್ರಯೋಜನ ಅದಕ್ಕೆ ಇರುವದಿಲ್ಲ. ಆದರೆ ನಿಸರ್ಗದ ಉದ್ದೇಶವು ಇದರಿಂದ ಸಾಧ್ಯವಾಗುತ್ತದೆ. ಇಷ್ಟಕಾಮದ ಪೂರ್ತಿಯಿಂದಲೇ ಪುತ್ರ ಕಾಮೇಷ್ಟಿ ಸಂಭವಿಸುತ್ತದೆ! ಮಾನವನು ಬಯಸಿ ಪಡೆದು ಸವಿಯುವ ಸುಖದ ಈ ಉತ್ಕಟ ಕ್ಷಣದಲ್ಲಿಯೇ ಮಾನವನು ಹುಟ್ಟುವಂತಾಗುತ್ತದೆ!

ಆದರೆ ಇದರಿಂದ ಪ್ರೀತಿಯು ಮುಗಿದಂತಾಗುವದಿಲ್ಲ. ಹೂವು ಬಾಡಿ ಕಾಯಿ ಬೆಳೆಯುವಂತೆ ಗಂಡು-ಹೆಣ್ಣು ತಂದೆ ತಾಯಿಯಾಗಿ ಮಾರ್ಪಡುವದಿಲ್ಲ. ಹೂವಿನಲ್ಲಿ ಕಂಪು ಸೂಸುವ ಪರಾಗವೇ ಕಾಯಿಯ ರುಚಿಯಾಗುತ್ತದೆ. ಹಣ್ಣಿನ ರಸವಾಗಿ ಮಾಗುತ್ತದೆ., ಕೂಸು ಬಂದೊಡನೆ ದಂಪತಿಗಳ-ತಾಯ್ತಂದೆಗಳ ಪ್ರೀತಿಯು ಪುನರ್ಜನ್ಮವನ್ನು ಪಡೆಯುತ್ತದೆ. ಹೊಸ ಹುಟ್ಟಿನಲ್ಲಿ ಪ್ರೀತಿಯು ಬೆಳೆದು ಕಿಚ್ಚಾಗಿ ಉಳಿಯುವದಿಲ್ಲ; ಆದರೂ ಹಿಂದಿನ ಕಾವಿನಲ್ಲಿ ಎಂದೂ ಇಲ್ಲದ ಒಂದು ಒಳಿತಿನ ಕಳೆಯನ್ನು ಬೆರೆಯಿಸಿಕೊಂಡು ಹೊಸ ಬೆಳಕಾಗಿ ಮೂಡುತ್ತದೆ. ಕೂಸು ಹುಟ್ಟಿ ಬರುವ ಮೊದಲಿನ ಗಂಡು-ಹೆಣ್ಣಿನ ಪ್ರೀತಿಯು ಉಜ್ವಲವಿದ್ದಷ್ಟೇ ಚಂಚಲ.

ಅದಕ್ಕೆ ರಸವಿದ್ದಷ್ಟೇ ರಭಸ. ಹುಚ್ಚು ಹಳ್ಳದ ನೆರೆಯಂತೆ ಅದರ ಮದವಿಲಾಸದ ನಡೆ. ಆದರೆ ಕೂಸನ್ನು ಕಂಡು ತಣಿದ ತಂದೆತಾಯಿಗಳ ಪ್ರೇಮ ಆಳವಾದ ವಿಶಾಲವಾದ ತಿಳಿನೀರಿನ ಪ್ರವಾಹದಂತೆ ಗಾಂಭೀರ್ಯ ಮತ್ತು ಗೌರವ ಉಳ್ಳದ್ದು. ಪ್ರೀತಿಯ ಈ ಪರಿವರ್ತನದ ಸಂದರ್ಭದಲ್ಲಿ ಹೆಣ್ಣಿನ ವರ್ತನವು ಒಮ್ಮೆಲೇ ಬೇರೆಯಾಗುವದುಂಟು. ಹೆಣ್ಣು ತನ್ನ ತಾಯ್ತನದ ಹೊಸ ಭಕ್ತಿಯ ಸಂಭ್ರಮದಲ್ಲಿ ಗಂಡನನ್ನೇ ಕೆಲಕಾಲ ಮರೆಯುವದುಂಟು. ಇದನ್ನು ಗಂಡು ತಿಳಿದು ತಾಳಬೇಕು. ವಿಪರೀತವೆಂದು ಭಾವಿಸಬಾರದು. ಹಾಗೆಯೇ ಗಂಡಸು ತನ್ನ ತಂದೆತನದ ಸಂತಸದಲ್ಲಿ–ಅದೂ ಹೊಸಹುಟ್ಟಿದ ಕೂಸು ಹೆಣ್ಣಾಗಿದ್ದರೆ–ಹೆಂಡತಿಯನ್ನು ಒಲಿಸಿಕೊಳ್ಳುವಾಗಿನ ತನ್ನ ಆರಾಧನೆ–ಆಸಕ್ತಿಗಳನ್ನು ಈಗ ಮುದ್ದು ಮಗುವ ಮುದ್ದಾಟದಲ್ಲಿ ಧಾರೆಯೆರೆಯುವನು.

ಪ್ರೀತಿಯ ಅಮೃತಬಳ್ಳಿಗೆ ಮದುವೆಯು ಹೂ. ಮಕ್ಕಳು ಹಣ್ಣು ಕಾಯಿ. ಆದರೆ ಮದುವೆಯ ನಿಜವಾದ ಪರಿಪೂರ್ಣತೆ ಆಗುವದು ಯಾತರಿಂದ? ಮದುವೆಯು ಮಂಟಪದಲ್ಲಿ ಮಾಡಿ ಮುಗಿದರೂ, ಬಾಳಿನಲ್ಲಿ ಪೂರ್ಣತೆಯನ್ನು ಹೊಂದುವದು ಕೇವಲ ಕಾಲದಿಂದಲೇ ಸರಿ. ಸಮವಾಗಿ ಕೂಡಿ ಸವಿದ ಮತ್ತು ಸಹಿಸಿದ ಲಾಭಾಲಾಭಗಳೂ, ಜಯಾಜಯಗಳೂ, ಸುಖ–ದುಃಖಗಳೂ, ಎರಡೂ ಹೃದಯಗಳನ್ನು ಬೆಸೆದು ಬೆರೆಯಿಸಿ ದಾಂಪತ್ಯವನ್ನು ಒಂದು ದ್ವಂದ್ವವಿಲ್ಲದ ನಿತ್ಯಸಮಾಸವಾಗಿ ಮಾಡುತ್ತವೆ. ಕೂಡಿಮಾಡಿದ ಕೂಡಿಹೂಡಿದ ಹಂಚಿಕೆಗಳು, ಭುಜಕ್ಕೆ ಭುಜಹಚ್ಚಿ ಹೆಣಗಿದ ಹೋರಾಟಗಳು ಕೈಗೆ ಕೈಕೊಟ್ಟು ಗಳಿಸಿದ ಗೆಲುವುಗಳು, ಸಹಭಾಗಿಯಾಗಿ ಸಹಿಸಿದ ವಿಪತ್ತುಗಳು, ಉಲ್ಲಾಸದ ಜಾಲದಲ್ಲಿ ಹೆಣೆದ ಎರಡು ಜೀವಗಳ ಭಾವತಂತುಗಳನ್ನು ಜೀವನದ ವಜ್ರ ಪೀಠವಾಗಿ ಮಾರ್ಪಡಿಸುತ್ತವೆ. ಶರೀರಗಳ ಸುಖದ ಸಹಕಾರವು ಮಾಗಿ ಆತ್ಮಿಕ ಆನಂದದ ಸಹಯೋಗವಾಗುತ್ತದೆ. ಕೆಲವು ಪ್ರೇಮಿಕ ದಂಪತಿಗಳಲ್ಲಿ ಈ ಸಹಯೋಗವು ಎರಡು ವ್ಯಕ್ತಿತ್ವಗಳ ಸಾಯುಜ್ಯವನ್ನೇ ಸಾಧಿಸಿದಂತೆ ಕಂಡುಬರುತ್ತದೆ. ಗಂಡ–ಹೆಂಡತಿ ಕೂಡಿ ಒಂದು ವ್ಯಕ್ತಿತ್ವವಾಗಿ ಎರಕ ಹೊಯ್ದು ರೂಪಗೊಂಡಂತೆ ತೋರುತ್ತದೆ. ಇದರಿಂದ ನಮ್ಮವರು ಹೆಂಡತಿಗೆ 'ಅರ್ಧಾಂಗಿ' ಎಂದುದರಲ್ಲಿ ಎಂಥ ಆಳವಾದ ಸೊಗಸು ಇದೆಯೆಂಬುದು ಬೋಧವಾಗುತ್ತದೆ. (ನಮ್ಮವರು 'ಅರ್ಧಾಂಗಿ' ಎಂದರೆ ಸ್ತ್ರೀಪುರುಷರ ಸಮಾನ ಸ್ಥಾನ ಮಾನಗಳನ್ನು ಪ್ರತಿಪಾದಿಸುವ ಪಾಶ್ಚಾತ್ಯರು ದಾಕ್ಷಿಣ್ಯದ ದರ್ಪದಲ್ಲಿ ಇನ್ನು ಮುಂದೆ ಹೋಗಿ ಹೆಂಡತಿಯನ್ನು 'ಬೆಟರ್ ಹಾಫ್'

ಹೆಚ್ಚು ಒಳಿತಾದ ಅರ್ಧಾಂಗಿ ಎಂದು ಕರೆದರು. ವೈಷಮ್ಯವಿಲ್ಲದಲ್ಲಿಯೂ ಒಂದು ತಾರತಮ್ಯವನ್ನೂ ತೋರಿದರು. ಜೀವನದ ವ್ಯಕ್ತಿತ್ವದ ಅರ್ಧ ಅಂಗವಾಗಿದ್ದೂ ಉಳಿದ ಅರ್ಧಕ್ಕಿಂತ ಗುಣದಲ್ಲಿ ಮೂಲ್ಯದಲ್ಲಿ ಹೆಚ್ಚಿನ ಅಂಗವೆಂದು ಅಂಗನೆಯನ್ನು ಅಂಗೀಕರಿಸಿದರು. (ಬಡಗಂಡಸು 'ಲೆಸ್ಸರ್‌ಹಾಫ್' ಕಡಿಮೆ ಒಳಿತಿನ ಅರ್ಧಾಂಗಿ ಆಗಿ ಉಳಿದ)

ತಮ್ಮ ಕರುಳಿನ ಗಂಟಾಗಿ ಹುಟ್ಟಿದ ಶಿಶುಗಳ ತೊಟ್ಟಿಲುಗಳನ್ನು ಆರೈದು ನೋಡಿಕೊಳ್ಳುತ್ತ, ಅವುಗಳ ಲಾಲನೆ ಪಾಲನೆಯಲ್ಲಿ ಒಬ್ಬರನೊಬ್ಬರು ತಮ್ಮನ್ನೇ ಮರೆತು ಮಗ್ನರಾಗುತ್ತ ಕೊನೆಗೆ ಅವರನ್ನು ತಮ್ಮಂತೆಯೇ ಪ್ರೀತಿಸಬಲ್ಲ ತಮಗಿಂತಲೂ ಎಳೆಯವರಾದ ನಲ್ಲ-ನಲ್ಲೆಯರ ಕೈಗೆ ಒಪ್ಪಿಸುತ್ತ ತಮ್ಮದೇ ಪ್ರೇಮದ ಹೊಸ ಯುಗವನ್ನು ನಿರ್ಮಿಸುವದೆಂದರೆ ಎರಡು ಹೃದಯಗಳು ಒಂದಾಗಿ ಎರಡು ಜೀವಗಳು ಒಂದು ಅಖಂಡ ಜೀವನವಾಗುವುದೇ ಸರಿ. ಸಂಸ್ಕೃತದಲ್ಲಿ 'ಜಾಯಾ' ಮತ್ತು 'ಪತಿ' ಇವೆರಡೂ ಕೂಡಿ 'ದಂಪತಿ'ಯಾಗುತ್ತದೆ. ಅದೊಂದು ಹೊಸ ಅಖಂಡ ವ್ಯಕ್ತಿತ್ವವನ್ನು ವ್ಯಕ್ತಪಡಿಸುವ ಸಮಾಸವು!

ಪ್ರೇಮಿಗಳ ಸರಸ ಸಲ್ಲಾಪಗಳ ಕುಲುಕುಲು ನಿನಾದವು ಕರಗಿ ಮಕ್ಕಳ ಪುಂಡಾಟಿಕೆಯ ನಗುನಲಿವಿನ ಕಿಲಿಬಿಲಿಯ ಗಲಭೆಯು ಪತಿಪತ್ನಿಯವರ ಮನಗಳನ್ನೂ ಮನೆಯನ್ನೂ ತುಂಬಿತುಳುಕುತ್ತದೆ. ಆದರೆ ಮಕ್ಕಳು ಬೆಳೆದು ತಮ್ಮ ತಮ್ಮ ಜೀವದ ಸಂಗಾತಿಗಳನ್ನು ಕಂಡುಕೊಂಡು ಹೊಸ ಬಾಳನ್ನು ಕಟ್ಟಲಿಕ್ಕೆ ಮನೆಬಿಟ್ಟು ಹೋದಮೇಲೆ, ಮುಂದೇನು? ತಂದೆತಾಯಿಗಳ ಬಾಳು ಬರಿದಾಗುವದೇ? ಮನೆಯು ಶೂನ್ಯವಾಗುವುದೇ? ಇಲ್ಲ, ಮಕ್ಕಳ ಚೆಲ್ಲಾಟಕ್ಕೆ ಮೊಳಗಿದ ಮನೆಯು ಅವರ ಆನಂದದ ನೆನಹುಗಳ ಮೌನದಿಂದ ತುಂಬುವದು. ಹಲವು ವರ್ಷಗಳ ಜೀವನ ಜತೆಗಾರರಾದ ತಂದೆ-ತಾಯಿಗಳ ಹೃದಯದ ಕೊರತೆಯನ್ನು ಪೂರೈಸಲಿಕ್ಕೆ ಪ್ರೀತಿಯು ತನ್ನ ಎಲ್ಲ ಸಂಪತ್ತಿನೊಡನೆ ಮತ್ತೆ ಮೈದುಂಬಿ ಬರುತ್ತದೆ. ಮುಪ್ಪಿನ ನೆರೆಯಲ್ಲಿ ನಿಂತವರಲ್ಲಿಯೂ ಹೊಸ ಹರೆಯದವರದಂಥ ಅನುರಾಗವು ಮತ್ತೆ ಅಂಕುರಿಸಿ ನಿಲ್ಲುತ್ತದೆ. ಪ್ರೀತಿ ಬಾಳನ್ನು ತುಂಬಿ ವ್ಯಕ್ತಿತ್ವವನ್ನು ಅರಳಿಸುತ್ತದೆ; ಮಕ್ಕಳನ್ನು ತಂದು ಸಾವನ್ನು ಸಲ್ಲಿಸುತ್ತದೆ; ಕೊನೆಗೆ ಮುಪ್ಪಿನ ಹೊಸ್ತಿಲಿನಲ್ಲಿ ಮರಣದ ಹೊರ ಅಂಗಗಳಲ್ಲಿ ನಿಂತ ಗಂಡು-ಹೆಣ್ಣುಗಳಿಗೆ ತನ್ನ ಮೃದು ಮಧುರ ಸ್ಪರ್ಶದಿಂದ ಏಕಾಂತ ಬೇಸರವನ್ನೂ ದೇಹಾಂತದ ಭಯವನ್ನೂ

ದೂರಮಾಡಿ ತೃಪ್ತಿಯ ಶಾಂತಿಯನ್ನೂ ದಯಪಾಲಿಸುತ್ತದೆ; ನವರಸಭರಿತವಾದ ಪ್ರೀತಿಯ ಕಾವ್ಯವು ಶಾಂತರಸದಲ್ಲಿ ವಿರಾಮಗೊಳ್ಳುತ್ತದೆ. ಇಂಥ ಶಾಂತಿಯನ್ನು ಕೊಡದ ಪ್ರೀತಿ–ಪ್ರೀತಿಯೇ ಅಲ್ಲ. ಅದು ಬರೇ ಕಾಮದ ಕೆರಳಿಕೆ. ಕಾಮದ ಹಸಿವು. ಸಂತಪ್ತ ಹೃದಯಗಳನ್ನು ಸಂತೃಪ್ತಗೊಳಿಸುವ ಭಾವವೇ ಪ್ರೀತಿ. ತಾರುಣ್ಯದಲ್ಲಿ ನಸುಕಿನ ನರುಗೆಂಪಿನಂತೆ ಪ್ರಣಯವು ಉದಿಸಿ ಬರುತ್ತದೆ. ಪ್ರೌಢದಶೆಯಲ್ಲಿ ಪ್ರೀತಿಯ ಪೂರ್ಣಬಿಂಬವು ಹಗಲಿನ ಬಿಸಿಲಿನಂತೆ ಬೆಳಕನ್ನೂ ಬಾಳಿನ ಕಾವನ್ನೂ ಸೂಸುತ್ತ ಅಂತರಂಗದ ಅಂತರಿಕ್ಷವನ್ನೂ ದಿವ್ಯವಾಗಿ ವ್ಯಾಪಿಸುತ್ತದೆ. ವೃದ್ಧಾಪ್ಯದಲ್ಲಿ ಅದರ ಬೆರಗು–ಬೆಡಗುಗಳ ಉಜ್ವಲತೆಯು ಹಣ್ಣಾಗಿ ಸಂಜೆಗೆಂಪಿನ ಸೊಗಸಾದ ಸೊಬಗನ್ನು ಸೌಮ್ಯವಾಗಿ ಚೆಲ್ಲಿ ಬದುಕಿನ ಬಾನಿನಲ್ಲಿ ಕವಿಯಲಿರುವ ಸಾವಿನ ಕಂಗೆಡಿಸುವ ಕತ್ತಲೆಯನ್ನು ಕಂಗೊಳಿಸುವ ಸ್ನಿಗ್ಧ ಪ್ರಭಾವದಿಂದ ಮುಚ್ಚುತ್ತದೆ.

ಪ್ರೀತಿಯನ್ನು ಕೇವಲ ಕಾಮವಾಗಿ ಕಂಡವರು ಅದರ ಮೂಲವನ್ನಷ್ಟೇ ಮೈಯ ಮೇದ–ಮಾಂಸವನ್ನಷ್ಟೇ ನೋಡಿದರೆನ್ನಬೇಕು. ಪ್ರೀತಿಯ ಆತ್ಮವು ಈಗ ಇಳಿವಯಸ್ಸಿನಲ್ಲಿ ಉಳಿಯುತ್ತದೆ. ಹುಲ್ಲು ಕಡ್ಡಿ ಹಣ್ಣಾಗಿ ಒಣಗಿ ಮುದುಡಿ ಹೊಟ್ಟು ಸಿವುಡಾಗಿ ಹುಡಿಯ ಪಾಲಾಗುವಾಗ ತೆನೆಯು ಸತ್ವ ತುಂಬಿ ಪರಿಪುಷ್ಟಕಾಳಾಗಿ ಧಾನ್ಯದ ಧನ್ಯತೆಯನ್ನು ಪಡೆಯುತ್ತದೆ. ಪ್ರೀತಿಯೂ ಅದೇ ಬಗೆಯ ಪೈರು. ಸಹವಾಸ ಸುಖದ ಸಾಲೋಕ್ಯದಲ್ಲಿ ದೇಹಗಳ ಸಾಮೀಪ್ಯಕೂಡಿ ಭಾವದ ಸಾರೂಪ್ಯದಿಂದ ಆತ್ಮಗಳ ಸಾಯುಜ್ಯವನ್ನು ಸಾಧಿಸುವದೇ ಮೋಹದಿಂದ ಮೋಕ್ಷಕ್ಕೆ ಒಯ್ಯುವ ಪ್ರೀತಿಯ ಉತ್ಕ್ರಾಂತಿ! ಕಾಮಕ್ಕೆ ನೆಲೆಯಾದ ಪ್ರತಿಯೊಂದು ಕಾಯಕ ಅಂಶವೂ ಬಾಳಿನ ಕುಲುಮೆಯಲ್ಲಿ ಸುಟ್ಟು ಸಣ್ಣಾಗಿ ಹೋಗಿರುತ್ತದೆ. ಕಣ್ಣು ಕೆನ್ನೆಗಳ ಥಳಕು ಕಂದಿ ದೇಹದ ಆಕರ್ಷಣೆ ಇಲ್ಲವಾದ ಮಾತ್ರಕ್ಕೆ ಮುದುಕ ಗಂಡ–ಹೆಂಡಿರು ಒಬ್ಬರಿಗೊಬ್ಬರು ಉದಾಸೀನರಾಗುವದುಂಟೇ? ಪ್ರಣಯದಲ್ಲಿ ಆರಂಭವಾಗುವ ಹಿಂದೂ ದಾಂಪತ್ಯದಲ್ಲಿ ಕೂಡ ಮುಂದೆ ಸಂಸಾರದ ಸಂಗಡಿಗರಾಗಿ ಜೀವದ ಜತೆಯನ್ನು ಹೊಂದಿಸಿಕೊಂಡ ಗಂಡ–ಹೆಂಡತಿ ಮುಪ್ಪಿನಲ್ಲಿ ಹರೆಯವೆಲ್ಲ ಹಾರಿ, ಮೈಯೆಲ್ಲ ನರೆತು ಹಲ್ಲುಬಿದ್ದು ಸೊರಗಿ ಸುಕ್ಕಾಗಿ ತರಗೆಲೆಗಳಂತೆ ಸಾವಿನ ಉಸಿರಿಗೆ ಹಾರಿ ಹೋಗಲು ದಾರಿಕಾಯುತ್ತಿರುವಾಗಲೂ ಪಾರಿವಾಳಗಳಂತೆ ಸುಖದ ಸಂಭ್ರಮದಲ್ಲಿ ಸರಸ ಸಲ್ಲಾಪಗೈಯುತ್ತಿರುವದನ್ನು ನಾವು ನೋಡಿಲ್ಲವೇ? ಆಗ ಅವರನ್ನು ಎರಡೂ ಮೈಯ ಒಂದು ಜೀವವಾಗಿ ಎರಕ ಹೊಯ್ದ ಶಕ್ತಿ ಯಾವದು?

ಬಾಳಿನೊಡನೆ ಮಾಗಿ ಬಂದು ಬದುಕಿನ ಭಾರಕ್ಕೆ ಬಾಗಿನಿಂತ ಪ್ರೀತಿ. ಮುದಿ ಹೃದಯಗಳ ಪುನರ್ಮಿಲನದಲ್ಲಿ ಸುಖಸಮಾಗಮದಲ್ಲಿ ದೇಹದ ಕಾಮವು ಆತ್ಮದ ವಿಕಾಸವಾಗಿ ಪೂರ್ಣತೆಯನ್ನು ಹೊಂದುತ್ತದೆ. ಪ್ರೀತಿಯ ಋತುಚಕ್ರವು ಹೀಗೆ ಪೂರ್ತಿಯಾಗುತ್ತದೆ.

ಸಂತಾಯನ ಎಂಬ ವಿಶ್ವವಿಖ್ಯಾತ ಜ್ಞಾನಿಯು ಒಂದೆಡೆಗೆ ಅರ್ಥ ಗಂಭೀರವಾಗಿ ಹೀಗೆ ಉದ್ಗರಿಸಿದ್ದಾನೆ. 'ಪ್ರತಿಯೊಂದು ಆದರ್ಶಕ್ಕೂ ಒಂದು ನೈಸರ್ಗಿಕ ತಳಹದಿ ಇದೆ. ಪ್ರತಿಯೊಂದು ನೈಸರ್ಗಿಕ ಸಂಗತಿಗೂ ಒಂದು ಆದರ್ಶ ಬೆಳವಣಿಗೆ ಇದೆ.' ಇದಕ್ಕೆ ಪ್ರೀತಿಗಿಂತಲೂ ಮುಗಿಲಾದ ಉದಾಹರಣೆ ಮತ್ತೊಂದು ಇಲ್ಲ. ಪ್ರೀತಿಯೆಂಬ ಕ್ರಾಂತಿಗಿಂತಲೂ ಅದ್ಭುತವಾದ ಘಟನೆ ಇನ್ನಾವುದು? ಆ ಜಡಜೀವಿ ಅಣುಕೋಶಗಳ ಚುಂಬಕ ಶಕ್ತಿಯಿಂದ ಆರಾಧನೆಯ ಪ್ರಣಯ ಕಾವ್ಯಕ್ಕೂ ಅಲ್ಲಿಂದ ಅಖಂಡ ಜೀವಮಾನದ ಅನ್ಯೋನ್ಯ ನಿಷ್ಠೆಯ ಅನನ್ಯ ಶ್ರದ್ಧೆಗೂ ಏರಿ ನೋವು ಸಾವುಗಳನ್ನೂ ಮೀರಿ ನಿಲ್ಲುವ ಈ ಪ್ರೀತಿಯೆಂಬ ವಿಕಾಸಕ್ಕೂ ವಿಸ್ಮಯಕರವಾದ ವಿಚಿತ್ರವು ಬೇರೆ ಯಾವುದು?

ಕಮಲವು ಕೆಸರಿಗೆ ನಾಚಬೇಕಾಗಿಲ್ಲ. ಸೂರ್ಯನ ಕಡೆಗೆ ಮುಖ ಹೊರಳಿಸಿ ಅರಳಿದರೆ ಸಾಕು. ಪ್ರೇಮವು ತನ್ನ ಮೂಲದ ಕುರಿತು ನಾಚಿಕೆ ಪಡಬೇಕಿಲ್ಲ. ಭಕ್ತಿನಿಷ್ಠೆಯ ಎತ್ತರಕ್ಕೆ ಏರಲಾರದಿದ್ದರೆ ಮಾತ್ರ ಕಾಮಕ್ಕೆ ಧಿಃಕಾರದ ಲಾಂಛನ. ಪ್ರಕೃತಿಯ ನಿಷ್ಕೃತಿ ಸಂಸ್ಕೃತಿಯಲ್ಲ. ನಿಸರ್ಗದ ನಿಃಶ್ರೇಯಸ ನಿರ್ಮಿತಿಯಲ್ಲ. ಆದ್ದರಿಂದ ಶರೀರದ ಧರ್ಮವಾಗಿ ಬರುವ ಪ್ರೇಮದ ಆಧಾರವಾದ ಕಾಮಪ್ರವೃತ್ತಿಯನ್ನು ಕಡೆಗಣಿಸಬೇಕಾಗಿ ಇಲ್ಲ. ಅದರ ಪರಿಪಾಕ ಪ್ರೀತಿಯಲ್ಲಿ ಆಗದೇ ವಿಕಾರ ಗೆಟ್ಟು ಪಶುವರ್ತನೆಯ ಕಡೆಗೆ ಒಯ್ಯದಿರುವಂತೆ ಮಾತ್ರ ನೋಡಿಕೊಳ್ಳಬೇಕು. ಕೇವಲ ದಮನದಿಂದ ಕಾಮವು ಕೆಡುವದಿಲ್ಲ. ಕಾಮಿಯನ್ನೇ ಕೆಡಿಸುತ್ತದೆ. ಪ್ರೀತಿಯು ಪರಿಪಕ್ವವಾಗಿ ಜೀವನವು ರಸದಿಂದ ತುಂಬಿ ಹೃದಯಗಳಿಗೆ ಮಾಧುರ್ಯದ ಸೊಗಸು ಸಿಗುವದು ಮಾನವತೆಯ ವಿಕಾಸಕ್ಕೆ ಒಂದು ಅತ್ಯಗತ್ಯವಾದ ಸಂಸ್ಕಾರವು. ಈ ಸಂಸ್ಕಾರಕ್ಕೆ ಹೊರತಾದ ಅನುಭವವೆಲ್ಲ ಅಸತ್ಯ. ಅರ್ಧಸತ್ಯ, ಪ್ರೇಮವಿಲ್ಲದೇ ಜ್ಞಾನವು ವಾಸಿಯಲ್ಲ; ಬರೇ ಅರೆವಾಸಿ. ಕೇವಲ ಜ್ಞಾನಿಯಾಗಿ, ತಪಸ್ವಿಯಾಗಿ ಬಹುಕಾಲ ಉಳಿದ ಜನ ಸ್ತ್ರೀಯ ವ್ಯಾಮೋಹಕ್ಕೆ ಬಲಿಬಿದ್ದ ಕೆಟ್ಟ ಕತೆಗಳನ್ನು ನಾವು ಓದಿಲ್ಲವೇ? ಅದ್ವೈತಮತದ ಮಂಡನಾ

ಚಾರ್ಯರಾದ ಶ್ರೀ ಶಂಕರಾಚಾರ್ಯರಿಗೆ ಮಂಡನ ಮಿಶ್ರರನ್ನು ವಾದದಲ್ಲಿ ಗೆಲ್ಲುವ ಮೊದಲು ಸ್ತ್ರೀಸುಖದ ಅವಶ್ಯ ಜ್ಞಾನಾನುಭವವನ್ನು ಪಡೆಯಲು ಪರಕಾಯ ಪ್ರವೇಶವನ್ನು ಮಾಡಬೇಕಾಯಿತಂತೆ. ಈ ಕತೆಯು ಕಲ್ಪನೆಯೇ ಇರಬಹುದು; ಇದರಲ್ಲಿಯ ತಥ್ಯ ಕಲ್ಪನೆಯಲ್ಲ.

ಪ್ರೇಮಿಯಾದ ವ್ಯಕ್ತಿ ತನ್ನದೆ ಆರಾಧನೆಯನ್ನೂ ಸಾಧನೆಯನ್ನೂ ಸಹನೆಯನ್ನೂ ಕಲಿಯುತ್ತದೆ; ಗಂಭೀರವಾಗುತ್ತದೆ; ಅಂತರ್ಮುಖತೆ ಬೆಳೆಯುತ್ತದೆ. ತನ್ನ ಪ್ರಿಯಜನದ ಪ್ರಶಂಸೆಯನ್ನು ಪಡೆಯಬೇಕೆಂಬ ಉತ್ಕಟ ಉತ್ಕಂಠೆಯಲ್ಲಿ ಎಂದೂ ಅಲ್ಲದ ಪರಾಕ್ರಮಕ್ಕೆ, ಪುರುಷಾರ್ಥಕ್ಕೆ ಅಣಿಯಾಗುತ್ತದೆ. ಪ್ರೀತಿಯಿಂದಲೇ ಕಲೆ; ಪ್ರೀತಿಯಿಂದಲೇ ರಸಿಕತೆ; ಪ್ರೀತಿಯಿಂದಲೇ ಭಕ್ತಿ. ಪ್ರೀತಿಯು ಜಾಗೃತವಾಗಿದ್ದಲ್ಲಿ ಯಾವ ಕೃಪಣನೂ ಉದಾರಿಯಾಗುತ್ತಾನೆ; ಯಾವ ಕ್ರೂರನೂ ಕರುಣೆಯಾಗುತ್ತಾನೆ; ಯಾವ ಖಲನೂ ಮೃದುವಾಗುತ್ತಾನೆ. ಆದ್ದರಿಂದ ಪ್ರೀತಿಯು ಒಂದು ಸಂಸ್ಕೃತಿ ಪೋಷಕ ಸದ್ಗುಣ. ಆದ್ದರಿಂದಲೇ 'ಪ್ರೀತಿಯಲ್ಲಿ ಎಲ್ಲವೂ ಕ್ಷಮ್ಯ' ಎಂಬ ಜಾಣ್ನುಡಿ ಆಂಗ್ಲರಲ್ಲಿ ರೂಢವಾಗಿದೆ. ಕಾಮಿಯು ಕುರುಡು ಕೆರಳಿಕೆಯ ಕ್ರೂರಕರ್ಮಿಯಾಗಬಲ್ಲನು. ಆದರೆ ಪ್ರೇಮಿಯು ಹಾಗಲ್ಲ. ತಾನು ಮೆಚ್ಚಿದ ವ್ಯಕ್ತಿ ತನಗೆ ತಾನಾಗಿ ಮಣಿಯಬೇಕು. ತನ್ನ ಒಲವಿನ ಒಲಿದು ಈಲಾಗಬೇಕು-ಎಂಬ ಹಂಬಲ. ಅದಕ್ಕೆ ತಕ್ಕ ಹಂಚಿಕೆ ಪ್ರೇಮಿಯದಿರುತ್ತದೆ. ಸೀತೆಯನ್ನು ಕದ್ದೊಯ್ದ ರಾವಣನನ್ನು ಆಕೆಯ ಮೇಲೆ ಅತ್ಯಚಾರಕ್ಕೆ ದುಡುಕದಂತೆ ಒಂದು ವರ್ಷ ಪರ್ಯಂತ ತಡೆ ಹಿಡಿದ ಶಕ್ತಿ ಯಾವದು? ಅವನ ಕಾಮುಕ್ಕೆ ಅಷ್ಟರ ಮಟ್ಟಿಗಾದರೂ ಸಂಸ್ಕಾರಕೊಟ್ಟ ಪ್ರೇಮದ ಪ್ರೇರಣೆಯೇ ಅನ್ನಬೇಕು. ಮಿಹರುನ್ನಿಸಾಳ ಪತಿಯನ್ನು ಕೊಲ್ಲಿಸಿ ಆ ಚಲುವೆಯನ್ನು ತನ್ನ ಅಂತಃಪುರಕ್ಕೆ ತಂದಿರಿಸಿದ ಮೇಲೂ ದೀರ್ಘ ಅವಧಿಯತನಕ ಆಕೆಯನ್ನು ಬಲತ್ಕಾರದಿಂದ ತನ್ನವಳಾಗಿ ಮಾಡದೇ ಕಾತರನಾಗಿ ಕಾಯುತ್ತಿರುವಂತೆ ಸಾಲೀಮನಿಗೆ ಸಂಯಮದಲ್ಲಿ ಇಟ್ಟ ಪ್ರೇರಣೆ ಯಾವದು? ಅಂತಃಪುರಕ್ಕೆ ಬಂದವಳು ತನ್ನ ಅಂತರಂಗದ ಪೀಠದಲ್ಲಿ ತಾನಾಗಿ ಮಂಡಿಸಬೇಕೆಂಬ ಅವನ ಅಂತಃಕರಣದ ಅನುರಾಗದ ಶಕ್ತಿ! ಹೀಗೆ ಕಲ್ಪನೆ, ರಸಿಕತೆ, ಶಿಕ್ಷಣ, ಸ್ವಾಭಿಮಾನ, ಚಿಂತನೆ ಈ ಪಂಚಪ್ರಾಣಗಳು ಕೂಡಿದರೆ ಕಾಮದ ಪಿಂಡವು ಪ್ರೇಮದ ವ್ಯಕ್ತಿತ್ವವಾಗಿ ನಿಲ್ಲುತ್ತದೆ. ಆದ್ದರಿಂದಲೇ ಪ್ರೀತಿಯು ಸುಳಿದು ಹೋದ ಹೃದಯದಲ್ಲೆಲ್ಲ ಆ ಹೊತ್ತಿಗೆ ಒಳಿತು ಮಾಡುತ್ತದೆ. ಒಲವು ಇದ್ದಲ್ಲಿ ಒಳಿತು- ಇದೊಂದು ನಿರಪವಾದವಾದ, ನಿರಂತರವೂ ಸತ್ಯವಾದ ನೀತಿತತ್ವ, ಜ್ಞಾನದಂಥ

ಪವಿತ್ರ ವಸ್ತು ಈ ಲೋಕದಲ್ಲಿ ಬೇರೊಂದು ಇಲ್ಲವೆಂದು ಗೀತೆಯು ಸಾರುತ್ತದೆ ನಿಜ. ಆದರೆ ಪ್ರೇಮಕ್ಕಿಂತ ಪವಿತ್ರವಾದದ್ದು ಇನ್ನಾವದೂ ಅಲ್ಲವೆಂದರೇ ಹೆಚ್ಚು ಲೇಸು.

ಒಲವು ಇದ್ದಲ್ಲಿ ಒಳಿತು ಅಂದೆವು. ಇದೊಂದು ಭಯಂಕರ ತತ್ವವೆಂದು ಅನೇಕರು ಭಾವಿಸಬಹುದು. ಒಲವಿಗೂ ಮದುವೆಗೂ ಸಂಬಂಧವಿಲ್ಲವೆ? ಸಂಬಂಧ ಇರಬೇಕಲ್ಲವೇ? ಪತಿಯನ್ನು ಪ್ರೀತಿಸುವದು ಪತ್ನಿಯ ಧರ್ಮ. ಪಾತಿವೃತ್ಯವೇ ಪ್ರೀತಿ–ಹೀಗೆಂದು ಧರ್ಮವು ಸಾರುತ್ತದೆ. ಅಂಥಲ್ಲಿ ಪ್ರೀತಿಯಿದ್ದಲ್ಲಿ ಎಲ್ಲ ಪಾವಿತ್ರ್ಯವಿದೆ ಅಂದರೆ ಅನರ್ಥವಾದೀತಲ್ಲ! ಪ್ರೀತಿಗೂ ನಿಷ್ಠೆಗೂ ಸಂಬಂಧವೇನು? ದಾಂಪತ್ಯಕ್ಕೆ ದ್ರೋಹಮಾಡಿ ಪ್ರೀತಿಯ ವ್ಯವಹಾರ ನಡೆಯುವದಾದರೆ ಆ ಪ್ರೀತಿಯ ಮತ್ತು ಆ ದಾಂಪತ್ಯದ ಗತಿಯೇನು? ಇವೆಲ್ಲ ಅತ್ಯಂತ ಗಂಭೀರ ಪ್ರಶ್ನೆಗಳು! 'ಕವಯಃ ಅಪಿ ಅತ್ರ ಮೋಹಿತಃ' ಆದರೂ ಪ್ರಶ್ನೆ ಎತ್ತಿದ ಮೇಲೆ ಉತ್ತರದ ಪ್ರಯತ್ನ ಮಾಡಲೇಬೇಕು ತಾನೇ!

ವಿಧಿಯುಕ್ತವಾಗಿ ಮದುವೆ ಆಯಿತು. ಗಂಡು–ಹೆಣ್ಣು ಗೃಹಸ್ಥಾಶ್ರಮದಲ್ಲಿ ಶ್ರಮಿಸಹತ್ತಿದರು. ವಿಶ್ರಮಿಸಹತ್ತಿದರು. ಇಂಥಲ್ಲಿ ಪರಕೀಯನೋ ಪರಕೀಯಳೋ ಬಂದು ದಾಂಪತ್ಯದ ಭದ್ರತೆಗೆ ಭಂಗ ಬರುವಂತಾಯಿತು. ಗಂಡನನ್ನು ಬಿಟ್ಟು ಹೆಂಡತಿ ಅನ್ಯನೊಡನೆ ರಮಿಸಿದಳು. ಅಥವಾ ಹೆಂಡತಿಯನ್ನು ಬಿಟ್ಟು ಬದಿಗಿಟ್ಟ ಗಂಡ ಅಥವಾ ಹೆಂಡತಿ ಕೆಟ್ಟ ಸ್ವಭಾವದವರಿದ್ದರೆ ಸಮಾಜವು ಪರಕೀಯ ವ್ಯವಹಾರವನ್ನು ಒಂದು ಅನಿವಾರ್ಯ ವ್ಯಾಮೋಹವೆಂದು ಕಾಣುತ್ತದೆ. 'ಪಾಪ' ಅವನಾದರೂ ಏನು ಮಾಡ್ಯಾನು! ಹೆಂಡತಿ ಹೊಯ್ಮಾಲಿ. ಮನೆಯಲ್ಲಿ ಸುಖ ಇದ್ದರೆ ಹೊರಗೆ ಹೋಗುತ್ತಿದ್ದನೇ?' ಅಥವಾ 'ಅಯ್ಯೊ! ಆಕೆಯದೇನು ತಪ್ಪು? ಗಂಡ ಶುದ್ಧ ರಾಕ್ಷಸ ಅವನೊಂದಿಗೆ ಸಂಸಾರ ಮಾಡುವದೂ ಕತ್ತಿಗೆ ಮುತ್ತಿಡುವದೂ ಒಂದೇ! ಅವಳಾಗುವದಕ್ಕೆ ಇಷ್ಟುಕಾಲ ತಡೆದಳು.!' ಎಂದು ಮುಂತಾಗಿ ಕನಿಕರದಿಂದಲೋ ಕಳವಳದಿಂದಲೋ ಜನ ಆಡಿಕೊಳ್ಳುತ್ತದೆ. ಆದರೆ ಅದೇ ಗಂಡ ಇಲ್ಲವೆ ಹೆಂಡತಿ ಸಜ್ಜನರೇ ಆಗಿದ್ದರೆ? ಸದ್ಗೃಹಸ್ಥನೆಂದು ಸೌಮ್ಯ ಕುಟುಂಬ ವತ್ಸಲನೆಂದೂ ಪ್ರತಿಷ್ಠ ಪಡೆದ ಒಬ್ಬ ಗಂಡನನ್ನು ಬಿಟ್ಟು ಹೆಂಡತಿ ಇನ್ನೊಬ್ಬ ಗಂಡಸಿನೊಡನೆ ವ್ಯವಹರಿಸಿದರೆ! ಹಾಗೆಯೇ ಸರಳ ಸಾಧ್ವಿಯಾದ ಹೆಂಡತಿಯನ್ನು ಉದಾಸೀನ ಮಾಡಿ ಗಂಡನು ಇನ್ನೊಬ್ಬ ಹೆಂಗಸಿನಲ್ಲಿ ಆಸಕ್ತನಾದರೆ? ಸಮಾಜಕ್ಕೆ ಅದು ದಾಂಪತ್ಯದ ದ್ರೋಹ, ಘೋರ ವ್ಯಭಿಚಾರವೆನಿಸುತ್ತದೆ ಮತ್ತು ಸಾಮಾಜಿಕ ಸ್ಥೈರ್ಯ–ಸ್ವಾಸ್ಥ್ಯಗಳ ದೃಷ್ಟಿಯಿಂದ ಹಾಗೆ ಅನಿಸುವದು ಸಹಜವೇ ಸರಿ.

ಆದರೆ ಇಂಥ ಎಲ್ಲ ಸಂದರ್ಭಗಳಲ್ಲಿ ತತ್ವದ ದೃಷ್ಟಿಯಿಂದ ಒಂದು ಸೂಕ್ಷ್ಮವನ್ನು ನೋಡಬೇಕು. ಹೊಸದಾಗಿ ಅಂಟಿದ ನಂಟು. ಪರಕೀಯನ ಅಥವಾ ಪರಕೀಯಳ ಆಸಕ್ತಿಯು, ಕೇವಲ ಮೋಹವೋ ಆಳವಾದ ಅನಿವಾರ್ಯವಾದ ಪ್ರೀತಿಯೋ! ಆಸಕ್ತಿಯ ಈ ಆಳ–ಅನಿವಾರ್ಯವಾದ ಶಕ್ತಿಯನ್ನು ತಿಳಿಯುವ ಬಗೆ ಹೇಗೆ? ಆ ಬಗೆಯೆಂದರೆ ಈ ಹೊಸ ಆಕರ್ಷಣೆಗಾಗಿ ಆ ಗಂಡು ಹೆಣ್ಣು ಎಂಥ ಬೆಲೆ ತೆರಲು ಎಷ್ಟು ಸಿದ್ಧರಿರುತ್ತಾರೆ ಎಂಬುದನ್ನು ನೋಡುವದು. ಲೋಕ ಲಜ್ಜೆ ಆಪ್ತೇಷ್ಟರ ಸ್ನೇಹ ಪಾಶ, ಆರ್ಥಿಕ ಅನುಕೂಲ ಇವೆಲ್ಲ ಹೆಂಡತಿಯ ಪರಕೀಯ ವ್ಯವಹಾರವು (ಇದಕ್ಕೆ ವ್ಯಭಿಚಾರವೆನ್ನೋಣವೇ?) ದಿಗಿಲಿಗೂ ಧಿಃಕಾರಕ್ಕೂ ಕಾರಣವಾಗುವದು. ಎರಡು ಮೂರು ಮಕ್ಕಳು ಆದಮೇಲೆಯೂ ಪ್ರತಿಷ್ಠಿತ ಹೆಂಡತಿಯು ಪರಪುರುಷನೊಡನೆ ಗುಪ್ತವಾಗಿಯೋ ಪ್ರಕಟವಾಗಿಯೋ ಕೂಡಿದ್ದು ಅನೇಕಸಲ ಕಂಡು ಬರುತ್ತದೆ. ಇಂಥ ಸಂಬಂಧ ಗುಪ್ತವಿದ್ದಲ್ಲಿ ಆಕೆಯು ತನ್ನ ಗಂಡನನ್ನೂ ಮಕ್ಕಳನ್ನೂ ನೋಡಿಕೊಳ್ಳುವುದರಲ್ಲಿ ಅಕ್ಕರೆ ಆರೈಕೆಯ ಹೊಣೆ ಹೊತ್ತು ಹಗಲಿರುಳು ದುಡಿಯುವದರಲ್ಲಿ ಸ್ವಲ್ಪವೂ ಉದಾಸೀನ ಮಾಡದೇ ಇದ್ದದ್ದು ಕಂಡು ಬರುವದುಂಟು. ಇದಕ್ಕೆ ಪ್ರತಿಯಾಗಿ ಮೊದಲು ಪಾತರಗಿತ್ತಿಯಂತೆ ಚನ್ನಿಗರೊಂದಿಗೆ ಚಿನ್ನಾಟವಾಡಿ ಸ್ವಚ್ಛಂದಳೆಂದು 'ಹೆಸರಾದ' ಹುಡುಗಿ ಮುಂದೆ ಏಕನಿಷ್ಠೆಯಿಂದ ಒಬ್ಬ ಸಾಮಾನ್ಯ ಪತಿಯನ್ನು ಮನವಾರೆ ಕೂಡಿಕೊಂಡು ಸುಖವಾಗಿ ಬದುಕಿ ಸುಖಕ್ಕೆ ಶೂಲವಾಗಿ ಹಳೆಯ ಪ್ರೀತಿ ವ್ಯವಹಾರಗಳ ಕುರುಹಗಳೋ ಕುಟಿಲ ನೆನಹಗಳೋ ತಲೆಯೆತ್ತುವ ಭೀತಿ ಇದ್ದರೆ ಆಕೆಯು ಗಾಬರಿಗೆಟ್ಟು ಯಾವ ಬೆಲೆಯನ್ನಾದರೂ ಕೊಟ್ಟು ಹೊಸಬಾಳಿನ ಹದವನ್ನು ಹಾರ್ದಿಕವಾಗಿ ಕಾಪಾಡಿಕೊಳ್ಳುವದುಂಟು. ಇದು ಕತೆಕಾದಂಬರಿಗಳಲ್ಲಿ ಮಾತ್ರವಲ್ಲ, ಜೀವನದಲ್ಲಿ – ಸುಶಿಕ್ಷಿತ ಸುಖವಸ್ತು ಮಧ್ಯಮ ಹಾಗು ಉತ್ತಮವರ್ಗದ ಶಿಷ್ಟ ಪ್ರತಿಷ್ಠಿತ ಜೀವನದಲ್ಲಿ ಅನೇಕ ಕುಟುಂಬಗಳಲ್ಲಿ ಹೀಗೆ ನಡೆಯುತ್ತದೆ. ಕತೆ ಕಾದಂಬರಿಗಳಲ್ಲಿ ಇದರ ಛಾಯೆ ಅಲ್ಲೊಮ್ಮೆ ಇಲ್ಲೊಮ್ಮೆ ಮೂಡುತ್ತದೆ. ಮೂಡಿಸಿದವರು ಕ್ಷುಲ್ಲಕರೆಂದು ಬಲ್ಲವರೆಂದುಕೊಳ್ಳುವವರು ಗುಲ್ಲೆಬ್ಬಿಸಲಿಕ್ಕೆ ಮಾತ್ರ ಮುಳುವಾಗುತ್ತದೆ!

ವ್ಯಭಿಚಾರದ ಒಂದು ಕಾರಣ

ಇಂಥ ದಾಂಪತ್ಯ ದ್ರೋಹಕ್ಕೆ ಇಂಥ ವ್ಯಭಿಚಾರವೆನಿಸುವ ವೈವಾಹಿಕರ ವೈಷಮ್ಯಕ್ಕೆ ಅರ್ಥವೇನು? ಅನೇಕ ಉದಾಹರಣೆಗಳಲ್ಲಿ ಬರೇ ಕಾಮುಕತೆ ಹೆಣ್ಣಿನ ಮನಸ್ಸಿನ ದುರ್ಬಲತೆ ಗಂಡಿನ ಅನಿವಾರ್ಯ ಲಂಪಟತೆ. ಲಾವಣ್ಯದ ಮೋಹ,

ಕೊನೆಗೆ ನಾವೀನ್ಯದ್ದಾದರೂ ಮೋಹ ಇದಕ್ಕೆ ಕಾರಣವಿರುತ್ತದೆಂದು ಒಪ್ಪಿಕೊಳ್ಳೋಣ. ಆದರೆ ಅಂಥ ಸಾಧಾರಣ ಸ್ಖಲನಶೀಲತೆಯನ್ನು ಬಿಟ್ಟು ಮೇಲೆ ಕಾಣಿಸಿದಂಥ ಶಿಕ್ಷಣ ಸಂಸ್ಕಾರಪಡೆದವರಲ್ಲಿ ವಿಚಾರವಂತರೂ ಗಂಭೀರವೃತ್ತಿಯವರೂ ಎಂದಿನಿಸಿಕೊಂಡವರಲ್ಲಿ ವ್ಯಕ್ತವಾಗುವ ಈ ಬಗೆಯ ವ್ಯಾಮೋಹದ ವ್ಯವಹಾರಕ್ಕೆ ಕಾರಣವೇನು? ಪತ್ನಿ ಚತುರಳೂ ಸುಂದರಳೂ ಶೀಲವತಿಯೂ ಇದ್ದಾಳೆ. ಆದಾಗ್ಯೂ ಪತಿಯು ಆಚೆಯ ಮನೆಯ ಸ್ತ್ರೀಯೊಡನೆ ಅದೂ ಸಾಮಾನ್ಯ ಸ್ತ್ರೀಯೊಡನೆ ಸಂಬಂಧವಿಟ್ಟುಕೊಳ್ಳುತ್ತಾನೆ. ಪತಿಯು ಕುಟುಂಬವತ್ಸಲ. ಪತ್ನಿಯನ್ನು ಅಭಿಮಾನದಿಂದ ನೋಡುತ್ತಾನೆ. ಆದಾಗ್ಯೂ ಪತ್ನಿಯು ಅವನೊಡನೆ ಯಾವ ವೈಮನಸ್ಸು ವ್ಯಕ್ತಮಾಡದೇ ಅವನ ಮಿತ್ರನನ್ನೋ ಮತ್ತೊಬ್ಬನನ್ನೋ ಮೋಹಿಸುತ್ತಾಳೆ. ಇದಕ್ಕೆ ಏನನ್ನಬೇಕು.? ಇಂಥ ಸಂದರ್ಭದಲ್ಲಿ ಶ್ರೀ ಮಾಸ್ತಿಯವರ ಒಂದು ಕತೆಯಲ್ಲಿಯ ವೃದ್ಧೆಯೊಬ್ಬಳ ಮಾತು ನೆನಪಾಗುತ್ತದೆ, ಒಬ್ಬನ ಹೆಂಡತಿ ಇನ್ನೊಬ್ಬನ ಕೈ ಹಿಡಿದುಕೊಂಡು ಹೋದರೆ ಆಕೆಯ ದೈವದಲ್ಲಿ ಅವನೇ ನಿಜವಾದ ಗಂಡನಿದ್ದ. ಲಗ್ನದಗಂಡನೇ ಆಕೆಯನ್ನು ಅಪಹರಿಸಿ ಇಟ್ಟುಕೊಂಡವ ಎಂಬುದೇ ಆ ಮಾತಿನ ಅಭಿಪ್ರಾಯ. ಈ ಅಭಿಪ್ರಾಯದಲ್ಲಿ ಹಳೆಯ ಸರಣಿಯ ದೈವದ ಧ್ವನಿ ಇದ್ದರೂ ಅದಕ್ಕೆ ಆಳವಾದ ಅರ್ಥವಿಲ್ಲದೇ ಇಲ್ಲ. ಈ ಅರ್ಥವನ್ನು ಎರಡು ಮೂರು ವಿಧವಾಗಿ ವಿವರಿಸಬಹುದು.

'ಸರ್ವಃಸಗಂಧೇಷು ವಿಶ್ವಸತಿ' (ಪ್ರತಿಯೊಬ್ಬನೂ ತನ್ನ ಪ್ರಕೃತಿಯವನನ್ನೇ ನಂಬುತ್ತಾನೆ.) ಎಂದು ದುಷ್ಯಂತನು ಶಕುಂತಲೆಗೆ ಅಣಕವಾಡುತ್ತಾನೆ. ಈ ಮಾತಿನಲ್ಲಿ ಕಾಲಿದಾಸನು ಮನೋಧರ್ಮದ ಒಂದು ಮರ್ಮದ ಮಾತನ್ನೇ ಉಸುರಿದ್ದಾನೆ. ಪ್ರತಿವ್ಯಕ್ತಿಯೂ (ಆತ್ಮವೆನ್ನಿ ಬೇಕಾದರೆ!) ಒಂದು ಸ್ವರದಂತೆ. ಅದಕ್ಕೆ ಸಂವಾದಿಯಾಗುವ ಇನ್ನೊಂದು ಸ್ವರವು ಇದ್ದೇ ಇರುತ್ತದೆ. ಅದು ಸರಿಯಾಗಿ ಹೊಂದಿಕೊಂಡಿತೆಂದರೆ ಎರಡೂ ಹೃದಯಗಳ ಭಾವತಂತುಗಳು ಸರಾಗವಾಗಿ ಮಿಡಿದು ಜೀವನದ ದಿವ್ಯ ಸುಖಸಂಗೀತವು ಹೊರಹೊಮ್ಮುತ್ತದೆ. ಒಲವೇ ಬದುಕಾಗಿ ಚಿಮ್ಮಿದ ಆ ಸುಖಕ್ಕೆ ಮಾನವ ಪ್ರಪಂಚದ ಯಾವ ಐಶ್ವರ್ಯವೂ ಎಣೆಯಲ್ಲ. ಸಮಾಜದ ಕಟ್ಟಳೆಗೋ, ಸಾಂಪ್ರದಾಯವಂತಿಕೆಯ ವಿಧಿಗೋ, ಕುಲಗೌರವದ ಘನವಾದ ಉದ್ದೇಶಕ್ಕೋ, ಕೂಡಿದ ಗಂಡ-ಹೆಂಡತಿಯರ ಸಂಸಾರವು ಸಲಿಗೆ ದಾಕ್ಷಿಣ್ಯ ಪರಸ್ಪರ ಗೌರವ ಮತ್ತು ಲೌಕಿಕ ಪ್ರತಿಷ್ಠೆಯ ಗುಣಗಳಿಂದ ಎಷ್ಟೇ ತುಂಬಿ ತೃಪ್ತವಿದ್ದಂತೆ ಕಂಡರೂ ಆ ಗಂಡ ಹೆಂಡಿರಲ್ಲಿ ಆಳವಾದ

ಮನೋವ್ಯಥೆಯು ಗೂಢವಾದ ವಿರಸವು ಹುದುಗಿಕೊಂಡೇ ಇರುತ್ತದೆ. ಜೀವಮಾನವೆಲ್ಲ ಅದು ಹುದುಗಿಯೇ ಉಳಿದು ಆ ಗಂಡ–ಹೆಂಡತಿ ಸಮಾಜದಲ್ಲಿ ಯಶಸ್ವಿಯಾದ ದಂಪತಿಯಾಗಿ ಲಕ್ಷ್ಮೀ–ನಾರಾಯಣರ ಜೋಡಿಯೆಂದು; ಹೊಸ ವಧೂ–ವರರಿಗೆ ಮರ್ಯಾದೆಯ ಮಾದರಿಯಾಗಿ ಮೆರೆದು ಬದುಕಲೂ ಬಹುದು. ಆದರೆ ಆಕಸ್ಮಾತ್ ಗಂಡನಿಗಾಗಲಿ ಹೆಂಡತಿಗಾಗಲೀ ಅವರ ಹೃದಯ ಸ್ವರಕ್ಕೆ ಸಂವಾದಿಯಾದ ಪ್ರತಿಸ್ವರವು ದೊರೆತರೆ ಮತ್ತು ಅವರ ಹೃದಯವು ಅದಾಗಲೇ ವ್ಯವಹಾರಿಕ ಒರಟಿನ ಹಿತ್ತಾಯದಡಿಗೆ ಜೊರಡಾಗಿ ಹೋಗಿರದಿದ್ದರೆ ಅಥವಾ ಹೃದಯದ ಭಾವ ಹಸಿರಾಗಿದ್ದರೂ ಪರಿಸ್ಥಿತಿಯ ಪೆಟ್ಟಿಗೆ ಅಳುಕು ಅಂಜಿಕೆಗಳು ಅದನ್ನು ಹುಸಿಯಾಗಿ ಮಾಡಿರದಿದ್ದರೆ, ಪ್ರಣಯಾನುರಾಗದ ರಾಗ ಮಾಲಿಕೆಯು ಪುಟಿದು ಹಬ್ಬಿ ಅವರ ಅಂತರಂಗವು ಸಂಗೀತಮಯವಾಗಿ ಬಿಡುತ್ತದೆ! ಮುಕ್ಕಾಲು ಪಾಲು ವಿವಾಹಿತರ ದಾಂಪತ್ಯ ಜೀವನದ ಸ್ಥಿರತೆ ಯಾತರಲ್ಲಿದೆ? ಅವರ ಅನ್ಯೋನ್ಯ ಪ್ರೇಮದ ನಿರ್ಭರ ಬಂಧನದಲ್ಲಿಯೇ? ಅಂತ ಪ್ರೇಮದ ನಿರ್ಭರತೆಯು ಅವರಿಗೆ ಗೊತ್ತೇ ಇರುವದಿಲ್ಲ, ಪಾಪ! ಸಮಾಜದ ಭಯ, ಪ್ರತಿಷ್ಠೆಯ ಒತ್ತಾಯ, ಪರಸ್ಪರ ಅತಿಪರಿಚಯದ ರೂಢಿಯಿಂದ ಕೂಡಿನಿಂತ ಸಲಿಗೆ ಮತ್ತು ಸಂಸಾರಿಕ ಅನುಕೂಲ, ಎಲ್ಲಕ್ಕೂ ಮಿಗಿಲಾಗಿ ಮಕ್ಕಳ ಮೋಹಪಾಶ ಈ ನಾಲ್ಕು ಕಾಲುಗಳ ಮೇಲೆ ದಾಂಪತ್ಯ ಧರ್ಮವು ನಿಂತಿರುವದೇ ಹೆಚ್ಚು! ಮನುಷ್ಯನು ಪರಿಸ್ಥಿತಿಯಿಂದ ಖಲನಾಗುವಂತೆ ಪರಿಸ್ಥಿತಿಯಿಂದ ಸಾಧುವೂ ಆಗುತ್ತಾನೆ! ಧೈರ್ಯ, ಅವಕಾಶ, ಕಲ್ಪನೆ, ಒಂದೆಡೆಗೆ ಕೂಡಿದಲ್ಲಿ ದಿನ ನಿತ್ಯದ ನೋಟಕ್ಕೂ ಹೊರತಾದ ಹೊಸತಾದ ಒಂದು ಮಾಟವು ಕುಡಿನೋಟದ ಕಿಡಿಯನ್ನು ಒಗೆದರೆ ಸರಿ. ಹಲವು ವರ್ಷಗಳ ಬೂದಿಯ ಥರದಡಿಗೆ ಹೋಗೆಯೂ ಆಡದೆ ಹುದುಗಿನಿಂತ ಕಿಚ್ಚು ಭುಗಿಲೆದ್ದು ಅವರನ್ನೂ ಹೆರವರನ್ನೂ ಕೂಡಿಯೇ ದಿಗಿಲು ಗೊಳಿಸಬಹುದು.

ಏಕೆಂದರೆ ಕೆಲವೊಂದು ಪ್ರಕೃತಿಯ ಜನಕ್ಕೆ ಕೆಲವೊಂದು ಪ್ರಕೃತಿಯ ಜನವೇ ಸರಿ ಹೊಂದಿಕೆ ಆಗುತ್ತದೆ. ಸಮಾನ ಶೀಲ ಮತ್ತು ವ್ಯಸನವಿದ್ದಲ್ಲಿಯೇ ಸಖ್ಯವಿರಬೇಕೆಂದಿಲ್ಲ, ಶೀಲದಲ್ಲಿ ಬಹಳೇ ವ್ಯತ್ಯಾಸವಿದ್ದು ವ್ಯಸನವು ಯಾವದೂ ಸಮಾನವಿಲ್ಲದೇ ಇದ್ದ ಒಬ್ಬರು ಅತಿನಿಕಟವಾಗಿ ವಿಕಟವಾಗಿ ಕಾಣುವಷ್ಟು ನಿಕಟವಾಗಿಕೂಡಿ ಒಡನಾಡುವದನ್ನು ನಾವು ನೋಡುತ್ತೇವೆ. ರೂಪ, ಗುಣ, ಜ್ಞಾನ, ಇವೆಲ್ಲವುಗಳಿಗೆ ಆಕರ್ಷಣೆ ಇಲ್ಲವೆಂದಲ್ಲ, ಆದರೆ ಅವೆಲ್ಲಕ್ಕೂ ಆಚೆಗೆ ಆಳವಾಗಿ ಈ ಪ್ರಕೃತಿಯ ಚುಂಬಕ ಶಕ್ತಿ ಹೃದಯ–ಹೃದಯಗಳನ್ನು ಕೂಡಿಸುತ್ತದೆ. ಇದಕ್ಕೆ ನಮ್ಮ

ಅನುಭವವೇ ಸಾಕ್ಷಿ. ಹಲವು ಸಲ ಕೆಲವೊಂದು ಜನ ನಮ್ಮ ಹತ್ತಿರ ಇದ್ದರೇನೇ ನಮಗೆ ನೆಮ್ಮದಿ ಎನಿಸುತ್ತದೆ. ಇದು ಏಕೆಂದು ಹೇಳಲು ಬರುವದಿಲ್ಲ. ನಮಗೂ ಸೋಜಿಗವೆನಿಸುತ್ತದೆ. ಇದಕ್ಕೆ ವಿವರಣೆ ನಮ್ಮ ಮತ್ತು ಆ ಜನರ ಹೃದಯ ಸಂವಾದವೆಂದೇ ಅನ್ನಬೇಕು. ಇದೇ ಪ್ರಕೃತಿಯ ಚುಂಬಕಶಕ್ತಿ . ಈ ಮೂಲಕ ಪುರುಷ-ಪುರುಷರಲ್ಲಿಯೇ ಸ್ಥಿರವಾದ ಆಕರ್ಷಣೆ ಕೂಡಿಬರುವದೆಂದ ಮೇಲೆ, ಸ್ತ್ರೀಪುರುಷರಲ್ಲಿ ಅದು ಇನ್ನಿಷ್ಟು ಬಲವಾಗಿ ಕೆಲಸಮಾಡದೇ ಹೇಗೆ ಉಳಿದೀತು? ಪತಿ-ಪತ್ನಿ ಇಬ್ಬರಲ್ಲಿಯೂ ಇಂಥ ಸ್ವಾಭಾವಿಕ ಆಕರ್ಷಣೆ ಇದ್ದರೆ ಉತ್ತಮವೇ. ಅವರು ಬರೇ ತಮ್ಮ ಮಕ್ಕಳ ತಂದೆ-ತಾಯಿ ಆಗಿರದೇ, ತಮ್ಮ ಕುಟುಂಬದ ಪಾಲುಗಾರರಾಗಿರದೆ, ಅನ್ಯೋನ್ಯ ಗೆಳೆಯ-ಗೆಳೆಯತಿಯರೂ ನಲ್ಲ-ನಲೆಯರೂ ಆಗಿ ಪ್ರೀತಿಯಿಂದ ಸಂಸಾರವನ್ನು ಸುಂದರವಾಗಿ ಮಾಡಿಕೊಳ್ಳುವರು. ಆದರೆ ಹಲವು ಉದಾಹರಣೆಗಳಲ್ಲಿ ಹೀಗೆ ನಡೆಯುವದಿಲ್ಲ. ಗಂಡ-ಹೆಂಡಿರು ಸಂಸಾರ ರಥದ ಚಕ್ರಗಳಾಗಿ ನಡೆಯುತ್ತಾರೆ-ಅಂದರೆ ಸಮಾಂತರವಾಗಿ ಪರಸ್ಪರ ಸಂಪರ್ಕವಿಲ್ಲದೇ ತಮ್ಮ ತಮ್ಮ ಒಳಬಾಳಿನ ಬಟ್ಟೆಯಲ್ಲಿಯೇ ಉರುಳುತ್ತಿರುತ್ತಾರೆ. ಹತ್ತಿರವಿದ್ದರೂ ದೂರವಿದ್ದಂತೆ ಹೃದಯಗಳ ಹೊಂದಿಕೆ ಇಲ್ಲದೇ ಕೇವಲ ಕೌಟುಂಬಿಕ ಕರ್ತವ್ಯಕ್ಕೆ ಕಟ್ಟು ಬಿದ್ದಂತೆ ಗೃಹಸ್ಥ ಧರ್ಮದಲ್ಲಿ ಸಹಚಾರಿಗಳಾಗಿ ಕೊನೆಯವರಿಗೂ ಸಾಗುತ್ತಾರೆ. ಇಂಥಲ್ಲಿ ದುರ್ದೈವದಿಂದ ಇನ್ನೊಂದು ಸಂವಾದಿಯಾದ ಹೃದಯವು ಅನಿವಾರ್ಯ ಆಕರ್ಷಣದ ಶಕ್ತಿಯುಳ್ಳ ಹೃದಯವು ಈ ಗೃಹಸ್ಥ ಗ್ರಹಗಳ ಕಕ್ಷೆಯಲ್ಲಿ ನುಗ್ಗಿ ಬಂದರೆ ಇಲ್ಲವೇ ಹತ್ತಿರದಿಂದ ಸುಳಿದರೆ ತೀರಿತು. ಉತ್ಪಾತವೇ ಒದಗುವಂತಾಗುತ್ತದೆ. ಗಂಡನು ಆ ಇನ್ನೊಬ್ಬಳನ್ನೋ ಹೆಂಡತಿಯು ಆ ಇನ್ನೊಬ್ಬನನ್ನೋ ಮೋಹಿಸಿ ಬಯಸಿ ರಮಿಸುವಂತಾಗುತ್ತದೆ. ಹೀಗಾದರೂ ತಮ್ಮ ಒಪ್ಪಿಕೊಂಡ ದಾಂಪತ್ಯದಲ್ಲಿ ದೊಂಬೆಯೇಳದಂತೆ ದಕ್ಷತೆಯಿಂದ ನಡೆಯುವ ಹಿಡಿತವನ್ನು ಕಾಯ್ದುಕೊಳ್ಳುವದು ಆ ಗಂಡ ಹೆಂಡತಿಯರ ವ್ಯವಹಾರ ಚಾತುರ್ಯವನ್ನೂ ಕೌಟುಂಬಿಕ ನೀತಿಯನ್ನೂ ಅವಲಂಬಿಸಿರುತ್ತದೆ. ಅಂಥ ನೀತಿವಂತ ಚತುರ ದಂಪತಿಗಳು ತಮ್ಮ ಈ ಅಂತರಿಕ ಪ್ರೇಮಜೀವನವನ್ನು ಸಂಯಮದಿಂದ ಸಾಗಿಸಿ ಮೂಲದ ಸಂಸಾರದ ನಿಯಮಕ್ಕೆ ಭಂಗತಂದುಕೊಳ್ಳವುದಿಲ್ಲ ಈ ಸಂಯಮವಿಲ್ಲದವರು ಸಮಾಜದಲ್ಲಿ ಅಂದಗೇಡನ್ನು ಹೊಂದುತ್ತಾರೆ. ಗುಪ್ತಸಂಬಂಧದ ಪರಿಸ್ಫೋಟವು. ಘಟಸ್ಫೋಟದಲ್ಲಿ ಕೊನೆಗೊಂಡು ಕುಟುಂಬವು ಕಂಗೆಟ್ಟು ಹೋಗುತ್ತದೆ.

ಇನ್ನೂ ಒಂದು ಕಾರಣ

ದಾಂಪತ್ಯಕ್ಕೆ ಹೊರತಾಗಿ ಇಂಥ ಪ್ರೇಮ ಸಂಬಂಧಗಳಿಗೆ ಇನ್ನೂ ಒಂದು ಕಾರಣವನ್ನು ಕಲ್ಪಿಸಬಹುದು. ಪ್ರತಿ ವ್ಯಕ್ತಿಯಲ್ಲಿಯೂ ಕೆಲವು ಪ್ರಬಲವಾದ ಸಹಜ ಅಂದರೆ ಹುಟ್ಟುಗುಣವಾಗಿ ಬಂದ–ಪ್ರವೃತ್ತಿಗಳು ಇರುತ್ತವೆಂಬುದನ್ನು ನೀವು ಬಲ್ಲಿರಿ. ಇವುಗಳಲ್ಲಿ ಎರಡನ್ನು ನೆನಪಿಗೆ ತಂದು ಕೊಳ್ಳಿರಿ. ಆ ಎರಡೆಂದರೆ ಪ್ರಭುತ್ವದ ಮತ್ತು ಸಮರ್ಪಣೆಯ ಪ್ರವೃತ್ತಿಗಳು. ತಾನು ಇನ್ನೊಬ್ಬನನ್ನು ಅಂಕೆಯಲ್ಲಿಟ್ಟು ಆಳಬೇಕು ಎಂಬುದೊಂದು ಬಲಿಷ್ಠವಾದ ಪ್ರವೃತ್ತಿ; ಜತೆಗೆ ತಾನು ಇನ್ನೊಬ್ಬನಿಗೆ ತನು–ಮನವನ್ನು ಒಪ್ಪಿಸಿ ಅಧೀನನಾಗಿ ಬಾಳಬೇಕೆಂಬದು ಇನ್ನೊಂದು ಪ್ರವೃತ್ತಿ ಸರ್ವಸಾಧಾರಣವಾಗಿ ಗಂಡಿನಲ್ಲಿ ಪ್ರಭುತ್ವದ ಪ್ರವೃತ್ತಿಯೂ ಹೆಣ್ಣಿನಲ್ಲಿ ಅಷ್ಟು ಸಮರ್ಪಣೆ ಪ್ರವೃತ್ತಿಯೂ ಬಲವಾಗಿರುವದುಂಟು. ಆದ್ದರಿಂದ ಮುಕ್ಕಾಲು ಪಾಲು ದಂಪತಿಗಳಲ್ಲಿ ಗಂಡು ಹೆಣ್ಣನ್ನು ಆಳಿ ಹೆಣ್ಣು ಈಲಾಗಿ ಬಾಳಿ ಬದುಕು ನೆಮ್ಮದಿಯಾಗಿ ಸಾಗುತ್ತಿದೆ. ಆದೆ ಒಮ್ಮೊಮ್ಮೆ ಗಂಡಿನಲ್ಲಿ ಆಗಲಿ ಹೆಣ್ಣಿನಲ್ಲಿ ಆಗಲಿ ಎರಡೂ ಪ್ರವೃತ್ತಿಗಳು ತೀವ್ರವಾಗಿ ನಿಲ್ಲುವದುಂಟು. ಒಂದೆಡೆಗೆ ತಾನು ಇನ್ನೊಂದು ಹೃದಯವನ್ನು ಆಳಿ ಅದರ ಬಾಳಿಗೆ ಒಡೆಯನಾಗಬೇಕೆಂಬ ಹಟದ ಹವ್ಯಾಸ ನಡೆಯುವಾಗ ಇನ್ನೊಂದೆಡೆಗೆ ತನ್ನ ಹೃದಯವನ್ನು ಇನ್ನೊಬ್ಬನ ಅಥವಾ ಇನ್ನೊಬ್ಬಳ ಒಲುಮೆಯ ಅಂಕೆಗೆ ಒಪ್ಪಿಸಿ ಭಾವಪರವಶವಾಗಿ ಪ್ರೇಮದ ಪಾಶಕ್ಕೆ ಸೆರೆಯಾಳಾಗಿ ಬದುಕಬೇಕೆಂಬ ಹಂಬಲವೂ ಹವಣಿಕೆ ಹಾಕುತ್ತಿರುತ್ತದೆ. ದಾಂಪತ್ಯಕ್ಕೆ ದ್ರೋಹ ಬಗೆಯುವ ಪರಪುರುಷ ಪರದಾರಾ ವ್ಯವಹಾರದ ಮೂಲ ಇವೆರಡು ಹವ್ಯಾಸ ಹಂಬಲಗಳ ಪೇಚಿನಲ್ಲಿದೆ.

ಗಂಡನನ್ನು ಅಭಿಮಾನದಿಂದ ತನ್ನವನೆಂಬ ಒಡೆತನದ ಅಧಿಕಾರದಿಂದ ನೋಡಿಕೊಳ್ಳುವ ಹೆಂಡತಿಯು ತನಗೂ ಮಿಗಿಲಾದ ಪ್ರಭುತ್ವದ ಮತ್ತು ಪ್ರಭಾವದ ಇನ್ನೊಬ್ಬ ಗಂಡಸಿಗೆ ಗುಲಾಮಳಾಗುವದು ಶಕ್ಯವಿದೆ. ಹಾಗೆಯೇ ಬಿಂಕದ ಬಿಗುಮಾನದ ಗಂಭೀರ ವೃತ್ತಿಯ ಮಾನಿನಿಯಾದ ಹೆಂಡತಿಯೊಡನೆ ಗೃಹಸ್ಥ ಧರ್ಮಕ್ಕಾಗಿ 'ತಾಟಸ್ಥ್ಯ ಒಪ್ಪಂದ'ವನ್ನು ಮಾಡಿಕೊಂಡು ಸುಖದ ಕೆಲವು ಪಾಲು ಕಳಕೊಂಡರೂ ಸ್ವಾಸ್ಥ್ಯದ ಬಹಳ ಪಾಲು ಪಡೆದು ಸಮಾಧಾನದಿಂದ ಬದುಕುವ ಗಂಡನು, 'ನಾಯಿಯಂತೆ' ವಿಧೇಯಳಾಗಿ, ಮಣಿಯುವಷ್ಟು ಮಣಿದು ಮಿದುವಾಗಿ ಮುದ್ದಾಗಿ ಬೇಡಿದ ಭೋಗವನ್ನು ಕೊಟ್ಟು, ಕಾಡಿದಷ್ಟು ಕೃತಕೃತ್ಯಳೇ ಅನಿಸಿಕೊಳ್ಳುವ

ಒಬ್ಬ ಭಾಮಿನಿಯನ್ನು ಕಾಮಿಸಿ; ಇನ್ನೊಂದು ಸಂಸಾರವನ್ನು ನಡೆಯಿಸುವದನ್ನೂ ನಾವು ಅನೇಕ ಕಡೆಗೆ ನೋಡುತ್ತೇವೆ. ಇನ್ನು ನಮ್ಮಲ್ಲಿ ಹೆಂಡತಿಗಿಂತ ಗಂಡನ ಅನ್ಯಾಸಕ್ತಿಯೇ ಹೆಚ್ಚು ಕಂಡು ಬರುತ್ತದೆ. ಇದಕ್ಕೆ ಕಾರಣ ನಮ್ಮ ಸಂಸ್ಕೃತಿ ಜೀವನದ ರೀತಿ.

ಪ್ರಾಚೀನದಿಂದಲೂ ನಮ್ಮ ಹೆಣ್ಣು ಮಕ್ಕಳಿಗೆ ಸಮರ್ಪಣೆಯ ಸೌಮ್ಯವೃತ್ತಿಯನ್ನು ತನ್ನನ್ನು ಶೂನ್ಯವಾಗಿ ಮಾಡಿಕೊಂಡು, ಗಂಡನೆಂಬ ಅಂಕೆಗೆ ಅಂಕಿತಳಾಗಿ ಕುಲದ ಸಂಖ್ಯೆಯನ್ನು ಹೆಚ್ಚಿಸುವ 'ಅಂಕಗಣಿತ'ವನ್ನೇ ನಮ್ಮ ಜನ ಕಲಿಸುತ್ತ ಬಂದಿದೆ. ಇಲ್ಲಿ ದಾಂಪತ್ಯವು ವಿರಸವಾಗಿದ್ದರೂ ಬೇರೊಂದು ಸರಸ ಕೂಡಿಬರದೆ, ನೀರಸವಾದ ಸಂಸಾರವೇ ಪ್ರತಿಷ್ಠೆಯಿಂದ ಭದ್ರತೆಯಿಂದ ಸಾಗುತ್ತದೆ. ಈ ಪರಂಪರೆಗೆ ಅನುಕೂಲವಾಗುವಂತೆ ವಾತ್ಸಲ್ಯಪ್ರವೃತ್ತಿಯೂ ವಿಶೇಷವಾಗಿ ಬಲಿತು ಬೆಳೆಯುತ್ತದೆ.

ವಾತ್ಸಲ್ಯ ಅಂದರೆ ತಾಯ್ತನ ತಂದೆತನದ ಪ್ರವೃತ್ತಿಯಲ್ಲಿ ಒಂದು ಸೋಜಿಗವಿದೆ. ಅದರಿಂದ ಮೇಲೆ ಹೇಳಿದ ಎರಡೂ ಪ್ರವೃತಿಗಳು – ಪ್ರಭುತ್ವ ಹಾಗೂ ಸಮರ್ಪಣೆಯ ಪ್ರವೃತ್ತಿಗಳು ಒಮ್ಮೆಲೇ ತೃಪ್ತವಾಗುತ್ತವೆ. ಕೂಸಿನ ಅಸಹಾಯತೆ ಅಶಕ್ತತೆಗಳು ತಾಯ್ತಂದೆಗಳನ್ನು ಒಮ್ಮೆಲೇ ಆಳುವಂತೆಯೂ ಆಳಾಗುವಂತೆಯೂ ಮಾಡುತ್ತದೆ. ಮಕ್ಕಳಿಗಾಗಿ ಹಗಲಿರುಳು ದುಡಿಯುವದರಲ್ಲಿ ಸಮರ್ಪಣೆಯ ಪ್ರವೃತ್ತಿಯು ತೃಪ್ತಿಯಾಗುವಂತೆ, ತಾವು ಮಕ್ಕಳೊಂದಿಗರೆಂಬ ಭಾವನೆಯು ಪ್ರಭುತ್ವದ ವೃತ್ತಿಯನ್ನು ತಂದುಕೊಡುತ್ತದೆ. ಆದ್ದರಿಂದ ಕುಟುಂಬ ಸಂಸ್ಥೆಯನ್ನು ವಿಶೇಷವಾಗಿ ಪೋಷಿಸಿಕೊಂಡು ಬಂದ ಕೃಷಿಪ್ರಧಾನವಾದ ಸಂಸ್ಕೃತಿಯಲ್ಲಿ ಗಂಡ–ಹೆಂಡತಿ ತಮ್ಮ ಇಂಗದೇ ಉಳಿದ ಒಂದು ಪ್ರವೃತ್ತಿಯನ್ನು ಮಕ್ಕಳ ಲಾಲನೆಪಾಲನೆಯಲ್ಲಿ ಪೂರೈಸಿಕೊಳ್ಳುವರು. ಇದಕ್ಕೆ ಇನ್ನೂ ಒಂದು ಸಂಗತಿ ನೆರವಾಗುವದು. ಅದು ಹೆಣ್ಣಿನ ಆರ್ಥಿಕ ಪರಾವಲಂಬನ, ಪುರುಷಾವಲಂಬನ ಇದು ಇಲ್ಲದಿದ್ದಲ್ಲಿ ಆರ್ಥಿಕವಾಗಿ ಹೆಣ್ಣು ಗಂಡು ಸ್ವತಂತ್ರವಿದ್ದಲ್ಲಿ, ಅಂದರೆ ಕೆಳವರ್ಗದ ದುಡಿಮೆಗಾರರಲ್ಲಿ ಅಥವಾ ನವಶಿಕ್ಷಿತ ಮೇಲ್ವರ್ಗದವರಲ್ಲಿ, ಸ್ತ್ರೀ ಪುರುಷರ ಅನ್ಯಾಸಕ್ತಿಯು ಹೆಚ್ಚು ಪ್ರಮಾಣದಲ್ಲಿ ಕಂಡುಬರುತ್ತದೆ. ತನ್ನ ಬಾಳಿಗೆ ತಾನೇ ಹೊಣೆಯಾದವರಲ್ಲಿ ವ್ಯಕ್ತಿತ್ವ ಬಲಿಯುತ್ತದೆ. ಬಲಿಯುವ ವ್ಯಕ್ತಿತ್ವದೊಂದಿಗೆ ಪ್ರಭುತ್ವ ಮತ್ತು ಸಮರ್ಪಣೆಯ ಪ್ರವೃತ್ತಿಗಳ ಘರ್ಷಣೆಯೂ ಪರಕೀಯರ

ಆಕರ್ಷಣೆಯೂ ಬೆಳೆಯುತ್ತದೆ. ಇಬ್ಬರ ನಡುವೆ ಇನ್ನೊಬ್ಬನು ಅಥವಾ ಇನ್ನೊಬ್ಬಳು ಬಂದು ಗೊಂದಲಕ್ಕೆ ಕಾರಣವಾಗುತ್ತದೆ.

ಪ್ರಭುತ್ವ ಮತ್ತು ಸಮರ್ಪಣೆ ಇವೆರಡೂ ಪ್ರವೃತ್ತಿಗಳು ಒಂದೇ ವ್ಯಕ್ತಿಯಿಂದ ತೃಪ್ತವಾಗುವಂತಿದ್ದರೆ, ಯಾವ ವ್ಯಕ್ತಿಯ ಜೀವನವನ್ನು ತಾನು ಆಳುವೆನೋ ಅದೇ ವ್ಯಕ್ತಿಗೆ ತನ್ನ ಜೀವನವನ್ನು ಸಂಪೂರ್ಣ ಒಪ್ಪಿಸಿ ಆ ಉಭಯ ಪ್ರವೃತ್ತಿಗಳ ತೃಪ್ತಿಯನ್ನು ಪಡೆಯುವಂತಿದ್ದರೆ ಅಂಥ ವ್ಯಕ್ತಿಗಳ ದಾಂಪತ್ಯವು ಪೂರ್ಣತೆಯನ್ನು ಧನ್ಯತೆಯನ್ನು ಹೊಂದುತ್ತದೆ. ಇದು ಅಶಕ್ಯವಾದಲ್ಲಿ ಇಂಬು ಇದ್ದರೆ, ನಂಬಿಗೆ ಇಲ್ಲದಿದ್ದರೆ ಭೀತಿ ಕಡಿಮೆ ಇದ್ದು ಧೂರ್ತತೆ ಹೆಚ್ಚಿದ್ದರೆ, ಹೊಣೆಗಾರಿಕೆ ತಪ್ಪಿಸಿಕೊಳ್ಳುವ ಯುಕ್ತಿ ಮೋಸಗಾರಿಕೆಯ ಶಕ್ತಿಯೊಡನೆ ಕೂಡಿದ್ದರೆ ವಿವಾಹಿತ ಜೀವನದ ಕಥೆಯು ವ್ಯಭಿಚಾರದ ವ್ಯಥೆಯಾಗಿ ಕಂಗೆಡಲು ವಿಳಂಬವಾದೀತೇ?

ತತ್ವದ ತಾತ್ಪರ್ಯ

ವ್ಯಭಿಚಾರದ ಮೀಮಾಂಸೆಯನ್ನು ಸ್ವಲ್ಪದರಲ್ಲಿ ಮಾಡಲಾಯಿತು. ಇದು ಅದರ ಸಮರ್ಥನೆ ಅಲ್ಲ. ದಾಂಪತ್ಯ ಧರ್ಮಕ್ಕೆ ವ್ಯಭಿಚಾರವು ವಿಷವು. ಘೋರವಿಪತ್ತು, ಅದರ ನಿರಾಕರಣೆ ನಿವಾರಣೆ ಆಗಲೇಬೇಕು. ಆದರೆ ನಾವು ಇಲ್ಲಿ ತಿಳಿದುಕೊಳ್ಳಬೇಕಾದದ್ದು ಇಷ್ಟೇ; ಈ ವಿಷಯಕ್ಕೆ ಪೋಷಕವಾದ, ಈ ವಿಪತ್ತಿಗೆ ಪ್ರತಿಕೂಲವಲ್ಲದ ಪರಿಸ್ಥಿತಿಯೂ ಮನಸ್ಥಿತಿಯೂ ಸ್ತ್ರೀ-ಪುರುಷ ಜೀವನದಲ್ಲಿಯೇ ಇರುತ್ತದೆ. ಇದನ್ನು ತಿಳಿದು ನೋಡಿದರೆ ಉಪಾಯ-ಯೋಜನೆಗೆ ಅನುಕೂಲವಾಗುವದು, ವಿವಾಹದ ನೀತಿಯ ನೆಲೆಬೆಲೆಗಳ ನಿರೂಪಣೆ ಉಪಾಯ-ಯೋಜನೆಗೆ ಅನುಕೂಲವಾಗುವದು. ವಿವಾಹದ ನೀತಿಯ ನೆಲೆ ಬೆಲೆಗಳ ನಿರೂಪಣೆ ನಿರ್ಣಯಗಳು ಈ ಚಿಕ್ಕ ಬರಹಕ್ಕೆ ಒಳಪಟ್ಟ ವಿಷಯವಲ್ಲ. ಆದರೆ ಇಲ್ಲಿ ಎರಡು ಮಾತುಗಳನ್ನು ಸೂತ್ರರೂಪದಲ್ಲಿ ಹೇಳಬಹುದು. ನೀತಿ-ನಿಯಮಗಳು ಒಂದು ಸಾಧನ. ಜೀವನದ ಒಳಿತೇ ಅವುಗಳ ಸಾಧ್ಯ. ಇನ್ನು ಒಳಿತಿನ ಜೀವನ ಯಾವುದು? ಯಾವ ಜೀವನಕ್ಕೆ ಪ್ರೀತಿಯ ಪ್ರೇರಣೆಯಿದೆಯೋ, ಜ್ಞಾನದ ಮಾರ್ಗದರ್ಶನವಿದೆಯೋ ಅದೇ ಒಳಿತಿನ ಜೀವನ. ಈ ಜೀವನಕ್ಕೆ ನೆರವಾಗುವ ನೀತಿ ಹೇಗಿರಬೇಕು? ನಮ್ಮ ಸಹಜ ಪ್ರವೃತ್ತಿಗಳನ್ನು ಹತ್ತಿಕ್ಕಿ, ಬದುಕಿಗೆ ಒತ್ತಾಯದ ಪಡಿಯಚ್ಚುಹಾಕುವದು ನೀತಿಯೇ ಅಲ್ಲ. ಸಹಜ ಪ್ರವೃತ್ತಿಗಳ

ತೃಪ್ತಿಯಿಂದ ದೊರೆಯುವ ಸುಖವನ್ನು ಅಸಹ್ಯವಾಗಿ ಮಾಡುವಂತೆ ನೀತಿನಿಯಮಗಳು ಇರಕೂಡದು. ಇದರ ಅರ್ಥ ಸ್ವೈರಾಚಾರವಲ್ಲ. ವ್ಯಕ್ತಿ–ವ್ಯಕ್ತಿಯ ಇಂಥ ಸುಖವೂ ಆದಷ್ಟು ಪೂರೈಸಬೇಕಾದರೆ ಒಬ್ಬರ ಸುಖ ಇನ್ನೊಬ್ಬರ ಸುಖಕ್ಕೆ ಕಟ್ಟುಹಾಕುತ್ತದೆ. ಇದಕ್ಕೂ ಮೀರಿದ ಕಟ್ಟು ಹಿತದ ಕಟ್ಟಳೆಯಲ್ಲ. ಬಾಳಿನ ಮುಗ್ಗಟ್ಟು. ಈ ವಿವೇಕವು ಬರಲು ಸಹಜಪ್ರವೃತ್ತಿಗಳ ವಿಚಾರಣೆಯನ್ನು ಮಾಡಬೇಕು. ಕಾರ್ಯಗಳನ್ನು ಅರಿತುಕೊಂಡ ಹೊರತು ಪರಿಣಾಮಗಳನ್ನು ಪಲ್ಲಟಿಸಲು ಬರುವದಿಲ್ಲ.

ಆದ್ದರಿಂದ ವ್ಯಭಿಚಾರದ ಕಾರಣಗಳನ್ನು ತಿಳಿಯಲು ಪ್ರಯತ್ನ ಮಾಡಿದೆವು. ದಾಂಪತ್ಯವಿರಲಿ ವ್ಯಭಿಚಾರವಿರಲಿ. ಪ್ರೀತಿಯ ಆಧಾರದಿಂದಲೇ ಅವುಗಳ ಗೌರವ. ಪ್ರೀತಿ ಇಲ್ಲದ ದಾಂಪತ್ಯ ಒಂದು ಧರ್ಮಾಜ್ಞೆ ಪಡೆದ ವ್ಯಭಿಚಾರವೇ ಸರಿ. ಹಾಗೆಯೇ ಪ್ರೀತಿಯಿಂದ ದೃಢವೂ ಪೂರ್ಣವೂ ಆದ ವ್ಯಭಿಚಾರ ಒಂದು ಧನ್ಯವಾದ ದಾಂಪತ್ಯವೇ ಸರಿ. ಅಂತೆಯೇ ಪ್ರೀತಿತತ್ವದ ಅಭ್ಯಾಸವನ್ನು ಇದುವರೆಗೆ ತತ್ಪರತೆಯಿಂದ ಮಾಡಿದೆವು. ಇನ್ನು ಇದರ ತಾತ್ಪರ್ಯವೇನು?

ಪ್ರೀತಿಯ ತತ್ವಜ್ಞಾನಿ ಪ್ಲೇಟೋ ಉದ್ಗರಿಸಿದ್ದಾನೆ:–'ಪ್ರೀತಿಯ ಸ್ಪರ್ಶವಿಲ್ಲದವನು ಕತ್ತಲೆಯಲ್ಲಿ ನಡೆಯುತ್ತಾನೆ!' ಪ್ರೀತಿಯ ಕುರಿತು ಒಂದೆಡೆಗೆ ಅಂಬಿಕಾತನಯರೇ ಹಾಡಿದ್ದಾರೆ. 'ತನ್ನ ಕಿರಣ ತನಗೆ ಹಗಲು ಉಳಿದ ಬೆಳಕು ಕತ್ತಲು!' ನಮ್ಮ ನಮ್ಮ ಪಾಲಿನ ಹಗಲು ನಮ್ಮ ಹೃದಯಗಳನ್ನು ಬೆಳಗುವ ನಮ್ಮ ಸುತ್ತ ಮುತ್ತಲು ಹಬ್ಬಿದ ನಮಗೆ ಒಲಿದವರ ಕಣ್ಣಿನ ಕಿರಣ! ಉಳಿದುದೆಲ್ಲ ನಮ್ಮನ್ನೇ ಉಳಿದದ್ದು! ಎಲ್ಲ ವಸ್ತುಗಳೂ ಸಾಯುವವು. ಪ್ರೀತಿಯೊಂದೇ ಸಾವನ್ನು ತಪ್ಪಿಸಿಕೊಂಡು ನಮ್ಮನ್ನು ಕಾಯುವುದು. ಅದು ಹೇಗೆ? ಬಾಳಿನ ಫಲದಲ್ಲಿ ಪ್ರೀತಿಯ ಪರಿಮಳವು ವಾತ್ಸಲ್ಯದ ರಸವಾಗುತ್ತದೆ. ಸಂತಾನದ ಸೇತುಕಟ್ಟಿ ಪ್ರೀತಿಯು ಮರಣದ ಕಂದಕವನ್ನು ದಾಟುತ್ತದೆ. ಚಿತೆಯ ಉರಿಗೆ ಬಾಡದೇ ಮಾಂಗಲ್ಯದ ನಿತ್ಯ ಪುಷ್ಪವಾಗಿ ಸದಾಕಾಲವೂ ಅರಳಿನಿಲ್ಲುತ್ತದೆ. ಸುಳ್ಳು ಸೋಗಿಗೆ ಸೋತು ಮೋಸದ ಬಣ್ಣಕ್ಕೆ ಮೈಸುಟ್ಟುಕೊಂಡಾಗ ಭ್ರಮನಿರಸನೆಯ ವೈರಾಗ್ಯದಲ್ಲಿ ನಿರಾಶೆಯ ಕಟುವೃತ್ತಿಯಲ್ಲಿ, ಪ್ರೀತಿಯು ಅದೆಷ್ಟು ಕ್ಷಣಿಕ, ಅದೆಷ್ಟು ಕ್ಷುಲಕ ಕಾಣಿಸುತ್ತದೆ! ಆದರೆ ಮಾನವತೆಯ ದೂರದ ನೋಟದಲ್ಲಿ ಇತಿಹಾಸದ ನೋಟದಲ್ಲಿ ಪ್ರೀತಿಯು

ಅದೆಷ್ಟು ನಿತ್ಯ ನೂತನವಾಗಿ ನಿರಂತರ ನವೋನವವಾಗಿ ಕಂಗೊಳಿಸುತ್ತದೆ. ಕೊನೆಗೂ ನಮ್ಮ ಒಂದು ಅಲ್ಪಾಂಶವನ್ನು ನಾಶದಿಂದ ಸಂರಕ್ಷಿಸಿ, ಪ್ರೀತಿಯು ನಮ್ಮದೇ ಜೀವನವನ್ನು ಶಿಶುವಿನ ತಾರುಣ್ಯದಲ್ಲಿಯೂ ವೀರ್ಯದಲ್ಲಿಯೂ ಹೊಸತಾಗಿ ಆವಾಹನೆಗೊಳಿಸುತ್ತದೆ. ನಮ್ಮ ಸಂಪತ್ತು ವಿಪತ್ತಿನ ಬೆಲೆ, ನಮ್ಮ ದುಡ್ಡು ದುಡಿಮೆ ದಣಿವಿನ ದಂಡ. ನಮ್ಮ ಜ್ಞಾನ ಗಾಳಿಗೋಪುರದ ಸೋಪಾನ. ನಾವು ಮುಟ್ಟುವ ಜಾಣ್ಮೆಯ ಶಿಖರ ನಮ್ಮನ್ನು ಏಕಾಕಿಯಾಗಿ ಚಳಿಯಲ್ಲಿ ಬಿಡುವ ನೆತ್ತರವನ್ನು ತಣ್ಣಗೆಗೊಳಿಸುವ ಒಂದು ಸಣ್ಣ ಎತ್ತರ. ಇವೆಲ್ಲ ಏನಿದ್ದರೇನು? ಪ್ರೀತಿಯೊಂದೇ ನಮ್ಮ ಹೃದಯವನ್ನು ಮಾತಿಗೆ ಅತೀತವಾದ ಸಮಾಧಾನದಿಂದ ಸಂತೃಪ್ತಿಯಿಂದ ಬಿಮ್ಮನೆ ಬೆಚ್ಚಗೆಗೊಳಿಸುತ್ತದೆ-ಅದೂ ಪಡೆಯುವದಕ್ಕಿಂತಲೂ ಕೊಡುವದರಲ್ಲಿ ಹೆಚ್ಚು! ಮಿಕ್ಕುದೆಲ್ಲ ಮಿಥ್ಯ; ಪ್ರೀತಿಯೊಂದೇ ಸತ್ಯ! ಅದನ್ನೊಂದೇ ನಾವು ಅಚ್ಚು ಮೆಚ್ಚಿನಿಂದ ಕಾಯ್ದುಕೊಳ್ಳೋಣ!

ಗಂಡು-ಹೆಣ್ಣು ಮತ್ತು ಪ್ರೀತಿ



ಗಂಡು ಹಿರಿದೋ ಹೆಣ್ಣು ಹಿರಿದೋ? – ಈ ಪ್ರಶ್ನೆ ಎಂದಿನಿಂದಲೂ ನಮ್ಮ ಎದುರಿಗೆ ನಿಂತಿದೆ. ಜೀವನದ ಬಗೆಹರಿಯದ ಪ್ರಶ್ನೆಗಳಲ್ಲಿ ಇದೂ ಒಂದು ಎಂದುಕೊಂಡು ನಾವು ಹಲವು ಸಲ ಅದರಿಂದ ಬಿಡುಗಡೆ ಪಡೆಯುತ್ತೇವೆ. ಆದರೆ ನಾವು ಪ್ರಶ್ನೆಯನ್ನು ಬಿಟ್ಟರೂ ಪ್ರಶ್ನೆ ನಮ್ಮನ್ನು ಬಿಡುವಂತಿಲ್ಲ. ವಿಶೇಷವಾಗಿ ಹಿರಿಮೆಯ ಕುರಿತು ಈ 'ಹೆಚ್ಚು-ಕಡಿಮೆ'ಯ ಪ್ರಶ್ನೆ ತಲೆಯೆತ್ತುವುದು... ಯಾರು ಹೆಚ್ಚು ಯಾರು ಕಡಿಮೆ ಎಂಬ ಅಳತೆಯೇ ಒಂದು ಬಗೆಯಾಗಿ ಅವಿವೇಕದ್ದು. ಹೆಚ್ಚು ಕಡಿಮೆ ಯಾತರ ನೆಲೆಯಿಂದ, ಯಾರ ನಿಟ್ಟಿನಿಂದ ? ಪ್ರಪಂಚದಲ್ಲಿ ವ್ಯಕ್ತಿ ಇರಲಿ ವಸ್ತುವಿರಲಿ ಪ್ರತಿಯೊಂದಕ್ಕೂ ಅದರ ಸ್ಥಾನ, ಅದಕ್ಕೆ ತಕ್ಕಮಾನ ಇದ್ದೇ ಇದೆ.

('ಗಂಡು-ಹೆಣ್ಣು'ದಿಂದ)

ಪ್ರೀತಿಯು ಸೌಂದರ್ಯವನ್ನು ಕಲ್ಪಿಸುತ್ತದೆ. ಸೌಂದರ್ಯವನ್ನು ಹುಡುಕಿಕೊಂಡು ಹೋಗುತ್ತದೆ. ಸೌಂದರ್ಯವನ್ನು ಹುಟ್ಟಿಸಲೂ ಬಹುದು. ಕಾಮದಿಂದ ಕಾಂತಿ, ಕಮನೀಯತೆ. ರಮಿಸುವುದೇ ರತಿ, ಅದರಿಂದ ರಮಣೀಯತೆ. ಚೆಲುವನ್ನು ಕಾಣುವ ಕಣ್ಮನಗಳ ಬಗೆಯೇ ಒಲವು. ಒಲವನ್ನುಂಟುಮಾಡುವಂಥ ತನ್ಮಯಗೊಳಿಸುವ ಬಗೆಯೇ ಚೆಲುವು. ಹೀಗೆ ಒಲವು-ಪ್ರೀತಿಯು ಸೌಂದರ್ಯವನ್ನು ಊಹಿಸುತ್ತದೆ, ಉಂಟು ಮಾಡುತ್ತದೆ. ಹಾಗೆಯೇ ಅದು ಶಿವವನ್ನೂ ಶುಭವನ್ನೂ ಒಳಿತನ್ನೂ ಕಲ್ಪಿಸುತ್ತದೆ.

ಪ್ರೀತಿಯೊಂದೇ ನಮ್ಮ ಹೃದಯವನ್ನು ಮಾತಿಗೆ ಅತೀತವಾಗಿ ಸಮಾಧಾನದಿಂದ ಸಂತೃಪ್ತಿಯಿಂದ ಬಿಮ್ಮನೆ ಬೆಚ್ಚಗೆಗೊಳಿಸುತ್ತದೆ – ಅದೂ ಪಡೆಯುವುದಕ್ಕಿಂತಲೂ ಕೊಡುವುದರಲ್ಲಿ ಹೆಚ್ಚು!

('ಪ್ರೀತಿ'ಯಿಂದ)